ಹೊಸತು

ಅಕ್ಟೋಬರ್ ೨೦೦೫ ರೂ.೧೦

ಅಹಿಂದ ಮತ್ತು ಕರ್ನಾಟಕದ ರಾಜಕಾರಣ

ಬೀದಿ ಡೈರಿ

ಅಲ್ಲಮ ಪ್ರತಿಭೆ

ಗಾಂಧಿ ಹೆಜ್ಜೆಗಳು

ಶ್ರೀ ನಾರಾಯಣಗುರು ನೆನಪು

ಸಂವಾದ

ಮಾಸ ಪತ್ರಿಕೆ

ಸಂಪುಟ ೩ ಸಂಚಿಕೆ ೧೨
ಆಕ್ಟೋಬರ್ ೨೦೦೫

ಸಂಪಾದಕ:
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ:
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಕೆ. ಪುಟ್ಟಸ್ವಾಮಿ
ಡಿ. ಡೊಮಿನಿಕ್
ಬಿ.ಯು. ಸುಮಾ
ಡಾ॥ ಜಿ. ಪಾಂಡುನಾಯಕ್
ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ
ಅಂಜನಾನಗರ, ಮಾಗಡಿರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು - ೫೬೦ ೦೯೧
Ⓒ ೨೩೨೮೭೯೪೩ / ೯೪೪೮೦ ೪೮೩೦೬
ಇ-ಮೇಲ್ ವಿಳಾಸ : samvaada@yahoo.co.in

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANANAGAR, MAGADI ROAD
VISHWANEEDAM POST
BANGALORE - 560 091
Ⓒ 080-23287943, 94480 48306
e- mail : samvaada@yahoo.co.in

EDITOR :
INDUDHARA HONNAPURA

ಒಳಪುಟಗಳಲ್ಲಿ...

- ❑ ಪತ್ರಗಳು ೩
- ❑ ಹೊಸ ಪುಸ್ತಕ ೪
- ❑ ಅಂತರಂಗ ೫
- ❑ ನಮಗೆ ಬೇಕಾದ ಇಂಗ್ಲೀಷ್ ೬
  - ○ ಡಾ॥ ಪಂಡಿತಾರಾಧ್ಯ
- ❑ ಶ್ರೀ ನಾರಾಯಣಗುರು ೮
  - ○ ಡಾ॥ ಅಪ್ಪಗೆರೆ ಡಿ.ಸೋಮಶೇಖರ್
- ❑ ಐಟಿ ಡೈರಿ ೧೦
  - ○ ರಾಬರ್ಟ್ ಜೋಸ್



- ❑ ಅಲ್ಲಮ ಪ್ರತಿಭೆ ಕುರಿತು ೧೨
  - ○ ವಿ.ಚಂದ್ರಶೇಖರ ನಂಗಲಿ
- ❑ ಜಾಗತೀಕರಣ ಯುಗದಲ್ಲಿ ಭಾರತ ೧೪
  - ○ ಜಯ
- ❑ ಬುದ್ಧನ ಪ್ರೇಮ ಯಾತ್ರೆ ೧೮
  - ○ ಮಲ್ಲಿಗಹಳ್ಳಿ ನರೇಂದ್ರಕುಮಾರ್
- ❑ ಶೂನ್ಯ ಬಂಡವಾಳ-ಸಮೃದ್ಧ ಬೆಳೆ ೨೦
  - ○ ಸ್ವಾಮಿ ಆನಂದ್.ಆರ್
- ❑ ಅಹಿಂದ ಚರ್ಚೆ ೨೨
  - ○ ಡಾ॥ ನಟರಾಜ್ ಹುಳಿಯಾರ್
  - ○ ಡಾ॥ ಲಕ್ಷ್ಮೀಪತಿಬಾಬು
  - ○ ಡಾ॥ ಎಸ್.ಚಂದ್ರಶೇಖರ್
  - ○ ಸಂಜೀವ ಬೋಳಾರ

- ❑ ಅಂಬೇಡ್ಕರ್ ಮತ್ತು ಮುಸ್ಲಿಮರು ೩೦
  - ○ ಪ್ರೊ॥ ರಹಮತ್ ತರೀಕೆರೆ
- ❑ ದಲಿತ್ ಡೈರಿ ೩೨
  - ○ ಚಂದ್ರಭಾನ್ ಪ್ರಸಾದ್
- ❑ ಗಾಂಧಿ ಹೆಜ್ಜೆಯ ಶೋಧ ೩೬
  - ○ ಡಾ॥ ವಸು
- ❑ ಡಿ.ಗೋವಿಂದ ದಾಸ್ ೩೮
  - ○ ಡಾ॥ ಎಂ.ಎಸ್.ಶೇಖರ್
- ❑ ಬುದ್ಧಾಯಣ ೪೨
  - ○ ಸಿ.ಎಚ್. ರಾಜಶೇಖರ್



ಕವನಗಳು : ❑ ನೆರೂದ ೧೩ ❑ ಅಮ್ಮ ೧೭
❑ ಗೂಡ ತುಂಬಾ ಹಾಡು ೩೫ ❑ ಶಾಂತಿ ಧೂತ ೩೭

ಮುಖಪುಟ ಕಲೆ: ಬಿಹಾರದ ಜಾನಪದ ಮಣ್ಣಿನ ಬೊಂಬೆ - ವಿನ್ಯಾಸ: ರಾಠೋಡ್
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

ಅಹಿಂದ ರಾಜಕಾರಣದ ಸುತ್ತಮುತ್ತ

ಪ್ರೀತಿಯ ಹೊನ್ನಾಪುರ ಅವರೇ,

ಅಹಿಂದ ರಾಜಕಾರಣ ಕುರಿತ ನಿಮ್ಮ ಸಂಪಾದಕೀಯ ಓದಿದೆ. ನೀವೇ ತಿಳಿಸಿರುವಂತೆ ಅಹಿಂದವನ್ನು ರಾಜಕೀಯೇತರ ಸಂಘಟನೆಯಾಗಿ ಉಳಿಸಿಕೊಳ್ಳುವ ಸಿದ್ಧರಾಮಯ್ಯನವರ ಮಾತು ಕೇವಲ ಜನಮೆಚ್ಚಿಗೆಗಾಗಿ ಮಾತ್ರ ಇರಬಹುದು. ರಾಜಕೀಯ ಮಾಡಲಿಕ್ಕಾಗಿಯೇ ಅಹಿಂದವನ್ನು ಕಟ್ಟಬೇಕೆಂಬ ಇಚ್ಛಾಶಕ್ತಿ ಅಹಿಂದ ನಾಯಕರಿಗೆ ಬರದಿದ್ದರೆ ಇದೊಂದು ವ್ಯರ್ಥ ಕಸರತ್ತಾಗುತ್ತದೆ.

ಉತ್ತರ ಪ್ರದೇಶದ ಮುಲಾಯಂ – ಮಾಯಾವತಿಯವರನ್ನಾಗಲಿ ಬಿಹಾರದ ಲಾಲೂ ಪ್ರಸಾದ್ – ಪಾಸ್ವಾನ್ ಅವರನ್ನಾಗಲಿ ನಮ್ಮ ಅಹಿಂದ ನಾಯಕರು ಗಮನಿಸಬೇಕು. ಬ್ರಾಹ್ಮಣರು ಮತ್ತು ಭೂಮಾಲೀಕ ಜಾತಿಗಳ ಸಂಪೂರ್ಣ ಹಿಡಿತದಲ್ಲಿದ್ದ ರಾಜಕೀಯವನ್ನು ದಲಿತ–ಹಿಂದುಳಿದವರ ಕೈಗೆ ಹಸ್ತಾಂತರಿಸಿದ ಅಪೂರ್ವ ಇತಿಹಾಸ ನಮ್ಮ ಕಣ್ಣೆದುರೇ ಇದೆ. ಅವರೊಳಗಿನ ಜಗಳ ಭಿನ್ನಾಭಿಪ್ರಾಯಗಳು ಎಷ್ಟೇ ಇರಲಿ, ಅವರೆಲ್ಲರ ಕಾಳಜಿ ಒಂದೇ ಆಗಿದೆ. ಅದು ಅಹಿಂದರ ಕೈಗೆ ರಾಜ್ಯಧಿಕಾರವನ್ನು ಕೊಡುವುದು.

ಕಾಂಗ್ರೆಸ್ ಆಗಲಿ, ದೇವೇಗೌಡರ ದಳವಾಗಲಿ ಎಂದೂ ಅಹಿಂದ ಜನಾಂಗಗಳ ಹಿತ ಕಾಪಾಡುವುದಿಲ್ಲ. ದಲಿತ–ರೈತ ಸಂಘಟನೆಗಳು ಹುಟ್ಟುಹಾಕಿರುವ ಸರ್ವೋದಯ ಕರ್ನಾಟಕ, ಬಿಎಸ್‌ಪಿ ಮೊದಲಾದ ಪಕ್ಷಗಳನ್ನು ಒಗ್ಗೂಡಿಸಿ ಅಹಿಂದ ರಾಜಕಾರಣ ಮಾಡಿದರೆ ಮುಂದಿನ ಸರ್ಕಾರ 'ಅಹಿಂದ'ರ ಪಾಲಾಗುವುದರಲ್ಲಿ ಸಂಶಯವೇ ಇಲ್ಲ. ಸಿದ್ಧರಾಮಯ್ಯ ಮತ್ತವರ ಗೆಳೆಯರು ಕಾಂಗ್ರೆಸ್ ಪಕ್ಷದ ಸೌಖ್ಯಕ್ಕೆನಾದರೂ ಹೋದರೆ ಇಡೀ ಅಹಿಂದ ಶಕ್ತಿಗೆ ದ್ರೋಹ ಬಗೆದಂತೆಯೇ ಸರಿ.

ಅದುದರಿಂದ ಎಲ್ಲ ದಲಿತ, ಹಿಂದುಳಿದ, ಅಲ್ಪಸಂಖ್ಯಾತ ಸಂಘಟನೆಗಳು, ರೈತರು, ಕಾರ್ಮಿಕರು, ಎಡಪಕ್ಷಗಳು ಹಾಗೂ ಇತರ ಎಲ್ಲಾ ಪ್ರಗತಿಪರರನ್ನು ಒಳಗೊಂಡು ಸಂಘಟಿತ ಹೋರಾಟಕ್ಕೆ ಇಳಿಯಬೇಕು. ಹಾಗಾದಾಗ ಯಾವ ದೇವೇಗೌಡ–ಧರ್ಮಸಿಂಗ್‌ರೂ ಅದನ್ನು ತಡೆಯಲಾರರು. ಅಂಥ ವಿವೇಕ –ಜಾಣ್ಮೆ ನಮ್ಮೆಲ್ಲಾ ನಾಯಕರಿಗೂ ಬರಲಿ ಎಂದು ಹಾರೈಸುತ್ತೇನೆ.

ಕೆ. ದಿವಾಕರ ನಾಯಕ್, ಬೆಂಗಳೂರು.

ಮನತುಂಬಿದ 'ಸಂವಾದ'

ಗೌರವಾನ್ವಿತ ಸಂಪಾದಕರೇ,

ಸೆಪ್ಟೆಂಬರ್ 2005ರ 'ಸಂವಾದ' ನನ್ನ ಮನ ತುಂಬಿತು. ನಿರಂತರವಾಗಿ ನಾನು 'ಸಂವಾದ' ಓದುತ್ತಿರುವೆನಾದರೂ ಈ ಸಂಚಿಕೆಯ ಲೇಖನಗಳನ್ನು ಓದಿದ ಮೇಲೆ ನಿಮಗೆ ಅಭಿನಂದಿಸಲೇ ಬೇಕೆಂದು ಮನಸ್ಸಾಗಿ ಈ ಪತ್ರ ಬರೆಯುತ್ತಿರುವೆ.

ಬಿ.ವಿ.ವೀರಭದ್ರಪ್ಪನವರ 'ರಾಜಕೀಯದಿಂದ ಧರ್ಮದೂರವಿರಲಿ' ಎಂಬ ಆಶಯ ಎಂದು ಕೈಗೂಡುವುದೋ ಎಂಬ ನೋವು ಆ ಲೇಖನ ಓದಿದಯಾರಿಗಾದರೂ ಅನ್ನಿಸುತ್ತದೆ. 'ಅಡ್ವಾಣಿ–ಜಿನ್ನ' ಲೇಖನದಲ್ಲಿ ಸಂಘ ಪರಿವಾರದ ಗೋಸುಂಬೆತನ ಬಟ್ಟಬಯಲಾಗಿದೆ. ಡಾ॥ ಸಣ್ಣರಾಮ ಅವರ 'ಜಡತೆ ಮತ್ತು ಚಲನಶೀಲತೆ' ನನ್ನನ್ನು ಗಾಢ ಚಿಂತನೆಗೆ ಹಚ್ಚಿದೆ. ಚಂದ್ರ ಭಾನ್ ಪ್ರಸಾದರ 'ದಲಿತ ಡೈರಿ' ಯಂತೂ ಮಾರ್ವಲಸ್!

ನಿಮಗೆ ಅನಂತ ಧನ್ಯವಾದಗಳು!

ಕೆ.ಎಸ್. ಅನಂತಕೃಷ್ಣ, ಬೇಲೂರು.

ಬುದ್ಧಾಯಣ

ಮಾನ್ಯರೇ,

"ಸಂವಾದ" ಆರಂಭದಿಂದಲೂ ತಥಾಗತ ಗೌತಮ ಬುದ್ಧ ಹಾಗೂ ಧಮ್ಮದ ಬಗೆಗೆ ವಿವಿಧ ರೀತಿಯ ಲೇಖನ ಗಳನ್ನು ಪ್ರಕಟಿಸುತ್ತಲೇ ಬರುತ್ತಿರುವುದು ನಮ್ಮಂಥ ಬೌದ್ಧಾನುಯಾಯಿಗಳಿಗೆ ತುಂಬ ಸಂತೋಷದ ಸಂಗತಿ. ಎಲ್ಲೆಲ್ಲೂ ದ್ವೇಷ ಮತ್ತು ಭಯೋತ್ಪಾದನೆ ಹೆಚ್ಚುತ್ತಿರುವ ಜಾಗತಿಕ ಸಂದರ್ಭದಲ್ಲಿ ಬುದ್ಧ ಮಾತ್ರ ನಮ್ಮೆಲರ ನೆಮ್ಮದಿಯ ಅಶಾಕಿರಣ. ಜೂನ್ ಸಂಚಿಕೆಯಿಂದ "ಬುದ್ಧಾಯಣ'ದ ಮೂಲಕ ಬೌದ್ಧ ತತ್ವಗ ಳನ್ನು ಅತ್ಯಂತ ಸರಳವಾಗಿ ಆಕರ್ಷಕವಾಗಿ ಕಥೆಗಳ ಮೂಲಕ ಪ್ರಕಟಿಸುತ್ತಿರುವುದು ನಮಗೆ ಮತ್ತಷ್ಟು ಆನಂದವನ್ನುಂಟು ಮಾಡಿದೆ. ಜಗತ್ತಿಗೇ ಬೆಳಕಾದ ಬುದ್ಧ ನಿರಂತರವಾಗಿ "ಸಂವಾದ'ದ ಮೂಲಕ ಕನ್ನಡಿಗರ ಮನಸನ್ನು ಮುಟ್ಟುತ್ತಿರಲಿ ಎಂದು ಹಾರೈಸುತ್ತೇವೆ.

ಸುಮಂಗಳಾ ಆರ್, ಚೈತನ್ಯ ಯು,
ಬೆಂಗಳೂರು.

ದೇಶೀವಾದದ ಜಾಗತೀಕರಣ

ಪ್ರೀತಿಯ ಸಂಪಾದಕರೇ,

ಮೂರು ಕಂತುಗಳು ಮೂಡಿಬಂದ ಡಾ॥ ಅರವಿಂದ ಮಾಲಗತ್ತಿಯವರ "ಜಾಗತೀಕರಣ ಮತ್ತು ದೇಶಿದಂಗೆ" ಬಹಳ ಗಂಭೀರವಾದ ಲೇಖನ. ಇಡೀ ಲೇಖನ ಜಾಗತೀಕರಣದ ಒಳ ಹೊರಗನ್ನು ಸಂಪೂರ್ಣವಾಗಿ ಬಿಡಿಸಿಟ್ಟಿದೆ. ಆದರೆ ಇಂದು ನಾವ್ಯಾರೂ ಜಾಗತೀಕರಣವನ್ನು ಅದರ ಪರಿಣಾಮಗಳನ್ನು ತಡೆಯಲು ಸಾಧ್ಯವಾಗುತ್ತಿಲ್ಲ. ಅದರ ವಿರುದ್ಧ ಮಾತನಾಡಿ ತಾವೆಷ್ಟು 'ಪ್ರಗತಿಪರರು' ಎಂಬುದನ್ನು ತೋರಿಸುವುದೇ ಹೆಚ್ಚಾಗಿದೆ.

ಜಾಗತೀಕರಣ ನಾವು ಬೇಡವೆಂದರೂ ಬಾಗಿಲಲ್ಲಿ ಬಂದು ಕೂತಿರುವ ಗುಮ್ಮ. ಅದನ್ನು ಎದುರಿಸುವುದು, ಮತ್ತು ಎದುರಿಸಿ ಗೆಲ್ಲುವುದು ಹೇಗೆ ಅನ್ನವುದಷ್ಟೆ ಈಗಿನ ಅಗತ್ಯ. ಜಾಗತೀಕರಣಕ್ಕೆ ನಿಜವಾದ ತಡೆ ಒಡ್ಡುವುದು ದೇಶೀಯತೆ ಮಾತ್ರ. ದೇಶೀಯತೆ ಕೇವಲ ಆಡುಮಾತಿನ ಹೋರಾಟವಾಗಬಾರದು. ಬದುಕಿನ ಎಲ್ಲ ಹಂತದಲ್ಲಿ ಅದನ್ನು ಜಾರಿಗೆ ತಂದರೆ ಜಾಗತೀಕರಣ ತಂತಾನೆ ಮುಖತಿರುಗಿಸುತ್ತದೆ. ಅದಕ್ಕೆ ಬೇಕಾದ ಸಿದ್ಧತೆ ಮಾಡಿಕೊಳ್ಳವುದರತ್ತ ನಾವೆಲ್ಲ ಹೆಚ್ಚು ಗಮನ ಹರಿಸ ಬೇಕಾಗಿದೆ. ಜಾಗತೀಕರಣಕ್ಕೆ ದೇಶೀಯತೆಯೇ ಸಮರ್ಥ ಉತ್ತರ. ಆದರೆ ದೇಶೀಯತೆಯೇ ಜಾಗತೀಕರಣವಾಗುವ ಅಪಾಯವನ್ನು ನಾವೀಗ ಕಾಣುತ್ತಿದ್ದೇವೆ. ಇದಕ್ಕೆ ಎಲ್ಲಿಂದ ಮದ್ದು ತರುವುದು?

ಕುಸುಮಾಕರ ರಾಣೆ, ಕಾರವಾದ.

ಕೀಟಲೆ ಬೇಡ

ಮಾನ್ಯ ಸಂಪಾದಕರೇ,

ಕನ್ನಡ–ಇಂಗ್ಲೀಷ್ ಕಲಿಕೆ ಕುರಿತಂತೆ ನಡೆಯುತ್ತಿರುವ ಚರ್ಚೆ ವೈಯಕ್ತಿಕ ಕೀಟಲೆಯಾಗಿ ಮಾರ್ಪಡುತ್ತಿದೆ. ನಾ.ದಿವಾಕರರ ಲೇಖನಕ್ಕೆ ಪ್ರತಿಕ್ರಿಯಿಸಿದ ಅರವಿಂದ ಚೊಕ್ಕಾಡಿ ಅವರು ಜಗಳ ಮಾಡಲೆಂದೇ ಬರೆದಂತಿದೆ. 'ಬೈದೇ ಬಾಳುವವರು' ಎಂದು ಇತರರನ್ನು ಛೇಡಿಸಿರುವ ಚೊಕ್ಕಾಡಿ ಅವರೂ ಅದನ್ನೇ ಮಾಡಿದ್ದಾರೆ. ಯಾವುದೇ ಚರ್ಚೆ ಗಂಭೀರ ಸಂವಾದವಾಗಿದ್ದರೆ ಮಾತ್ರ ಅರ್ಥಪೂರ್ಣ. ಇಲ್ಲದಿದ್ದರೆ ಕೇವಲ ವಿತಂಡ ವಾದವಾಗುತ್ತದೆ. ಚರ್ಚೆ ಯಾವಾಗಲೂ ಪರಸ್ಪರ ಗೌರವದಿಂದಲೇ ನಡೆಯಬೇಕಾಗುತ್ತದೆ. ಆಗ ಮಾತ್ರ ಅದಕ್ಕೊಂದು ಗೌರವ. ಇಲ್ಲದಿದ್ದರೆ ಅದು ಕೇವಲ ತಲೆ ಹರಟೆಯಾಗುತ್ತದೆ.

ಆರ್. ನಿರ್ಮಲಾ ರಾಜಣ್ಣ, ಚಿಕ್ಕಮಗಳೂರು

ಪತ್ರಾಗಾರ

ಭೀಮ ಸೇನಾನಿಗೆ ನಮನಗಳು

ಪ್ರೀತಿಯ ಹೊನ್ನಾಪುರ ಸರ್,

ಭೀಮ ಸೇನಾನಿ ಬಿ.ಶ್ಯಾಮ ಸುಂದರ ಅವರನ್ನು ನೆನಪು ಮಾಡಿಕೊಟ್ಟು ಮಹದುಪಕಾರ ಮಾಡಿರುವಿರಿ. ನಿಮಗೆ ಕೃತಜ್ಞತೆಗಳು. ನಾನು ಗುಲ್ಬರ್ಗ ವಿ.ವಿ.ಯಲ್ಲಿ ಓದುವಾಗ ಒಮ್ಮೆ ಅವರ ಬಗ್ಗೆ ಕೇಳಿದ್ದೆ ಅಂಥ ಅಪ್ರತಿಮ ಹೋರಾಟಗಾರರನ್ನು ನೆನೆಯದೆ, ಅವರನ್ನು ಆದರ್ಶ ಮಾಡಿಕೊಳ್ಳದೆ, ಪುಡಿ ರಾಜಕಾರಣಿಗಳ ಬೆನ್ನ ಹಿಂದೆ ಹೋಗುವ ದಲಿತ ಹೋರಾಟಗಾರರನ್ನು ಕಂಡು ನನಗೀಗ ಅಸಹ್ಯವಾಗುತ್ತಿದೆ.

ಬಾಬಾ ಸಾಹೇಬ ಅಂಬೇಡ್ಕರರ ಹೆಸರನ್ನು ನಾವ್ಯಾರಾದರೂ ಉಳಿಸಬೇಕಿದ್ದರೆ, ಶ್ಯಾಮಸುಂದರರಂಥವರ ಅನುಕರಣೆ ಅಗತ್ಯವಾಗಿದೆ. ಅಗಷ್ಟೇ ಬಾಬಾ ಸಾಹೇಬರಿಗೆ ಹಾಗೂ ಅವರು ಕೂಡ ಮಾಡಿದ ದಲಿತ ದೀವಿಗೆಗೆ ಅರ್ಥ ಬರುತ್ತದೆ. ಲೇಖನ ಬರೆದ ಡಾ॥ ಪೋತೆ ಹಾಗೂ ಸಿಂಧೆ ಅವರಿಗೂ ಪ್ರಕಟಿಸಿದ ತಮಗೂ ಜೈ ಭೀಮ್ ನಮಸ್ಕಾರಗಳು.

ಅರುಣ ಕುಮಾರ ಬಾಳೆ. ಗುಲ್ಬರ್ಗ

ಚಂದಾ ವಿವರ

ಬಿಡಿ ಪ್ರತಿ ರೂ. ೨೦/-

೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವಿದ್ಯಾರ್ಥಿಗಳು/ಕಾರ್ಯಕರ್ತರಿಗೆ		
ರೂ. ೧೦೦/-	ರೂ. ೩೦೦/-	ರೂ. ೫೦೦/-
ನೌಕರರು ಮತ್ತು ವೃತ್ತಿಪರರಿಗೆ		
ರೂ. ೨೦೦/-	ರೂ. ೫೦೦/-	ರೂ. ೮೦೦/-
ಸಂಘ–ಸಂಸ್ಥೆಗಳು/ಉದ್ಯಮಿಗಳಿಗೆ		
ರೂ. ೨೫೦/-	ರೂ. ೬೦೦/-	ರೂ. ೧೦೦೦/-
ವಿಶೇಷ ಹಿತೈಷಿ ಚಂದಾದಾರರಿಗೆ		
ರೂ.೫೦೦/-	ರೂ.೧೫೦೦/-	ರೂ.೨೫೦೦/-

ಆಜೀವ ಚಂದಾ ರೂ. ೫,೦೦೦/-
ಪೋಷಕ ಚಂದಾ ರೂ. ೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ. /ಡಿ.ಡಿ. ಮಾತ್ರ ಕಳುಹಿಸಬೇಕು.



ಹೊಸ ಪುಸ್ತಕ

ಚಂಪಾದಕೀಯ

ಲೇ:ಪ್ರೊ॥ ಚಂದ್ರಶೇಖರ ಪಾಟೀಲ

ಬೆಲೆ: ರೂ.45/–

ಚಂಪಾ ಅವರು ಕಳೆದ ನಾಲ್ಕೂವರೆ ದಶಕಗಳ ಅವಧಿಯಲ್ಲಿ ಬರೆದಿರುವ ಲೇಖನಗಳ ಸಂಗ್ರಹ ಇದು. ಇಲ್ಲಿನ ಬಹುತೇಕ ಲೇಖನಗಳು ಅವರ 'ಸಂಕ್ರಮಣ' ಸಾಹಿತ್ಯ ಪತ್ರಿಕೆಯ 'ಚಂಪಾ ಕಾಲಂ'ಗಾಗಿ ಬರೆದಂಥವು. ಸಾಹಿತ್ಯ, ರಾಜಕೀಯ, ಕನ್ನಡ ಚಳವಳಿ, ಬಂಡಾಯ ಸಾಹಿತ್ಯ ಸಂಘಟನೆ ಹೀಗೆ ಹಲವು ಕ್ಷೇತ್ರಗಳ ತಮ್ಮ ಒಡನಾಟದ ಅನುಭವಗಳ ಅಭಿವ್ಯಕ್ತಿ ಇಲ್ಲಿನ ಲೇಖನಗಳಲ್ಲಿದೆ. ಚಂಪಾ ಲೇಖನ ತೀವ್ರ ಹರಿತ. ಬಹುಷಃ ಅವರ ಲೇಖನಿಗೆ ಸಿಕ್ಕದವರು ವಿರಳ. ರಾಜಕಾರಣಿಯಾಗಿರಲಿ, ಸಾಹಿತಿಯಾಗಿರಲಿ, ಮಠಾಧಿಪತಿಯಾಗಿರಲಿ ಟೀಕಿಸಬೇಕಾದಾಗ ಚಂಪಾ ಯಾರನ್ನೂ ಬಿಡುವುದಿಲ್ಲ.

ಪ್ರಕಾಶಕರು: ನವಕರ್ನಾಟಕ ಪ್ರಕಾಶನ, ಎಂಬೆಸಿ ಸೆಂಟರ್, ಬೆಂಗಳೂರು–1

ಭಾರತೀಯರಿಗೆ ಭಗವಂತರೆಷ್ಟು?

ಲೇ: ಸದಾಶಿವಯೋಗಿ

ಬೆಲೆ: ರೂ.90/–

'ಮನುಕುಲ ಉದ್ಧರವಾಗಬೇಕಾದರೆ ವೈಚಾರಿಕ ಪ್ರಜ್ಞೆ ಮತ್ತು ವೈಜ್ಞಾನಿಕ ದೃಷ್ಟಿ ಬೆಳಸಿಕೊಳ್ಳಬೇಕು. ಮೊದಲು ವಿಚಾರ, ಆನಂತರ ಆಚಾರ. ಇದು ಜೀವನದ ತತ್ವವಾಗಬೇಕು' ಎಂಬ ಆಶಯ ಸಾರುವ ಈ ಕೃತಿ ವಿಚಾರ ಶೂನ್ಯ ಸಮಾಜಕ್ಕೆ ಹಿಡಿದ ಕನ್ನಡಿಯಾಗಿದೆ. ಭಾರತೀಯ ಬದುಕು ಮೂಢನಂಬಿಕೆ ಕಂದಾಚಾರಗಳ ಗೂಡಾಗಿರುವ ಪ್ರಸ್ತುತ ಸಂದರ್ಭದಲ್ಲಿ ಬಂದಿರುವ ಈ ಕೃತಿ ನಾಡಿನ ಅಂತರಂಗಕ್ಕೆ ಅರಿವಿನ ಬೆಳಕನ್ನು ನೀಡುವ ದೀವಿಗೆಯಾಗಿದೆ. ಜಾತಿ ಧರ್ಮಗಳ ಹೆಸರಿನಲ್ಲಿ ಸಮಾಜವನ್ನು ಒಡೆಯುತ್ತಿರುವ ಶಕ್ತಿಗಳಿಗೆ ಸದಾಶಿವ ಯೋಗಿಗಳ ಈ ಕೃತಿ ಸಮರ್ಥ ಉತ್ತರವಾಗಿದೆ.

ಪ್ರಕಾಶಕರು: ನವಕರ್ನಾಟಕ ಪ್ರಕಾಶನ ಎಂಬೆಸಿ ಸೆಂಟರ್, ಬೆಂಗಳೂರು–1.



ಚಲವಾದಿ ಗೌರಮ್ಮ

ಲೇ. ಶ್ರೀ ಪ್ರಕಾಶ ಖಾಡೆ

ಬೆಲೆ: ರೂ.5/–

ಗ್ರಾಮೀಣರ ಆಡುಮಾತಿಗೆ ಹಾಡಿನ ಮೋಡಿ ಹಚ್ಚಿದ ಕವಯತ್ರಿ ಗಾಯಕಿ ಚಲವಾದಿ ಗೌರಮ್ಮನವರ ಜೀವನ ಚರಿತ್ರೆ ಈ ಕೃತಿ. ಚಚಲವಾದಿ ಗೌರಮ್ಮ ನಾಡಿನ ಜಾನಪದ ಪ್ರತಿಭೆಗಳಲ್ಲಿ ಅಗ್ರಗಣ್ಯ ಹೆಸರು. ದಲಿತ ಲೋಕದ ಕಣ್ಬೆಳಕು. ಉತ್ತರ ಕರ್ನಾಟಕದ ದಲಿತ ಕುಟುಂಬದಲ್ಲಿ ಹುಟ್ಟಿದ ಗೌರಮ್ಮ ತನ್ನೆಲ್ಲ ನೋವನ್ನು ಕಾವ್ಯವಾಗಿಸಿದವರು. ಜಾನಪದ ಮತ್ತು ತತ್ವಪದಗಳನ್ನು ಹಾಡುವುದರೊಂದಿಗೆ ಸ್ವತಃ ಹಾಡುಗಳನ್ನು ರಚಿಸಿ ಹಾಡುವುದರಲ್ಲಿ ಗೌರಮ್ಮ ನಿಸ್ಸೀಮೆ. ಓದು ಬರಹ ಬಾರದಿದ್ದರೂ, ಪದ ಜೋಡಿಸಿ ಹಾಡು ಕಟ್ಟಿ ಹಾಡುವ ಆಕೆಯ ಅಸಾಧಾರಣ ಪ್ರತಿಭೆ ಅನನ್ಯವಾದುದು.

ಪ್ರಕಾಶಕರು: ಲಿಂಗಾಯತ ಅಧ್ಯಯನ ಸಂಸ್ಥೆ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಡಂಬಳ–ಗದಗ.

ಬುರ್ರಕಥಾ ಈರಮ್ಮ

(ಅಲೆಮಾರಿಯ ಆತ್ಮಕಥನ)

ಲೇ: ಡಾ॥ ಲಿಂಗಪ್ಪ ಮುದೇನೂರು

ಬೆಲೆ: ರೂ.125/–

ನಾಡಿನ ಸಂಸ್ಕೃತಿಯ ಅಪರೂಪದ ಪ್ರತಿಭೆ, ಹತ್ತಾರು ಜಾನಪದ ಮಹಾಕಾವ್ಯಗಳನ್ನು ಮೌಖಿಕವಾಗಿಯೇ ಕಟ್ಟಿಕೊಡುವ ಬುರ್ರಕಥಾ ಈರಮ್ಮನವರ ಆತ್ಮಕಥೆ ಇದು. ಈ ಕಥನ ಬರೀ ಈರಮ್ಮನವರ ವ್ಯಕ್ತಿ ಕೇಂದ್ರಿತ ಕಥನವಾಗದೆ ಇಡೀ ಅಲೆಮಾರಿಸಮುದಾಯದ ಸಾಂಸ್ಕೃತಿಕ ಕಥನವೂ ಆಗಿದೆ. ಕನ್ನಡ ಭಾಷೆಯ ಬಾಂಧವ್ಯಕ್ಕೆ ತೆಲುಗು, ಹಿಂದಿ ಮತ್ತು ಬುಡಗ ಭಾಷೆಯನ್ನು ಬೆಸೆದು ಪ್ರಾದೇಶಿಕ ಅನನ್ಯತೆ ಯನ್ನು ಸಾಂದರ್ಭಿಕವಾಗಿ ಕಟ್ಟಿಕೊಡುವ ಈರಮ್ಮನ ಜ್ಞಾನ ಅಪಾರವಾದದ್ದು. ಈ ಕೃತಿ ಕನ್ನಡ ಸಾಹಿತ್ಯಕ್ಕೆ ಅಪರೂಪದ ಕೊಡುಗೆಯಾಗಿದೆ.

ಪ್ರಕಾಶಕರು. ವಿದ್ಯಾನಿಧಿ ಪ್ರಕಾಶನ, ಸ್ಟೇಷನ್ ರಸ್ತೆ, ಗದಗ.



ಶಿವಾಧಿಕ್ಯ ಪುರಾಣ

ಸಂ; ಪ್ರೊ॥ ಜಿ.ಎ.ಶಿವಲಿಂಗಯ್ಯ

ಬೆಲೆ: ರೂ.100/–

ಅಪ್ರಟಿತ ಲಿಂಗಾಯತ ಸಮಗ್ರ ಪ್ರಾಚೀನ ಸಾಹಿತ್ಯದ ಪ್ರಕಟಣೆಯಲ್ಲಿ ತೊಡಗಿರುವ ಪ್ರಕಾಶಕರು ಹೊರತಂದಿರುವ ಅಪರೂಪದ ಕೃತಿ ಇದು. ಮುಖದೂಳಗದ ಬಸವಲಿಂಗನೆಂದು ಕರೆದುಕೊಂಡಿರುವ ವೀರಶೈವ ಕವಿ ಬಸವಲಿಂಗ ದೇಶಿಕ ಇದರ ಕರ್ತೃ. ಬಸವಣ್ಣನವರ ಮಹಿಮೆಯನ್ನೊಳಗೊಂಡ ಈ ಕೃತಿಯ ವಿಶೇಷ ಇದರ ಎರಡು ಬಿನ್ನ ಪಾಠಗಳು. ಒಂದು ಇನ್ನೊಂದರ ಸಂಗ್ರಹ ರೂಪವಾಗಿದ್ದು ನೂರು ಭಾಮಿನಿ ಷಟ್ಪದಿಗಳಿವೆ. ಸಂದರ್ಭೋಚಿತವಾಗಿ ಶರಣರ ವಚನಗಳು ಹಾಗೂ ಸಂಸ್ಕೃತ ಶ್ಲೋಕಗಳು ಕಂಡುಬರುತ್ತವೆ. ಇದೇ ಮೊದಲ ಬಾರಿಗೆ ಪ್ರಕಟವಾಗುತ್ತಿರುವ ಈ ಕೃತಿ ಪ್ರಾಚೀನ ಸಾಹಿತ್ಯಸಕರಿಗೆ ಉಪಯುಕ್ತ.

ಪ್ರಕಾಶಕರು:ಲಿಂಗಾಯತ ಅಧ್ಯಯನ ಸಂಸ್ಥೆ, ಶ್ರೀ.ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ. ಡಂಬಳ – ಗದಗ.



ಬುಡ್ಗ ಜಂಗಮ್ ದರ್ಶಿನಿ

ಸಂ: ಪ್ರೊ॥ ಕೆ.ಎಂ.ಮೈತ್ರಿ, ಪ್ರತಾಪ ಬಹುರೂಪಿ

ಬೆಲೆ: ರೂ.350/–

ಸಮಾಜ ಹಾಗೂ ಸರ್ಕಾರದಿಂದ ಅತೀ ಅಲಕ್ಷಕ್ಕೆ ಒಳಗಾದವರು ಅಲೆಮಾರಿ ಜನಾಂಗದವರು. ಅಲೆಮಾರಿಗಳಲ್ಲಿರುವ ಹತ್ತು ಹಲವು ಜನಾಂಗಗಳಲ್ಲಿ ಬುಡ್ಗ ಜಂಗಮರ ಜನಾಂಗವೂ ಒಂದು. ನಾಡಿನ ಸಾಹಿತ್ಯ, ಸಂಸ್ಕೃತಿಯನ್ನು ಜನಮಾನಸದಲ್ಲಿ ಉಳಿಸಿ ಬೆಳಸಿದ ಬುಡ್ಗ ಜಂಗಮರು ಎಲ್ಲರಿಂದಲೂ ತಿರಸ್ಕಾರಕ್ಕೆ ಗುರಿಯಾಗಿ ಇಂದಿಗೂ ನೆಲೆಇಲ್ಲದ ಅಲೆಮಾರಿಗಳಾಗಿಯೇ ಬದುಕುತ್ತಿದ್ದಾರೆ. ಇಂಥ ಆದಿಮ ಜನಾಂಗ ಕುರಿತ ಪರಿಪೂರ್ಣ ಮಾಹಿತಿ ಈ ಕೃತಿಯಲ್ಲಿದೆ. ಕಾಲಕಾಲಕ್ಕೆ ಜನಾಂಗ ಕಂಡ ಸ್ಥಿತ್ಯಂತರಗಳು, ಸರ್ಕಾರ ಕೈಗೊಂಡ ಕ್ರಮಗಳು ಇತ್ಯಾದಿ ವಿವರಗಳುಳ್ಳ ಈ ಕೃತಿ ಬುಡ್ಗ ಜಂಗಮರನ್ನು ಅರಿತುಕೊಳ್ಳಲು ಉತ್ತಮ ಆಕರ ಗ್ರಂಥ

ಪ್ರಕಾಶಕರು:ಕರ್ನಾಟಕ ಬುಡ್ಗ ಜಂಗಮ್ ಸಂಘ, ಅರವಿಂದ ನಗರ, ಹೊಸಪೇಟೆ.



ಸಂಪಾದಕೀಯ

ಅಂತರಂಗ

ಮಧ್ಯಮ ಮಾರ್ಗವೆಂಬ ಜೀವನ ಕ್ರಮ

ಕಮ್ಯುನಿಸ್ಟರನ್ನು ಕರ್ಮಠರೆಂದು ಜರಿಯುತ್ತಿದ್ದವರಿಗೀಗ ಸಿಹಿಸುದ್ದಿ ಸಿಕ್ಕಿದೆ. 'ಸುಧಾರಣೆ ಇಲ್ಲವೆ ನಾಶ' ಎಂಬ ಹೊಸ ಮಂತ್ರ ಪಠಿಸುತ್ತ, 'ಪಶ್ಚಿಮದ ಗಾಳಿ'ಗೆ ಮೈಯೊಡ್ಡಿ ಸುಖಿಸುವ ಹೊಸ ಮನಸ್ಥಿತಿಗೆ ಭಾರತೀಯ ಕಮ್ಯುನಿಸ್ಟರು ಪೂರ್ಣ ಸನ್ನದ್ಧರಾಗಿದ್ದಾರೆ. ಜಾಗತೀಕರಣ ಬಂಡವಾಳ ಶಾಹಿ ನೀತಿ ಹಾಗೂ ಅದರ ಪರಿಣಾಮಗಳನ್ನು ಭಿನ್ನ ರೀತಿಯಲ್ಲಿ ಅರ್ಥೈಸಿಕೊಳ್ಳಲು ಆರಂಭಿಸಿದ್ದಾರೆ.

ದೇಶದ ಏಕೈಕ ಕಮ್ಯುನಿಸ್ಟ್ ಸರ್ಕಾರವನ್ನು ಹೊಂದಿರುವ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಬುದ್ಧ ದೇವ ಭಟ್ಟಾಚಾರ್ಯ ಇತ್ತೀಚೆಗೆ ಸಿಂಗಪುರ ಮತ್ತು ಇಂಡೋನೇಷ್ಯ ದೇಶಗಳಿಗೆ ಭೇಟಿ ನೀಡಿದಾಗ ಆಡಿದ ಮಾತುಗಳು ಸಂಪ್ರದಾಯಸ್ಥ ಕಮ್ಯುನಿಸ್ಟರನ್ನು ಹುಬ್ಬೇರಿಸುವಂತೆ ಮಾಡಿವೆ. ಕಟ್ಟಾ ಎಡಪಂಥೀಯ ಮಾವೋವಾದಿಗಳು ಸಿಡಿದೇಳುವಂತೆ ಮಾಡಿವೆ. ಉಳಿದಂತೆ ಬಲಪಂಥೀಯ ಮತ್ತು ಇತರೆ ಪ್ರಜಾಸುತ್ತಾತ್ಮಕ ಪಕ್ಷಗಳು ಹಾಗೂ ಚಿಂತಕರು 'ಅನಿವಾರ್ಯವನ್ನು ಒಪ್ಪಿದಕ್ಕಾಗಿ' ನಮ್ಮ ದಾರಿಗೇ ಬರುತ್ತಿದ್ದಾರೆಂದು ಸಮಾಧಾನ ಪಡುತ್ತಿದ್ದಾರೆ!

ವಿಚಿತ್ರ ಎಂದರೆ, ಎರವಲು ಜ್ಞಾನಾಧಾರಿತ ರಾಜಕೀಯ ತತ್ವ ಪ್ರತಿಪಾದಕರಾದ ಭಾರತೀಯ ಕಮ್ಯುನಿಸ್ಟರು, ಈ ನೆಲದ ಬದುಕಿನ ಒಳಸುಳಿಗಳನ್ನು ಅರ್ಥಮಾಡಿಕೊಳ್ಳಲು ಇನ್ನೂ ಸಿದ್ಧರಾಗಿಲ್ಲದಿರುವುದು. ಕಮ್ಯುನಿಸ್ಟರ ವರ್ಗಹೋರಾಟ, ಕಾರ್ಮಿಕ ಸರ್ವಾಧಿಕಾರ ಇವೆಲ್ಲಾ, ಕಮ್ಯುನಿಸಂ ಹುಟ್ಟಿದ ನಾಡಿನಲ್ಲೇ ಅಪ್ರಸ್ತುತವಾದರೂ, ಭಾರತೀಯ ಕಮ್ಯುನಿಸ್ಟರು ಇಲ್ಲಿ ಇನ್ನೂ ಅದೇ ಸಿದ್ಧಾಂತರ ಜಿಜ್ಞಾಸೆಯಲ್ಲಿ ಕಾಲ ತಳ್ಳುತ್ತಿದ್ದಾರೆ. ಭಾರತೀಯ ಬದುಕಿನೊಳಗಿಂದ ಹುಟ್ಟಿದ ರಾಜಕೀಯ ತತ್ವಾದರ್ಶಕ್ಕೆ ಒಗ್ಗಿಕೊಳ್ಳಲು ಅವರಿನ್ನೂ ಪೂರ್ಣ ತಯಾರಾಗಿಲ್ಲ. ಈ ಕರ್ಮಠತನವೇ ಭಾರತದಲ್ಲಿ ದುಡಿಯುವ ವರ್ಗದ ಪ್ರಭುತ್ವ ಸ್ಥಾಪನೆಗೆ ಬಹುದೊಡ್ಡ ತಡೆಗೋಡೆಯಾಗಿದೆ.

ಆದರೆ, ಬುದ್ಧದೇವ ಭಟ್ಟಾಚಾರ್ಯರ ಆಲೋಚನೆ ಭಾರತದ ಹೊಸತಲೆಮಾರಿನ ಎಡಪಂಥೀಯರಿಗೆ ಸಿಕ್ಕಿದ ಜಯವೋ ಅಥವಾ ಭಾರತದ ಬಹುದೊಡ್ಡ ಶಕ್ತಿಯಾದ ಜನತಾಂತ್ರಿಕ ಪ್ರಜಾಸುತ್ತೆಯ ಒತ್ತಾಸೆಗೆ ಸಿಕ್ಕಿದ ಜಯವೋ ಅಥವಾ ಅಂತರಾಷ್ಟ್ರೀಯ ಒತ್ತಡಗಳಿಗೆ ಮಣಿದ ಪರಿಣಾಮವೋ? ಗೊತ್ತಾಗುತ್ತಿಲ್ಲ. ಭಟ್ಟಾಚಾರ್ಯರ ಮಾತುಗಳಿಗೆ ಸಿಪಿಐ(ಎಂ) ಪಾಲಿಟ್ ಬ್ಯೂರೋ ಒಪ್ಪಿಗೆ ನೀಡಿದ ನಂತರವಂತೂ ಭಾರತದ ಕಮ್ಯುನಿಸ್ಟರು ಬದಲಾವಣೆಯ ಗಾಳಿಗೆ ತಮ್ಮನ್ನು ಒಡ್ಡಿಕೊಂಡಿದ್ದಾರನ್ನುವುದಂತೂ ಸ್ಪಷ್ಟವಾಗಿದೆ.

ಬಹುಶಃ ಭಟ್ಟಾಚಾರ್ಯರ ಆಲೋಚನೆಗೆ ಚೀನಾದ ವಿದ್ಯಮಾನಗಳು ಕಾರಣವಾಗಿರಬಹುದು. ಆಧುನಿಕ ಚೀನಾದ ಕಮ್ಯುನಿಸ್ಟ್ ನಾಯಕ ಡೆಂಗ್ ಕ್ಷಿಯಾವೋ ಪಿಂಗ್ ದೇಶದ ಆರ್ಥಿಕ ಕ್ಷೇತ್ರದಲ್ಲಿ ತೀವ್ರವಾದ ಬದಲಾವಣೆ ತರುವ ಮೂಲಕ ಅಲ್ಲಿ ಕಮ್ಯುನಿಸಂಗೆ ಹೊಸ ವ್ಯಾಖ್ಯಾನವನ್ನೇ ನೀಡಿದ್ದಾರೆ. ಅದರ ಫಲವಾಗಿ ಇಂದು ಚೀನಾ ಜಾಗತಿಕ ಮಟ್ಟದಲ್ಲಿ ಹೂಡಿಕೆದಾರರನ್ನು ಆಕರ್ಷಿಸುತ್ತಿದೆ. ಕೈಗಾರಿಕೆ ಮತ್ತು ವ್ಯಾಪಾರದಲ್ಲಿ ಇಡೀ ಜಗತ್ತೇ ಬೆಚ್ಚಿ ಬೀಳುವಷ್ಟರ ಮಟ್ಟಿಗಿನ ಬೆಳವಣಿಗೆಯನ್ನು ಕಂಡಿದೆ.

ಆಶ್ಚರ್ಯವೆಂದರೆ, ಚೀನಾ ಕಮ್ಯುನಿಸಂನ ಅಗ್ರನಾಯಕರಾಗಿದ್ದ ಮಾವೋತ್ಸೆ ತುಂಗ್ ಅವರೇ ತಮ್ಮ ಉತ್ತರಾಧಿಕಾರಿಯಾಗಿ ಡೆಂಗ್ ಅವರನ್ನು ಪ್ರತಿಸ್ಥಾಪಿಸಿದ್ದು. ಮಾವೋ ಅವರ ನಂತರ ದೇಶದ ಕಮ್ಯುನಿಸಂನ ತತ್ವವೇತ್ತ ವರಿಷ್ಠ ನೇತಾರರಾದ ಡೆಂಗ್ ಆಧುನಿಕ ಚೀನಾದ ರೂವಾರಿ. ಆರ್ಥಿಕ ಮುನ್ನಡೆ, ಉದ್ಯೋಗಗಳ ನಿರ್ಮಾಣ ಮತ್ತು ಅಭಿವೃದ್ಧಿ - ಇವು ಮಾತ್ರ ಈಗ ಚೀನಾದ ಆದ್ಯತೆಗಳಾಗಿವೆ. ಸರ್ವಸ್ವವೂ ಕಮ್ಯುನಿಸ್ಟ್ ಪ್ರಭುತ್ವದ ಪಾಲಾಗಿದ್ದಾಗಲೂ ಬಡತನ, ಹಸಿವು ಹಾಗೂ ಬರಗಾಲದಿಂದ ನರಳುತ್ತಿದ್ದ ಚೀನಾ ಜನತೆಗೆ ಈಗ ಸಂಭ್ರಮದ ಸಂಕ್ರಮಣ. ಸ್ವಂತ ಆಸ್ತಿ-ಮನೆ-ಆಯ್ಕೆ ಅವರಲ್ಲೀಗ ಹೊಸ ಚೈತನ್ಯ ನೀಡಿದೆ. ಡೆಂಗ್ ಅವರ ಕಮ್ಯುನಿಸಂನ ಗೆಲುವು ಇದೇ ಅಗಿರಬಹುದೆ?

ಸಂಪೂರ್ಣ ಬಂಡವಾಳ ಶಾಹಿ ನೆಲೆಯಲ್ಲೇ ಕಾರ್ಯ ನಿರ್ವಹಿಸುವ ಭಾರತದ ಎಷ್ಟೋ ರಾಜ್ಯಗಳು ಪಶ್ಚಿಮ ಬಂಗಾಳದ ಕಮ್ಯುನಿಸ್ಟ್ ಸರ್ಕಾರದ ಸಾಧನೆಗಳ ಮುಂದೆ ಏನೇನೂ ಅಲ್ಲ. ದೇಶದ ಒಟ್ಟು ಸಣ್ಣ ಉಳಿತಾಯದಲ್ಲಿ ಶೇ.13.7 ರಷ್ಟು ಪಶ್ಚಿಮ ಬಂಗಾಳದ್ದು. ಕಟ್ಟುನಿಟ್ಟಾಗಿ ಜಾರಿಗೆತಂದ ಭೂ ಸುಧಾರಣಾ ಕ್ರಮದಿಂದ ಸುಮಾರು 30 ಲಕ್ಷ ಬಡ ಕುಟುಂಬಗಳು ತಮ್ಮ ಬದುಕನ್ನು ಉತ್ತಮ ಪಡಿಸಿಕೊಂಡಿವೆ. ವಿದ್ಯುತ್ ಉತ್ಪದನೆಯಲ್ಲಿ ಅಸಾಧಾರಣ ಸಾಧನೆ ಮಾಡಿದ್ದು ಹೊರ ರಾಜ್ಯಗಳಿಗೆ ವಿದ್ಯುತ್ ಒದಗಿಸುವ ಸ್ಥಿತಿ ಆ ರಾಜ್ಯಕ್ಕಿದೆ. ರಾಜಕೀಯವಾಗಿ ಪಶ್ಚಿಮ ಬಂಗಾಳದಷ್ಟು ಭದ್ರತೆ ಭಾರತದ ಬೇರಾವ ರಾಜ್ಯಗಳಲ್ಲೂ ಇಲ್ಲ.

ಇಷ್ಟೆಲ್ಲಾ ಸಾಧನೆ ಕರ್ಮಠ ಕಮ್ಯುನಿಸಂನಿಂದಂತೂ ಸಾಧ್ಯವಾಗುತ್ತಿರಲಿಲ್ಲ. ಪಶ್ಚಿಮ ಬಂಗಾಳದ ಎಡ ಪಂಥೀಯರು ಅನುಸರಿಸಿದ ಸುಧಾರಿತ ಕಮ್ಯುನಿಸ್ಟ್ ಸಿದ್ಧಾಂತ ಇದಕ್ಕೆ ದಾರಿಮಾಡಿ ಕೊಟ್ಟಿದೆ ಎಂಬುದೇ ಹೆಚ್ಚು ಅರ್ಥಪೂರ್ಣ. ಬಂಡವಾಳ ಶಾಹಿ ರಾಷ್ಟ್ರಗಳೇ ಅಭಿವೃದ್ಧಿಯಲ್ಲಿ ಮೂಲೆಗುಂಪಾಗುತ್ತಿರುವ ಈ ದಿನಗಳಲ್ಲಿ ಎಡಪಂಥೀಯರ ಈ ಮಧ್ಯಮ ಮಾರ್ಗ ಉತ್ತಮ ಪ್ರತಿಫಲ ನೀಡುತ್ತಿದೆ. ಯಾವುದೇ ಸಿದ್ಧಾಂತದ ಅತಿರೇಕಗಳು ಜನರಿಗೆ ಒಳ್ಳೆಯದನ್ನು ಮಾಡುವುದಕ್ಕಿಂತ ಅನಾಹುತವನ್ನೆ ಮಾಡುತ್ತವೆ.

ಸುಧಾರಣೆ ತರುವ ಆತುರದಲ್ಲಿ ಕ್ಷಣದ ಸತ್ಯಗಳನ್ನೆಲ್ಲ ಸಾರ್ವಕಾಲಿಕಗೊಳಿಸಲು ಹೊರಡುವುದು ಅಷ್ಟೇ ಅಪಾಯಕಾರಿ. ಭಟ್ಟಾಚಾರ್ಯರು ಸಿಂಗಪುರದ ಭಾರತೀಯ ವಾಣಿಜ್ಯ ಮಂಡಲಿ ಸಭೆಯಲ್ಲಿ ಹೇಳಿರುವುದನ್ನು ಗಮನಿಸಿದರೆ ಈ ಅಪಾಯವೂ ಇಲ್ಲದಿಲ್ಲ. 'ಜಾಗತೀಕರಣ ಇಂದಿನ ಅಗತ್ಯ ಮತ್ತು ಅದನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ' ಎಂಬ ಅವರ ಮಾತು ಇದಕ್ಕೆ ಮುನ್ಸೂಚನೆ. ಜಾಗತೀಕರಣ ಇಂದಿನ ಅಗತ್ಯ ಎಂದು ಹೇಳುವ ಮಟ್ಟಕ್ಕೆ ಇವರು ಹೋಗಿಬಿಟ್ಟರೆ ಅದು ಕರ್ಮಠತನದ ಮತ್ತೊಂದು ಮುಖವಾಗುತ್ತದೆ. ಜಾಗತಿಕ ವಿದ್ಯಮಾನದ ಹಿನ್ನೆಲೆಯಲ್ಲಿ ಜಾಗತೀಕರಣವನ್ನು ಎದುರಿಸಿ ಬದುಕುಳಿಯುವ ವಿಚಾರ ಚರ್ಚಿಸಬಹುದೇ ಹೊರತು ಅದನ್ನು ಅಗತ್ಯ ಎಂದು ಪುಸ್ವೀಕರಿಸುವುದು ಅಪರಾಧವಾಗುತ್ತದೆ. ಅದರಲ್ಲೂ ಎಡಪಂಥೀಯ ವಿಚಾರ ಧಾರೆಯ ಮುಖಂಡರೊಬ್ಬರಿಂದ ಇಂಥ ಮಾತು ನಿರೀಕ್ಷಿಸುವುದು ಆಘಾತಕಾರಿಯಾದುದು.

ಬಂಡವಾಳ ಶಾಹಿ ಪ್ರಭುತ್ವವಾಗಲಿ ದುಡಿಯುವ ವರ್ಗದ ಪ್ರಭುತ್ವವಾಗಲಿ ಎರಡೂ ಯಾವುದೇ ಆರೋಗ್ಯವಂತ ಸಮಾಜದ ಅತಿರೇಕಗಳೇ. ಎರಡನ್ನೂ ಬೆಸೆದ ಸ್ವಾಭಿಮಾನಿ-ಸ್ವಾವಲಂಬಿ ಆರೋಗ್ಯಕರ ಸಮಾಜ ಮಾತ್ರ ನಿರಂತರ ಜೀವನ ಕ್ರಮದ ಆಶಯವಾಗಿ ಉಳಿಯುತ್ತದೆ. ಯಾವುದೇ ಸಿದ್ಧಾಂತ ಕಾರ್ಯಕ್ರಮಗಳ ಮೇಲೆ ಯಾರೇ ಅಧಿಕಾರಕ್ಕೆ ಬಂದರೂ, ಬಂದ ಮೇಲೆ ಅದನ್ನು ಉಳಿಸಿಕೊಳ್ಳುವುದೇ ಪ್ರಥಮ ಆದ್ಯತೆ ಆಗುತ್ತದೆ. ಅದಕ್ಕಾಗಿ ಮಾಡಬಾರದ್ದನ್ನೆಲ್ಲ ಮಾಡಬೇಕಾಗುತ್ತದೆ. ಸಮತಾವಾದದ ಉನ್ನತ ಆದರ್ಶದಿಂದಲ್ಲೇ ಸರ್ಕಾರ ರಚಿಸಿದವರೂ ಜನದ್ರೋಹಿಗಳಾಗಿ-ಸರ್ವಾಧಿಕಾರಿಗಳಾಗಿ ವರ್ತಿಸಿದ್ದನ್ನು ಇತಿಹಾಸ ತೋರಿಸಿ ಕೊಟ್ಟಿದೆ. ಈ ಹಿನ್ನೆಲೆಯಲ್ಲಿ ಯಾವ ಅತಿರೇಕಗಳೂ ಇಲ್ಲದ ಮಧ್ಯಮ ಮಾರ್ಗದ ಜೀವನ ಕ್ರಮವೇ ಸರಿಯಾದುದು. ನಾಗರೀಕ ಜಗತ್ತು ತನ್ನೆಲ್ಲಾ ಒಳಿತಿಗಾಗಿ ಈ ಬಗ್ಗೆ ಚಿಂತಿಸಬೇಕಾದ ಸಂದರ್ಭ ಇದು.

○ ಇಂದೂಧರ ಹೊನ್ನಾಪುರ

ನಮಗೆ ಬೇಕಾದ ಇಂಗ್ಲೀಷ್

ಹಳ್ಳಿಗಾಡಿನ, ಹಿಂದುಳಿದ ವರ್ಗಗಳ ಕನ್ನಡ ಮಾಧ್ಯಮದ ಮಕ್ಕಳಿಗೆ ನಗರಗಳ, ಮುಂದುವರೆದ ವರ್ಗಗಳ, ಇಂಗ್ಲಿಷ್ ಮಾಧ್ಯ ಮದ ಮಕ್ಕಳಿಗೆ ಇರುವಂತೆ ಹೆಚ್ಚು ಚೆನ್ನಾಗಿ ಇಂಗ್ಲಿಷ್ ಕಲಿಯುವ ಅವಕಾಶವಿಲ್ಲ. ಆದ್ದ ರಿಂದ ಎಲ್ಲರಿಗೂ ಪ್ರಾಥಮಿಕ ಮೊದಲನೆಯ ತರಗತಿಯಿಂದಲೇ ಇಂಗ್ಲಿಷ್ ಕಲಿಸಬೇಕು; ಇದು ಸಾಮಾಜಿಕ ನ್ಯಾಯದ ಪ್ರಶ್ನೆ ಎನ್ನುವ ಬೇಡಿಕೆ ಈಗ ಕೇಳಿಬರುತ್ತಿದೆ. ಸಮಸ್ಯೆ ಗಂಭೀರವಾಗಿದ್ದು, ಅದರ ಬಗ್ಗೆ ತೋರುತ್ತಿರುವ ಕಳಕಳಿ ಪ್ರಾಮಾಣಿ ಕವೇ ಆಗಿದ್ದರೂ ಸಮಸ್ಯೆಯ ಕಾರಣ ಮತ್ತು ಪರಿಹಾರಗಳನ್ನು ತಜ್ಞರಲ್ಲದವರು ತಪ್ಪಾಗಿ ಪ್ರತಿ ಪಾದಿಸುತ್ತಿದ್ದಾರೆ.

ನ್ಯಾಯಾಲಯದ ತೀರ್ಪಿಗೆ ಅನುಗು ಣವಾಗಿ ಘೋಷಿಸಿರುವ ಕರ್ನಾಟಕ ಸರಕಾರದ ಭಾಷಾ ನೀತಿಯ ಪ್ರಕಾರ ಪ್ರಾಥಮಿಕ ಶಾಲೆ ಒಂದರಿಂದ ನಾಲ್ಕನೇ ತರಗತಿಯವರೆಗೆ ಒಂದೇ ಭಾಷೆಯಲ್ಲಿ ಶಿಕ್ಷಣ ನೀಡಬೇಕು; ಎರಡನೇ ಭಾಷೆಗೆ ಅವಕಾಶವಿಲ್ಲ. ಒಂದರಿಂದ ಮೂರ ನೆಯ ತರಗತಿಯವರೆಗೆ ಒಂದು ಭಾಷೆಯನ್ನು ಮಾತ್ರ ಕಲಿಸಬೇಕು. ಕನ್ನಡೇತರ ಮಾತೃಭಾಷೆಯ ಮಕ್ಕಳಿಗೆ ಮೂರನೆಯ ತರಗತಿಗೆ ಮೊದಲು ರಾಜ್ಯ ಭಾಷೆ ಕನ್ನಡವನ್ನೂ ಕಲಿಸು ವಂತಿಲ್ಲ. ಹೀಗಿರುವಾಗ ಮಾತೃ ಭಾಷೆ, ಪರಿಸರದ ಅಥವಾ ರಾಜ್ಯ ಭಾಷೆ ಯಾವುದೂ ಅಲ್ಲದ ಇಂಗ್ಲಿಷನ್ನು ಮೊದಲನೇ ತರಗತಿಯಿಂದಲೇ ಮಾಧ್ಯಮವಾಗಿ ಮಾತ್ರ ವಲ್ಲ, ಒಂದು ಭಾಷೆಯಾಗಿಯೂ ಕಲಿಸಲು ಸಾಧ್ಯವಿಲ್ಲ.

ಮಕ್ಕಳ ನಡುವೆ ಈಗಿರುವ ಶೈಕ್ಷಣಿಕ, ಸಾಮಾಜಿಕ ಅಸಮಾನ ಸ್ಪರ್ಧೆಯ ಅಂತರವನ್ನು ತೊಡೆದುಹಾಕುವ ಹೊಣೆಗಾರಿಕೆ ಯಿಂದ ಕರ್ನಾಟಕ ಉಚ್ಚ ನ್ಯಾಯಲಯ ತೀರ್ಪನ್ನು ನೀಡಿದೆ. ಈ ತೀರ್ಪಿಗೆ ಅನುಗುಣವಾಗಿ ಸರಕಾರ ತನ್ನ ಭಾಷಾ ನೀತಿಯ ಆದೇಶ ಹೊರಡಿಸಿದೆ. ಸರ್ವೋನ್ನತ ನ್ಯಾಯಾಲಯವೂ ರಾಜ್ಯ ಸರಕಾ ರದ ಭಾಷಾ ನೀತಿಯನ್ನು ಪ್ರಶಂಸಿಸಿ ಎತ್ತಿಹಿಡಿ ದಿದೆ. ಆದರೆ ಕೆಲವು ಪ್ರಕರಣಗಳ ಬಗ್ಗೆ ಬರ ಬೇಕಿದ್ದ ಸರ್ವೋನ್ನತ ನ್ಯಾಯಾಲಯದ ತೀರ್ಪನ್ನು ನಿರೀಕ್ಷಿಸಿ ಉಚ್ಚ ನ್ಯಾಯಾಲಯ ಸರ ಕಾರದ ಭಾಷಾ ನೀತಿಯ ಆದೇಶಕ್ಕೆ ತಡೆಯಾಜ್ಞೆ ನೀಡಿದೆ. ಈಗ ಎಲ್ಲ ಅಡ್ಡಿಗಳೂ ನಿವಾರಣೆ ಯಾಗಿವೆ. ಸರ್ವೋನ್ನತ ನ್ಯಾಯಾಲಯದ ತೀರ್ಪಿನಿಂದ ಎಲ್ಲ ಪ್ರಕರಣಗಳು ಅರ್ಥ ಕಳೆದುಕೊಂಡಿವೆ ಎಂದು ಸರ್ವೋನ್ನತ ನ್ಯಾ ಯಾಲಯದ ಸಂವಿಧಾನ ಪೀಠವೇ ತೀರ್ಪು ನೀಡಿದೆ. ಸಂವಿಧಾನದ ೧೪೧ನೇ ವಿಧಿಯಂತೆ ಸರ್ವೋನ್ನತ ನ್ಯಾಯಾಲಯದ ತೀರ್ಪನ್ನು ಎಲ್ಲರೂ ಒಪ್ಪಬೇಕು. ಇನ್ನು ಆದೇಶದ ತಡೆಯಾಜ್ಞೆ ತೆರವಾಗುವುದು ಮಾತ್ರ ಬಾಕಿ ಇದೆ.

ಈ ತಡೆಯಾಜ್ಞೆ ತೆರವಾಗಿ ಆದೇಶ ಪೂರ್ಣವಾಗಿ ಜಾರಿಗೆ ಬಂದಾಗ ಎಲ್ಲ ಕಡೆ ಕನ್ನಡ ಮಾಧ್ಯಮ–ಇಂಗ್ಲಿಷ್ ಮಾಧ್ಯಮ, ಹಳ್ಳಿ–ನಗರ ಶಾಲೆಗಳು ಎಂಬ ಭೇದವು ಅಳಿಸಿಹೋಗಿ ಶೈಕ್ಷಣಿಕ, ಸಾಮಾಜಿಕ ಅಸಮಾನತೆ ಕಣ್ಮರೆ ಯಾಗುತ್ತದೆ. ಎಲ್ಲರೂ ತಮ್ಮ ಮಾತೃಭಾಷೆ ಅಥವಾ ಎರಡನೆಯ ಮಾತೃಭಾಷೆಯಾದ ರಾಜ್ಯಭಾಷೆಯಲ್ಲಿ ಸಮಾನ ಶಿಕ್ಷಣ ಪಡೆದು, ಸಮಾನವಾಗಿ ಸ್ಪರ್ಧಿಸುವ ಅವಕಾಶ ಪಡೆಯು ತ್ತಾರೆ. ಎರಡನೆಯ ಭಾಷೆಯನ್ನು ಕಲಿಯುವ ವರ್ಷದಿಂದ, ಅಂದರೆ ಮೂರನೆಯ ತರಗತಿಯಿಂದ, ಎಲ್ಲರೂ ಸಮಾನವಾಗಿ ಇಂಗ್ಲಿಷನ್ನು ಕಲಿಯುತ್ತಾರೆ. ಆದ್ದರಿಂದ ತಡೆಯಾಜ್ಞೆಯನ್ನು ತೆರವುಗೊಳಿಸಿ ಸರ್ವೋನ್ನತ ನ್ಯಾಯಾಲಯದ ಮೆಚ್ಚುಗೆ ಯನ್ನೂ, ಸಂವಿಧಾನ ಪೀಠದ ಅನು ಮೋದನೆಯನ್ನೂ ಪಡೆದಿರುವ ಸರಕಾರದ ಶಿಕ್ಷಣ ನೀತಿಯ ಆದೇಶ ಪೂರ್ಣವಾಗಿ ಜಾರಿ ಯಾಗುವುದಕ್ಕೆ ಅಗತ್ಯವಾದ ಕ್ರಮವನ್ನು ಕೂಡಲೆ ಕೈಗೊಳ್ಳಬೇಕು.

ಪ್ರದೇಶ ಭಾಷಾ ಮಾಧ್ಯಮದ ಮಕ್ಕ ಳು ಇಂಗ್ಲಿಷಿನಲ್ಲಿ ಹೆಚ್ಚು ಅನುತ್ತೀರ್ಣರಾಗು ವುದಕ್ಕೆ ಅವರಿಗೆ ಇಂಗ್ಲಿಷನ್ನು ಬೋಧಿಸುವ ಕ್ರಮದಲ್ಲಿರುವ ದೋಷವನ್ನು ಶೈಕ್ಷಣಿಕ ಸಂಶೋ ಧನೆ ಮತ್ತು ತರಬೇತಿಯ ರಾಷ್ಟ್ರೀಯ ಪರಿಷತ್ತು (ಎನ್‌ಸಿಇಆರ್‌ಟಿ) ಸರಿಯಾಗಿ ಗುರುತಿಸಿದೆ. ಅದು ತನ್ನ ೨೦೦೫ರ ರಾಷ್ಟ್ರೀಯ

ಸಂಪಾದಕರೊಡನೆ ಸಂವಾದ

ಹಳ್ಳಿಗಾಡಿನ, ಹಿಂದುಳಿದ ವರ್ಗಗಳ ಕನ್ನಡ ಮಾಧ್ಯಮದ ಮಕ್ಕಳಿಗೆ ನಗರಗಳ, ಮುಂದುವರೆದ ವರ್ಗಗಳ, ಇಂಗ್ಲಿಷ್ ಮಾಧ್ಯಮದ ಮಕ್ಕಳಿಗೆ ಇರುವಂತೆ ಹೆಚ್ಚು ಚೆನ್ನಾಗಿ ಇಂಗ್ಲಿಷ್ ಕಲಿಯುವ ಅವಕಾಶವಿಲ್ಲ. ಆದ್ದರಿಂದ ಎಲ್ಲರಿಗೂ ಪ್ರಾಥಮಿಕ ಮೊದಲನೆಯ ತರಗತಿಯಿಂದಲೇ ಇಂಗ್ಲಿಷ್ ಕಲಿಸಬೇಕು; ಇದು ಸಾಮಾಜಿಕ ನ್ಯಾಯದ ಪ್ರಶ್ನೆ ಎನ್ನುವ ಬೇಡಿಕೆ ಈಗ ಕೇಳಿಬರುತ್ತಿದೆ. ಸಮಸ್ಯೆ ಗಂಭೀರವಾಗಿದ್ದು, ಅದರ ಬಗ್ಗೆ ತೋರುತ್ತಿರುವ ಕಳಕಳಿ ಪ್ರಾಮಾಣಿಕವೇ ಆಗಿದ್ದರೂ ಸಮಸ್ಯೆಯ ಕಾರಣ ಮತ್ತು ಪರಿಹಾರಗಳನ್ನು ತಜ್ಞರಲ್ಲದವರು ತಪ್ಪಾಗಿ ಪ್ರತಿ ಪಾದಿಸುತ್ತಿದ್ದಾರೆ. ನ್ಯಾಯಾಲಯದ ತೀರ್ಪಿಗೆ ಅನುಗುಣವಾಗಿ ಘೋಷಿಸಿರುವ ಕರ್ನಾಟಕ ಸರಕಾರದ ಭಾಷಾ ನೀತಿಯ ಪ್ರಕಾರ ಪ್ರಾಥಮಿಕ ಶಾಲೆ ಒಂದರಿಂದ ನಾಲ್ಕನೇ ತರಗತಿಯವರೆಗೆ ಒಂದೇ ಭಾಷೆಯಲ್ಲಿ ಶಿಕ್ಷಣ ನೀಡಬೇಕು; ಎರಡನೇ ಭಾಷೆಗೆ ಅವಕಾಶವಿಲ್ಲ.

○ಡಾ॥ ಪಂಡಿತಾರಾಧ್ಯ

ಪಠ್ಯಕ್ರಮ ವರದಿಯಲ್ಲಿ ಇಂಗ್ಲಿಷ್ ಬೋಧನೆಯ ಸ್ಥಿತಿಗತಿ ಕುರಿತು ಹೇಳಿರುವ ಮಾತುಗಳು ಗಮನಾರ್ಹ. ಅತ್ಯಂತ ಕಡಿಮೆ ಸಂಖ್ಯೆಯ ಆಂಗ್ಲೋ ಇಂಡಿಯನ್ನರನ್ನು ಬಿಟ್ಟರೆ, ಇಂಗ್ಲಿಷ್ ಯಾರ ಮಾತೃಭಾಷೆ/ಪರಿಸರದ ಭಾಷೆ ಅಲ್ಲ; ರಾಜ್ಯ ಭಾಷೆಯೂ ಅಲ್ಲ. ಅಂದರೆ ಮೊದಲ ಭಾಷೆಯಲ್ಲ. ಮೊದಲ ಭಾಷೆಯಲ್ಲವ ಇಂಗ್ಲಿಷನ್ನು ಮೊದಲ ಭಾಷೆಗಳನ್ನು ಕಲಿಸುವ ಕ್ರಮದಲ್ಲಿ ಕಲಿಸುತ್ತಿರುವುದೇ ಇಂಗ್ಲಿಷ್ ಕಲಿಕೆಯ ವಿಫಲತೆಗೆ ಮುಖ್ಯ ಕಾರಣ. ಇದರಿಂದ ಪ್ರಾದೇಶಿಕ ಭಾಷಾ ಮಾಧ್ಯಮದ ಮಕ್ಕಳು ಉಳಿದ ಎಲ್ಲ ವಿಷಯಗಳಲ್ಲಿ ಬುದ್ಧವಂತರಾದರೂ ಕಲಿಸುವ ಕ್ರಮದ ದೋಷದಿಂದಾಗಿ ಇಂಗ್ಲಿಷಿನಲ್ಲಿ ಅನುತ್ತೀರ್ಣರಾಗುತ್ತಿದ್ದಾರೆ. ಇಂಗ್ಲಿಷ್ ಮಾತೃಭಾಷೆಯಾಗಿರುವವರು ಕಲಿಯುವ ಸಂವೇದನ ಪೂರ್ವಕ ಮೊದಲನೆಯ ಭಾಷೆ ಇಂಗ್ಲಿಷ್ ನಮಗೆ ಅಗತ್ಯವಿಲ್ಲ; ಶಿಕ್ಷಣ ಮತ್ತು ವ್ಯವಹಾರಕ್ಕೆ ಉಪಯುಕ್ತವಾಗುವ ಎರಡನೆಯ ಭಾಷೆ ಇಂಗ್ಲಿಷ್‌ನ ಅಗತ್ಯವಿದೆ.

ಎರಡನೆಯ ಭಾಷೆಯಾಗಿ ಇಂಗ್ಲಿಷನ್ನು ಪರಿಣಾಮಕಾರಿಯಾಗಿ ಬೋಧಿಸುವ ಬಗ್ಗೆ ಈವರೆಗೆ ನಡೆದಿರುವ ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯಗಳು ತುಂಬ ಕಡಿಮೆ. ಮಕ್ಕಳು ಇಂಗ್ಲಿಷ್‌ನಲ್ಲಿ ಅನುತ್ತೀರ್ಣರಾಗುತ್ತಿರುವುದರಿಂದ ಹತಾಶರಾದ ಪೋಷಕರು ಇಂಗ್ಲಿಷ್ ಮಾಧ್ಯಮದ ಮಕ್ಕಳಂತೆ ತಮ್ಮ ಮಕ್ಕಳೂ ಒಂದನೆಯ ತರಗತಿಯಿಂದಲೇ ಇಂಗ್ಲಿಷ್ ಕಲಿತರೆ ಅನುಕೂಲವಾಗುತ್ತದೆ ಎಂಬ ಸ್ವಾಭಾವಿಕ ನಿರೀಕ್ಷೆಯಿಂದ ಒತ್ತಾಯಿಸುತ್ತಿದ್ದಾರೆ. ಆದರೆ ಇಂಗ್ಲಿಷ್ ಮೊದಲ ಭಾಷೆಯಲ್ಲದವರಿಗೆ ಇಂಗ್ಲಿಷನ್ನು ಮೊದಲ ಭಾಷೆಯನ್ನು ಕಲಿಸುವ ಕ್ರಮದಲ್ಲಿ ಯಾವ ವಿಶೇಷ ತರಬೇತಿ ಪಡೆದಿಲ್ಲದ ಶಿಕ್ಷಕರು ಕಲಿಸುತ್ತಿರುವುದರಿಂದ ನಿರೀಕ್ಷಿತ ಫಲ ದೊರೆಯುತ್ತಿಲ್ಲ; ದೊರೆಯುವುದು ಸಾಧ್ಯವೂ ಇಲ್ಲ. ಇನ್ನು ಐದು ವರ್ಷಗಳಲ್ಲಿ ಎರಡನೆಯ ಭಾಷೆಯಾಗಿ ಇಂಗ್ಲಿಷನ್ನು ಕಲಿಸುವ ಬಗ್ಗೆ ಅಗತ್ಯ ಸಂಶೋಧನೆ ನಡೆಸದಿದ್ದರೆ ಒಂದನೆಯ ತರಗತಿಯಿಂದ ಇಂಗ್ಲಿಷ್ ಕಲಿಸಿ ಎಂದು ಈಗ ಒತ್ತಾಯಿಸುತ್ತಿರುವ ಹತಾಶ ಪೋಷಕರು ಒಂದನೆಯ ತರಗತಿಯಿಂದ ಇಂಗ್ಲಷ್ ಮಾಧ್ಯಮವೇ ಬೇಕು ಎಂದು ಒತ್ತಾಯಿಸಿದರೆ ಆಶ್ಚರ್ಯವಿಲ್ಲ ಎಂದು ಎನ್‌ಸಿಇಆರ್‌ಟಿ ಎಚ್ಚರಿಸಿದೆ.

ಕರ್ನಾಟಕದಲ್ಲಿ ಎರಡನೆಯ ಭಾಷೆ ಯಾದ ಇಂಗ್ಲಿಷನ್ನು ಎರಡನೆಯ ಭಾಷೆಯನ್ನು ಕಲಿಸುವ ಕ್ರಮದಲ್ಲಿ ಕಲಿಸಬೇಕು. ಅದಕ್ಕಾಗಿ ಅಗತ್ಯವಾದ ವಿಶೇಷ ಪಠ್ಯಪುಸ್ತಕಗಳನ್ನು ಸಿದ್ಧ ಪಡಿಸಬೇಕು. ರಾಜ್ಯಾದ್ಯಂತ ಶಿಕ್ಷಕರಿಗೆ ಎರಡ ನೆಯ ಭಾಷಾ ಬೋಧನೆಯಲ್ಲಿ ಪರಿಣತರಾದ ವರಿಂದ ವಿಶೇಷ ತರಬೇತಿ ಕೊಡಿಸಬೇಕು. ಇಂದು ಎಲ್ಲ ಕಡೆಗಳಲ್ಲಿ ಸ್ವಲ್ಪ ಸಮಯದಲ್ಲಿಯೇ ಪರಿಣಾಮಕಾರಿಯಾದ ವ್ಯಾವಹಾರಿಕ ಇಂಗ್ಲಿಷನ್ನು ಕಲಿಸುವ ತರಗತಿಗಳು ಕಾಣಿಸುತ್ತಿವೆ. ಈ ತರಗತಿಗಳಲ್ಲಿ ಇಂಗ್ಲಿಷ್ ಮಾತೃಭಾಷೆಯ ಲ್ಲದವರಿಗೆ ಕೆರಿಯರ್ ಇಂಗ್ಲಿಷ್, ಎಕ್ಸಿಕ್ಯೂಟಿವ್ ಇಂಗ್ಲಿಷ್, ಕಾಲ್‌ಸೆಂಟರ್ ಇಂಗ್ಲಿಷ್ ಮೊದಲಾದ ವಿವಿಧ ಬಗೆಯ ಇಂಗ್ಲಿಷ್‌ಗಳನ್ನು ಪರಿಣಾಮಕಾ ರಿಯಾಗಿ ಸ್ವಲ್ಪ ಸಮಯದಲ್ಲಿಯೇ ಕಲಿಸುತ್ತಾರೆ. ಇದು ಎರಡನೆಯ ಭಾಷೆಯನ್ನು ಬೋಧಿಸುವ ಕ್ರಮವನ್ನು ಅನುಸರಿಸುವುದರಿಂದ ಸಾಧ್ಯವಾಗಿದೆ. ಎಲ್ಲ ಮಕ್ಕಳಿಗೆ ಇಂಗ್ಲಿಷನ್ನು ಮೊದಲ ಭಾಷೆಯಾಗಿ ಕಲಿಸುವುದು ಸಾಧ್ಯವಿಲ್ಲ; ಅಗ ತ್ಯವೂ ಇಲ್ಲ. ಅದರ ಬಗ್ಗೆ ಅಸಕ್ತಿಯಿರುವವರು 'ಉನ್ನತ ತರಗತಿಗಳಲ್ಲಿ ಅದಕ್ಕಾಗಿ ವಿಶೇಷ ಅಧ್ಯಯನವನ್ನು ಕೈಗೊಳ್ಳುತ್ತಾರೆ. ಎಲ್ಲರಿಗೆ ಶೈಕ್ಷಣಿಕವಾಗಿ, ವ್ಯಾವಹಾರಿಕವಾಗಿ ಬೇಕಾಗುವ ಇಂಗ್ಲಿಷನ್ನು ಪರಿಣಾಮಕಾರಿಯಾಗಿ ಕಲಿಸುವುದು ಇಂದಿನ ಅಗತ್ಯ.

ಆದ್ದರಿಂದ ನಮಗೆ ಇಂದು ಅಗತ್ಯ ವಾಗಿರುವ ಎರಡನೆಯ ಭಾಷೆಯಾದ ಇಂಗ್ಲಿಷನ್ನು ಅಗತ್ಯ ಸಿದ್ಧತೆಗಳನ್ನು ಮಾಡಿ ಕೊಂಡು ಆನಂತರವೇ ಕಲಿಸಲು ಆರಂಭಿಸ ಬೇಕು. ಮೊದಲು ನ್ಯಾಯಾಲಯದ ತಡೆಯಾಜ್ಞೆಯನ್ನು ತೆರವು ಮಾಡಿಸಿ ಸರಕಾರದ ಭಾಷಾ ನೀತಿ ಪೂರ್ಣವಾಗಿ ಜಾರಿಯಾಗಲು ಅವಕಾಶ ಮಾಡಿಕೊಡಬೇಕು. ಆಗ ಈಗಿರುವ ಎಲ್ಲ ಇಂಗ್ಲಿಷ್ ಮಾಧ್ಯಮ ಶಾಲೆಗಳು ಮಾತೃಭಾಷೆ/ರಾಜ್ಯಭಾಷಾ ಮಾಧ್ಯಮದ ಶಾಲೆಗ ಳಾಗಿ ಪರಿವರ್ತಿತವಾಗುತ್ತವೆ. ಮೊದಲಿನ ಎರಡು ವರ್ಷಗಳಲ್ಲಿ ಅಗತ್ಯ ಪಠ್ಯಕ್ರಮ, ಪಠ್ಯ ಪುಸ್ತಕಗಳನ್ನು ಸಿದ್ಧಗೊಳಿಸಿ ಶಿಕ್ಷಕರಿಗೆ ತರಬೇತಿ ನೀಡಬೇಕು. ಆನಂತರ ಎಲ್ಲ ಮಕ್ಕಳು ಮೂರ ನೆಯ ತರಗತಿಯಿಂದ ಸಮಾನವಾಗಿ ಇಂಗ್ಲಿಷನ್ನು ಕಲಿಯುತ್ತಾರೆ.

ಇಂಗ್ಲಿಷನ್ನು ಹೇಗೆ ಮತ್ತು ಯಾವ ವರ್ಷದಿಂದ ಪರಿಣಾಮಕಾರಿಯಾಗಿ ಕಲಿಸ ಬಹುದು ಎಂಬ ಶೈಕ್ಷಣಿಕ ವಿಷಯವನ್ನು ರಾಜಕೀಯಗೊಳಿಸದೆ ಶಿಕ್ಷಣ ತಜ್ಞರಿಗೆ ಬಿಡುವುದು ವಿವೇಕಯುತ. □

ಎರಡನೆಯ ಭಾಷೆಯಾಗಿ ಇಂಗ್ಲಿಷನ್ನು ಪರಿಣಾಮಕಾರಿಯಾಗಿ ಬೋಧಿಸುವ ಬಗ್ಗೆ ಈವರೆಗೆ ನಡೆದಿರುವ ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯಗಳು ತುಂಬ ಕಡಿಮೆ. ಮಕ್ಕಳು ಇಂಗ್ಲಿಷ್‌ನಲ್ಲಿ ಅನುತ್ತೀರ್ಣರಾಗುತ್ತಿರುವುದರಿಂದ ಹತಾಶರಾದ ಪೋಷಕರು ಇಂಗ್ಲಿಷ್ ಮಾಧ್ಯಮದ ಮಕ್ಕಳಂತೆ ತಮ್ಮ ಮಕ್ಕಳೂ ಒಂದನೆಯ ತರಗತಿಯಿಂದಲೇ ಇಂಗ್ಲಿಷ್ ಕಲಿತರೆ ಅನುಕೂಲವಾಗುತ್ತದೆ ಎಂಬ ಸ್ವಾಭಾವಿಕ ನಿರೀಕ್ಷೆಯಿಂದ ಒತ್ತಾಯಿಸುತ್ತಿದ್ದಾರೆ. ಆದರೆ ಇಂಗ್ಲಿಷ್ ಮೊದಲ ಭಾಷೆಯಲ್ಲದವರಿಗೆ ಇಂಗ್ಲಿಷನ್ನು ಮೊದಲ ಭಾಷೆಯನ್ನು ಕಲಿಸುವ ಕ್ರಮದಲ್ಲಿ ಯಾವ ವಿಶೇಷ ತರಬೇತಿ ಪಡೆದಿಲ್ಲದ ಶಿಕ್ಷಕರು ಕಲಿಸುತ್ತಿರುವುದರಿಂದ ನಿರೀಕ್ಷಿತ ಫಲ ದೊರೆಯುತ್ತಿಲ್ಲ; ದೊರೆಯುವುದು ಸಾಧ್ಯವೂ ಇಲ್ಲ. ಇನ್ನು ಐದು ವರ್ಷಗಳಲ್ಲಿ ಎರಡನೆಯ ಭಾಷೆಯಾಗಿ ಇಂಗ್ಲಿಷನ್ನು ಕಲಿಸುವ ಬಗ್ಗೆ ಅಗತ್ಯ ಸಂಶೋಧನೆ ನಡೆಸದಿದ್ದರೆ ಒಂದನೆಯ ತರಗತಿಯಿಂದ ಇಂಗ್ಲಿಷ್ ಕಲಿಸಿ ಎಂದು ಈಗ ಒತ್ತಾಯಿಸುತ್ತಿರುವ ಹತಾಶ ಪೋಷಕರು ಒಂದನೆಯ ತರಗತಿಯಿಂದ ಇಂಗ್ಲಷ್ ಮಾಧ್ಯಮವೇ ಬೇಕು ಎಂದು ಒತ್ತಾಯಿಸಿದರೆ ಆಶ್ಚರ್ಯವಿಲ್ಲ ಎಂದು ಎನ್‌ಸಿಇಆರ್‌ಟಿ ಎಚ್ಚರಿಸಿದೆ.

ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.



ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ:
ಸಂಪಾದಕರು, 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾನಗರ,
ವಿಶ್ವನೀಡಂ ಅಂಚೆ, ಬೆಂಗಳೂರು - ೫೬೦ ೦೯೧
ದೂರವಾಣಿ : ೩೨೮ ೭೯೪೩ / ೯೪೪೮೦೪೮೩೦೬

ಮಹಾನ್ ಮಾನವತಾವಾದಿ ಶ್ರೀ ನಾರಾಯಣಗುರು

ಡಾ॥ ಅಪ್ಪಗೆರೆ ಡಿ. ಸೋಮಶೇಖರ್

ನಮ್ಮವರು

ಇಡೀ ವಿಶ್ವಕ್ಕೆ ಒಂದೇ ಜಾತಿ, ಒಂದೇ ಧರ್ಮ, ಒಂದೇ ದೇವರು." ಎಂದು ಹೇಳಿದವರು ಶ್ರೀ ನಾರಾಯಣಗುರು. ಇವರು ಭಾರತ ದೇಶ ಕಂಡ ಮಾನವ ಕುಲದ ಶ್ರೇಷ್ಠ ದಾರ್ಶನಿಕರು. ಕತ್ತಲಲ್ಲಿ ಕರಗಿ ಹೋಗಿ ದ್ದವರನ್ನು ಬೆಳಕಿನ ಬದುಕಿನೆಡೆಗೆ ಸಾಗಿಸಲು ಶ್ರಮಿಸಿದ ಜ್ಞಾನ ಜ್ಯೋತಿ. ನೂರು ವರ್ಷಗಳ ಹಿಂದೆಯೆ ಜಾತಿ ಹಾಗೂ ಅಸ್ಪೃಶ್ಯತೆಯ ಕಳಂಕದ ವಿರುದ್ಧ ಹೋರಾಡಿದ ಕ್ರಾಂತಿಪುರುಷ. ಮಾನವೀಯತೆಯ ಮೌಲ್ಯವನ್ನು ಇಡೀ ಜಗತ್ತಿಗೆ ಸಾರಿ ಹೇಳಿದ ಮಹಾ ಚಿಂತಕ. ಅವರ ಹಲವು ಸಮಾಜಪರ ಹಾಗು ಜೀವಪರ ಚಿಂತನೆಗಳನ್ನು ಮೆಲುಕು ಹಾಕುವುದು ಸಮಂಜಸವಾದದ್ದಾಗಿದೆ. ನಾರಾಯಣಗುರುಗಳ ಸಂದೇಶಗಳು ಸಾರ್ವಕಾಲಿಕ ಸತ್ಯಗಳಾಗಿವೆ.

"ವ್ಯಕ್ತಿಯ ಉಡುಪು, ಆಚಾರ, ಜಾತಿ, ಧರ್ಮ ಯಾವುದೇ ಇರಲಿ ಅವರೆಲ್ಲ ಮಾನವರು. ಆದುದರಿಂದ ಸಹಭೋಜನ ಮತ್ತು ಅಂತರ್ಜಾತಿ ಮದುವೆಗೆ ಅಡ್ಡಿ ಬರಬಾರದು. ಇಡೀ ವಿಶ್ವಕ್ಕೆ ಒಂದೇ ಜಾತಿ, ಒಂದೇ ಧರ್ಮ, ಒಂದೇ ದೇವರು." ಎಂದು ಹೇಳಿದವರು ಶ್ರೀ ನಾರಾಯಣಗುರು. ಇವರು ಭಾರತ ದೇಶ ಕಂಡ ಮಾನವ ಕುಲದ ಶ್ರೇಷ್ಠ ದಾರ್ಶನಿಕರು. ಕತ್ತಲಲ್ಲಿ ಕರಗಿ ಹೋಗಿದ್ದವರನ್ನು ಬೆಳಕಿನ ಬದುಕಿನೆಡೆಗೆ ಸಾಗಿಸಲು ಶ್ರಮಿಸಿದ ಜ್ಞಾನ ಜ್ಯೋತಿ. ಈ ದೇಶದ ಬಹುಸಂಖ್ಯಾತ ಶೋಷಿತರ ವಿಮೋಚನೆಗೆ ತಮ್ಮ ಇಡೀ ಬದುಕನ್ನು ಮುಡುಪಾಗಿಟ್ಟವರು. ನೂರು ವರ್ಷಗಳ ಹಿಂದೆಯೆ ಜಾತಿ ಹಾಗೂ ಅಸ್ಪೃಶ್ಯತೆಯ ಕಳಂಕದ ವಿರುದ್ಧ ಹೋರಾಡಿದ ಕ್ರಾಂತಿಪುರುಷ. ಮಾನವೀಯತೆಯ ಮೌಲ್ಯವನ್ನು ಇಡೀ ಜಗತ್ತಿಗೆ ಸಾರಿ ಹೇಳಿದ ಮಹಾಚಿಂತಕ. ಇದೇ ತಿಂಗಳ 26ನೇ ಆಗಸ್ಟ್ 2005ಕ್ಕೆ ನಾರಾಯಣಗುರುಗಳ 151ನೇ ಜನ್ಮದಿನೋತ್ಸವ. ಈ ನೆಪದಲ್ಲಿ ಅವರ ಹಲವು ಸಮಾಜಪರ ಹಾಗೂ ಜೀವಪರ ಚಿಂತನೆಗಳನ್ನು ಮೆಲುಕು ಹಾಕುವುದು ಸಮಂಜಸವಾದದ್ದಾಗಿದೆ. ನಾರಾಯಣಗುರುಗಳು ಭೌತಿಕವಾಗಿ ಇಂದು ನಮ್ಮೊಟ್ಟಗಿಲ್ಲದಿದ್ದರೂ, ಅವರು ದರ್ಶಿಸಿದ ತಾತ್ವಿಕ ಸಂದೇಶಗಳು ನೂರುವರ್ಷಕ್ಕೂ ಮಿಕ್ಕಿ ಜೀವಂತವಾಗಿರುವುದನ್ನು ಇಂದಿಗೂ ಕಾಣಬಹುದಾಗಿದೆ. ಅವು ಸಾರ್ವಕಾಲಿಕ ಸತ್ಯಗಳಾಗಿವೆ.

ನಾರಾಯಣಗುರು 26ನೇ ಆಗಸ್ಟ್ 1854 ರಂದು ಕೇರಳದ ತಿರುವನಂತಪುರದ ಹತ್ತಿರವಿರುವ 'ಚಂಬಳಂತಿ' ಎಂಬ ಹಳ್ಳಿಯಲ್ಲಿ ಜನಿಸಿದರು. ತಂದೆ ಮಾಡಾನ್ ಆಶಾನ್. ತಾಯಿ ಕುಟ್ಟಿಯಮ್ಮ. ಬಾಲ್ಯದಲ್ಲಿ ಎಲ್ಲರ ಪ್ರೀತಿಯ 'ನಾಣು' ಆಗಿದ್ದ ಇವರದು ಮಧ್ಯಮವರ್ಗದ ಮನೆತನ. ಬೆಳೆಯುವ ಸಿರಿ ಮೊಳಕೆಯಲ್ಲೆ ಎಂಬಂತೆ ನಾರಾಯಣಗುರು ಬಾಲ್ಯದಲ್ಲಿಯೇ ತಮ್ಮ ಕ್ರಿಯಾಶೀಲ ಬೌದ್ಧಿಕತೆಯಿಂದ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದರು. ಯಾವುದೇ ವಿಷಯದ ಹಿಂದಿರುವ ಸತ್ಯವನ್ನು ಶೋಧಿಸಿ ಚಿಂತನೆಗೊಳಪಡಿಸುವ ಪ್ರವೃತ್ತಿ ಇವರದು. ಸ್ವಭಾವತಃ ಅಂತರ್ಮುಖಿಯೂ, ಮಿತಭಾಷಿಯೂ ಆದ ಇವರು ತಪ್ಪು ಕಂಡುಬಂದಲ್ಲಿ ನೇರವಾಗಿ ಖಂಡಿಸುತ್ತಿದ್ದರು. ಅಸಹಾಯಕರು, ನೊಂದವರು, ಶೋಷಿತರು ಹಾಗೂ ಬಡವರನ್ನು ಕಂಡರೆ ಎಲ್ಲಿಲ್ಲದ ಅಕ್ಕರೆ. ಸಮಾಜದಲ್ಲಿನ ರೋಗಗ್ರಸ್ತ ಅಸಮಾನತೆ, ಅಜ್ಞಾನ, ಜಾತೀಯತೆ ಹಾಗೂ ಅಂಧಕಾರದ ವಿರುದ್ಧ ಬಂಡಾಯದ ಮನಸ್ಥಿತಿಯನ್ನು ಬಾಲ್ಯದಲ್ಲಿ ಮೈಗೂಡಿಸಿಕೊಂಡ ಇವರು ಜಾತ್ಯಾತೀತ, ಧರ್ಮಾತೀತ ಸಮಸಮಾಜಕ್ಕಾಗಿ ಹಂಬಲಿಸಿದವರು.

ನಾರಾಯಣಗುರು, ಜಾತಿ ಮತ್ತು ಅಸ್ಪೃಶ್ಯತೆ ಮಾನವ ಕುಲದ ನಿಜವಾದ ಶತ್ರುಗಳು ಎಂಬುದನ್ನು ಅರಿತಿದ್ದರು. ತಮ್ಮ ಮನೆಯ ಹಿರಿಯರೇ ಜಾತಿಭೇದ ಮಾಡುವುದನ್ನು ಕಂಡಾಗ ಉರಿದು ಬೀಳುತ್ತಿದ್ದರು. ಈಳವ ಜಾತಿಗೆ ಸೇರಿದ ಇವರ ಮನೆಯವರು ತಮಗಿಂತ ಜಾತಿಯಲ್ಲಿ ಕೀಳಾದ ಪುಲಯ, ಪರಯ ಜನಗಳನ್ನು ಮುಟ್ಟಿಸಿಕೊಳ್ಳುತ್ತಿರಲಿಲ್ಲ. ಇದನ್ನು ಗಮನಿಸಿದ್ದ ಬಾಲಕ ನಾಣು, ಪುಲಯರನ್ನು ಮುಟ್ಟಿ ಬಂದು ಅದೇ ಕೈಯಿಂದ ತಮ್ಮ ಮನೆಯ ಹೆಂಗಸರನ್ನು ಮುಟ್ಟಿ: 'ಪುಲಯರನ್ನು ಸ್ಪರ್ಶಿಸಿದ ಕೈಯಿಂದಲೇ ನಿಮ್ಮನ್ನು ಮುಟ್ಟಿದೆ. ಈಗ ಎಲ್ಲಿದೆ ಮೈಲಿಗೆ' ಎಂದು ನಿಂದಿಸುತ್ತಿದ್ದರು. ಇದು ಅವರಿಗಿದ್ದ ಜಾತಿ ವಿರೋಧಿ ಮನಸ್ಥಿತಿಯನ್ನು ಪರಿಚಯಿಸುತ್ತದೆ.

ಶೋಷಿತರ ಬದುಕಿನ ಬವಣೆಯನ್ನು ಕಣ್ಣಾರೆ ಕಂಡು ಕಂಗಾಲಾದ ನಾರಾಯಣಗುರುಗಳು, ವೈಯಕ್ತಿಕ ಸುಖ-ಭೋಗಗಳನ್ನು ತ್ಯಜಿಸಿ, ಜಂಗಮ ಸನ್ಯಾಸಿಯಾಗಿ ದಲಿತರ ಉದ್ಧಾರಕ್ಕಾಗಿ ತಮ್ಮ ಇಡೀ ಜೀವನವನ್ನೆ ತ್ಯಾಗ ಮಾಡಿದರು. ಜೀತಪದ್ಧತಿ ಜೀವಂತವಾಗಿದ್ದ ಕೇರಳದಾದ್ಯಂತ ಅಸ್ಪೃಶ್ಯತೆಯ ಕಾರಣಕ್ಕಾಗಿ ದಲಿತರಿಗೆ ಸಾರ್ವಜನಿಕ ಬಾವಿ, ಕೆರೆ, ದೇವಸ್ಥಾನ ಪ್ರವೇಶವನ್ನು ನಿಷೇಧಿಸಲಾಗಿತ್ತು. ಇದನ್ನು ಮನಗಂಡ ನಾರಾಯಣಗುರು: "ನಿಮಗೆ ದೇವಸ್ಥಾನದ ಹತ್ತಿರ ಹೋಗಲು ಧೈರ್ಯವಿಲ್ಲದಿದ್ದರೆ, ಮೇಲ್ಜಾತಿಯವರು ನಿಮ್ಮನ್ನು ದೇವಸ್ಥಾನಕ್ಕೆ ಬಿಡಲು ನಿರಾಕರಿಸಿದರೆ ಚಿಂತಿಸಬೇಡಿ. ದೇವಸ್ಥಾನವನ್ನೇ ನಿಮ್ಮ ಬಳಿಗೆ ತಂದುಕೊಡುತ್ತೇವೆ." - ಎಂದು ದಲಿತರಿಗೆ ಅಭಯವಿತ್ತರು. ಆಡಿದ ಮಾತಿನಂತೆ 1888 ರಲ್ಲಿ ತಿರುವನಂತಪುರದಿಂದ 13 ಮೈಲು ದೂರದಲ್ಲಿರುವ ಅರವಿಪುರಂನಲ್ಲಿ ಶಿವಲಿಂಗ ಪ್ರತಿಷ್ಠಾಪಿಸಿ ದಲಿತರಿಗಾಗಿಯೇ ಪ್ರತ್ಯೇಕ ದೇವಸ್ಥಾನವನ್ನು ನಿರ್ಮಿಸಿದರು. ಇದನ್ನು ವಿರೋಧಿಸಿದ ಸಂಪ್ರದಾಯವಾದಿಗಳಿಗೆ : "ನಾನು ಪ್ರತಿಷ್ಠಾಪಿಸಿರುವುದು ಕೆಳಜಾತಿಯ ಈಳವರ ಶಿವನನ್ನಲ್ಲದೆ, ಬ್ರಾಹ್ಮಣರ ಶಿವನನ್ನಲ್ಲವಲ್ಲ?" ಎಂಬುದಾಗಿ ಸವಾಲೆಸೆದರು. ಮುಂದೆ ಅರವಿಪುರಂ ಪುಣ್ಯಕ್ಷೇತ್ರವಾಗಿ ಜನಪ್ರಿಯವಾಯಿತು. ಈ ಕ್ಷತ್ರದ ವ್ಯವಹಾರವನ್ನು ನೋಡಿಕೊಳ್ಳಲು 'ಪಾವಟ್ಟು ಯೋಗಂ' ಎಂಬ ಸಂಘವನ್ನು ಸ್ಥಾಪಿಸಿ, ದಲಿತರನ್ನು ಆ ಸಂಘದ ಪದಾಧಿಕಾರಿಗಳನ್ನಾಗಿ ನೇಮಿಸಿದರು. ಶಿಕ್ಷಣದಿಂದ ಮಾತ್ರ ಜಾತೀಯತೆ, ಅಸ್ಪೃಶ್ಯತೆ, ಅಜ್ಞಾನ, ಅಂಧಕಾರವನ್ನು ತೊಡೆಯಲು ಸಾಧ್ಯ ಎಂಬುದನ್ನು ಅರಿತುಕೊಂಡ ನಾರಾಯಣಗುರು ಅರವಿಪುರಂ ಕ್ಷೇತ್ರದಲ್ಲಿ ವಿದ್ಯಾಲಯವನ್ನು ಸ್ಥಾಪಿಸಿ, ದಲಿತರು, ಬಡವರಿಗೆ ಉಚಿತ ಶಿಕ್ಷಣ ವ್ಯವಸ್ಥೆಯನ್ನು ಕಲ್ಪಿಸಿದರು.ನೇಯ್ಗೆ ಕೈಗಾರಿಕೆಯೊಂದನ್ನು ಸ್ಥಾಪಿಸಿ ದಲಿತರಿಗೆ ಉದ್ಯೋಗಾವಕಾಶವನ್ನು ಸೃಷ್ಟಿಸಿದರು.

ಸುಮಾರು ಎರಡು ವರ್ಷಗಳ ಕಾಲ ಕನ್ಯಾಕುಮಾರಿ, ಕುಳಚ್ಚಲ್, ಕುರಿಕುಳಂ, ಪೂವಾರ್, ಕೋವಳಂ, ತಿರುವನಂತಪುರಂ, ಅಂಚೂತೆಂಗು ಮೊದಲಾದ ಊರುಗಳಲ್ಲಿನ ದಲಿತರ, ಬಡವರ, ಕೂಲಿ-ಕಾರ್ಮಿಕರ ಜೀವನವನ್ನು ಅಧ್ಯಯನ ಮಾಡಿ, ಅವರೆಲ್ಲ ನೋವು-ನಲಿವುಗಳನ್ನು ನಾರಾಯಣಗುರು ನೇರವಾಗಿ



ಅನುಭವಿಸಿದರು. ಆ ಕಾರಣಕ್ಕಾಗಿ ಕೇರಳದ ವರ್ಕಲದ ಶಿವಗಿರಿ ಬೆಟ್ಟದಲ್ಲೊಂದು ಆಶ್ರಮವನ್ನು ಸ್ಥಾಪಿಸಿ, ಬಡವರ ಮಕ್ಕಳಿಗಾಗಿ ಇಂಗ್ಲಿಷ್, ಸಂಸ್ಕೃತದ ಹಗಲು ಮತ್ತು ರಾತ್ರಿ ಶಾಲೆಗಳನ್ನು ಆರಂಭಿಸಿದರು. ಜೊತೆಗೆ ಆ ಮಕ್ಕಳಿಗೆ ಉಚಿತ ಊಟ, ವಸತಿ ಸೌಕರ್ಯಗಳನ್ನು ಕಲ್ಪಿಸಿದರು. ಮಕ್ಕಳ ಜ್ಞಾನಾರ್ಜನೆಗಾಗಿ ಗ್ರಂಥಾಲಯಗಳನ್ನು ತೆರೆದರು. ಇವರು ಸ್ಥಾಪಿಸಿದ ದೇವಸ್ಥಾನಗಳು ಕೇವಲ ಯಾತ್ರಾ ಸ್ಥಳಗಳಾಗಿರದೆ, ಸಾವಿರಾರು ಬಡ-ಮಕ್ಕಳಿಗೆ ಶಿಕ್ಷಣವನ್ನು ನೀಡುವ ವಿದ್ಯಾಕೇಂದ್ರಗಳಾಗಿದ್ದವು. ಹೀಗೆ ಕೇರಳ, ತಮಿಳುನಾಡು, ಕರ್ನಾಟಕದ ಮಂಗಳೂರು ಮುಂತಾದ ಕಡೆಗಳಲ್ಲಿ ದಲಿತರಿಗಾಗಿ ದೇವಸ್ಥಾನ, ಶಾಲೆ, ವಿದ್ಯಾರ್ಥಿ ನಿಲಯ, ಗ್ರಂಥಾಲಯ, ಆಸ್ಪತ್ರೆಗಳನ್ನು ಸ್ಥಾಪಿಸಿದ ಮೊಟ್ಟ ಮೊದಲ ಭಾರತೀಯ ಶ್ರೀ ನಾರಾಯಣಗುರು.

ದೇವರಿಗೆ ಹರಕೆ ಸಲ್ಲಿಸಿ ತಮ್ಮ ಜವಾಬ್ದಾರಿ ಮರೆತು ಸುಮ್ಮನೆ ಕೂರುವ ಸೋಮಾರಿಗಳನ್ನು ನಾರಾಯಣಗುರು ಎಂದೂ ಸಹಿಸುತ್ತಿರಲಿಲ್ಲ. ಈ ಹಿಂದೆ ದೇವಸ್ಥಾನಗಳಲ್ಲಿ ಆಚರಣೆಯಲ್ಲಿದ್ದ ಪ್ರಾಣಿಬಲಿ, ಆಡಂಬರದ ದುಂದು-ವೆಚ್ಚವನ್ನು ಖಂಡಿಸಿ ತಡೆಗಟ್ಟಿದರು. ಹಾಗೆಯೇ ತಮ್ಮ ನಿಶ್ಚಲ ಹೋರಾಟದಿಂದಾಗಿ ತ್ರಿಶೂರು ಕೂರ್ಕಂಚೇರಿಲ್ಲಿರುವ ಈಳವರ ದೇವಸ್ಥಾನಕ್ಕೆ ಬಡಗಿ, ಕಮ್ಮಾರ, ಅಕ್ಕಸಾಲಿಗ, ಹೊಲೆಯ, ಪರಯರಿಗೆ ಪ್ರವೇಶವನ್ನು ಕಲ್ಪಿಸಿದರು. ಅರವಿಪುರಂ ದೇವಸ್ಥಾನದಲ್ಲಿ ನಾರಾಯಣಗುರು ಬರೆಸಿರುವಃ

"ಜಾತಿಭೇದ ಮತದ್ವೇಷ
ಒಂದೂ ಇಲ್ಲದೆ ಸರ್ವರೂ
ಸೋದರತ್ವದಿ ಬಾಳುವ
ಮಾದರಿ ಸ್ಥಾನವು ಇದು"

– ಎಂಬ ಪದ್ಯವು ಅವರಲ್ಲಿದ್ದ ಮನುಷ್ಯತ್ವದ ಆದರ್ಶವನ್ನು ತಿಳಿಸುತ್ತದೆ.

ಕೇರಳದಾದ್ಯಂತ ಅಸ್ಪೃಶ್ಯತಾಚರಣೆ ನಿರ್ಮೂಲನೆಯಾಗಿದ್ದು ಹಾಗೂ ಶೋಷಿತರು ಆತ್ಮಾಭಿಮಾನದಿಂದ ಪ್ರಗತಿಯತ್ತ ಸಾಗಿದ್ದು ನಾರಾಯಣಗುರುಗಳ ಹೋರಾಟದ ಪರಿಶ್ರಮದಿಂದಾಗಿ. ದಲಿತರ ಮೇಲಿನ ದೌರ್ಜನ್ಯಕ್ಕೆ ಅವರಲ್ಲಿರುವ ಅಜ್ಞಾನ, ಮೌಢ್ಯ, ಕುಡಿತದ ಚಟ ಹಾಗು ಅಸ್ಪೃಶ್ಯತಾಚರಣೆಯೇ ಕಾರಣ ಎಂಬುದನ್ನು ಅರಿತಿದ್ದ ನಾರಾಯಣಗುರು ಆ ಎಲ್ಲಾ ಪಿಡುಗುಗಳ ವಿರುದ್ಧ ಹೋರಾಡಿ ಯಶಸ್ವಿಯಾದರು. "ಆರೋಗ್ಯವೇ ದೊಡ್ಡ ಸಂಪತ್ತು. ಮದ್ಯಸೇವನೆಯಿಂದ ಆರೋಗ್ಯ ಕೆಡಿಸಿ ಕೊಳ್ಳಬೇಡಿ. ಮದ್ಯವು ವಿಷ. ಅದನ್ನು ಕುಡಿಯಬೇಡಿ, ತಯಾರಿಸಬೇಡಿ, ಹಂಚಬೇಡಿ. ಕುಡಿತಕ್ಕೆ ವಿನಿಯೋಗಿಸುವ ಹಣವನ್ನು ಉಳಿಸಿ ನಿಮ್ಮ ಮಕ್ಕಳಿಗೆ ವಿದ್ಯೆ ಕೊಡಿಸಿ." ಎಂಬುದಾಗಿ ದಲಿತರಿಗೆ ಸಂದೇಶ ನೀಡಿದರು.

"ನಾವೆಲ್ಲರು ಒಂದೇ ಜಾತಿಗೆ ಸೇರಿದವರು. ಅದುವೆ ಮನುಷ್ಯ ಜಾತಿ. ಜಾತೀಯತೆ ಮನುಷ್ಯನ ಸ್ವಾತಂತ್ರ್ಯಕ್ಕೆ ಧಕ್ಕೆ ತರುತ್ತದೆ. ಆತನನ್ನು ಅಜ್ಞಾನಿಯನ್ನಾಗಿ ಮಾಡುತ್ತದೆ. ಧರ್ಮ ಎನ್ನುವುದು ಇಡೀ ಮಾನವ ಕುಲ ಯಾವುದೇ ಆತಂಕವಿಲ್ಲದೆ ಆಚರಿಸುವಂತಹುದು. ಅದುವೇ ವಿಶ್ವಮಾನವ ಧರ್ಮ. ನಿಜವಾದ ಧರ್ಮ ಮನುಷ್ಯರೆಲ್ಲರನ್ನು ಪ್ರಗತಿಯ ದಾರಿಯಲ್ಲಿ ನಡೆಸಬೇಕು. ಮನುಷ್ಯ ಮನುಷ್ಯನನ್ನೆ ಕೊಲ್ಲುವುದು ಅಧರ್ಮ. ಎಲ್ಲಾ ಧರ್ಮ ಗ್ರಂಥಗಳ ಸಾರವನ್ನು ಜನರಿಗೆ ತಿಳಿಹೇಳಿದಾಗ ಜಾತಿ-ಧರ್ಮಾಂಧತೆಯ ಕಲಹ ಕೊನೆಗಾಣುತ್ತದೆ. ಮತ ಯಾವು ದಾದರೇನು ಮನುಷ್ಯ ಒಳ್ಳೆಯವನಾದರೆ ಸಾಕು. ಮನುಷ್ಯರಿಗೆಲ್ಲ ಒಬ್ಬನೆ ದೇವರು." –ಎಂಬ ತತ್ವಗಳನ್ನು ನಾರಾಯಣಗುರು ಸಮಾಜಕ್ಕೆ ಸಾರಿ ಹೇಳಿದರು. ಇವರು 1921 ರಲ್ಲಿ ಸಂಘಟಿಸಿದ 'ಅಖಿಲ ಕೇರಳ ಸೋದರ ಸಮ್ಮೇಳನ' ಹಾಗೂ 1927 ರಲ್ಲಿ ನಡೆಸಿದ 'ಸರ್ವಧರ್ಮ ಸಮ್ಮೇಳನ'ಗಳು ಇದಕ್ಕೆ ಸಾಕ್ಷಿಯಾಗಿವೆ. ಮಹಿಳೆಯರ ಬಗೆಗೆ ತುಂಬು ಕಳಕಳಿ ಇಟ್ಟುಕೊಂಡಿದ್ದ ಇವರು, ಮಹಿಳೆಯರಿಗೆ ಸಮಾನ ಶಿಕ್ಷಣ; ವಿಧವಾ ಪುನರ್ ವಿವಾಹ; ಬಹುಪತ್ನಿತ್ವ ನಿಷೇಧ ಕುರಿತು ಜನರಲ್ಲಿ ಜಾಗೃತಿ ಮೂಡಿಸಿದರು. ಔದಾರ್ಯ-ಪ್ರೇಮ-ಅನುಕಂಪ ಜೀವನದ ಮೂರು ಮೌಲ್ಯಗಳು. ಪ್ರೇಮವಿಲ್ಲದ ಬದುಕು ಬರಡು. ಅಹಿಂಸೆ-ಸ್ನೇಹ-ಒಗ್ಗಟ್ಟು ಮಾನವ ಸಮಾಜದ ಮೂಲ ತತ್ವ. ಶೋಷಿತರು ಆರ್ಥಿಕ ಸ್ವಾವಲಂಬನೆ, ಸ್ವಾಭಿ ಮಾನ, ಆತ್ಮವಿಶ್ವಾಸವನ್ನು ಮೈಗೂಡಿಸಿಕೊಳ್ಳಬೇಕೆಂಬುವು ನಾರಾಯಣಗುರುಗಳ ದೇಶಾತೀತ ಮೌಲ್ಯಗಳು.

> **ನಾರಾಯಣಗುರು, ಜಾತಿ ಮತ್ತು ಅಸ್ಪೃಶ್ಯತೆ ಮಾನವಕುಲದ ನಿಜವಾದ ಶತ್ರುಗಳು ಎಂಬುದನ್ನು ಅರಿತಿದ್ದರು. ತಮ್ಮ ಮನೆಯ ಹಿರಿಯರೇ ಜಾತಿಭೇದ ಮಾಡುವುದನ್ನು ಕಂಡಾಗ ಉರಿದು ಬೀಳುತ್ತಿದ್ದರು. ಈಳವ ಜಾತಿಗೆ ಸೇರಿದ ಇವರ ಮನೆಯವರು ತಮಗಿಂತ ಜಾತಿಯಲ್ಲಿ ಕೀಳಾದ ಪುಲಯ, ಪರಯ ಜನಗಳನ್ನು ಮುಟ್ಟಿಸಿಕೊಳ್ಳುತ್ತಿರಲಿಲ್ಲ. ಇದನ್ನು ಗಮನಿಸಿದ್ದ ಬಾಲಕ ನಾಣು, ಪುಲಯರನ್ನು ಮುಟ್ಟಿ ಬಂದು ಅದೇ ಕೈಯಿಂದ ತಮ್ಮ ಮನೆಯ ಹೆಂಗಸರನ್ನು ಮುಟ್ಟಿ 'ಪುಲಯರನ್ನು ಸ್ಪರ್ಶಿಸಿದ ಕೈಯಿಂದಲೇ ನಿಮ್ಮನ್ನು ಮುಟ್ಟಿದೆ. ಈಗ ಎಲ್ಲಿದೆ ಮೈಲಿಗೆ' ಎಂದು ನಿಂದಿಸುತ್ತಿದ್ದರು. ಇದು ಅವರಿಗಿದ್ದ ಜಾತಿ ವಿರೋಧಿ ಮನಸ್ಥಿತಿಯನ್ನು ಪರಿಚಯಿಸುತ್ತದೆ.**

ನಾರಾಯಣಗುರುಗಳ ವೈಚಾರಿಕ ಚಿಂತನೆಯಿಂದ ಪ್ರಭಾವಿತಗೊಂಡವರಲ್ಲಿ ಮಹಾತ್ಮ ಗಾಂಧೀಜಿ, ಆಚಾರ್ಯ ವಿನೋಬಾಭಾವೆ, ರವೀಂದ್ರನಾಥ ಠಾಗೂರ್, ಕೇರಳದ ಮಹಾಕವಿ ಕುಮಾರನ್ ಆಶಾನ್, ಫ್ರೆಂಚ್ ತತ್ತ್ವಜ್ಞಾನಿ ರೋಮ್ಯಾನ್ ರೋಲ್ಯಾಂಡ್ ಪ್ರಮುಖರು. ಗಾಂಧೀಜಿಯವರು 12ನೇ ಮಾರ್ಚ್ 1925 ರಂದು ಶಿವಗಿರಿಯಲ್ಲಿ ನಾರಾಯಣಗುರುಗಳನ್ನು ಭೇಟಿಮಾಡಿ ಚರ್ಚಿಸಿದ್ದು ಚಾರಿತ್ರಿಕವಾಗಿ ಮಹತ್ವದ ಘಟನೆಯಾಗಿದೆ. ನಾರಾಯಣಗುರು ಗಾಂಧೀಜಿಯವರನ್ನು ಕುರಿತು: "ದಲಿತರನ್ನು ಜಾತಿಯ ಸಂಕೋಲೆಯಿಂದ ಬಿಡಿಸುವುದು ರಾಜಕೀಯ ಸ್ವಾತಂತ್ರ್ಯದಷ್ಟೆ ಪ್ರಮುಖವಾದದ್ದು." ಎಂಬ ಮಾತು ಜ್ವಲಂತ ಸತ್ಯವಾಗಿದೆ. ಸ್ವತಃ ಗಾಂಧೀಜಿಯವರೆ, "ಪೂಜ್ಯ ನಾರಾಯಣಗುರುಗಳನ್ನು ಸಂದರ್ಶಿಸಿದ್ದು ನನ್ನ ಜೀವನದ ಸೌಭಾಗ್ಯ" ಎಂದು ಹೇಳಿಕೊಂಡಿದ್ದಾರೆ.

ನಾರಾಯಣಗುರು ಸಮಾಜ ಸುಧಾರಕರಾಗಿ, ದಾರ್ಶನಿಕರಾಗಿ ವಿಶ್ವಮನ್ನಣೆ ಪಡೆದ ವಿಶ್ವಗುರು. ಹಿಂದೂ, ಕ್ರೈಸ್ತ, ಮುಸ್ಲಿಂ ಹಾಗೂ ಬೌದ್ಧ ಧರ್ಮೀಯರೆಲ್ಲರೂ ಇವರ ಶಿಷ್ಯರು, ಅನುಯಾಯಿಗಳಾಗಿದ್ದರು. ಅಮೆರಿಕ, ಶ್ರೀಲಂಕ ಮುಂತಾದ ದೇಶಗಳಲ್ಲಿ ಇವರ ಹೆಸರಿನಲ್ಲಿ ಸಂಘಸಂಸ್ಥೆಗಳು ಹುಟ್ಟಿಕೊಂಡು ಕಾರ್ಯನಿರ್ವಹಿಸುತ್ತಿವೆ. ಅವುಗಳಲ್ಲಿ 1923 ರಲ್ಲಿ ಅಮೆರಿಕಾದ ಪೋರ್ಟ್ ಲ್ಯಾಂಡ್‌ನಲ್ಲಿ ಸ್ಥಾಪಿಸಲ್ಪಟ್ಟ "ನಾರಾಯಣ ಗುರುಕುಲ' ಪ್ರಮುಖವಾದುದು. ಸ್ವತಃ ನಾರಾಯಣಗುರುಗಳೇ 1903 ಜನವರಿ 4 ರಂದು ಸ್ಥಾಪಿಸಿದ "ಶ್ರೀ ನಾರಾಯಣ ಧರ್ಮ ಪರಿಪಾಲನಾ ಯೋಗಂ" (SNDP) ಶೋಷಿತರ ಹಿತಕ್ಕಾಗಿ ದುಡಿಯುವ ಸಂಸ್ಥೆಯಾಗಿ ಬೆಳೆದಿದೆ. ದೇಶ ವಿದೇಶಗಳಲ್ಲಿ ಇದರ ಶಾಖೆಗಳು ಕಾರ್ಯನಿರತವಾಗಿವೆ.

ಸಂಸ್ಕೃತ, ಮಲೆಯಾಳಂ, ತಮಿಳು ಭಾಷೆ ಮತ್ತು ಸಾಹಿತ್ಯದಲ್ಲಿ ಪಾಂಡಿತ್ಯವನ್ನು ಗಳಿಸಿದ್ದ ನಾರಾಯಣಗುರು 144 ಮಹತ್ವದ ಕೃತಿಗಳನ್ನು ರಚಿಸಿದ್ದಾರೆ. 'ದರ್ಶನಮಾಲಾ, ಆತ್ಮೋಪದೇಶ ಶತಕಂ, ಅರಿವು, ಜಾತಿ ಮೀಮಾಂಸ, ಧರ್ಮಂ, ಜಾತಿಲಕ್ಷಣಂ, ಪ್ರಪಂಚ ಶುದ್ಧಿ ದಶಕಂ, ಜಾತಿನಿರ್ಣಯಂ, ಜೀವಕಾರುಣ್ಯ ಪಂಚಕಂ' – ಇವರ ಪ್ರಮುಖ ಕೃತಿಗಳು. ಬದುಕಿದಂತೆ ಬರೆದ; ಬರೆದಂತೆ ಬದುಕಿದ ನಾರಾಯಣಗುರು 1928 ಸೆಪ್ಟೆಂಬರ್ 21 ರಂದು ಮರಣಹೊಂದಿದರು. ಇವರ ಸಾಧನೆಯ ಕುರುಹಾಗಿ 1977 ನೇ ವರ್ಷವನ್ನು "ಶ್ರೀ ನಾರಾಯಣ ಅಂತರರಾಷ್ಟ್ರೀಯ ವರ್ಷ"ವನ್ನಾಗಿ ದೇಶ ವಿದೇಶಗಳಲ್ಲಿ ಆಚರಿಸಲಾಯಿತು. ಇದೇ ಸಂದರ್ಭಲ್ಲಿ ಭಾರತ ಸರ್ಕಾರವು ನಾರಾಯಣಗುರುಗಳ ಗೌರವಾರ್ಥ ಅಂಚೆಚೀಟಿಯೊಂದನ್ನು ಹೊರತಂದಿತು. ಭ್ರಷ್ಟಾಚಾರ ರಹಿತ, ಮತ್ತು ಸಂಪೂರ್ಣ ಸಾಕ್ಷರತ ರಾಜ್ಯವಾದ ಕೇರಳ ನಾರಾಯಣಗುರುಗಳ ಸಾಧನೆಗೆ ಜೀವಂತ ಸಾಕ್ಷಿ. ಜೀವಿತದ ಕೊನೆಯವರೆಗೂ ಬಹುಸಂಖ್ಯಾತ ಶೋಷಿತರ ಪರ ದುಡಿದ ನಾರಾಯಣಗುರುಗಳ ತಾತ್ವಿಕ ಚಿಂತನೆ ಇಂದಿನ ಯುವ ಪೀಳಿಗೆಗೆ ಆದರ್ಶವಾಗಬೇಕಿದೆ. □



'ಸಂವಾದ' ದೊರೆಯುವ ಸ್ಥಳ

- ನವಕರ್ನಾಟಕ ಪ್ರಕಾಶನ ಪುಸ್ತಕ ಮಳಿಗೆ
- ಗಾಂಧಿನಗರ, ಬೆಂಗಳೂರು
- ಸ್ಟೇಷನ್ ರಸ್ತೆ, ಗುಲ್ಬರ್ಗ
- ಕೆ.ಎಸ್.ರಾವ್ ರಸ್ತೆ, ಮಂಗಳೂರು
- ರಾಮಸ್ವಾಮಿ ವೃತ್ತ, ಮೈಸೂರು
- ಬೆಳ್ಳಿಚುಕ್ಕಿ ಬುಕ್ ಟ್ರಸ್ಟ್, ಬೆಂಗಳೂರು
- ಕೆಎಸ್ಆರ್‌ಟಿಸಿ ಬುಕ್ ಸ್ಟಾಲ್, ಕೆಂಪೇಗೌಡ ಬಸ್ ನಿಲ್ದಾಣ, ಬೆಂಗಳೂರು

ನೋಟ

ಇನ್ಫೋಸಿಸ್ ಪ್ರಪಂಚದೊಳಗೆ ಸಾರ್ವಜನಿಕ ಉಪಯೋಗಕ್ಕಾಗಿ ನೂರಾರು ಸೈಕಲ್‌ಗಳು, ಫೋನ್, ವಾಷಿಂಗ್‌ಮೆಶಿನ್, ಜಿಮ್ನೇಷಿಯಂ, ಕಂಪ್ಯೂಟರ್‌ಗಳಿವೆ. ಅಲ್ಲಿರುವ ಹೆಚ್ಚಿನ ಸೌಕರ್ಯ–ಸೌಲಭ್ಯಗಳು ಸಾರ್ವಜನಿಕ ಉಪಯೋಗಕ್ಕೆ ಮೀಸಲಾಗಿದ್ದು, ಇನ್ಫೋಸಿಸ್ ಬ್ಯಾಡ್ಜ್ ಧರಿಸಿದ ಪ್ರತಿಯೊಬ್ಬರಿಗೂ ಅದನು ಉಪಯೋಗಿಸುವ ಅವಕಾ ಶವಿದೆ. ಭೋಜನ ಶಾಲೆಯಿಂದ ಹಿಡಿದು ಕಂಪ್ಯೂಟರ್ ಸೆಂಟರ್ ನವರೆಗೆ ಎಲ್ಲರಿಗೂ ಮುಕ್ತ ಸ್ವಾತಂತ್ರ್ಯ. ದಿನನಿತ್ಯದ ಖರ್ಚಿನಲ್ಲಿ ಉಳಿತಾಯ ಖಂಡಿತ. ಪ್ರತಿ ರೂಂನಲ್ಲಿ ಟಿ.ವಿ, ಫೋನ್, ಲಾಂಡ್ರಿ ಎಲ್ಲವೂ ಉಚಿತವಾಗಿ ನೀಡಲ್ಪಟ್ಟಿತ್ತು. ಪಾಳೇಗಾರಿಕೆಯ ಪಳೆಯುಳಿಕೆಯಂತಿರುವ ಈ ಮನಸ್ಥಿತಿ ನಾಜೂಕಾಗಿ ನಮ್ಮಿಂದ ವಿಧೇಯತೆಯನ್ನು ಒತ್ತಾಯಿಸುತ್ತಿತ್ತು.

○ ರಾಬರ್ಟ್ ಜೋಸ್

ಏಪ್ರಿಲ್ ೨೦೦೫ ರಲ್ಲಿ ಮೈಸೂರಿನ ಇನ್ಫೋಸಿಸ್ ಕ್ಯಾಂಪಸ್‌ನಲ್ಲಿ ಕಾಲೇಜು ಉಪನ್ಯಾಸಕರಿಗಾಗಿ ೩ ವಾರಗಳ ವಿಶೇಷ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಂದ ಹೆಚ್ಚಿನವರು ಬಂದಿದ್ದರು. ಉಳಿದಂತೆ ಉತ್ತರ ಕನ್ನಡ, ಧಾರವಾಡ ಹಾಗೂ ಮೈಸೂರಿನ ಪ್ರತಿನಿಧಿಗಳಿದ್ದರು. ಸುಮಾರು ನೂರಕ್ಕಿಂತಲೂ ಅಧಿಕ ಉಪನ್ಯಾಸಕರಿಗೆ ಇದೊಂದು ಹೊಸ ಅನುಭವವಾಗಿತ್ತು. ಇನ್ನೊಂದೆರಡು ವರ್ಷಗಳಲ್ಲಿ ಎರಡು ಲಕ್ಷಕ್ಕಿಂತಲೂ ಹೆಚ್ಚು ಜನರು ಮಾಹಿತಿ ತಂತ್ರಜ್ಞಾನ (IT) ಕ್ಷೇತ್ರದಲ್ಲಿ ದುಡಿಯಲು ಬೇಕಂತೆ. ಅದಕ್ಕೆಂದೇ ಕಾಲೇಜು ವಿದ್ಯಾರ್ಥಿ/ವಿದ್ಯಾರ್ಥಿನಿಯರನ್ನು ಸಜ್ಜುಗೊಳಿಸಲು ಶಿಕ್ಷಕರಿಗೆ ತರಬೇತಿ. ಐಟಿ ಕ್ಷೇತ್ರದಲ್ಲಿ ದುಡಿಯಲು ಇಂಗ್ಲಿಷ್ ಹಾಗೂ ನ್ಯೂಮರಿಕಲ್ ಸಾಮರ್ಥ್ಯ (Numerical ability)ದ ಅಗತ್ಯವಿದೆ. ಇನ್‌ಫೋಸಿಸ್‌ನವರ ಪ್ರಕಾರ ಉಡುಪಿ, ದ.ಕನ್ನಡ ದವರಿಗೆ ಬ್ಯಾಂಕಿಂಗ್ ಕ್ಷೇತ್ರದ ಅನುಭವವಿರುವುದರಿಂದ ಸಂವಹನ ಇಂಗ್ಲಿಷ್‌ಗೆ (Communicative and Functional English) ಹೆಚ್ಚಿನ ಒತ್ತು ನೀಡಬೇಕಾಗಿದೆಯಂತೆ. ಆದ್ದರಿಂದ ಇನ್ಫೋಸಿಸ್‌ನವರ ಮಾರ್ಗದರ್ಶನದಲ್ಲಿ ಮೂರುವಾರಗಳಲ್ಲಿ ಉಪನ್ಯಾಸಕರೇ ವಿದ್ಯಾರ್ಥಿಗಳಿಗೆ ಉಪಯುಕ್ತವಾದಂತಹ ಇಂಗ್ಲಿಷ್ ಹಾಗೂ Numerical ಕೌಶಲ್ಯವನ್ನು ಹೆಚ್ಚಿಸುವ ಪಠ್ಯವನ್ನು ಸಿದ್ಧಪಡಿಸಿದರು.

ಕೆಳಮಧ್ಯಮವರ್ಗದ ಕುಟುಂಬಗಳಲ್ಲಿ ಜನಿಸಿ ಈಗ ಮಧ್ಯಮ ವರ್ಗದ ಬೈಕು, ಕಾರುಗಳನ್ನು ರೂಢಿಸಿಕೊಂಡಿರುವ ನನ್ನಂತಹ ಹೆಚ್ಚಿನ ಉಪನ್ಯಾಸಕರಿಗೆ ಇನ್ಫೋಸಿಸ್ ಬೆಕ್ಕಸ ಬೆರಗುಂಟು ಮಾಡಿತು. ವಾಸ್ತವ್ಯಕ್ಕೆಂದು ನಮಗೆ ನೀಡಿದ್ದ ಕೊಠಡಿಗಳಿಂದ ಹಿಡಿದು ಸುಸಜ್ಜಿತವಾದ ತರಗತಿ ಕೊಠಡಿಗಳು ಹಾಗೂ ಸಭಾಂಗಣಗಳು ಹವಾನಿಯಂತ್ರಿತವಾಗಿದ್ದವು ಅದರೊಂದಿಗೆ ಭೂರಿಭೋಜನ, ಪ್ರತಿ ರೂಂನಲ್ಲಿ ಟಿ.ವಿ, ಫೋನ್, ಲಾಂಡ್ರಿ ಎಲ್ಲವೂ ಉಚಿತವಾಗಿ ನೀಡಲ್ಪಟ್ಟಿತ್ತು. ಇಷ್ಟನ್ನೆಲ್ಲ "ದೊಡ್ಡವರು" ಪೂರೈಸಿದ ಮೇಲೆ ಅವರು ಕೊಟ್ಟ ಕೆಲಸವನ್ನು ಅಚ್ಚುಕಟ್ಟಾಗಿ, ಕರ್ತವ್ಯಕ್ಕೆ ಚ್ಯುತಿಯಾಗದಂತೆ ಅದೂ ಶಿಕ್ಷಕರ ಘನತೆಗೆ ಕುಂದು ಬಾರದಂತೆ, ಮಾಡಬೇಕೆಂದು 'ಆತ್ಮಸಾಕ್ಷಿ' ಪದೇ ಪದೇ ಎಚ್ಚರಿಸುತ್ತಿದ್ದದ್ದಂತೂ ಸಹಜವೇ. ಪಾಳೇಗಾರಿಕೆಯ ಪಳೆಯುಳಿಕೆಯಂತಿರುವ ಈ ಮನ ಸ್ಥಿತಿ ನಾಜೂಕಾಗಿ ನಮ್ಮಿಂದ ವಿಧೇಯತೆಯನ್ನು ಒತ್ತಾಯಿಸುತ್ತಿತ್ತು. ಅಷ್ಟೇ ಅಲ್ಲ, ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆ ಕಾಳಜಿಯಿರುವ ಶಿಕ್ಷಕವರ್ಗ ಇದನ್ನು ನಿರ್ವಹಿಸ ಬೇಕೆಂಬ ಒತ್ತಡ ಆಗಾಗ ಸಂಗಡಿಗರಿಂದಲೂ ಬರುತ್ತಾ ಇತ್ತು.

ಇನ್ಫೋಸಿಸ್ ಪ್ರಪಂಚದೊಳಗೆ ಸಾರ್ವಜನಿಕ ಉಪಯೋಗಕ್ಕಾಗಿ ನೂರಾರು ಸೈಕಲ್‌ಗಳು, ಫೋನ್, ವಾಷಿಂಗ್‌ಮೆಶಿನ್, ಜಿಮ್ನೇಷಿಯಂ, ಕಂಪ್ಯೂಟರ್‌ಗಳಿವೆ. ಸೈಕಲ್ ತುಳಿಯುವ ರೋಮಾಂಚನ ಹಳೇ ದಿನಗಳನ್ನು ನೆನಪಿಸುತ್ತಿತ್ತು. ಆಶ್ಚರ್ಯವೆಂದರೆ, ಜಾಗತೀಕರಣದ ಹೃದಯ ಭಾಗದಲ್ಲಿ ಸಮಾಜವಾದದ ಜೀವನ ಶೈಲಿಯನ್ನು ಬಾಹ್ಯದಲ್ಲಿ ರೂಢಿಸಿಕೊಂಡಿರುವುದು. ಅಲ್ಲಿರುವ ಹೆಚ್ಚಿನ ಸೌಕರ್ಯ–ಸೌಲಭ್ಯಗಳು ಸಾರ್ವಜನಿಕ ಉಪಯೋಗಕ್ಕೆ ಮೀಸಲಾಗಿದ್ದು, ಇನ್ಫೋಸಿಸ್ ಬ್ಯಾಡ್ಜ್ ಧರಿಸಿದ ಪ್ರತಿಯೊಬ್ಬರಿಗೂ ಅದನ್ನು ಉಪಯೋಗಿಸುವ ಅವಕಾಶವಿದೆ. ಭೋಜನ ಶಾಲೆಯಿಂದ ಹಿಡಿದು ಕಂಪ್ಯೂಟರ್ ಸೆಂಟರ್‌ನವರೆಗೆ ಎಲ್ಲರಿಗೂ ಮುಕ್ತ ಸ್ವಾತಂತ್ರ್ಯ. ಇದನ್ನು ಕ್ರಮಬದ್ಧವಾಗಿ ಅಳವಡಿ ಸುವುದರಿಂದ ದಿನನಿತ್ಯದ ಖರ್ಚಿನಲ್ಲಿ ಉಳಿತಾಯ ಖಂಡಿತ. ವಿಪರ್ಯಾಸವೆಂದರೆ, ಐಟಿ ನಾಯಕರುಗಳು ಸಾಂದರ್ಭಿಕವಾಗಿ ಮಾತನಾಡುತ್ತ ಶಿಕ್ಷಕರೆದುರಿಗೇ "Socialism is dead; capitalism is growing." ಎಂದು ಘೋಷಿಸಿದ್ದಾರೆ.

ಎಲ್ಲವನ್ನು ಮರೆತು ಈ ಸುಖಸುಪ್ಪತ್ತಿಗೆಯಲ್ಲಿ ವಿಹರಿಸುತ್ತಿರುವಾಗಲೂ ಅಪರೂಪಕ್ಕೆಂಬಂತೆ ಇನ್ಫೋಸಿಸ್‌ನವರು ಶಿಕ್ಷಕರಿಗೆ ಧರ್ಮಾರ್ಥ ತರಬೇತಿ ನೀಡುತ್ತಿರುವುದರ ಉದ್ದೇಶವೇನೆಂಬ ಸಂಶಯ ಕಾಡುತ್ತಿತ್ತು. ಅದಕ್ಕೂ ಅವರಲ್ಲಿ ಉತ್ತರ ಸಿದ್ಧ. ಯಾವುದೋ ಸಂದರ್ಭದಲ್ಲಿ ಬಾಯಿತಪ್ಪಿ (Freudian slip) ಉದುರಿದ ಮುತ್ತುಗಳು: "ನಮ್ಮದು Charitable institution ಅಲ್ಲ". ಶಿಕ್ಷಕರೊಬ್ಬರಿಂದ ಉಡಾಫೆ ಪ್ರಶ್ನೆ: "ಹಾಗಾದರೆ ಕಾಲೇಜುಗಳಲ್ಲಿ ದಿನನಿತ್ಯದ ಪಾಠಪ್ರವಚನಗಳ ಜೊತೆ ಜೊತೆಗೆ ವಿದ್ಯಾರ್ಥಿಗಳಿಗೆ 70–80 ಗಂಟೆಗಳ ಹೆಚ್ಚುವರಿ ಸಮಯವನ್ನು ತರಬೇತಿಗೋಸ್ಕರ ಮೀಸಲಿಡಬೇಕಾಗುತ್ತದೆ. ಶಿಕ್ಷಕರಿಗೆ ಐಟಿಯವರು ಸಂಭಾವನೆಯನ್ನು ನೀಡುತ್ತಾರೋ?" ಅದರ ಬಗ್ಗೆ ಯೋಚಿಸಿಲ್ಲವೆಂದು ಹಾರಿಕೆಯ ಉತ್ತರ. ಅಂದರೆ ಶಿಕ್ಷಕರಿಗೆ ಮೂರುವಾರ ಉಚಿತವಾಗಿ ಊಟ–ತಿಂಡಿ ಕೊಟ್ಟು ಅವರಿಂದ ಪುಕ್ಕಟೆ ದುಡಿಸುವ ಇರಾದೆ. ನೂರು–ಮಂದಿ ಉಪನ್ಯಾಸಕರು ಕನಿಷ್ಠ 25 ಗಂಟೆಗಳಷ್ಟು ಐಟಿ ತರಬೇತಿಗೆ ಮೀಸಲಾಗಿಟ್ಟರೂ ಅಂತಿಮವಾಗಿ ಐಟಿ ಕಂಪೆನಿಗಳಿಗೆ ಅದು ಲಾಭವೇ. ಹೊಸದಾಗಿ ನೇಮಕಾತಿಗೊಂಡವರ ತರಬೇತಿಗಾಗಿ ವ್ಯಯಿಸುವ ಕೋಟಿಗಟ್ಟಲೆ ಹಣದ ಉಳಿತಾಯ. ಲೆಕ್ಕಾಚಾರವಿಲ್ಲದೆ ಕಾರ್ಪೋರೇಟ್ (Corporate) ಜಗತ್ತು ತಮ್ಮ ಸಾಮಾಜಿಕ ಜವಾಬ್ದಾರಿ (Social responsibility)ಯನ್ನು ಪ್ರದರ್ಶಿಸುವುದಿಲ್ಲ. ಅಷ್ಟೇ ಅಲ್ಲ, ಐಟಿ ವ್ಯಾಪಾರದಲ್ಲಿ BPO (Business process Outsourcing) ಇನ್ನೂ ಹೊಸ ಸೇರ್ಪಡೆ. Call center ಗಳ ಬಗ್ಗೆ ಇನ್ನೂ ಜನರಲ್ಲಿ ಸದ್ಭಾವನೆಗಳಿಲ್ಲ; ಹಲವು ಅಪನಂಬಿಕೆಗಳಿವೆ. ಅದಕ್ಕೆ ಸಾರ್ವತ್ರಿಕ ಮನ್ನಣೆ, ಮರ್ಯಾದೆಯ ಅವಶ್ಯಕತೆಯಿದೆ. ಗೌರವಾನ್ವಿತ ಉಪನ್ಯಾಸಕರು ಇದನ್ನು ತಂದುಕೊಡಬಲ್ಲರೆಂದು ಐಟಿ ಬಾಸ್‌ಗಳಿಗೆ ಚೆನ್ನಾಗಿ ಗೊತ್ತಿದೆ. ಅಷ್ಟೇ ಅಲ್ಲ, ಒಂದೆಡೆ ಐಟಿಯವರ ಉದ್ದೇಶವನ್ನು ಪೂರೈಸಲು ಪುಕ್ಕಟೆಯಾಗಿ ದುಡಿಯಲು ಮನಸ್ಸೊಪ್ಪದಿರುವುದು; ಹಾಗೆಂದು ವಿದ್ಯಾರ್ಥಿಗಳಿಗೆ ಭವಿಷ್ಯದ ಉದ್ಯೋಗಾವಕಾಶವನ್ನು ತೆರೆದು ತೋರುವ ಈ ಕೆಲಸವನ್ನು ಸಂಪೂರ್ಣ ಕಡೆಗಾಣಿ ಸದೆಯೂ ಇರುವುದು. ಒಟ್ಟಿನಲ್ಲಿ ಶಿಕ್ಷಕ ವರ್ಗದವರಿಗೆ ಇದೊಂದು ನೈತಿಕ ಉಭಯ ಸಂಕಟದ ಸಂಗತಿ.

ಇಲ್ಲಿ ಆತಂತಕಾರಿ ಯಾದ ವಿಷಯವೇನೆಂದರೆ, ವಿದ್ಯಾರ್ಥಿಗಳ ಭಾಷಾ ಕೌಶಲ್ಯವನ್ನು ಹೆಚ್ಚಿಸಬೇಕೆಂದು ಉಪನ್ಯಾಸಕರಿಗೆ ಪದೇ ಪದೇ ಸೂಚಿಸಲಾಗುತ್ತಿತ್ತು. ಆ ಸೂಚನೆ ಯೊಳಗೆ 'ಆದೇಶ' ವಿದ್ದಂತೆಯೂ ಭಾಸವಾಗುತ್ತಿತ್ತು. ಅವರ ಪ್ರಕಾರ ಭಾಷೆಯೆಂದರೆ ಕೇವಲ ವ್ಯಾವಹಾರಿಕ



ವಿದ್ಯಾರ್ಥಿಗಳಿಗೆ ಯಾವ ರೀತಿಯ ಶಿಕ್ಷಣ ನೀಡಬೇಕೆಂದು ನಿರ್ಧರಿಸುವವರು ಯಾರು?

ಭಾಷೆ. ಅಲ್ಲಿ ಕೀಟ್ಸ್, ಶೇಕ್ಸ್‌ಪಿಯರ್, ಲಾರೆನ್ಸ್ ನಂತಹವರಿಗೆ ಪ್ರವೇಶವೇ ಇಲ್ಲ. ಸಾಹಿತ್ಯ ವಂತೂ ಈ ಬಿಸಿನೆಸ್ ಜಗತ್ತಿಗೆ ಅಪಥ್ಯ ವಿಮರ್ಶೆ ಲೋಕವಂತೂ ಅಸ್ಪೃಶ್ಯ. ಅಲ್ಲಿ ಪ್ರಕಟವಾಗುವ ಸಂಶಯಗಳು, ಎತ್ತುವ ಪ್ರಶ್ನೆಗಳು ಐಟಿ ಜಗತ್ತನ್ನು ಖಂಡಿತವಾ ಗಿಯೂ ನೆಮ್ಮದಿಯಲ್ಲಿಡುವುದಿಲ್ಲ. ಈಗಾಗಲೇ ಹಲವರು 'ಜಾಗತೀಕರಣವು ಜ್ಞಾನವನ್ನು ಮಾಹಿತಿ ಪಡೆಯುವುದಕ್ಕೆ ಮಾತ್ರ ಸೀಮಿತಗೊಳಿಸುತ್ತಿದೆ' ಎಂದು ಆತಂಕ ವ್ಯಕ್ತಪಡಿಸಿದ್ದಾರೆ. ಇನ್ಫೋಸಿಸ್ ವಾಚನಾಲಯದಲ್ಲಿ Knowledge Shop ಎಂಬ ವಿಭಾಗವಿದೆ. ಇದರ ಕುರಿತಾಗಿ ಹೆಚ್ಚಿನ ಮಾಹಿತಿಯನ್ನು ನೀಡಲಿಲ್ಲ. ಅಂದರೆ ಜ್ಞಾನವೆಂಬುದು ಅಂಗಡಿಯಲ್ಲಿ ಖರೀದಿಸುವ ಸರಕು ಎಂದು ಇದರ ಅರ್ಥ. ಹಣವುಳ್ಳವನು ಇಲ್ಲಿ ಖರೀದಿಸಬಹುದು, ಮಾರಬಹುದು, ಲಾಭಗಳಿಸಬಹುದು.

ಉಪನ್ಯಾಸಕರೊಬ್ಬರು ಕಾಲೇಜುಗಳಲ್ಲಿ ತರಬೇತಿ ನೀಡುವಾಗ ಬಂದೊದಗುವ ಆಡಳಿತಾತ್ಮಕ ಸಮಸ್ಯೆಗಳ ಬಗ್ಗೆ ಗಮನ ಸೆಳೆದಾಗ Course ನ ಸಂಯೋಜಕ, ಮುಂದೆ ಕಾಲೇಜು ಪ್ರಿನ್ಸಿಪಾಲರುಗಳ ಸಭೆ ನಡೆಯಲ್ಲಿದ್ದು, ಪ್ರಿನ್ಸಿಪಾಲರುಗಳನ್ನು ಖರೀದಿಸುವ ಮಾತು ಆಡಿದರು. ("we"ll buy the principals). ಮಾಹಿತಿ ತಂತ್ರಜ್ಞಾನ ವಾಚ್ಯಾರ್ಥಕ್ಕೆ ಒತ್ತು ಕೊಡು ತ್ತದೆಯೇ ಹೊರತು ಭಾವಾರ್ಥ ಅಥವಾ ಒಳಾರ್ಥಕ್ಕಲ್ಲ. ಈ ಮಾತುಗಳಲ್ಲಿರುವ ದರ್ಪ, ನಿಷ್ಠುರತೆ, Absolute certainty ಕೋಮುವಾದಿ ಭಾಷೆಯನ್ನು ಹೋಲುವಂಥಾದ್ದು. ಇಲ್ಲಿ ದಯೆ-ದಾಕ್ಷಿಣ್ಯಕ್ಕೆ ಅವಕಾಶವೇ ಇಲ್ಲ. ಅಂದ ಹಾಗೆ, ದೇಶದಲ್ಲಿ ಇಷ್ಟೆಲ್ಲಾ ಕೋಮುಗಲಭೆಗಳು ನಡೆದು ಜೀವನಾಶವಾದರೂ ಜಾಗತೀಕರಣದ ಈ ಹರಿಕಾರರು ಚಕಾರವೆತ್ತಿ ತಮ್ಮ ಕನಿಷ್ಠ ಸಾಮಾಜಿಕ ಜವಾಬ್ದಾರಿಯನ್ನೂ ತೋರ್ಪಡಿಸಲಿಲ್ಲ. ಇನ್ಫೋಸಿಸ್‌ನ ಭೂರಿಭೋಜನ ಯಾರ ಬಾಯಲ್ಲೂ ನೀರೂರಿಸುವಂಥಾದ್ದೇ. ಮೊದಲೆರಡು ದಿನಗಳ ನಂತರ ನಮಗೆಲ್ಲ Feed back sheet ಕೊಟ್ಟಿದ್ದರು. ಅದರ ಪರಿಣಾಮ ವೇನೋ ಎಂಬಂತೆ ಮರುದಿನ ಕೋಳಿ ಮಾಂಸ ಎಲ್ಲಿಟ್ಟಿದ್ದಾರೆಂದು ಹುಡುಕಾಡಬೇಕಾಯಿತು. ಮೊದ ಮೊದಲಿಗೆ ಎಲ್ಲ ಖಾದ್ಯಗಳನ್ನು ಜೊತೆಯಾಗಿ ಇಟ್ಟಿದ್ದವರಿಗೆ ಮೂರನೇ ದಿನದಿಂದ ಮಾಂಸದ ಪಾತ್ರೆಯನ್ನು ಮೂಲೆಯಲ್ಲಿಡಬೇಕಾದ ಪ್ರಸಂಗ ಬಂದೊದಗಿತ್ತು. ಅಂದರೆ ಮೀನು-ಮಾಂಸ ತಿನ್ನುವ ಬಹುಜನ ಸಮಾಜ ಜಾಗತೀಕರಣದ ಪ್ರಕ್ರಿಯೆಯಲ್ಲಿ ಎಲ್ಲಿರಬೇಕೆಂದು ಸೂಚ್ಯವಾಗಿ ತೋರಿಸಿಕೊಟ್ಟಂತಿತ್ತು. ಬ್ರಾಹ್ಮಣ್ಯ ತನ್ನ ಪ್ರಾಬಲ್ಯವನ್ನು ಮತ್ತೆ ಮತ್ತೆ ಪುನರ್‌ಸ್ಥಾಪಿಸುತ್ತದೆಯೆಂಬುದಕ್ಕೆ ಇದೊಂದು ಸಣ್ಣ ಪುರಾವೆ. ರಾಜಾರೋಷವಾಗಿ ಮೀನು-ಮಾಂಸ ತಿನ್ನುವವರೊಟ್ಟಿಗೆ ಕದ್ದುಮುಚ್ಚಿ ತಿನ್ನುವವರ ಸಂಖ್ಯೆಯೂ ಆ ಗುಂಪಿನಲ್ಲಿತ್ತು. ಅವರಿಗಂತೂ ಸುಗ್ಗಿಯೋ ಸುಗ್ಗಿ. ಸಿಕ್ಕಿದ್ದೇ ಪರಮಾನ್ನವೆಂದು ತಿಂದದ್ದೇ ತಿಂದದ್ದು. ಕೆಲವರಿಗಂತೂ ಅಜೀರ್ಣವಾಗಿ ಓಡಬೇಕಾದ ಪ್ರಸಂಗ ಬಂದೊದಗಿತು.

“ಐಟಿ ಸಂಸ್ಕೃತಿಯಲ್ಲಿ ಬಾಸ್‌ಗೆ ಸರ್/ಮೇಡಮ್‌ಗಳೆಂದು ಸಂಬೋಧಿಸುವುದಿಲ್ಲ. ನೇರವಾಗಿ ಪ್ರಸಾದ್-ಕಮಲ ಎಂದು ಹೆಸರಿಟ್ಟು ಕರೆಯಿರಿ” ಎಂಬ ತಾಕೀತು ಬೇರೆ “ಹಾಗಾದರೆ ಮನೆಯಲ್ಲಿ ಅಪ್ಪನಿಗೆ ರಮೇಶ್ ಎಂದು ಕರೆಯಬಹುದೇ?” ಸಭಿಕರಿಂದ ಪ್ರಶ್ನೆ “ಕಛೇರಿಯ ಸಂಸ್ಕೃತಿ ಮನೆಯೊಳಗೆ ತರಬೇಡಿ. ಮಾನಸಿಕವಾಗಿ ಈ ಎರಡು ಜಗತ್ತುಗಳನ್ನು ಪ್ರತ್ಯೇಕಿಸಿ”-ಎಂದುತ್ತರ. ಹಾಗಾದರೆ ಒಂದು ಸಂಸ್ಕೃತಿ ಇನ್ನೊಂದಕ್ಕೆ ತುಳುಕಿಬಿಟ್ಟರೇ? ಇದು ವ್ಯಕ್ತಿಗಳನ್ನು ಹೆಸರಿಟ್ಟು ಕರೆಯುವ ಪ್ರಶ್ನೆಯಲ್ಲ. ಹೆಸರಿಟ್ಟು ಕರೆದ ನಂತರ ಬಾಸ್ ಹಾಗೂ ಕೆಲಸದವರ ನಡುವಿನ ಸಂಬಂಧದಲ್ಲಿ ಸಕಾರಾತ್ಮಕ ಬದಲಾವಣೆಯಾಗುತ್ತದೆಯೇ? ನಿರ್ಧಾರ ತೆಗೆದುಕೊಳ್ಳುವ ಅಧಿಕಾರ ಬಾಸ್ ಕೈಯಲ್ಲಿದ್ದ ಮೇಲೆ ಹೆಸರಿನಲ್ಲಾಗುವ ವ್ಯತ್ಯಾಸ ದೊಡ್ಡದಲ್ಲವೆಂದು ಕಾಣುತ್ತದೆ. ಪ್ರಾಯಶಃ ದಿನನಿತ್ಯದ ವ್ಯವಹಾರದಲ್ಲಿ ಅಧಿಕಾರ ಕೇಂದ್ರವು ಸುತ್ತಮುತ್ತಲೂ ತನ್ನ ಇರುವಿಕೆಯನ್ನು ತೋರ್ಪಡಿಸಲಿಚ್ಛಿಸುವುದಿಲ್ಲ. ಮೇಲ್ಮೈಯಲ್ಲಿ ತೋರಿಕೆಗಾಗಿ ಕಾಣುವ ಸಮಾನತೆ ಅಂತರ್ಗತವಾಗಿರುವ ಅಧಿಕಾರ ಕೇಂದ್ರವನ್ನು ಬಚ್ಚಿಡುತ್ತದೆ. ದಿನನಿತ್ಯದ ವ್ಯವಹಾರದಲ್ಲಿ ಕಾರ್ಮಿಕನಿಗೆ HR ಡಿಪಾರ್ಟ್‌ಮೆಂಟ್ ತಕ್ಷಣದ ಬಾಸ್ ಆಗಿ ಪರಿಣಮಿಸುತ್ತದೆ. ಅಧಿಕಾರದ ಕೇಂದ್ರ ಅಮೆರಿಕಾ-ಯುರೋಪ್‌ಗಳಲ್ಲೆಲ್ಲೋ ಸುತ್ತುತ್ತಿರುತ್ತದೆ.

ಸೌಜನ್ಯದ ನಡವಳಿಕೆ (Etiquette) ಗಳ ಬಗ್ಗೆಯೂ ಒಂದು ದಿನದ ಕೊರೆಯುವಿಕೆಯಿತ್ತು. ಎಲ್ಲರೊಂದಿಗೆ ಸೌಜನ್ಯದಿಂದ ವರ್ತಿಸುವುದು ಯಶಸ್ಸಿನ ಫಾರ್ಮುಲಾ. ಆದರೆ ಇದೇ ಐಟಿ ಇಂಡಸ್ಟ್ರಿ, ತನ್ನ ಸ್ಥಾಪಿತ ಹಿತಾಸಕ್ತಿಗಳಿಗೆ ಧಕ್ಕೆಯುಂಟಾದಂತೆ ಕಂಡು ಬಂದಲ್ಲಿ ತುಂಬಾ ಕೆಟ್ಟದಾಗಿ ವರ್ತಿಸುತ್ತದೆ. ರಾಜ್ಯಬಿಟ್ಟು ವಲಸೆ ಹೋಗುತ್ತೇವೆಂದು ಚುನಾಯಿತ ಸರ್ಕಾರಗಳಿಗೆ ಧಮ್ಕಿ ಹಾಕುತ್ತವೆ. ಇತ್ತೀಚೆಗಂತೂ ಘನ ಸರ್ಕಾರಗಳೇ ಐಟಿ ಕಂಪೆನಿಗಳ ದಲ್ಲಾಳಿಗಳಂತೆ ವರ್ತಿಸುತ್ತಾ ಸಾವಿರಾರು ಎಕರೆ ಭೂಮಿ ಕಬಳಿಸಿ ಕನಿಷ್ಠ ದರದಲ್ಲಿ ಕಂಪೆನಿಗಳಿಗೆ ಮಾರುತ್ತಿವೆ. ನಾಳೆ ಐಟಿ ಕಂಪೆನಿಗಳು ಮುಳುಗಿ ಹೋದರೂ ರಿಯಲ್ ಎಸ್ಟೇಟ್ ಬಿಸಿನೆಸ್ ಅಂತೂ ಇದ್ದೇ ಇದೆ. ಮಂಗಳೂರಿನಲ್ಲಿ ಇಂತಹ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭವಾಗಿದೆ. ಅಭಿವೃದ್ಧಿಯ ನೆಪದಲ್ಲಿ ಸರಕಾರ ಕಾನೂನನ್ನು ಮುಂದಿಟ್ಟುಕೊಂಡು ಭೂಸ್ವಾಧೀನವನ್ನು ಮಾಡುತ್ತಿದೆ. ಸರಕಾರದ ಈ ಕಲ್ಯಾಣ ಕಾರ್ಯಕ್ರಮವನ್ನು ಪ್ರತಿಭಟಿಸಿದ ವ್ಯಕ್ತಿಯೊಬ್ಬರಿಗೆ ಅಸಿಸ್ಟೆಂಟ್ ಕಮೀಷನರ್‌ರಿಂದ ಬುಲಾವ್.

ಎ.ಸಿ ಹಾಗೂ ವ್ಯಕ್ತಿಯ ನಡುವೆ ನಡೆದ ಸಂಭಾಷಣೆಯ ತುಣುಕಿದು:

ಎ.ಸಿ: “ನಿಮ್ಮ ಮನೆ ಹಾಗೂ ಜಾಗವನ್ನು ಸ್ವಾಧೀನ ಪಡಿಸುತ್ತೇವೆ”

ವ್ಯಕ್ತಿ: ನಾನು ಬೆವರು-ರಕ್ತ ಸುರಿಸಿ ಕಟ್ಟಿಸಿದ ಮನೆಯನ್ನು ಬಿಟ್ಟುಕೊಡಲು ತಯಾರಿಲ್ಲ.

ಎ.ಸಿ: ಐಟಿ ಕಂಪೆನಿಯವರಿಗೆ ನಿಮ್ಮ ಮನೆ ಮೇಲೆ ಕಣ್ಣು ಬಿದ್ದಿದೆ. ಸೂಕ್ತ ಪರಿಹಾರವನ್ನು ನೀಡುತ್ತೇವೆ.

ವ್ಯಕ್ತಿ: ಕೋಟಿ ಕೊಟ್ಟರೂ ಮನೆ ಬಿಡೋದಿಲ್ಲ.

ಎ.ಸಿ: ಹಾಗಾದರೆ ಮನೆ ಧ್ವಂಸ ಮಾಡಬೇಕಾದಿತು.

ಜಾಗತೀಕರಣದ ಈ ಧ್ವಂಸ ಅಯೋಧ್ಯೆಯ ಮಸೀದಿಯ ಧ್ವಂಸದ ರಾಜಕೀಯವನ್ನು ನೆನಪಿಸುತ್ತದೆ. ಹಿಂದೂತ್ವವು ಅಲ್ಪಸಂಖ್ಯಾತರನ್ನು ವಿರೋಧಿಗಳನ್ನಾಗಿ ಸದೆಬಡಿದರೆ ಕಾರ್ಪೋರೇಟ್ ಜಗತ್ತು ದುಡಿಯುವ ವರ್ಗವನ್ನು ವಿರೋಧಿ ಸ್ಥಾನದಲ್ಲಿಡುತ್ತದೆ.

ಇಷ್ಟರವರೆಗೆ ಬೆಂಗಳೂರಿನಂಥ ಮಹಾ ನಗರಕ್ಕೆ ಸೀಮಿತವಾಗಿದ್ದ ಐಟಿ ನೆಟ್‌ವರ್ಕ್ ಇದೀಗ ಬಿ ಮತ್ತು ಸಿ ಕೇಂದ್ರಗಳತ್ತ ಚಾಚಿಕೊಳ್ಳುತ್ತಿರುವುದರ ಹಿಂದಿನ ನಿಜವಾದ ಉದ್ದೇಶವೇನು? ಪಾಪ, ಇತರರಿಗೂ ಉತ್ತಮ ಉದ್ಯೋಗ ದೊರೆಯಲೆಂಬ ಕಾಳಜಿಯಿರಬಹುದು. ಅದರೊಟ್ಟಿಗೆ, ಅಮೆರಿಕಾದವರೂ ಭಾರತದಲ್ಲಿ ದುಡಿಯುವ ವರ್ಗ(Cheap labour) ಅಗ್ಗಕ್ಕೆ ಸಿಗುತ್ತಾರೆಂಬ ಕಾರಣಕ್ಕೆ ಹಲವು ಉದ್ದಿಮೆಗಳನ್ನು ಈ ಕಡೆಗೆ ವರ್ಗಾಯಿಸುತ್ತಿದ್ದಾರೆ. ಅದೇ ರೀತಿ, ಮೆಟ್ರೋದ ದುಡಿಯುವ ವರ್ಗಗಳಿಗೆ ಅಧಿಕ ಹಣ ಸುರಿಯುವುದಕ್ಕಿಂತ ಹಳ್ಳಿಯವರಿಂದ ಸ್ವಲ್ಪ ಕಮ್ಮಿಗೆ ದುಡಿಸಬಹುದೆಂಬ ಲೆಕ್ಕಾಚಾರ. ಅಷ್ಟೇ ಅಲ್ಲ, ಸಣ್ಣಂದಿನಿಂದಲೂ ಕಷ್ಟಪಟ್ಟು ಮನೆ-ಹೊಲಗಳಲ್ಲಿ ದುಡಿದು ಅಭ್ಯಾಸವಿರುವ ಇವರಿಂದ ಹೆಚ್ಚಿನ ಕೆಲಸವನ್ನು ಕೀಳಬಹುದೆಂಬ ಅಂದಾಜು.

ಅಷ್ಟೇ ಅಲ್ಲ, ಇಲ್ಲಿಯವರೆಗೆ ಇಂಜಿನಿಯರಿಂಗ್ ಮಾಡ್ಕೊಂಡು ಬಂದವರಿಗೆ ಪದವಿಗೆ ಮನ್ನಣೆ ಕೊಟ್ಟು ಹೆಚ್ಚಿನ ಸಂಬಳ ಕೊಡುತ್ತಿದ್ದರು. ಚೌಕಾಶಿ ಮಾಡುವ ಶಕ್ತಿ ಅವರು ಗಳಿಸಿದ ಪದವಿಯಿಂದಾಗಿ ಹೆಚ್ಚಿದೆ. ಹೆಚ್ಚಿನ ಬಿ.ಎ, ಬಿ.ಕಾಂ ಪದವೀಧರರು ಪ್ರಸಕ್ತ ಉದ್ಯೋಗ ಮಾರುಕಟ್ಟೆಯಲ್ಲಿ 1,500-2000 ರೂಪಾಯಿಗಳ ಜುಜುಬಿ ಸಂಬಳಕ್ಕೆ ದುಡಿಯುತ್ತಿದ್ದಾರೆ. ಇಂಜಿನಿಯರಿಂಗ್ ಪದವೀಧರರಿಗೆ ಕೊಡುವ 15,000/-ದ ಬದಲು ಬಿ.ಎ, ಬಿಕಾಂ ಆದವರಿಗೆ 10,000/- ಬಿಸಾಡಿದರೂ ಐಟಿ ಕಂಪೆನಿಗಳಿಗೆ ಲಾಭ ಲಾಭವೇ. ಇಂತಹ ಅವಕಾಶ ಕೊಟ್ಟದ್ದಕ್ಕೆ ಬಿ.ಎ, ಬಿ.ಕಾಂನವರು ಧನ್ಯತಾಭಾವದಿಂದ, ನಿಷ್ಠೆಯಿಂದ ಸೇವೆಯನ್ನು ಸಲ್ಲಿಸುತ್ತಾರೆಂದು ಇವರಿಗೆ ನೂರಕ್ಕೆ ನೂರರಷ್ಟು ಖಾತ್ರಿಯಿದೆ.

ಸದ್ಯ ಇತರ ಕಂಪೆನಿಗಳಿಗೆ ಹೋಲಿಸಿದರೆ ಐಟಿ ಕ್ಷೇತ್ರದಲ್ಲಿ ಉತ್ತಮ ಸಂಬಳವನ್ನು ಕೊಡುತ್ತಿದ್ದಾರೆ. ಆದರೆ ಮಾರ್ಕೆಟ್‌ನಲ್ಲಿ ದುಡಿಯುವ ವರ್ಗದ ಸಂಖ್ಯೆ ವಿಸ್ತಾರಗೊಂಡಂತೆ ಇದೇ ಮೊತ್ತವನ್ನು ಕಾಯ್ದುಕೊಳ್ಳುತ್ತಾರೆಂಬ ಗ್ಯಾರಂಟಿಯೇನಿದೆ? ದುಡಿಯುವ ವರ್ಗದ ಸಂಘಟನೆಗಳೂ ಕ್ಷೀಣಗೊಳ್ಳುತ್ತಿವೆ. ಸರಕಾರಕ್ಕೂ ಬಿದ್ದು ಹೋಗಿಲ್ಲ. ಆದ್ದರಿಂದ 35-40 ಪ್ರಾಯದ ತನಕ ಚೆನ್ನಾಗಿ ಹಣ ಮಾಡಿ ನಿವೃತ್ತಿ ಹೊಂದುವ ಬಯಕೆ ಅಲ್ಲಿರುವ ಹಲವರದ್ದು. 55-60ಕ್ಕೇ ನಿವೃತ್ತಿಯಾಗಲು ಮನಸ್ಸಿಲ್ಲದ ಹಲವರಿಗೆ ಐಟಿಯಲ್ಲಿ ದುಡಿಯುವವರ ಈ ಉದ್ಧಾರ ನಿಜಕ್ಕೂ ಆಶ್ಚರ್ಯ ತರಿಸುತ್ತದೆ. ಐಟಿ ಕಂಪೆನಿಯವರೂ ಅಷ್ಟರೊಳಗೆ ಇವರ ರಕ್ತವನ್ನು ಹೀರಿ ಮುದುಕ-ಮುದುಕಿಯನ್ನಾಗಿ ರೂಪಾಂತರ (Metamorphosis) ಮಾಡಿರುತ್ತಾರೆ.

ತರಬೇತಿಯ ಪ್ರಾರಂಭದಲ್ಲಿ ಈ ಕಾರ್ಯಕ್ರಮ ಕಾರ್ಪೋರೇಟ್ ಮತ್ತು ಅಕಾಡೆಮಿಕ್ ವಲಯದವರ ಮುಖಾಮುಖಿಯೆಂದು ಬಣ್ಣಿಸಲಾಯಿತು. ಜಾಗತೀಕರಣದ ಇಂದಿನ ಸಂದರ್ಭದಲ್ಲಿ ಈ ಮುಖಾಮುಖಿ ಶಿಕ್ಷಣದ ಖಾಸಗೀಕರಣದ ಪ್ರಕ್ರಿಯೆಯಲ್ಲಿ ಒಂದು ಹೆಜ್ಜೆಯಾಗಿದೆ. ವಿದೇಶೀ ಯೂನಿವರ್ಸಿಟಿಗಳು ಭಾರತಕ್ಕೆ ಲಗ್ಗೆಯಿಡುತ್ತಿರುವ ಈ 'ಶುಭಾವಸರ'ದಲ್ಲಿ ಶಿಕ್ಷಣ=ಉದ್ಯೋಗ ಸಮೀಕರಣದ ಪ್ಯಾಕೇಜನ್ನು ನಿಧಾನವಾಗಿ ಉಪನ್ಯಾಸಕ ವರ್ಗಕ್ಕೆ ದಾಟಿಸುವ, ದೇಹ-ಮನಸ್ಸು, ಆತ್ಮಗಳನ್ನು ಇದಕ್ಕಾಗಿ ತಯಾರಿಮಾಡುವ ಪ್ರಯತ್ನವಿದು.

ವಿದ್ಯಾರ್ಥಿಗಳಿಗೆ ಯಾವ ರೀತಿಯ ಶಿಕ್ಷಣ ನೀಡಬೇಕೆಂದು ಅಕಾಡೆಮಿಕ್ ವಲಯದವರಿಗಿಂತಲೂ ಹೆಚ್ಚಾಗಿ ಇವತ್ತು ಮಾರುಕಟ್ಟೆಯಲ್ಲಿ ಪ್ರಬಲರಾಗಿರುವ ಐಟಿ ಇಂಡಸ್ಟ್ರಿ ತನಗೆ ಗೊತ್ತಿದೆಯೆಂದು ಸಾರಿ ಹೇಳುತ್ತಾ, ಇಂಡಸ್ಟ್ರಿಯ ಅಗತ್ಯಗಳನ್ನು ಪೂರೈಸಿ ಎಂದು ಡಿಮ್ಯಾಂಡ್ ಮಾಡುತ್ತಿದೆ. ಹಾಗಾದರೆ ವಿದ್ಯಾರ್ಥಿಗಳಿಗೆ ಯಾವ ರೀತಿಯ ಶಿಕ್ಷಣವನ್ನು ನೀಡಬೇಕೆಂದು ನಿರ್ಧರಿಸುವವರು ಯಾರು? □

ತತ್ವಶಾಸ್ತ್ರ ಮತ್ತು ಕಾವ್ಯದ ಜಗಳ ತುಂಬ ಹಳೆಯದು. ಕಾವ್ಯಾಲಾಪನೆಯನ್ನು ವರ್ಜಿಸಲು ಕರೆಕೊಟ್ಟ ಮಹಾಜ್ಞಾನಿಗಳಿಗೆ ಕೊರತೆಯಿಲ್ಲ. ಭಗವದ್ಗೀತೆಯನ್ನು ಕುರಿತು ಲೋಹಿಯಾ ಹೇಳಿರುವ ಮಾತುಗಳಿವು:

"........ಭಗವದ್ಗೀತೆಯಂಥ ಜಗತ್ತಿನ
ಮಹಾಗೀತವನ್ನೇ ಹಾಡಿದ
ಕೃಷ್ಣ ಯಾರಿಗೆ ಅಪರಿಚಿತ? ತತ್ವವನ್ನು
ಸಂಗೀತವಾಗಿಸಿದ,
ಚಿಂತನವನ್ನು ಕಥೆ ಮಾಡದೆ, ಕಾವ್ಯ ಮಾಡದೆ
ನೇರ ಹಾಡಿದ
ಜಗತ್ತಿನ ಏಕೈಕ ದೇಶ ಇದು...."
('ರಾಮಕೃಷ್ಣಶಿವ')

ಸಂಸ್ಕೃತದಲ್ಲಿರುವ 'ಭಗವದ್ಗೀತೆ'ಯನ್ನು ಲಕ್ಷಿಸಿ ಲೋಹಿಯಾ ಅವರು ಮಾಡಿರುವ ವಿಶ್ಲೇಷಣೆ ಮನನೀ ಯವಾಗಿದೆ. ಆದರೆ, ಈ ಸಂದರ್ಭದಲ್ಲಿ ಕನ್ನಡಿಗರೆಲ್ಲರಿಗೆ ನೆನಪಾಗಲೇಬೇಕಾದ ಚೇತನವೆಂದರೆ, ಅಲ್ಲಮಪ್ರಭು. ಈತನ ವಚನಗಳಲ್ಲಿ ಕಥೆಯಿಲ್ಲ; ಕಥನವಿಲ್ಲ! ಕಾವ್ಯಮೀಮಾಂಸೆಯ ರೂಢಿಗತ ಶಬ್ದಾಲಂಕಾರಗಳು ಅಥವಾ ಅರ್ಥಾಲಂಕಾರಗಳ ಪರಿಭಾಷೆಯಿಂದ ಅಲ್ಲಮನ ವಚನಗಳನ್ನು ಸಮರ್ಪಕವಾಗಿ ವಿವರಿಸಲಾಗುವುದಿಲ್ಲ.

ನನ್ನ ಬಗೆಗಣ್ಣಿಗೆ ಕನ್ನಡ ಸಾಹಿತ್ಯವೆಲ್ಲ ಶಬ್ದಮಯವಾಗಿ ಕಂಡಿದೆ, ಅಲ್ಲಮನೊಬ್ಬನೆ ನನಗೆ ನಿಃಶಬ್ದವಾಗಿ ಕಾಣುತ್ತಾನೆ. 'ನಿಃಶಬ್ದ'ವೆಂದರೆ ಶಬ್ದರಾಹಿತ್ಯವಲ್ಲ; ಶಬ್ದೋತ್ತೀರ್ಣ ಅಥವಾ ಶಬ್ದದ ಹಂಗು ಹರಿದು ಕೊಳ್ಳುವುದು ಎಂದರ್ಥ. ಅಲ್ಲಮನ ನಿಃಶಬ್ದ ವಚನಗಳನ್ನು ಯಾರು ಬೇಕಾದರೂ ಶಬ್ದಕ್ಕೆ ತಂದುಕೊಳ್ಳಬಹುದು. ಆದರೆ, ಶಬ್ದದ ಲಜ್ಜೆಗೆ ಸಿಲುಕದ ಅಲ್ಲಮ ಕಡೆಗೂ ನಿಃಶಬ್ದವಾಗಿಯೇ ಉಳಿದು ಬಿಡುತ್ತಾನೆ. ಅಲ್ಲಮನ ವಚನಗಳು ತತ್ವಗರ್ಭಿತವಾಗಿರುವಂತೆಯೇ, ತತ್ವೋತ್ತರಣವೂ ಆಗಿವೆ. ಅಂದರೆ, ಅಲ್ಲಮನ 'ನಿಃಶಬ್ದ' ವಚನಗಳನ್ನು ಯಾವೊಂದು ನಿರ್ದಿಷ್ಟ ತತ್ವಕ್ಕೂ ಅಳವಡಿಸಲು ಸಾಧ್ಯವಿಲ್ಲ, ತತ್ವಶಾಸ್ತ್ರಕ್ಕೆ ಉತ್ತರಿಸಲು ಸಾಧ್ಯವಿಲ್ಲದ 'ನಿಃಶಬ್ದ'ದ ಆಳ –ನಿರಾಳಗಳನ್ನು ಮನಗಾಣಬೇಕಾದರೆ, ಅಲ್ಲಮನ ವಚನಗಳಿಗೆ ಬರಬೇಕು. ಈ ದೃಷ್ಟಿಯಿಂದ ಸಂಸ್ಕೃತದ 'ಭಗವದ್ಗೀತೆ'ಯನ್ನು ಮೀರಿಸುವ ಶಕ್ತಿ ಮತ್ತು ಕಾಂತಿಗಳು 'ಕನ್ನಡದ' ಅಲ್ಲಮನ ವಚನಗಳಲ್ಲಿವೆ.

'ಸಾಹಿತ್ಯ ವಿಷಯ' ಅಥವಾ 'ವಿಷಯ ಸಾಹಿತ್ಯ' ಎಂಬ ಮಾತನ್ನು ಇಡೀ ಸಾಹಿತ್ಯ ಮೀಮಾಂಸೆಗೆ ಅನ್ವಯಿಸಬಹುದು. ಸಾಹಿತ್ಯ ರಚನೆಗೆ ವಿಷಯ ವಿವೇಚನೆಯೇ ಜೀವಾಳ. ವಸ್ತು ವಿಷಯಗಳಿಲ್ಲದ ಸಾಹಿತ್ಯವೇ ಇಲ್ಲವೆನ್ನಬಹುದು. ಆದರೆ, ಅಲ್ಲಮನ ವಚನಗಳು ಈ ಲೋಕರೂಢಿಗೆ ವಿರುದ್ಧವಾಗಿವೆ. 'ವಸ್ತು' ಅಥವಾ 'ವಿಷಯ'ವನ್ನೆ ಇಲ್ಲವಾಗಿಸುವ ಅಲ್ಲಮನ ನಿಃಶಬ್ದ ವಚನಗಳು ಕನ್ನಡ ಸಂಸ್ಕೃತಿಯ ಹೆಡೆಮಣಿಯಾಗಿವೆ. ಉದಾಹರಣೆಗೆ,

ಹಿಡಿವ ಕೈಯ ಮೇಲೆ ಕತ್ತಲೆ, ಅಯ್ಯ!
ನೋಡುವ ಕಂಗಳ ಮೇಲೆ ಕತ್ತಲೆ, ಅಯ್ಯ!
ನೆನೆವ ಮನದೊಳಗೆ ಕತ್ತಲೆ, ಅಯ್ಯ!
ಕತ್ತಲೆಯೆಂಬುದು ಇತ್ತಲೆ, ಅಯ್ಯ!
ಗುಹೇಶ್ವರ ನೆಂಬುದು ಅತ್ತಲೆ, ಅಯ್ಯ!?

ಈ ವಚನ ಹಿಡಿವ ವಸ್ತು, ನೋಡುವ ವಸ್ತು, ನೆನೆವ ವಸ್ತುವಿನ ಬಗ್ಗೆ ಏನನ್ನೂ ಹೇಳದೆ 'ನಿಃಶಬ್ದ'ವಾಗಿದೆ. ಅಲ್ಲಮನ ಎಲ್ಲ ವಚನಗಳು ಹೀಗೇ ಇವೆ; ಅವುಗಳಲ್ಲಿ ವಸ್ತುವಿಷಯವಾಗಲಿ ಅಥವಾ ವಿಷಯ ವಿಲಾಸವಾಗಲಿ ಕಂಡುಬರುವುದಿಲ್ಲ. ಜನಪದರ ಗಾದೆಮಾತುಗಳನ್ನು, ಅನುಭವಾಮೃತವನ್ನು ಆಯಾ ಸಂದರ್ಭಗಳಿಗೆ ತಕ್ಕಂತೆ ಯಥೋಚಿತವಾಗಿ ಬಳಸುವಂತೆಯೇ ಅಲ್ಲಮನ ವಚನ ಗಳನ್ನು ಬಳಸಿಕೊಳ್ಳಬಹುದು. 'ಹರಿವನದಿ'ಯನ್ನು ಸಕಲ ಜೀವಿಗಳೂ ಬಳಸಿಕೊಳ್ಳಬಹುದು; ಆದರೆ, ಮನೆ ತುಂಬಿಸಿ ಕೊಳ್ಳಲು ಸಾಧ್ಯವಿಲ್ಲ ಎಂಬುದನ್ನು ಮರೆಯಬಾರದು.

ಅಲ್ಲಮನ ವಚನಗಳು ಶೈವದರ್ಶನಮಯ ಅಥವಾ ಅಭಿನವ ಗುಪ್ತನೊಡನೆ ಅಲ್ಲಮ ನಡೆಸಿದ ಸಂವಾದವೆಂಬಂತೆ ಡಿ.ಆರ್. ವ್ಯಾಖ್ಯಾನಿಸಿದ್ದಾರೆ. ಎಲ್ಲ ತತ್ವದೆಲ್ಲೆ ಮೀರಿ, ನಿರ್ದಿಗಂತವಾಗಿ ಏರಿಸಾಗುವ ಅಲ್ಲಮನಿಗೆ ಯಾವೊಂದು ನಿರ್ದಿಷ್ಟ ತತ್ವವನ್ನು ಆರೋಪಿಸಲಾಗದು. ಶೈವ, ವೀರಶೈವ, ಅದ್ವೈತ, ಶಕ್ತಿವಿಶಿಷ್ಟಾದ್ವೈತ ಇತ್ಯಾದಿ ರೂಢಿಗತ ಪರಿಭಾಷೆಗಳೆಂಬ ಕೂಡಗಳಿಗೆ ಅಲ್ಲಮನೆಂಬ ಹರಿವನದಿ ಹಿಡಿಸುವುದಿಲ್ಲ!

ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯಲ್ಲಿ ಅಲ್ಲಮನ ವಚನಗಳು ಹೇಗೆಲ್ಲ ಬಳಕೆಯಾಗಿವೆ ಎಂಬುದನ್ನು ಕುರಿತೇ ಗಂಭೀರವಾದ ಅಧ್ಯಯನ ನಡೆಯ ಬೇಕಾಗಿದೆ. ಅಲ್ಲಮನ ವಚನಗಳನ್ನು ಮೊದಲಿಗೆ ಬಳಸಿ ಕೊಂಡವನೆಂದರೆ ಶಿವಗಣಪ್ರಸಾದಿ ಮಹಾದೇವಯ್ಯ. ಈತ ಸಂಯೋಜಿಸಿದ 'ಶೂನ್ಯಸಂಪಾದನೆ' ಅಲ್ಲಮಪ್ರಭುವನ್ನು ಕುರಿತ ಉತ್ಕೃಷ್ಟ ಚಿಂತನೆಯ ಪರಿಣಾಮ ಫಲವಾಗಿದೆ. ಅಲ್ಲಮನ ವಚನಗಳಿಗೆ ಟೀಕುಗಳನ್ನು ಬರೆದವರು ಬಗೆಬಗೆಯ ಮಹೀಯ ವ್ಯಾಖ್ಯಾನಗಳನ್ನೇ ಹೊಸೆದು ಬಿಟ್ಟಿದ್ದಾರೆ. ಟೀಕುಗಳ ನಂತರ, ನನಗೆ ಮುಖ್ಯವೆನಿಸುವುದು ಚಾಮರಸನ ಪ್ರಭುಲಿಂಗಲೀಲೆ. ಈ ಕೃತಿಯಲ್ಲಿ ಅಲ್ಲಮನ ವಚನಗಳು ಷಟ್ಪದಿಗಳಾಗಿ ಹುಟ್ಟು – ಮರು ಹುಟ್ಟು ಪಡೆ ದುಕೊಂಡಿವೆ. ಅಲ್ಲಮನ ವಚನಗಳಲ್ಲಿರುವ 'ನಿರಹಂಕಾರ' ಮತ್ತು 'ಸುಜ್ಞಾನ'ಗಳನ್ನು ಮೌಖಿಕ ಪರಂಪರೆಯ ಶಿಶು ನಾಳ ಶರೀಫರು ಮತ್ತು ಮಂಟೇಸ್ವಾಮಿ ಕಥನಗಳಲ್ಲಿ ಮನ ಗಾಣಬಹುದು.

ಆಧುನಿಕ ಸಂದರ್ಭದಲ್ಲಿ ಅಲ್ಲಮನ ವಚನಗಳ ಬಗ್ಗೆ ವಿಶೇಷ ಚಿಂತನೆ ನಡೆಸಿದವರೆಂದರೆ, ದ.ರಾ.ಬೇಂದ್ರೆ ಯವರು. "ಅಲ್ಲಮನ ರಸವಚನಗಳಿಗೆ ವಿರಸದ ಅರ್ಥ ಬರಬಾರದು. ಅವು ಬರೀ ಬೆಡಗಿನ ಕೂಟ ಪ್ರಶ್ನೆಗಳಾ ಗಬಾರದು. ಅವು ಒಂದೊಂದು ಜ್ಯೋತಿರ್ಲಿಂಗಗಳು"– ಎಂದು ಹೇಳಿದ ಬೇಂದ್ರೆ ವಾಣಿಯಲ್ಲಿ ಅಲ್ಲಮನ 'ನಿಃಶಬ್ದ' ವಚನಗಳ ಸಮರ್ಪಕ ವಿವೇಚನೆಯಿದೆ, ಬೇಂದ್ರೆಯವರ ನಂತರ, ಕನ್ನಡ ಸಂಸ್ಕೃತಿಗೆ ಅಲ್ಲಮನ ಧಾತು ಮತ್ತು ಧೋರಣೆಗಳೇನೆಂಬುದನ್ನು ಸಮರ್ಥವಾಗಿ ತೋರಿಸಿ ಕೊಟ್ಟವರೆಂದರೆ ಡಾ॥ಎಲ್.ಬಸವರಾಜು ಅವರು. ದ.ರಾ. ಬೇಂದ್ರೆ ಮತ್ತು ಎಲ್.ಬಸವರಾಜು ಇಕ್ಕಿದ ವಿಪರೀತದ ಬೆಳಕಿನ ನಂತರ, ನಮಗೆ ಕಾಣುವುದು ಅಪರಿಮಿತದ ಕತ್ತಲೆಯೇ ಆಗಿದೆ. ಅಲ್ಲಮಪ್ರಭುವಿನ ಬಗ್ಗೆ ಯಾವೊಂದು ಗಮನಾರ್ಹ ಕೃತಿಯೂ ನಮ್ಮ ಕಣ್ಣಿಗೆ ಬೀಳುವುದಿಲ್ಲ... ಆದರೆ, ನನ್ನ ಕಿವಿಗೆ ಬಿದ್ದ ಮತ್ತೊಂದು ವಿಪರೀತದ ಬೆಳಕೆಂದರೆ, ಪ್ರೊ॥ಕಿ.ರಂ.ನಾಗರಾಜ ಅವರ ಭಾಷಣ. ೧೯೯೩ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ 'ಹೊನ್ನಾಳಿ' ಯಲ್ಲಿ ಸಂಘಟಿಸಿದ್ದ ವಿಚಾರ ಸಂಕಿರಣದಲ್ಲಿ ಕಿ.ರಂ. ಮಾಡಿದ ಭಾಷಣ ಅಲ್ಲಮನಿಗೆ ಸಲ್ಲಿಸಿದ ಉತ್ಕೃಷ್ಟ ಚಿಂತನೆಯ ನಮನವೆನ್ನಬಹುದು. ಶಿವಗಣ ಪ್ರಸಾದಿ ಮಹಾದೇವಯ್ಯನಿಂದ ಆರಂಭಿಸಿ, ಕಿ.ರಂ.ವರೆಗೆ ನಡೆದಿ ರುವ ಅಲ್ಲಮನ ಅಧ್ಯಯನದ ಮಾರ್ಗಗಳನ್ನು ಕೀರ್ತಿಶೇಷ ಡಾ॥ಡಿ.ಆರ್.ನಾಗರಾಜ್ 'ಅಲ್ಲಮಪ್ರಭು ಮತ್ತು ಶೈವ ಪ್ರತಿಭೆ'ಯ ಮೂಲಕ ಮುಂದುವರೆಸಿದ್ದಾರೆ. ಈ ಜೀವಂತ ಪರಂಪರೆಯಲ್ಲಿ ಜನಕಲ್ಯಾಣಕ್ಕಾಗಿ ನಡೆಸಿದ ಸಾಂಸ್ಕೃತಿಕ ರಾಜಕಾರಣವನ್ನು ಸ್ಪಷ್ಟವಾಗಿ ಗುರುತಿಸಬಹುದು.

ಡಿ.ಆರ್. ನಾಗರಾಜ್ ಬಗ್ಗೆ ಬೆಳಗಿನ ಗೋಷ್ಠಿಯಲ್ಲಿ

'ಅಲ್ಲಮ ಪ್ರತಿಭೆ' ಕುರಿತು...

ಜಿಜ್ಞಾಸೆ

ಅಲ್ಲಮನ ವಚನಗಳನ್ನು ಮೊದಲಿಗೆ ಬಳಸಿ ಕೊಂಡವನೆಂದರೆ ಶಿವಗಣಪ್ರಸಾದಿ ಮಹಾದೇವಯ್ಯ. ಈತ ಸಂಯೋಜಿಸಿದ 'ಶೂನ್ಯಸಂಪಾದನೆ' ಅಲ್ಲಮಪ್ರಭುವನ್ನು ಕುರಿತ ಉತ್ಕೃಷ್ಟ ಚಿಂತನೆಯ ಪರಿಣಾಮ ಫಲವಾಗಿದೆ. ಅಲ್ಲಮನ ವಚನಗಳಿಗೆ ಟೀಕುಗಳನ್ನು ಬರೆದವರು ಬಗೆಬಗೆಯ ಮಹೀಯ ವ್ಯಾಖ್ಯಾನಗಳನ್ನೇ ಹೊಸೆದು ಬಿಟ್ಟಿದ್ದಾರೆ. ಟೀಕುಗಳ ನಂತರ, ನನಗೆ ಮುಖ್ಯವೆನಿಸುವುದು ಚಾಮರಸನ ಪ್ರಭುಲಿಂಗಲೀಲೆ. ಈ ಕೃತಿಯಲ್ಲಿ ಅಲ್ಲಮನ ವಚನಗಳು ಷಟ್ಪದಿಗಳಾಗಿ ಹುಟ್ಟು – ಮರು ಹುಟ್ಟು ಪಡೆದುಕೊಂಡಿವೆ. ಅಲ್ಲಮನ ವಚನಗಳಲ್ಲಿರುವ 'ನಿರಹಂಕಾರ' ಮತ್ತು 'ಸುಜ್ಞಾನ'ಗಳನ್ನು ಮೌಖಿಕ ಪರಂಪರೆಯ ಶಿಶುನಾಳ ಶರೀಫರು ಮತ್ತು ಮಂಟೇಸ್ವಾಮಿ ಕಥನಗಳಲ್ಲಿ ಮನ ಗಾಣಬಹುದು.

○ವಿ.ಚಂದ್ರಶೇಖರ ನಂಗಲಿ

ಮಾತನಾಡಿದ ಡಾ.ಕೆ.ಫಣಿರಾಜ್ ಮತ್ತು ಡಾ.ರಹಮತ್ ತರೀಕೆರೆ ಅವರು, 'ಸಾಹಿತ್ಯ ಕಥನ' ಹಾಗೂ 'ಅಲ್ಲಮಪ್ರಭು ಮತ್ತು ಶೈವ ಪ್ರತಿಭೆ' ಗ್ರಂಥಗಳನ್ನು ಕುರಿತು ತುಂಬ ಅಭ್ಯಾಸಪೂರ್ಣವಾದ ಮತ್ತು ಒಳನೋಟಗಳುಳ್ಳ ವಿಶ್ಲೇಷಣೆಯನ್ನು ಕೊಟ್ಟಿದ್ದಾರೆ. ಅಲ್ಲಮನ 'ನಿಃಶಬ್ದ' ವಚನಗಳನ್ನು ಡಿ.ಆರ್, ನಾಗರಾಜ್ 'ಶಬ್ದ'ಕ್ಕೆ ತಂದಿರುವ ಪರಿಯಲ್ಲಿ ವಿಪರೀತದ ಬೆಳಕಿದೆ; ಜನಕಲ್ಯಾಣದ ಸಾಂಸ್ಕೃತಿಕ ರಾಜಕಾರಣವೂ ಇದೆ. ಆದರೆ, ಅಲ್ಲಮನ ವಚನಗಳು ಡಿ.ಆರ್.ಅವರ ಈ ಗ್ರಂಥವನ್ನೂ ಮೀರಿದ್ದು ಎಂಬುದನ್ನು ಯಾವ ಕಾರಣಕ್ಕೂ ಮರೆಯಬಾರದು. 'ವಿಷಯರಹಿತ' ವೆನ್ನಬಹುದಾದ ಅಲ್ಲಮನ ವಚನಗಳನ್ನು ಧ್ಯಾನಿಸುತ್ತಿದ್ದರೆ ನನ್ನಗೆ ಬಸವಣ್ಣನ ವಚನದ ನೆನವಾಗುತ್ತದೆ:

> ವಿಷಯವೆಂಬ ಹಸುರನೆನ್ನ ಮುಂದೆ ತಂದು
> ಪಸರಿಸಿದೆಯಯ್ಯ;
> ಪಶುವೇನು ಬಲ್ಲುದು ಹಸುರೆಂದೆಳಸುವುದು
> ವಿಷಯರಹಿತನ ಮಾಡಿ, ಭಕ್ತಿರಸವ ದಣಿಯ
> ಮೇಯಿಸಿ
> ಸುಬುದ್ಧಿಯೆಂಬುದಕವನೆರೆದು ನೋಡಿ
> ಸಲಹಯ್ಯ
> ಕೂಡಲ ಸಂಗಮದೇವ.

'ವಿಷಯ ರಹಿತ' ವೆನ್ನಬಹುದಾದ ಕಾವ್ಯವನ್ನು ಸೃಷ್ಟಿಸಿದ ಅಲ್ಲಮ ಸಾರಸ್ವತ ಲೋಕದ ಕೋವಿದ–ಕೋವಿದರಿಗೆ ಅವಿದ–ಅವಿದಲಿಂಗವಾಗಿಯ ಉಳಿದುಬಿಡುತ್ತಾನೆ. ಈ ದೃಷ್ಟಿಯಿಂದ ನಾನು, ಅಲ್ಲಮನ ವಚನಗಳನ್ನು 'ಶೂನ್ಯ ಸಾಹಿತ್ಯ' (Zero-Literature) ಎಂದು ಕರೆಯಲಿಚ್ಛಿಸುತ್ತೇನೆ. ಇದೊಂದು ರೀತಿಯಲ್ಲಿ ಪುಕೋಕಾ ಅವರ 'ಶೂನ್ಯಕೃಷಿ' (Zero-cultivation) ಯನ್ನು ಹೋಲುತ್ತದೆ:

> ಬಿತ್ತದೆ ಬೆಳೆಯದೆ ತುಂಬಿದ ರಾಸಿಯ
> ಕಂಡಲ್ಲಿ ಸುಖಿಯಾಗಿ ನಿಂದವರಾರೋ?
> ಇದ ಹೇಳಲೂ ಬಾರದು, ಕೇಳಲೂ ಬಾರದು!
> ಗೋಗೇಶ್ವರ ! ನಿಮ್ಮ ಶರಣನು
> ಎಚ್ಚಣವಳಿಯದೆ ರಾಸಿಯನಳೆದನು

ಅಲ್ಲಮನ ವಚನಗಳು ಶೈವದರ್ಶನಮಯ ಅಥವಾ ಅಭಿನವ ಗುಪ್ತನೊಡನೆ ಅಲ್ಲಮ ನಡೆಸಿದ ಸಂವಾದವೆಂಬಂತೆ ಡಿ.ಆರ್. ವ್ಯಾಖ್ಯಾನಿಸಿದ್ದಾರೆ. ಎಲ್ಲ ತತ್ವದೆಲ್ಲೆ ಮೀರಿ, ನಿರ್ದಿಗಂತವಾಗಿ ಏರಿಸಾಗುವ ಅಲ್ಲಮನಿಗೆ ಯಾವೊಂದು ನಿರ್ದಿಷ್ಟ ತತ್ವವನ್ನು ಆರೋಪಿಸಲಾಗದು. ಶೈವ, ವೀರಶೈವ, ಅದ್ವೈತ, ಶಕ್ತಿವಿಶಿಷ್ಟಾದ್ವೈತ ಇತ್ಯಾದಿ ರೂಢಿಗತ ಪರಿಭಾಷೆಗಳೆಂಬ ಕೂಡಗಳಿಗೆ ಅಲ್ಲಮನೆಂಬ ಹರಿವನದಿ ಹಿಡಿಸುವುದಿಲ್ಲ!

> "ಅಲ್ಲಮನು ಯಾವ ಮತವನ್ನಾಗಲಿ
> ಖಂಡಿಸಲೂ ಇಲ್ಲ; ಮಂಡಿಸಲೂ ಇಲ್ಲ" –
> ಎಲ್.ಬಸವರಾಜು

ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎಂಬ ಗಾದೆಮಾತಿನಂತೆ, ಮೇಲಿನ ಚಿಕ್ಕಮಾತಿನಲ್ಲಿ ದೊಡ್ಡ ಕೀರ್ತಿಯೇ ಅಡಕವಾಗಿದೆ.. ಅಲ್ಲಮನ ವಿಚಾರಗಳನ್ನು 'ಶೂನ್ಯಧರ್ಮ' (Zero-Religion) ಎಂದು ಕರೆಯಬಹುದು. ಅಲ್ಲಮನ 'ನಿಃಶಬ್ದ' ವಚನಗಳಿಗೆ ರೂಢಿಗತ ಟೀಕುಗಳು – ವ್ಯಾಖ್ಯಾನಗಳು – ವಿಮರ್ಶೆಯ ಅನುಸಂಧಾನಗಳಿಗಿಂತಲೂ 'ಶೂನ್ಯ ವಿಮರ್ಶೆಯೇ(Zero-Criticism) ಸರಿಯೆನಿಸುತ್ತದೆ.

ಪಾಶ್ಚಾತ್ಯರು ಪರಿಚಯಿಸಿದ ಆಧುನಿಕ ಕೃಷಿಯ ಅನುಸಂಧಾನಗಳನ್ನು ಉತ್ತರಿಸಿದ ಪುಕೋಕಾ ನಿಸರ್ಗಸಹಜವಾದ 'ಶೂನ್ಯಕೃಷಿ'ಯನ್ನು ಕಂಡುಕೊಂಡಂತೆಯೇ, ನಾವಿಂದು ಪಾಶ್ಚಾತ್ಯ ಪ್ರೇರಿತವಾದ ಆಧುನಿಕ ವಿಮರ್ಶೆಯ ಅನುಸಂಧಾನಗಳನ್ನು ಉತ್ತರಿಸಿ, 'ಶೂನ್ಯವಿಮರ್ಶೆ'ಯ ಪರಿಗಳನ್ನು ಮನಗಾಣಬೇಕು.. ನನ್ನ ದೃಷ್ಟಿಯಲ್ಲಿ ಶಿವಗಣಪ್ರಸಾದಿ ಮಹಾದೇವಯ್ಯ ಸಂಯೋಜಿಸಿದ 'ಶೂನ್ಯಸಂಪಾದನೆ'ಯು ಶೂನ್ಯವಿಮರ್ಶೆಯ ಉತ್ಕೃಷ್ಟ ಮಾದರಿಯಾಗಿದೆ. ಅಲ್ಲಮನ 'ಮುಖೋದ್ಗತ'ವೆನ್ನಬಹುದಾದ ನಿಃಶಬ್ದ ವಚನಗಳು, ಶಿವಗಣಪ್ರಸಾದಿ ಮಹಾದೇವಯ್ಯನ 'ಹೃದ್ಗತ' ವಾದ್ದರಿಂದಲೇ 'ಶೂನ್ಯ ಸಂಪಾದನೆ'ಯು ಹುಟ್ಟಿದೆ. ಇದೇ ಶೂನ್ಯವಿಮರ್ಶೆ. ಇದಕ್ಕೆ ಯಾವ ಟೀಕುಗಳು, ವ್ಯಾಖ್ಯಾನಗಳು, ವಿಮರ್ಶೆಯ ಅನುಸಂಧಾನಗಳು ಬೇಕೆನಿಸುವುದಿಲ್ಲ.

ಮುಖೋದ್ಗತ ಪಠ್ಯಗಳು ಸಂಸ್ಕೃತಿಯ ಮಹಾಪ್ರಸ್ಥಾನದಲ್ಲಿ ಅಸಂಖ್ಯಾತ ಹೃದ್ಗತ ಪಠ್ಯಗಳಾಗುವ ಪ್ರಕ್ರಿಯೆ ಇಲ್ಲಿ ಗಮನಾರ್ಹ! ಇದನ್ನು 'ಸೂರ್ಯ–ಬಿಂಬ ನ್ಯಾಯ' ಎನ್ನಬಹುದು. ಸೂರ್ಯನು ಜಲ ತುಂಬಿದ ಎಲ್ಲ ಕುಂಭಗಳಲೂ 'ಬಿಂಬ'ವಾಗುವಂತೆಯೇ ಶಬ್ದ ಜ್ಞಾನದ ಪಠ್ಯಗಳು ಸಹೃದಯರ ಮಾನಸದಲ್ಲಿ ಬಿಂಬ ಜ್ಞಾನದ ಪಠ್ಯಗಳಾಗಿ ಪರಿವರ್ತನೆಗೊಳ್ಳಬೇಕು. ಇದೇ ಶೂನ್ಯ ವಿಮರ್ಶೆ. ಎಷ್ಟೋವೇಳೆ, ಟೀಕುಗಳು–ವ್ಯಾಖ್ಯಾನಗಳು–ವಿಮರ್ಶೆಯ ಅನುಸಂಧಾನಗಳು ಡಾಂಭಿಕಭಕ್ತಿಯಂತೆ ಪ್ರದರ್ಶನರತಿಯಾಗಿ ಬಿಡುವುದುಂಟು:

> ಬರು ಸಟೆಗನ ಭಕ್ತಿ ದಿಟವೆಂದು ನಚ್ಚಲು
> ಬೇಡ
> ಮಠದೊಳಗಣ ಬೆಕ್ಕು ಇಲಿಯ ಕಂಡು
> ಪುಟನೆಗೆದಂತಾಯಿತ್ತು ಕಾಣು ರಾಮನಾಥ

ಈ ವಚನವನ್ನು 'ಕವಿಮೂಷಿಕ' ಮತ್ತು 'ವಿಮರ್ಶಕ ಮಾರ್ಜಾಲ' ಎಂಬಂತೆಯೂ ಮನಗಾಣಬಹುದು. ತೆಲುಗಿನಲ್ಲಿ 'ಕವಿಮೂಷಿಕ ಮಾರ್ಜಾಲಮು'– ಎಂಬ ಕೃತಿಯಿದೆಯೆಂದು ಓದಿದ್ದೇನೆ. ಬೆಕ್ಕು ಮತ್ತು ಇಲಿಗಳ ತಂತ್ರ – ಪ್ರತಿ ತಂತ್ರಗಳೇನಾದರೂ ಇರಲಿ! ಬೆಕ್ಕು ಹೊಗಲಾಗದ ಬಿಲದ ಮಂತ್ರಗಳು ಇಲಿಗೆ ಸಹಜವೆಂಬುದನ್ನು ಮರೆಯಬಾರದು. ನನ್ನ ಮಾತುಗಳ ಸಾರಾಂಶವಿಷ್ಟೆ: ಅತ್ಯಾಧುನಿಕವಾದ ಅಂತರ್‌ಶಿಸ್ತೀಯ ಅಧ್ಯಯನಗಳು ಮತ್ತು ವಿವಿಧ ಜ್ಞಾನಶಾಖೆಗಳಿಂದ ಲಭ್ಯವಾಗುವ ಅನುಸಂಧಾನಗಳಿಂದ ನಿರ್ಮಾಣಗೊಳ್ಳುವ ವಿಮರ್ಶೆಯ ಬೃಹತ್ ಸಂಕೀರ್ಣಗಳು ಮತ್ತು ಬೃಹತ್ ಜ್ಞಾನಗೋಪುರಗಳನ್ನು ಸೆಪ್ಟೆಂಬರ್ ಹನ್ನೊಂದರ ಘಟನೆಯಂತೆ ಹೊಡೆದುರುಳಿಸುವ ಶಕ್ತಿ ಅಲ್ಲಮನ ನಿಃಶಬ್ದ ವಚನಗಳಿಗೆ ಇದೆ. ಅಲ್ಲಮನು ಎಲ್ಲಿದ್ದಾನೆ? ಎಂಬ ಪ್ರಶ್ನೆಗೆ ಅಲ್ಲಮ! ಇಲ್ಲಮ! ಎಂದು ಉತ್ತರಿಸಬಹುದಾದರೂ, ಕಡೆಗೆ ಎಲ್ಲಮ? ಎಂಬ ಪ್ರಶ್ನೆಯೇ ಉಳಿಯುವುದು. □

ಮುಖೋದ್ಗತ ಪಠ್ಯಗಳು ಸಂಸ್ಕೃತಿಯ ಮಹಾಪ್ರಸ್ಥಾನದಲ್ಲಿ ಅಸಂಖ್ಯಾತ ಹೃದ್ಗತ ಪಠ್ಯಗಳಾಗುವ ಪ್ರಕ್ರಿಯೆ ಇಲ್ಲಿ ಗಮನಾರ್ಹ! ಇದನ್ನು 'ಸೂರ್ಯ–ಬಿಂಬ ನ್ಯಾಯ' ಎನ್ನಬಹುದು. ಸೂರ್ಯನು ಜಲ ತುಂಬಿದ ಎಲ್ಲ ಕುಂಭಗಳಲ್ಲೂ 'ಬಿಂಬ'ವಾಗುವಂತೆಯೇ ಶಬ್ದ ಜ್ಞಾನದ ಪಠ್ಯಗಳು ಸಹೃದಯರ ಮಾನಸದಲ್ಲಿ ಬಿಂಬ ಜ್ಞಾನದ ಪಠ್ಯಗಳಾಗಿ ಪರಿವರ್ತನೆಗೊಳ್ಳಬೇಕು. ಇದೇ ಶೂನ್ಯ ವಿಮರ್ಶೆ. ಎಷ್ಟೋವೇಳೆ, ಟೀಕುಗಳು–ವ್ಯಾಖ್ಯಾನ ಗಳು–ವಿಮರ್ಶೆಯ ಅನುಸಂಧಾನಗಳು ಡಾಂಭಿಕಭಕ್ತಿಯಂತೆ ಪ್ರದರ್ಶನರತಿಯಾಗಿ ಬಿಡುವುದುಂಟು



ಸುಟ್ಟು ಬಿಟ್ಟರು ಅವನ
ಪ್ರಜ್ಞಾ ಮೂಲ ನೆರಳ
ಬೆಂಕಿಕಾರುವ ಕೊರಳ

ಕೊಳಕಾಗಿ ಕೌರ್ಯ
ವಿಷವಾಯಿತು ಸನ್ನಿ
ಪ್ರಭುತ್ವ ವಾಡೆಯಲಿ
ಬೆಂಕಿ ಬಡತನ
ರಕ್ತ ರಂಗೋಲಿಗಳು
ಕಾವ್ಯವಾಗಿ ಬಿದ್ದಿತು ಬೀದಿಗೆ!

ನುಂಗಿತ್ತು ಬಯಲು
ಹಸಿದ ಜನರನು
ಬಸಿದ ಬೆವರನು
ನದಿಯಾಗಿ ರಕ್ತ
ಬರೆಸಿತ್ತು ಫ್ಯಾಕ್ಟರಿಗಳ ಉಸಿರು
ನೆರೂದನ ಕವಿತೆಯಾಗಿ!

ರೋಸಿದ ರಕ್ಕಸ ರೌದ್ರತೆಗೆ
ಅರಸಿ ಬೆಳಕ
ಬರ್ಬರದ ಭವದಿಂದ...!

ಸುಟ್ಟುಕೊಂಡೇ ಹೋದ
ಅವರ ಉರಿಗಣ್ಣೀಗೆ
ಅಕ್ಷರ ಚರಿತ್ರೆಗೆ ತಲೆಕೊಟ್ಟು!

○ ಟಿ.ಎಸ್. ರಾಜೇಂದ್ರ ಪ್ರಸಾದ್

ಜಾಗತೀಕರಣ ಯುಗದಲ್ಲಿ ಭಾರತ

ಜಗತ್ತಿನ ತೃತೀಯ ರಾಷ್ಟ್ರಗಳನ್ನು ಆಧುನಿಕವಾಗಿ ಶೋಷಿಸಲು ವಿಶ್ವ ವ್ಯಾಪಾರ ಸಂಸ್ಥೆ (ಡಬ್ಲ್ಯೂ ಟಿ. ಓ) ರೂಪಿಸಿರುವ ನೀತಿ ನಿಯಮಾವಳಿಗಳಿಗೆ ಸ್ವಯಂಪ್ರೇರಿತವಾಗಿ ತಾಳ್ಮೆ ವಹಿಸಿ ಸಹಿ ಹಾಕುವ ಬದಲು ಅಮೆರಿಕಾ ಮತ್ತು ಐಎಂಎಫ್‌ಗಳ ಒತ್ತಡಕ್ಕೊಳಗಾಗಿ ಡಬ್ಲ್ಯೂ.ಟಿ.ಓದ ಸದಸ್ಯ ರಾಷ್ಟ್ರವಾಗಿದ್ದರಿಂದ ಭಾರತೀಯ ಜನತೆ ಕಳೆದೊಂದು ದಶಕದಲ್ಲಿ ನರಕಯಾತನೆ ಅನುಭವಿಸಿದೆ. 1980ರ ದಶಕದಲ್ಲಿ ಅಮೆರಿಕಾವು ತನ್ನ ಬಜೆಟ್ಟಿನ ವಿತ್ತೀಯ ಕೊರತೆಯನ್ನು ಸರಿದೂಗಿಸಲು, ವಿದೇಶಿ ಬಂಡವಾಳವನ್ನು ಆಕರ್ಷಿಸತೊಡಗಿ, ಬಡ್ಡಿ ದರವನ್ನು ಹಿಗ್ಗಾ ಮುಗ್ಗಾ ಹೆಚ್ಚಿಸಿತು. ಇದರಿಂದಾಗಿ ಜಿ–7 ರಾಷ್ಟ್ರಗಳ ಬ್ಯಾಂಕುಗಳು ಮತ್ತು ಇತರೆ ಹಣಕಾಸು ಸಂಸ್ಥೆಗಳಿಗೆ ತೃತೀಯ ರಾಷ್ಟ್ರಗಳು ತಮ್ಮ ಸಾಲದ ಮೇಲೆ ಹೆಚ್ಚಿನ ಬಡ್ಡಿ ತರುವ ಸನ್ನಿವೇಶ ಸೃಷ್ಟಿಯಾಗಿ ನವ – ಉದಾರೀಕರಣ ಯುಗದ ಪ್ರಧಾನ ಸಾಲ ಬಿಕ್ಕಟ್ಟಿಗೆ ಕಾರಣವಾಯಿತು. ಈ ಸಾಲದ ಬಲೆಗೆ ತೃತೀಯ ರಾಷ್ಟ್ರಗಳನ್ನು ಸಿಲುಕಿಸಲು ಬಂಡವಾಳಶಾಹಿಯ ಏಜೆಂಟ್ ಆದ ಐಎಂಎಫ್ ಮೂಲ ರಚನಾ ಹೊಂದಾಣಿಕೆ ಕಾರ್ಯಕ್ರಮಗಳನ್ನು ಪೂರ್ವಯೋಜಿತವಾಗಿ, ಬಲವಂತವಾಗಿ ಸಾಲ ಕೋರಿ ಬರುವ ರಾಷ್ಟ್ರಗಳ ಮೇಲೆ ಹೇರಿತು.

ಸಾಲ ಮಾರುಕಟ್ಟೆಯ ಮೇಲಿನ ಬಿಗಿಹಿಡಿತ ಮತ್ತು ಅದೇ ವೇಳೆ ಆಂತರಿಕ ಬೇಡಿಕೆಯನ್ನು ಕುಗ್ಗಿಸುವ ನೀತಿಗಳು ಸಣ್ಣ ವ್ಯಾಪಾರಗಾರರು, ರೈತರು ಮತ್ತು ಅಧಿಕ ಜನರನ್ನು ಔಪಚಾರಿಕ ಸಾಲ ವ್ಯವಸ್ಥೆಯಿಂದ ಹೊರಗಿಟ್ಟವು. ಈ ರೀತಿ ಪ್ರತ್ಯೇಕಿಸಲ್ಪಟ್ಟ ಬಹುಸಂಖ್ಯಾತ ಕೆಳಸ್ತರದ ಜನರು ಲೇವಾದೇವಿಗಾರರ ಮತ್ತು ಇತರ ಹಣಕಾಸು ಏಜೆನ್ಸಿಗಳ ಹೆಚ್ಚಿನ ಬಡ್ಡಿದರದ ಸಾಲದ ಶೂಲಕ್ಕೆ ಸಿಕ್ಕು ನರಳುವಂತಾಯಿತು. (ಬಗ್ಚಿ, 1999; 2000/2002; 2004). ನಮ್ಮ ದೇಶದ ತೆರಿಗೆ ಸಂಗ್ರಹ ನೀತಿ ಹೇಗಿದೆ ಯೆಂದರೆ ರೂ. 1.5 ಲಕ್ಷ ಆದಾಯವಿರುವ ವ್ಯಕ್ತಿಯಷ್ಟೇ ತೆರಿಗೆ ದರವನ್ನು ರೂ. 15 ಕೋಟಿ ಆದಾಯವಿರುವ ವ್ಯಕ್ತಿಯೂ ಕಟ್ಟುತ್ತಾನೆ.

ಆರ್ಥಿಕತೆ ಮತ್ತು ಉದ್ಯೋಗ

ತೊಂಬತ್ತರ ದಶಕದಲ್ಲಿ ಹಿಂದಿನ ದಶಕಕ್ಕಿಂತ ಹೆಚ್ಚಿನ ಆರ್ಥಿಕ ಅಭಿವೃದ್ಧಿ ದರ ಕಂಡುಬಂದರೂ ನಿರುದ್ಯೋಗ ನಿವಾರಣೆಗೆ ಏನೇನೂ ಸಹಾಯಕವಾಗಿಲ್ಲ. ಉತ್ಪಾದನಾ ಕ್ಷೇತ್ರದಲ್ಲಿ ಅಭಿವೃದ್ಧಿಯಾಗಿದ್ದರೂ, ಉದ್ಯೋಗ ಸೃಷ್ಟಿಯ ದರ ಕಾರ್ಮಿಕ-ಬಲದ ಬೆಳವಣಿಗೆ ದರಕ್ಕಿಂತ ಹೆಚ್ಚಿದ್ದರೆ ಮಾತ್ರ ನಿರುದ್ಯೋಗ ಸಮಸ್ಯೆ ನಿವಾರಣೆಯಾಗುತ್ತದೆ. ತೊಂಭತ್ತರ ದಶಕದಲ್ಲಿ ನಿರುದ್ಯೋಗ ದರ ಮತ್ತಷ್ಟು ಉಲ್ಬಣಗೊಂಡಿದೆ. ಚೀನಾ ತಾನೇ ಉದ್ಗರಿಸಿರುವಂತೆ ಅದರ ಆರ್ಥಿಕ ಬೆಳವಣಿಗೆ ದರ ಶೀಘ್ರಗತಿಯಲ್ಲಿ ಬೆಳೆದಿದ್ದರೂ ಅದೇ ಗತಿಯಲ್ಲಿ ಉದ್ಯೋಗ ಬೆಳವಣಿಗೆ ದರ ಹೆಚ್ಚಿಲ್ಲ.

ಔದ್ಯಮಿಕ ಕ್ಷೇತ್ರ

ದೊಡ್ಡ ಉದ್ಯಮಗಳು ಅಂತರರಾಷ್ಟ್ರೀಯ ಸ್ಪರ್ಧೆಯನ್ನು ಎದುರಿಸುವಲ್ಲಿ ಯಶಸ್ವಿಯಾಗಿದ್ದರೂ ಸಹ ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳು ಕಡಿಮೆ ಬೆಲೆಯ, ಆದರೆ ಅತ್ಯುತ್ತಮ ಗುಣಮಟ್ಟದ ಆಮದಾದ, ಉತ್ಪನ್ನಗಳ ಸವಾಲೆದುರಿಸಲು ಆಗದೆ ಶೇ. 50ಕ್ಕೂ ಹೆಚ್ಚು ಕೈಗಾರಿಕಾ ಘಟಕಗಳು ವಿನಾಶ ಹೊಂದಿವೆ.

ವಿಶ್ವ ಬಂಡವಾಳವು ಯಾವುದೇ ಅಡೆತಡೆಯಿಲ್ಲದೆ, ಈಗಿರುವ ಹತ್ತಾರು ತೆರಿಗೆಗಳ ತೊಡಕಿಲ್ಲದೆ ಹರಿದಾಡಲು ವಿಶ್ವ ಬ್ಯಾಂಕ್ ಮತ್ತು ಐ.ಎಂ.ಎಫ್‌ನ ಕನಸಿನ ಕೂಸಾದ ಮೌಲ್ಯವರ್ಧಿತ ತೆರಿಗೆ

ಕೋಷ್ಟಕ 1

ಗ್ರಾಮೀಣ ಭಾರತದಲ್ಲಿ ಬೇಳೆಕಾಳುಗಳ ತಲಾ ಬಳಕೆ (ಕೆಜಿ/ತಿಂಗಳು)

ಜನರ ಸ್ತರ	1987–88	1993–94	1999–2000
ಶೇ. 30 ಕ್ಕಿಂತ ಕೆಳಸ್ತರ	12.27	11.76	11.44
ಮಧ್ಯಮ ಸ್ತರ ಶೇ. 40	14.56	13.61	12.95
ಮೇಲ್ ಸ್ತರ ಶೇ. 30	16.55	14.77	13.69
ಒಟ್ಟಾರೆ	14.47	13.40	12.72

ವಿಶ್ಲೇಷಣೆ

ವಿಶ್ವ ವ್ಯಾಪಾರ ಸಂಸ್ಥೆ ರೂಪಿಸಿರುವ ನೀತಿ ನಿಯಮಾವಳಿಗಳಿಗೆ ಸಹಿ ಹಾಕುವ ಬದಲು, ಭಾರತ ಅಮೆರಿಕಾ ಮತ್ತು ಐಎಂಎಫ್ ಗಳ ಒತ್ತಡಕ್ಕೊಳಗಾಗಿ ಡಬ್ಲ್ಯೂ.ಟಿ.ಓ ದ ಸದಸ್ಯ ರಾಷ್ಟ್ರವಾಗಿದ್ದರಿಂದ ಭಾರತೀಯ ಜನತೆ ಕಳೆದೊಂದು ದಶಕದಲ್ಲಿ ನರಕಯಾತನೆ ಅನುಭವಿಸಿದೆ. ವಿಶ್ವ ಬಂಡವಾಳವು ಯಾವುದೇ ಅಡೆತಡೆಯಿಲ್ಲದೆ, ಈಗಿರುವ ಹತ್ತಾರು ತೆರಿಗೆಗಳ ತೊಡಕಿಲ್ಲದೆ ಹರಿದಾಡಲು ವಿಶ್ವ ಬ್ಯಾಂಕ್ ಮತ್ತು ಐ.ಎಂ.ಎಫ್‌ನ ಕನಸಿನ ಕೂಸಾದ ಮೌಲ್ಯವರ್ಧಿತ ತೆರಿಗೆ (ವ್ಯಾಟ್)ಯನ್ನು ಜಾರಿ ಮಾಡಲಾಗಿದೆ. ಇದರಿಂದ ಸ್ವಲ್ಪಮಟ್ಟಿಗೆ ತೆರಿಗೆ ಸೋರಿಕೆಯನ್ನು ತಡೆಗಟ್ಟಬಹುದಾದರೂ ಬಹುಮಟ್ಟಿಗೆ ರಾಜ್ಯಗಳು ತೆರಿಗೆ ಸಂಗ್ರಹ ಸ್ವಾತಂತ್ರ್ಯವನ್ನು ಕಳೆದುಕೊಂಡು ಕೇಂದ್ರದ ಮೇಲೆ ಅವಲಂಬಿತವಾಗುತ್ತವೆ.

○ ಜಯ

(ವ್ಯಾಟ್)ಯನ್ನು ಜಾರಿ ಮಾಡಲಾಗಿದೆ. ಇದರಿಂದ ಸ್ವಲ್ಪಮಟ್ಟಿಗೆ ತೆರಿಗೆ ಸೋರಿಕೆಯನ್ನು ತಡೆಗಟ್ಟಬಹುದಾದರೂ ಬಹುಮಟ್ಟಿಗೆ ರಾಜ್ಯಗಳು ತೆರಿಗೆ ಸಂಗ್ರಹ ಸ್ವಾತಂತ್ರ್ಯವನ್ನು ಕಳೆದುಕೊಂಡು ಕೇಂದ್ರದ ಮೇಲೆ ಅವಲಂಬಿತವಾಗುತ್ತವೆ.

ರೈತರ ಸ್ಥಿತಿ

ಗ್ರಾಮೀಣ ಅಭಿವೃದ್ಧಿ ವೆಚ್ಚ ಶೇ. ಜಿ.ಡಿ.ಪಿಯಲ್ಲಿ 7ನೇ ಯೋಜನಾವಧಿಯಲ್ಲಿ ಶೇ. 14.5 ರಷ್ಟಿದ್ದದ್ದು, 2000-01ರ ಹೊತ್ತಿಗೆ ಶೇ.6ಕ್ಕಿಂತ ಕಡಿಮೆಯಾಗಿದೆ. ಆರ್ಥಿಕ ಸುಧಾರಣೆಯ ಹೆಸರಿನಲ್ಲಿ ಸಹಾಯಧನ ಕಡಿಮೆಯಾಗಿದ್ದರಿಂದ ಕೃಷಿ ಪರಿಕರಗಳಾದ ರಾಸಾಯನಿಕ ಗೊಬ್ಬರಗಳು, ಕೃಷಿ ಸಾಮಗ್ರಿಗಳು, ಬೀಜ ಬೆಲೆ ಎಲ್ಲವೂ ಹೆಚ್ಚಾಗಿದ್ದಲ್ಲದೆ ಸರ್ಕಾರದಿಂದ ಅವಶ್ಯ ಸಾಲ ಸೌಲಭ್ಯ ಸಿಗದಿದ್ದರಿಂದ ಲೇವಾದೇವಿಗಾರರ ಹೆಚ್ಚಿನ ಬಡ್ಡಿಯ ದರದಿಂದಾಗಿ ಬಹುಸಂಖ್ಯಾತ ರೈತರು ದಿವಾಳಿಯೆದ್ದರು. ಇದರಿಂದ ಕೊಳ್ಳುವ ಸಾಮರ್ಥ್ಯ ತಗ್ಗಿ ಗ್ರಾಮೀಣ ಭಾರತದ ಪ್ರದೇಶಗಳಲ್ಲಿ 6 ವರ್ಷಗಳ ಹಿಂದೆ 175 ಕೆ.ಜಿ. ವಾರ್ಷಿಕ ತಲಾ ಆಹಾರ ಧಾನ್ಯ ಕೊಳ್ಳುವಿಕೆ ಇದ್ದದ್ದು ಬರೇ 155 ಕೆ.ಜಿ.ಗೆ ಇಳಿದಿರುವುದು ಆಳುವ ವರ್ಗಗಳು 'ಸಮೃದ್ಧ, ಸ್ವಾವಲಂಬಿ ಭಾರತ, ಎಂದು ಬಡಾಯಿ ಕೊಚ್ಚಿಕೊಳ್ಳುವುದಕ್ಕೆ ಕನ್ನಡಿ ಹಿಡಿಯುತ್ತವೆ. ಕಳೆದೊಂದು ದಶಕದಲ್ಲಿ 5 ಸಾವಿರಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಕಾಣೆಯಾಗಿರುವ ಮಿಲಿಯನ್ ಟನ್‌ಗಟ್ಟಲೆ ಆಹಾರಧಾನ್ಯದ ರಹಸ್ಯ

ಎನ್.ಡಿ.ಎ ಸರ್ಕಾರದ ಸಮಯದಲ್ಲಿ ಜುಲೈ 2002ರ ವೇಳೆಗೆ 60 ಮಿಲಿಯನ್ ಟನ್‌ಗಳು ಬೆಟ್ಟದಷ್ಟು

ಕೋಷ್ಟಕ 2

ಗ್ರಾಮೀಣ ಭಾರತದಲ್ಲಿ ದೈನಂದಿನ ತಲಾ ಕ್ಯಾಲೊರಿ ಬಳಕೆ			
ಜನರ ಸ್ತರ	1987-88	1993-94	1999-00
ಕೆಳಸ್ತರ ಶೇ.30	1620	1678	1696
ಮಧ್ಯಮ ಶೇ.40	2144	2119	2116
ಮೇಲ್‌ಸ್ತರ ಶೇ.30	2929	2672	2640
ಒಟ್ಟಾರೆ	2222	2152	2149

ಮೂಲ:ಎಸ್.ಮಹೇಂದ್ರ ದೇವ್, ಸಿ.ರವಿ, ಬೃಂದಾ ವಿಶ್ವನಾಥನ್, ಎ.ಗುಲಟಿ ಮತ್ತು ಎಸ್.ಬಾಲಚಂದರ್ (2004) ಎಕಾನಾಮಿಕ್ ಲಿಬರಲೈಜೇಷನ್.

ಸ್ಟಾಕ್‌ವುಳಿದದ್ದು, ಕೊಳ್ಳುವ ಸಾಮರ್ಥ್ಯ ಕುಗ್ಗಿದ್ದರಿಂದ. ಇದೇ ಸಮಯದಲ್ಲಿ ಜುಲೈ 2002 ಮತ್ತು ನವೆಂಬರ್ 2003ರ ನಡುವೆ 17 ಮಿಲಿಯನ್ ಟನ್ ಆಹಾರ ಧಾನ್ಯವನ್ನು ರಫ್ತು ಮಾಡಲಾಗಿದೆ. ಕೂಲಿಗಾಗಿ ಕಾಳುನಂಥ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಗೊಳಿಸಿಲ್ಲದ್ದರಿಂದ ಒಂದು ಕಡೆ ಹಸಿವಿನಿಂದ ತತ್ತರಿಸುತ್ತಿದ್ದರೂ ಇನ್ನೊಂದೆಡೆ ಆಹಾರ ಧಾನ್ಯವನ್ನು ರಫ್ತು ಮಾಡಲಾಗುತ್ತಿತ್ತು. (ಉತ್ಸಾ ಪಟ್ನಾಯಕ್, 2004).

ಹಸಿವಿನ ಸಮಸ್ಯೆ

ರಾಷ್ಟ್ರೀಯ ಕೌಟುಂಬಿಕ ಆರೋಗ್ಯ ಸಮೀಕ್ಷೆ 1998-99ರ ಪ್ರಕಾರ ಶೇ. 47 ರಷ್ಟು ಮೂರು ವರ್ಷಕ್ಕೂ ಕಡಿಮೆ ವಯಸ್ಸಿನ ಮಕ್ಕಳು ತೂಕ: ವಯಸ್ಸಿನ ಆಧಾರದ ಮೇಲೆ ಆಹಾರ ಕೊರತೆಯಿಂದ ಬಳಲುತ್ತಿದ್ದಾರೆ. 1993-94ಕ್ಕಿಂತ ಕಡಿಮೆ ಮಟ್ಟದ ದೈಹಿಕ ತೂಕ ಸೂಚಿಯನ್ನು ಶೇ. 48.5 ರಷ್ಟು ಯುವಜನರು ಹೊಂದಿದ್ದರೆಂದು ರಾಷ್ಟ್ರೀಯ ಪೋಷಣಾ ಮಾನಿಟರಿಂಗ್ ಬ್ಯೂರೋವಿನ ಅಂಕಿ ಅಂಶ ತಿಳಿಸುತ್ತದೆ. ಗ್ರಾಮೀಣ ಭಾರತದಲ್ಲಿ,

ಎನ್.ಡಿ.ಎ ಸರ್ಕಾರದ ಸಮಯದಲ್ಲಿ ಜುಲೈ 2002ರ ವೇಳೆಗೆ 60 ಮಿಲಿಯನ್ ಟನ್‌ಗಳು ಬೆಟ್ಟದಷ್ಟು ಸ್ಟಾಕ್‌ವುಳಿದದ್ದು, ಕೊಳ್ಳುವ ಸಾಮರ್ಥ್ಯ ಕುಗ್ಗಿದ್ದರಿಂದ. ಇದೇ ಸಮಯದಲ್ಲಿ ಜುಲೈ 2002 ಮತ್ತು ನವೆಂಬರ್ 2003ರ ನಡುವೆ 17 ಮಿಲಿಯನ್ ಟನ್ ಆಹಾರ ಧಾನ್ಯವನ್ನು ರಫ್ತು ಮಾಡಲಾಗಿದೆ. ಕೂಲಿಗಾಗಿ ಕಾಳುವಿನಂಥ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಗೊಳಿಸಿಲ್ಲದ್ದರಿಂದ ಒಂದು ಕಡೆ ಹಸಿವಿನಿಂದ ತತ್ತರಿಸುತ್ತಿದ್ದರೂ ಇನ್ನೊಂದೆಡೆ ಆಹಾರ ಧಾನ್ಯವನ್ನು ರಫ್ತು ಮಾಡಲಾಗುತ್ತಿತ್ತು.

ಸರಾಸರಿ ತಲಾ ದಿನವೊಂದಕ್ಕೆ 2,266 ಕಿಲೋ ಕ್ಯಾಲರಿಯು 1972 – 73ರಲ್ಲಿದ್ದರೆ, 1993-94ರಲ್ಲಿ 2,183 ಮತ್ತು 1999-2000ರ ಹೊತ್ತಿಗೆ 2,149ಕ್ಕೆ ಇಳಿದಿದೆ. ಕೆಳಸ್ತರದ ಶೇ. 30ರಷ್ಟು ಕುಟುಂಬಗಳ ಗ್ರಾಹಕ ವೆಚ್ಚವನ್ನು ಅವಲೋಕಿಸಿದರೆ ತಲಾ 1989ರಲ್ಲಿ 1,830 ಕಿಲೋ ಕ್ಯಾಲೊರಿಯಿದ್ದದ್ದು 1998ರಲ್ಲಿ ಕೇವಲ 1,600 ಕಿ. ಕ್ಯಾ. ಗೆ ಇಳಿದಿದೆ. ಪ್ರಪಂಚದ ಶೇ. 29 ರಷ್ಟು ಹಸಿವಿನಿಂದ ಬಳಲುತ್ತಿರುವವರು ಭಾರತದಲ್ಲಿಯೇ ಇದ್ದಾರೆ. ಇದರ ಜೊತೆಗೆ, 1960 ಮತ್ತು 1970ರ ತಂತ್ರಜ್ಞಾನ ಬದಲಾವಣೆಯ ದಶಕದಿಂದೀಚೆಗೆ ಪ್ರಪ್ರಥಮ ಬಾರಿಗೆ 1990ರ ದಶಕದಲ್ಲಿ ಭಾರತದಲ್ಲಿ ಬೇಳೆಕಾಳುಗಳ ಉತ್ಪಾದನಾ ಬೆಳವಣಿಗೆ ದರವು ಜನಸಂಖ್ಯಾ ಬೆಳವಣಿಗೆ ದರಕ್ಕಿಂತ ಕಡಿಮೆಯಾಗಿರುವುದು ಆತಂಕಕಾರಿಯಾದ ವಿಷಯ.

ಆಹಾರ ಅಭದ್ರತೆಯನ್ನು ಕರಾರುವಾಕ್ಕಾಗಿ ಅಳೆಯಬೇಕಿದ್ದು, ಬಡತನ ರೇಖೆಯ ಜನಸಂಖ್ಯೆಯನ್ನು ನಾವೇನಾದರೂ ಚೀನಾ ಮಾದರಿಯಂತೆ ಅನುಸರಿಸಿದರೆ ಗ್ರಾಮೀಣ ಜನತೆಯ ಶೇ.80ರಷ್ಟು ಬಡತನ ರೇಖೆಗಿಂತ ಕೆಳಸ್ತರದಲ್ಲಿ ಬರುತ್ತಾರೆ. ಅದೇ ಅಮೆರಿಕಾ ಮಾದರಿ ಅನುಸರಿಸಿದರೆ ಭಾರತದ ಶೇ. 95 ರಷ್ಟು ಜನರು ಆಹಾರ ಅಭದ್ರತೆ ಅನುಭವಿಸುತ್ತಿರುವರು. ಬಿಪಿಎಲ್ ಕಾರ್ಡ್‌ಗಳನ್ನು ಕಡಿಮೆ ಸಂಖ್ಯೆಯಲ್ಲಿ ಮಾತ್ರವೇ ವಿತರಿಸಿರುವುದರಿಂದ 1991ರಲ್ಲಿ 20.8 ಮಿಲಿಯನ್ ಟನ್ ಅಕ್ಕಿ ಮತ್ತು ಗೋಧಿಯನ್ನು ಪಡಿತರ ವಿತರಣಾ ವ್ಯವಸ್ಥೆ ಮುಖೇನ ವಿತರಿಸಲು ಸಾಧ್ಯವಾಗಿದ್ದರೆ 2000-01 ರಲ್ಲಿ ಕೇವಲ 11.7 ಮಿಲಿಯನ್ ಟನ್ ಮಾತ್ರ ವಿತರಣೆಯಾಗಿದೆ. (ಮಧುರಾ ಸ್ವಾಮಿನಾಥನ್, 2004) ಒಂದನೇ ಕೋಷ್ಟಕ ಆಹಾರ ವ್ಯಯದ ಮಾಹಿತಿ ನೀಡುತ್ತದೆ

ವ್ಯಾಪಾರ ಉದಾರೀಕರಣ ಮತ್ತು ವ್ಯವಸಾಯ

ವಿಶ್ವ ವ್ಯಾಪಾರ ಸಂಸ್ಥೆಯ ನಿಯಮಾವಳಿಗಳನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಹಿತಾಸಕ್ತಿಗೆ

ಕೋಷ್ಟಕ 3

ಗ್ರಾಮೀಣ ಉದ್ಯೋಗ ಬೆಳವಣಿಗೆ (ವರ್ಷಕ್ಕೆ ಶೇ.)	
ವರ್ಷ	ಶೇ.
1983-1987-88	1.36
1987-88 ರಿಂದ 1993-94	2.03
1993-94 ರಿಂದ 1999-2000	0.58

ತಕ್ಕಂತೆ ರೂಪಿಸಿರುವುದಕ್ಕೆ ಮತ್ತೊಂದು ಉದಾಹರಣೆಯೆಂದರೆ ಗೋಧಿ, ಅಕ್ಕಿ, ಜೋಳ ಮತ್ತು ಸೋಯಾಬೀನ್‌ನಂಥ ವಸ್ತುಗಳ ಮೇಲೆ ಅತ್ಯಧಿಕ ಸಹಾಯಧನವನ್ನು ಅಮೆರಿಕಾ ಮತ್ತು ಯುರೋಪ್ ರಾಷ್ಟ್ರಗಳು ನೀಡುತ್ತವಾದರೂ, ಅದೇ ರೀತಿಯ ಸಹಾಯಧನವನ್ನು ನೀಡಬಾರದೆಂದು ಮಲತಾಯಿ ಧೋರಣೆಯನುಸರಿಸಿ ತೃತೀಯ ರಾಷ್ಟ್ರಗಳ ಮೇಲೆ ಒತ್ತಡ ಹೇರುತ್ತವೆ. ಉದಾಹರಣೆಗೆ, 1995 ಮತ್ತು 2001ರ ನಡುವೆ ಅಕ್ಕಿಗೆ ಅಮೆರಿಕಾವು 12 ಮಿಲಿಯನ್ ಡಾಲರ್‌ನಿಂದ ಸಹಾಯಧನವನ್ನು 700 ಮಿಲಿಯನ್ ಡಾಲರ್‌ಗೆ ಏರಿಸಿದೆ. ಅದೇ ಅವಧಿಯಲ್ಲಿ ಸೋಯಾಬೀನ್‌ಗೆ 16 ಮಿಲಿಯನ್ ಡಾಲರ್‌ನಿಂದ 3.6 ಬಿಲಿಯನ್ ಡಾಲರ್‌ನಷ್ಟು ಏರಿಸಿದೆ.

ಭಾರತದಲ್ಲಿ ಬೇಳೆ ಕಾಳುಗಳ ಉತ್ಪಾದನಾ ದರವು ತ್ವರಿತಗತಿಯಲ್ಲಿ ಹೆಚ್ಚಾಗಬೇಕಿದ್ದು, 2002ರಲ್ಲಿ ಚೀನಾದ ಉತ್ಪಾದನೆಯು 130 ಕೋಟಿ ಜನಸಂಖ್ಯೆಗೆ 400 ಮಿಲಿಯನ್ ಟನ್‌ಯಿದ್ದರೆ, ಬಹುತೇಕ ಅಷ್ಟೇ ಜನಸಂಖ್ಯೆ ಹೊಂದಿರುವ ಭಾರತದ ಬೇಳೆ ಕಾಳುಗಳ ಉತ್ಪಾದನೆ ಚೀನಾದ ಅರ್ಧದಷ್ಟು ಮಾತ್ರವಿದೆ.

ಗ್ರಾಮೀಣ ಉದ್ಯೋಗ

1990ರ ದಶಕದಲ್ಲಿ ಗ್ರಾಮೀಣ ಭಾರತದ ಜನಸಂಖ್ಯೆ ಬೆಳವಣಿಗೆ ದರ ವರ್ಷಕ್ಕೆ ಶೇ. 1.7 ಇದ್ದರೆ, ಗ್ರಾಮೀಣೋದ್ಯೋಗ ಅವಕಾಶಗಳ (ಸ್ವ-ಉದ್ಯೋಗ, ಕೂಲಿಕಾರರು, ಪ್ರಧಾನ ಮತ್ತು ಉಪಕಸುಬುಗಳು, ಪೂರ್ಣಾವಧಿ ಅಥವಾ ಅರೆಕಾಲಿಕ - ಎಲ್ಲ ಸೇರಿ) ಬೆಳವಣಿಗೆ ದರ ವರ್ಷಕ್ಕೆ ಕೇವಲ ಶೇ. 0.58

ಕೋಷ್ಟಕ 4

ಬಜೆಟ್ 2004-05ರ ಹಣಕಾಸು ಹಂಚಿಕೆ	
ಕ್ಷೇತ್ರ	ರೂ. ಕೋಟಿಗಳಲ್ಲಿ
ರಕ್ಷಣೆ	66,000
ಸಹಾಯಧನ	45,175
ಹೆಚ್ಚುವರಿ ವೆಚ್ಚ	39,000
ಉದ್ಯೋಗ	5,100

ರಷ್ಟಿರುವುದು ದಿಗ್ಭ್ರಮೆ ಮೂಡಿಸುತ್ತದೆ.

ಕೋಷ್ಟಕ 3 ಗ್ರಾಮೀಣ ಉದ್ಯೋಗ ಬೆಳವಣಿಗೆ ದರ ಮತ್ತು ಕೋಷ್ಟಕ 4 ಬಜೆಟ್‌ನ ಮಾಹಿತಿ ನೀಡುತ್ತವೆ.

ಜಾಗತೀಕರಣ ಅವಕಾಶಗಳ ಬಾಗಿಲನ್ನು ತೆರೆಯುತ್ತದೆ ಎಂದು ಬೊಗಳೆ ಬಿಡುವವರಿಗೆ ಕುಂಠಿತವಾಗುತ್ತಿರುವ ಉದ್ಯೋಗಾವಕಾಶಗಳ ಅಂಕಿ ಅಂಶಗಳು ಕೋಳಿ ಮೊಟ್ಟೆಯಲ್ಲಿ ಮುಖಕ್ಕೆ ಹೊಡೆದಂತಿವೆ.

ಗ್ರಾಮೀಣ ಬ್ಯಾಂಕಿಂಗ್ ವ್ಯವಸ್ಥೆ

ಕೃಷಿ ಕ್ಷೇತ್ರದ ಭೀಕರ ಬಿಕ್ಕಟ್ಟಿಗೆ ಗ್ರಾಮೀಣ ಭಾರತದಲ್ಲಿ ಬ್ಯಾಂಕ್‌ಗಳು ಸಾಲ ವ್ಯವಸ್ಥೆಯನ್ನು ಬಹುತೇಕ ಕಡಿಮೆ ಮಾಡಿರುವುದೇ ಕಾರಣ. 1969ರಲ್ಲಿ 1443 ಶಾಖೆಗಳು ಗ್ರಾಮೀಣ ಭಾರತದಲ್ಲಿದ್ದರೆ, 1990ರ ಹೊತ್ತಿಗೆ 34,867 ಶಾಖೆಗಳಿದ್ದವು. ಮುಖ್ಯವಾಗಿ ಆ ಕಾಲಘಟ್ಟದಲ್ಲಿ ಕೃಷಿ, ಸಣ್ಣ ಕೈಗಾರಿಕೆಗಳು ಮತ್ತು ಕೆಲವು ಇತರೆ ಚಟುವಟಿಕೆಗಳನ್ನೊಳಗೊಂಡ ಆದ್ಯತಾ ಕ್ಷೇತ್ರಕ್ಕೆ ಕನಿಷ್ಠ ಶೇ. 40 ರಷ್ಟು ಸಾಲವೊದಗಿಸಬೇಕಾದ ಕರ್ತವ್ಯ ಗ್ರಾಮೀಣ ಬ್ಯಾಂಕುಗಳಿಗಿತ್ತು. ಆದ್ಯತಾ ಕ್ಷೇತ್ರದಲ್ಲಿ ಪ್ರಮುಖವಾಗಿ ಕೃಷಿ ಕ್ಷೇತ್ರಕ್ಕೆ ಕನಿಷ್ಠ ಶೇ. 18 ರಷ್ಟು ಸಾಲದ ವಿತರಣೆಯಿತ್ತು. ಆದರೆ 1990ರ ದಶಕದಲ್ಲಿ ಸಾಮಾಜಿಕ ಬ್ಯಾಂಕಿಂಗ್‌ನ ಗುಣದ ಹೊದಿಕೆಯನ್ನು ಡಬ್ಲ್ಯೂಟಿಒ ಸಂಪೂರ್ಣವಾಗಿ

ಕಿತ್ತೆಸೆದಿದೆ. 'ಸಾಮಾಜಿಕ ನ್ಯಾಯ', 'ಗ್ರಾಮೀಣಾಭಿವೃದ್ಧಿ' ಎಂಬೆಲ್ಲ ಪದಗಳು ಜಾಗತೀಕರಣದ ಸುಂಟರಗಾಳಿಗೆ ಸಿಕ್ಕು ಎತ್ತಲೋ ತೂರಿ ಹೋಗಿದ್ದು, ಬ್ಯಾಂಕುಗಳು ಜಾಗತಿಕ ಮಟ್ಟದಲ್ಲಿ ಸ್ಪರ್ಧಿಸಿ ತಾವು ಬದುಕುಳಿದರೆ ಸಾಕೆಂದು

ಕೋಷ್ಟಕ 5

ವರ್ಷ	ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜಿಡಿಪಿಯ ಶೇಕಡಾದಲ್ಲಿ ಶಿಕ್ಷಣಕ್ಕಾಗಿ ಒಟ್ಟಾರೆ ಮಾಡಿರುವ ವೆಚ್ಚ
1999-00	3.3
2000-01	3.1
2001-02	3.1
2002-03	3.1

ಆಧಾರ : ಆರ್ಥಿಕ ಸಮೀಕ್ಷೆ, 2002-03

ಲಾಭ-ನಷ್ಟದ ಲೆಕ್ಕಾಚಾರಗಳತ್ತ ಮಾತ್ರವೇ ಚಿಂತಿಸುತ್ತಿರುವುದು ಅಂಕಿ-ಅಂಶಗಳಿಂದ, ಭರ್ಜರಿಯಿಂದ ತಿವಿದಂತೆ ವ್ಯಕ್ತವಾಗುತ್ತದೆ. 1990 ಮತ್ತು 2002ರ ನಡುವೆ 1543 ಗ್ರಾಮೀಣ ವಾಣಿಜ್ಯ ಬ್ಯಾಂಕುಗಳ ಶಾಖೆಗಳು ಕಡಿಮೆಯಾಗಿವೆ. 1990ರಲ್ಲಿ ಶೇ. 14.2 ರಷ್ಟಿದ್ದ ಗ್ರಾಮೀಣ ಬ್ಯಾಂಕುಗಳ ಸಾಲ ವಿತರಣೆಯು 2002ರಲ್ಲಿ ಶೇ. 10.6 ರಷ್ಟಾಗಿದೆ. 1990ರ ದಶಕದಲ್ಲಿ ವಾಣಿಜ್ಯ ಬ್ಯಾಂಕುಗಳು ತಮ್ಮ ಆದ್ಯತಾ ಕ್ಷೇತ್ರದ ಗುರಿಯನ್ನು ಸಾಧಿಸುವಲ್ಲಿ ಸಂಪೂರ್ಣ ವಿಫಲವಾಗಿರುವುದಲ್ಲದೆ, ತಾವು ಸಾಲ ನೀಡಲು ಉಪಯೋಗಿಸಬೇಕಾದ ಹಣವನ್ನು ಹೆಚ್ಚು ಬಡ್ಡಿಯ ದರ ಸಿಗುವಂತಹ ಬಾಂಡ್‌ಗಳ ಮೇಲೆ ವಿನಿಯೋಗಿಸಿದ್ದು ಸಾಮಾಜಿಕ ಕಳಕಳಿಯನ್ನು ಕಳೆದುಕೊಳ್ಳುತ್ತಿರುವುದೇ ಆಗಿದೆ. ವಿದೇಶಿ ಬ್ಯಾಂಕುಗಳು ರಫ್ತು ಮಾಡಲೋಸುಗ ನೀಡುವ ಸಾಲವನ್ನು ಆದ್ಯತಾ ಕ್ಷೇತ್ರವೆಂದು ಪರಿಗಣಿಸುವಂತಹ ನೀತಿಯನ್ನು ಸರ್ಕಾರ ಅನುಸರಿಸುತ್ತಿದೆ. ಕೃಷಿ ಕ್ಷೇತ್ರದ ಆದ್ಯತೆಗೆ ವಿದೇಶಿ ಬ್ಯಾಂಕುಗಳು ಕೇವಲ ಶೇ. 4.9 (ಅವುಗಳ ಒಟ್ಟಾರೆ ಸಾಲ ಹಂಚಿಕೆಯಲ್ಲಿ)ನ್ನು ವಿತರಿಸಿವೆ.

ಆರ್ಥಿಕ ಸುಧಾರಣೆಯ ಅಂಗವಾಗಿ, ರಾಷ್ಟ್ರೀಕೃತ ಬ್ಯಾಂಕುಗಳು ತಮ್ಮ ಕಾರ್ಯ ನಿರ್ವಹಿಸದ ಹಣವನ್ನು (ಎನ್ ಪಿ ಎ) ಕಡಿಮೆ ಮಾಡಿಕೊಳ್ಳಬೇಕೆಂಬ ಒತ್ತಡವಿದ್ದು, 2002-03ರ ಆರ್.ಬಿ.ಐ ಅಂಕಿ ಅಂಶದ ಪ್ರಕಾರ ಕೃಷಿ ಸಾಲದ ಎನ್‌ಪಿಎ ಕೇವಲ ಶೇ. 13.2 ರಷ್ಟಿದ್ದು, ದೊಡ್ಡ ಮತ್ತು ಮಧ್ಯಮ ಕೈಗಾರಿಕೆಗಳ ಎನ್‌ಪಿಎ ಶೇ.40ಕ್ಕಿಂತಲೂ ಬಹಳವಿದೆ. ಹೀಗಿದ್ದರೂ ಗ್ರಾಮೀಣ ಸಾಲಗಾರರೊಡನೆ ಬ್ಯಾಂಕುಗಳು ಲೇವಾದೇವಿಗಾರರಂತೆ ವರ್ತಿಸುತ್ತವೆ. 180 ದಿನಗಳಿಗಿಂತಲೂ ಹೆಚ್ಚು ಕಾಲ ಪಾವತಿಯಾಗದ ಸಾಲವನ್ನು ಕಾರ್ಯನಿರ್ವಹಿಸದ ಹಣ (ಎನ್‌ಪಿಎ) ಎಂದು ಕೃಷಿ ಕ್ಷೇತ್ರದ ಸಾಲವನ್ನು ಪರಿಗಣಿಸುವುದರ ಬದಲು ವ್ಯಾಸ್ ಸಮಿತಿ ಪ್ರಸ್ತಾವನೆಯಂತೆ ಆ ಅವಧಿಯನ್ನು 'ಎರಡು ಬೆಳೆ ಕಾಲ'ಕ್ಕೆ ಪರಿವರ್ತಿಸಿದರೆ ಕೃಷಿ ಕ್ಷೇತ್ರದ ಎನ್‌ಪಿಎ ಇನ್ನೂ ಕಡಿಮೆಯಾಗುತ್ತದೆ.

ಅತಿ ಹಿಂದುಳಿದವರ ಗತಿ

ಕೆಳಜಾತಿಯ ಅಸ್ಪೃಶ್ಯರು ಮತ್ತು ಆದಿವಾಸಿಗಳ ಒಟ್ಟಾರೆ ಜನಸಂಖ್ಯೆ ಭಾರತದ ಶೇ. 25 ರಷ್ಟಿದೆ. 1998-99ರಲ್ಲಿ ಪರಿಶಿಷ್ಟೇತರ ಒಟ್ಟಾರೆ ಜೀವಿತಾವಧಿಯು ಸರಾಸರಿ 66 ವರ್ಷಗಳಿದ್ದರೆ, ಪರಿಶಿಷ್ಟ ಜಾತಿಯವರದು ಕೇವಲ 62 ವರ್ಷಗಳು ಮಾತ್ರ. ಹೆಚ್ಚೆಚ್ಚು ಆಹಾರ ಕೊರತೆ, ಅನೀಮಿಯ, ಮಕ್ಕಳು ಮತ್ತು ಮಹಿಳೆಯರಿಗೆ ಪೌಷ್ಟಿಕಾಂಶದ ಕೊರತೆಗಳು ಅವರಲ್ಲಿ ಹೆಚ್ಚಿನ ಮರಣ ದರಕ್ಕೆ ಕಾರಣ. ಕೋಮುವಾದದ, ಜಾತಿ-ಗುಂಪುಗಳ

ಜಾಗತೀಕರಣ ಯುಗದಲ್ಲಿ ಸರ್ಕಾರ ತನ್ನ ಕಲ್ಯಾಣ ಕಾರ್ಯ ಮತ್ತು ಜನಪರ ಧೋರಣೆಗಳಿಂದ ಪಲಾಯನಗೈಯುತ್ತಿದ್ದು, ವಿಶ್ವಬ್ಯಾಂಕ್ ಮತ್ತು ಅಮೆರಿಕಾದ ಏಜೆಂಟನಾಗಿ ಜನ-ವಿರೋಧಿ ನೀತಿಗಳನ್ನು ಅನುಸರಿಸುತ್ತಿದ್ದು, ಬಹುತೇಕ ಎಲ್ಲಾ ಕ್ಷೇತ್ರಗಳಲ್ಲೂ ಗಣನೀಯವಾಗಿ ವಿಫಲವಾಗಿರುವುದಲ್ಲದೆ ಭಾರತೀಯ ಜನತೆಯನ್ನು ವಿಶ್ವ ವ್ಯಾಪಾರ ಸಂಸ್ಥೆಗೆ ಒತ್ತೆಯಿಟ್ಟಿರುವುದನ್ನು ಎಲ್ಲರೂ ದೃಢತೆಯಿಂದ ವಿರೋಧಿಸಬೇಕಾದುದು ಆದ್ಯ ಕರ್ತವ್ಯ.

ಪ್ರಾಬಲ್ಯತೆಯಿಂದಾಗಿ ಈ ಜನರು ಮತ್ತಷ್ಟು ಉಪೇಕ್ಷೆಗೊಳಗಾಗಿ ಹಿಂದುಳಿದಿದ್ದಾರೆ. ಶೇ.70 ರಷ್ಟು ಪರಿಶಿಷ್ಟ ಜಾತಿಯ ಕುಟುಂಬಗಳಿಗೆ ಭೂಮಿಯೇ ಇಲ್ಲ, ಇದ್ದರೂ ಕೇವಲ ಒಂದು ಎಕರೆಗಿಂತಲೂ ಕಡಿಮೆ. ಇದುವರೆಗೂ ಒಟ್ಟಾರೆ ಫಲವತ್ತಾದ ಭೂಮಿಯಲ್ಲಿ ಶೇ.2.0 ರಷ್ಟನ್ನು ಮಾತ್ರ ಭೂಮಿತಿ ಕಾಯಿದೆಯಡಿ ಹಂಚಿದ್ದು, ಸರ್ಕಾರಿ ಜಮೀನನ್ನು ಸೇರಿಸಿಕೊಂಡರೆ ಸುಮಾರು ಶೇ.10 ರವರೆಗೆ ಹಂಚಲಾಗಿದೆಯಷ್ಟೆ. ಇದುವರೆಗೂ 18 ಲಕ್ಷ ಎಕರೆ ಭೂಮಿಯನ್ನು ಪ್ರತಿಯೊಬ್ಬರಿಗೂ 0.977 ಎಕರೆಯಂತೆ 18.5 ಲಕ್ಷ ಪರಿಶಿಷ್ಟ ಜಾತಿ ಫಲಾನುಭವಿಗಳಿಗೆ ಹಂಚಿದೆಯೆಂದರೆ ಭೂಹೀನರಿಗೆ ಭೂಮಿಯನ್ನು ಹಂಚುವಲ್ಲಿ ಸರ್ಕಾರಗಳು ಎಷ್ಟರ ಮಟ್ಟಿನ ಆತುರತೆ ಮತ್ತು ಕಾಳಜಿಯನ್ನು ತೋರಿವೆಯೆಂಬುದು ಸ್ಪಷ್ಟವಾಗಿ ಗೋಚರಿಸುತ್ತದೆ! ಜಾಗತೀಕರಣದ ಆಳ್ವಿಕೆಯ ಹೊಡೆತದಿಂದಾಗಿ ಅತಿ ಹಿಂದುಳಿದ ವರ್ಗದ ಜನತೆಗೆ ವಾಣಿಜ್ಯ ಬ್ಯಾಂಕುಗಳು ನೀಡುತ್ತಿದ್ದ ಆದ್ಯತಾ ಸಾಲ ಶೇ.10 ರಿಂದ ಶೇ. 6ಕ್ಕೆ ಇಳಿದಿರುವುದು, ಬ್ಯಾಂಕುಗಳು ಯಾವ ವರ್ಗದ ಹಿತಾಸಕ್ತಿಯನ್ನು ಜೋಪಾನ ಮಾಡುತ್ತಿವೆಯೆಂಬುದು ರಹಸ್ಯವೇನಲ್ಲ.

ಕೋಷ್ಟಕ 6

ವರ್ಷ	ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಶಿಕ್ಷಣಕ್ಕಾಗಿ ಮಾಡಿರುವ ವೆಚ್ಚ ಒಟ್ಟಾರೆ ಕೇಂದ್ರ ಬಜೆಟ್ ವೆಚ್ಚದ ಶೇಕಡಾದಲ್ಲಿ
1999-00	2.41
2000-01	2.49
2001-02	2.21
2002-03	2.39

ಆಧಾರ : ಸುಭಾನಿಲ್ ಚೌಧುರಿ ಮತ್ತು ಪ್ರಸೇನ್ ಜಿತ್ ಬೋಸ್, ಆಗಸ್ಟ್ ೨೦೦೪

ವಿಜ್ಞಾನ ಮತ್ತು ತಂತ್ರಜ್ಞಾನ

ಭಾರತದಲ್ಲಿ ಹಿಂದಿನಿಂದಲೂ ಸಂಶೋಧನಾಭಿವೃದ್ಧಿ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಪ್ರಾಮುಖ್ಯತೆ ಕೊಡುತ್ತಿಲ್ಲ. 1987-88ರಲ್ಲಿ ಒಟ್ಟಾರೆ ದೇಶೀಯ ಉತ್ಪನ್ನ (ಜಿಡಿಪಿ) ದ ಶೇ. 0.91 ರಷ್ಟು ಮೀಸಲಿಟ್ಟಿದ್ದರೆ 1998-99ರ ಹೊತ್ತಿಗೆ, ಎನ್‌ಡಿಎ ಸರ್ಕಾರವು ಜೋತಿಷ್ಯ ಹೇಳುವುದರಲ್ಲೇ ಕಾಲ ನೂಕುತ್ತಿದ್ದರಿಂದ, ಶೇ.0.81ಕ್ಕೆ ಇಳಿಯಿತು. ಅದೇ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಸಂಶೋಧನಾಭಿವೃದ್ಧಿಯ ಮಹತ್ವವರಿತಿದ್ದರಿಂದಾಗಿ ಒಟ್ಟಾರೆ ಜಿಡಿಪಿಯಲ್ಲಿ ಶೇ. 1.85 ರಷ್ಟು 1980ರಲ್ಲಿದ್ದರೆ, 1990ರ ದಶಕದಲ್ಲಿ ಅದು ಶೇ. 2.5 ಆಗಿತ್ತು. ಇದು ಭಾರತದ ಬಹುಸಂಖ್ಯಾತ ಜನತೆಯನ್ನು ಶತಮಾನಗಳುದ್ದಕ್ಕೂ ಅಂಧಕಾರದಲ್ಲಿಟ್ಟಿದ್ದ ಆಳುವ ವರ್ಗಗಳು ತಮ್ಮನ್ನು ತಾವೇ ಸಂಶೋಧನೆಯ ಎದುರು ದಡದಲ್ಲಿ ಇರುವಂತೆ ನೋಡಿಕೊಂಡವು. 1990ರ ದಶಕದಲ್ಲಿ 28 ಕಂಪನಿಗಳಲ್ಲಿ 12 ಕಂಪನಿಗಳ ಸಂಶೋಧನಾಭಿವೃದ್ಧಿಯು ಕುಂಠಿತಗೊಂಡರೆ, ಸಂಶೋಧನಾಭಿವೃದ್ಧಿಗೆ ಕಾರ್ಖಾನೆಗಳ ಕೊಡುಗೆ ನಿವ್ವಳ ರಾಷ್ಟ್ರೀಯ ಉತ್ಪನ್ನದ ಶೇ. 1 ಮಾತ್ರ. ಇದು ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗೆ ಹೋಲಿಸಿದರೆ ಮೂವತ್ತು ಪಟ್ಟು ಕಡಿಮೆ.

ಭಾರತದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಕೆಲಸ ಮಾಡುತ್ತಿರುವವರ ಸಂಖ್ಯೆ 63 ಲಕ್ಷವಿದ್ದರೂ ಸಂಶೋಧನಾಭಿವೃದ್ಧಿಯಲ್ಲಿರುವವರ ಸಂಖ್ಯೆ ಕೇವಲ 1.5 ಲಕ್ಷ. ಉನ್ನತ ವ್ಯಾಸಂಗಕ್ಕಾಗಿ ವಿದ್ಯಾರ್ಥಿಗಳನ್ನು ಗಣನೀಯವಾಗಿ ಆಕರ್ಷಿಸಬೇಕಿದ್ದು, ವಿಜ್ಞಾನ ವಿಷಯದಿಂದ ಪಲಾಯನಗೈಯುವ ವಿದ್ಯಾರ್ಥಿಗಳ ಸಂಖ್ಯೆಯನ್ನು ತಗ್ಗಿಸಬೇಕಿದೆ. ಕಳೆದ ಮೂರು ದಶಕಗಳಲ್ಲಿ ವಿಜ್ಞಾನ ವಿದ್ಯಾರ್ಥಿಗಳ ಸಂಖ್ಯೆ ಶೇ. 30 ರಿಂದ ಶೇ. 19.6ಕ್ಕೆ ಇಳಿದಿರುವುದು ಆತಂಕಕಾರಿ ವಿಷಯ.

ಕೋಷ್ಟಕ 7

ವರ್ಷ	ಪ್ರಾಥಮಿಕ ಶಿಕ್ಷಣಕ್ಕಾಗಿ ಶಿಕ್ಷಣದ ಬಜೆಟ್ ಪಾಲಿನ ಶೇ.	ವಿಶ್ವವಿದ್ಯಾಲಯ ಮತ್ತು ಉನ್ನತ ಶಿಕ್ಷಣದ ಬಜೆಟ್ ಪಾಲಿನ ಶೇ.
1999-00	39.00	29.58
2000-01	37.74	31.02
2001-02	44.32	20.45
2002-03	43.96	17.34

ಆಧಾರ: ಸುಭಾನಿಲ್ ಚೌಧುರಿ ಮತ್ತು ಪ್ರಸೇನ್‌ಜಿತ್ ಬೋಸ್, ಆಗಸ್ಟ್ 2004

ಶಿಕ್ಷಣ

ಉದಾರೀಕರಣದ ಅವಧಿಯಲ್ಲಿ ಸರ್ಕಾರ ನಿಧಾನವಾಗಿ ಶಿಕ್ಷಣ ಕ್ಷೇತ್ರದಿಂದ ಕಾಲ್ತೆಗೆಯುತ್ತಿದ್ದು, ಉತ್ತಮ ಗುಣಮಟ್ಟ ಮತ್ತು ಶಿಕ್ಷಣದ ಪ್ರಸರಣೆಗೆ ಸರಿಯಾದ ಹೊಡೆತ ಬಿದ್ದಿದೆ.

1968ರಲ್ಲಿ ಕೊಠಾರಿ ಆಯೋಗವು ಶಿಫಾರಸ್ಸು ಮಾಡಿದ್ದ ಶಿಕ್ಷಣಕ್ಕೆ ಜಿಡಿಪಿಯ ಶೇ. 6 ರಷ್ಟು ಹಣವನ್ನು ಮೀಸಲಿಡದೆ ರಾಷ್ಟ್ರದಲ್ಲಿ ಒಟ್ಟಾರೆ ರಾಜ್ಯಗಳ ವೆಚ್ಚ ಜಿಡಿಪಿಯ ಶೇ. 3ರ ಬಳಿಯಲ್ಲೇ ಇರುವುದನ್ನು ಕೋಷ್ಟಕ 5ರಲ್ಲಿ ಕಾಣಬಹುದು.

ಕೇಂದ್ರ ಸರ್ಕಾರಗಳು ತಮ್ಮ ಬಜೆಟ್‌ನಲ್ಲಿ ಶಿಕ್ಷಣಕ್ಕಾಗಿ ಅಗತ್ಯ ಸಂಪನ್ಮೂಲಗಳನ್ನು ಒದಗಿಸದೆ ಕಡೆಗಣಿಸಿದ್ದು, ಶಿಕ್ಷಣಕ್ಕಾಗಿ ಮೀಸಲಿಟ್ಟಿರುವ ಬಜೆಟ್ ವೆಚ್ಚ ಶೇ.2.5ನ್ನು ದಾಟಿರದೇ ಇರುವುದು ಭಾರತದ ಬಹುಸಂಖ್ಯಾತ ಅನಕ್ಷರಸ್ಥರ ಸಂಖ್ಯೆಗೆ ಮುಖ್ಯ ಕಾರಣ. ಕೇಂದ್ರ ಸರ್ಕಾರ. ಇದನ್ನು ಸ್ಫುಟವಾಗಿ ಕೋಷ್ಟಕ 6ರ ಅಂಕಿ ಅಂಶಗಳು ಹೊಡೆದು ಹೇಳುತ್ತವೆ.

ಎನ್‌ಡಿಎ ಸರ್ಕಾರವಂತೂ ಸತ್ಯವನ್ನು ತಿರುಚುವುದರಲ್ಲಿ, ಹಸಿಸುಳ್ಳನ್ನು ಸತ್ಯದ ಪ್ರತೀಕವೆಂಬಂತೆ ಬಿಂಬಿಸುವುದರಲ್ಲಿ ಪ್ರಾವೀಣ್ಯ ಸಾಧಿಸಿತ್ತು. ಪ್ರಾಥಮಿಕ ಶಿಕ್ಷಣಕ್ಕೆ 'ಆದ್ಯತಾ ಕ್ಷೇತ್ರವೆಂದು' ಪರಿಗಣಿಸಿ ತಾನು ಹೆಚ್ಚಿನ ಬಜೆಟ್ ಒದಗಿಸಿದ್ದೇನೆಂದು (1999-2000ರಲ್ಲಿ ಶೇ.39ರಿಂದ 2002-03 ರಲ್ಲಿ ಶೇ.43.96ರವರೆಗೆ) ಬೊಬ್ಬೆ ಹೊಡೆದರೂ ವಿಶ್ವವಿದ್ಯಾಲಯ ಮತ್ತು ಉನ್ನತ ಶಿಕ್ಷಣಕ್ಕಾಗಿಯ ಪಾಲಿನಲ್ಲಿ.

ಕೋಷ್ಟಕ 8

ವರ್ಷ	ಪ್ರಾಥಮಿಕ ಶಿಕ್ಷಣಕ್ಕಾಗಿ ಒಟ್ಟಾರೆ ಬಜೆಟ್ ವೆಚ್ಚದ ಶೇ.	ವಿಶ್ವವಿದ್ಯಾಲಯ ಮತ್ತು ಉನ್ನತ ಶಿಕ್ಷಣಕ್ಕಾಗಿ ಒಟ್ಟಾರೆ ಬಜೆಟ್ ವೆಚ್ಚದ ಶೇ.
1999–00	0.94	0.71
2000–01	0.94	0.77
2001–02	0.98	0.45
2002–03	1.05	0.41

ಆಧಾರ : ಸುಭಾನಿಲ್ ಚೌಧುರಿ ಮತ್ತು ಪ್ರಸೇನ್‌ಜಿತ್ ಬೋಸ್, ಆಗಸ್ಟ್ 2004.

ಆರ್ಥಿಕ ಸುಧಾರಣೆಯ ಅಂಗವಾಗಿ, ರಾಷ್ಟ್ರೀಕೃತ ಬ್ಯಾಂಕುಗಳು ತಮ್ಮ ಕಾರ್ಯ ನಿರ್ವಹಿಸದ ಹಣವನ್ನು ಕಡಿಮೆ ಮಾಡಿಕೊಳ್ಳಬೇಕೆಂಬ ಒತ್ತಡವಿದ್ದು, 2002–03ರ ಆರ್.ಬಿ.ಐ ಅಂಕಿ ಅಂಶದ ಪ್ರಕಾರ ಕೃಷಿ ಸಾಲದ ಎನ್‌ಪಿಎ ಕೇವಲ ಶೇ. 13.2 ರಷ್ಟಿದ್ದು, ದೊಡ್ಡ ಮತ್ತು ಮಧ್ಯಮ ಕೈಗಾರಿಕೆಗಳ ಎನ್‌ಪಿಎ ಶೇ.40ಕ್ಕಿಂತಲೂ ಬಹಳವಿದೆ. ಹೀಗಿದ್ದರೂ ಗ್ರಾಮೀಣ ಸಾಲಗಾರರೊಡನೆ ಬ್ಯಾಂಕುಗಳು ಲೇವಾದೇವಿಗಾರರಂತೆ ವರ್ತಿಸುತ್ತವೆ. 180 ದಿನಗಳಿಗಿಂತಲೂ ಹೆಚ್ಚು ಕಾಲ ಪಾವತಿಯಾಗದ ಸಾಲವನ್ನು ಕಾರ್ಯನಿರ್ವಹಿಸದ ಹಣ ಎಂದು ಕೃಷಿ ಕ್ಷೇತ್ರದ ಸಾಲವನ್ನು ಪರಿಗಣಿಸುವುದರ ಬದಲು ಆ ಅವಧಿಯನ್ನು 'ಎರಡು ಬೆಳೆ ಕಾಲ'ಕ್ಕೆ ಪರಿವರ್ತಿಸಿದರೆ ಕೃಷಿ ಕ್ಷೇತ್ರದ ಎನ್‌ಪಿಎ ಇನ್ನೂ ಕಡಿಮೆಯಾಗುತ್ತದೆ.

ತೀವ್ರಕಡಿತ (1999–2000ರಲ್ಲಿ ಶೇ.29.58 ರಿಂದ 2002–03 ರಲ್ಲಿ ಶೇ.17.34ಕ್ಕೆ) ಮಾಡಿರುವುದು ಅದರ ಗೋಸುಂಬೆತನಕ್ಕೆ ಸಾಕ್ಷಿಯಾಗಿರುವುದು ಕೋಷ್ಟಕ 7ರಲ್ಲಿರುವ ಅಂಕಿ ಅಂಶಗಳು. ಆದಗ್ಯೂ, ಎರಡೂ ಕ್ಷೇತ್ರಕ್ಕೂ ನ್ಯಾಯಯುತ ಹಂಚಿಕೆಯನ್ನು ಮಾಡದಿರುವ ಎನ್‌ಡಿಎ ಸರ್ಕಾರದ ಹೆಗ್ಗಳಿಕೆಯನ್ನು ಕೋಷ್ಟಕ 8 ರಲ್ಲಿ ಕಾಣಬಹುದು.

ಜಾಗತೀಕರಣ ಯುಗದಲ್ಲಿ ಸರ್ಕಾರ ತನ್ನ ಕಲ್ಯಾಣ ಕಾರ್ಯ ಮತ್ತು ಜನಪರ ಧೋರಣೆಗಳಿಂದ ಪಲಾಯನಗೈಯುತ್ತಿದ್ದು, ವಿಶ್ವಬ್ಯಾಂಕ್ ಮತ್ತು ಅಮೆರಿಕಾದ ಏಜೆಂಟನಾಗಿ ಜನ–ವಿರೋಧಿ ನೀತಿಗಳನ್ನು ಅನುಸರಿಸುತ್ತಿದ್ದು, ಬಹುತೇಕ ಎಲ್ಲಾ ಕ್ಷೇತ್ರಗಳಲ್ಲೂ ಗಣನೀಯವಾಗಿ ವಿಫಲವಾಗಿರುವುದಲ್ಲದೆ ಭಾರತೀಯ ಜನತೆಯನ್ನು ವಿಶ್ವ ವ್ಯಾಪಾರ ಸಂಸ್ಥೆಗೆ ಒತ್ತೆಯಿಟ್ಟಿರುವುದನ್ನು ಎಲ್ಲರೂ ದೃಢತೆಯಿಂದ ವಿರೋಧಿಸಬೇಕಾದುದು ಆದ್ಯ ಕರ್ತವ್ಯ.

ಭಾರತೀಯ ಶೋಷಿತ ಜನಾಂಗವನ್ನು ಹುರಿದು ಮುಕ್ಕುತ್ತಿರುವ, ನವ – ವಸಾಹತುಶಾಹಿ ಪ್ರತಿಪಾದನೆಯ ಉದಾರೀಕರಣ ನೀತಿಯಿಂದ ಬಡಜನತೆಯನ್ನು ಬಂಧಿಸುತ್ತಿರುವ 'ನಾಲ್ವರ ಗ್ಯಾಂಗ್' (ಭಾರತದ ಕೈಗಾರಿಕೋದ್ಯಮಿಗಳು, ಬಹುರಾಷ್ಟ್ರೀಯ ಕಂಪನಿಗಳು, ಭಾರತ ಸರ್ಕಾರ ಮತ್ತು ಐಎಂಎಫ್, ವಿಶ್ವಬ್ಯಾಂಕ್, ಡಬ್ಲ್ಯುಟಿಓಗಳ ಗುಂಪು)ನ್ನು ಬಗ್ಗು ಬಡಿಯಲು ಪ್ರಬಲ ಚಳವಳಿ ಮತ್ತು ಹೋರಾಟಗಳನ್ನು ರೂಪಿಸಿ ಜನಶಕ್ತಿಯನ್ನು ಶೋಷಣೆ ವಿರುದ್ಧ ಹರಿಯಬಿಡುವುದು ಇಂದಿನ ಪ್ರಮುಖ ಸವಾಲು. □



ಅವ್ವ

ಮರುಕಳಿಸದೇ ಸ್ಮೃತಿ
ಪಟಲದೊಳು ಮಗೂ
ಎಂಬ ನಿನ್ನೊಲುಮೆಯ
ಕರೆ ? ಎದೆ
ಬತ್ತಿದಾಗ ಮಿದುಳು
ಚೀರಿದಾಗ ಮನ
ವಿಚಲಿತಗೊಂಡಾಗ !

ಶತಮಾನ ಕಳೆದಂತಿದೆ ನೀ
ಅಗಲಿ, ಸವೆದಿದೆ
ಅರೆಬಾಳು ತೂಗು –
ಯ್ಯಾಲೆಯಲಿ ; ಪಾಪಿ
ಮುಂಡೇ ಮಕ್ಳ ಎಂಬ
ನಿನ್ನ ಬೈಗಳೂ ಕಿವಿ –
ಗಿಂಪಾಗಿದ್ದ ಕಾಲವದು
ಗತ ರಜತ ಯುಗವಹುದು !

ಬೆಂದ ಉದರ ನೊಂದ
ಹೃದಯ ಮನೆಯೊಳೂ
ಪರಕೀಯ ನಿರ್ಲಿಪ್ತ
ಕಾಯ ; ಸ್ವಾಭಿಮಾನದ
ಮೇರೆಯಲೂ ಗಿರವಿಟ್ಟ
ತಾಳಿ ರಕ್ಷಿಸಲಿಲ್ಲ
ಒಡೆಯನ ಶಿಕ್ಷಿಸಲಿಲ್ಲ
ಮನ ಒಡೆದವನ !

ಅಜ್ಞಾತವಾಸಗಳೆನಿತೋ
ನಿಂದಕರ ಸಖ್ಯದಲಿ
ಸವ್ಯಸಾಚಿಗಳೆನಿತೋ
ಪಾತಾಳ ಗರಡಿಯಲಿ ;
ಕಲ್ಲಲ್ಲವೇ ನಿನ್ನೆದೆ –
ಯೊಳಗವಿತಿದ್ದುದು ?
ಬಂಡೆಗಳಪ್ಪಳಿಕೆಗೂ ಕುಂದದ
ಎದೆಯ ಹಾಲುಂಡ
ಜೀವವಲ್ಲವೇ ಇದು !
ಹುಲಿಯ ಹಾಲಿನ ಮೇವಂತೆ
ನೀ ಉಣಿಸಿದ್ದು ಕಲ್ಲೆದೆಯ
ಹಾಲಲ್ಲವೇ ? ಕಲ್ಲಾಗಿದೆ
ಬಿಡು ಈ ಅಂತರಾಳ !
ಜಲ ಪ್ರಳಯ – ಚಂಡ
ಮಾರುತಗಳು ಅಪ್ಪಳಿಸುತ್ತಲೇ
ಇರುತ್ತವೆ ಚಿರಂತನವಾಗಿ
ನಿರಂತರವಾಗಿ !
ಋಣ ಋಣಾನುಬಂಧ
–ಗಳೇನೇ ಇರಲಿ ;
ಮನ ನೊಂದಾಗ
ಅಂತರ್ಯ ಬೆಂದಾಗ
ನಿನ್ನ ಮಡಿಲ ನೆನಪು
ಅಶ್ರು ಬಿಂದುಗಳಾಗುತ್ತವೆ !
ಅದೇ ಅಲ್ಲವೇ ನೀ
ಉಳಿಸಿ ಹೋದ ಬಳುವಳಿ
ಪಡೆದು ಹೋದ ಉಡುಗೊರೆ !.

– ನಾ ದಿವಾಕರ.

ಬುದ್ಧನ ಪ್ರೇಮ ಯಾತ್ರೆ

ಒಂದು

ಸಿದ್ಧಾರ್ಥ ಗೌತಮನಿಗೆ ಹದಿನೇಳು ಹದಿನೆಂಟರ ತುಂಬುಹರೆಯ. ಗೆಳೆಯರೊಟ್ಟಿಗೆ ಬೆರೆತು ಆಡುವ, ಚರ್ಚಿಸುವ ಆತ ಎಲ್ಲದರಲ್ಲೂ ತೀವ್ರ ಕುತೂಹಲಿಯಾಗಿದ್ದ. ಕೆಲವೊಮ್ಮೆ ಏಕಾಂಗಿತನ ವನ್ನು ಅವನು ಹೆಚ್ಚು ಇಷ್ಟಪಡುತ್ತಿದ್ದ. ಆತನ ಗೆಳೆಯರು ಅವರವರ ಮನೆಯವರ ಪ್ರೇರೇಪಣೆಯಿಂದ ಆಗಾಗ ಬೇಟೆಯ ಸಾಹಸದಲ್ಲೂ ತೊಡಗುತ್ತಿದ್ದರು.

ಸಿದ್ಧಾರ್ಥ ಯಾಕೋ ಅಂತಹ ಸಂದರ್ಭಗಳಲ್ಲಿ ಅವರಿಂದ ದೂರ ಸರಿಯುತ್ತಿದ್ದ. ಜೊತೆಗಾರರು ಈ ಕುರಿತು ಆತನನ್ನು ರೇಗಿಸುತ್ತಿದ್ದರು; ಕೀಟಲೆ ಮಾಡುತ್ತಿದ್ದರು. ಇದನ್ನೆಲ್ಲ ಸೂಕ್ಷ್ಮವಾಗಿ ಗಮನಿಸುತ್ತಿದ್ದ ಆತನ ಸಾಕುತಾಯಿ ಗೌತಮಿ ಒಮ್ಮೆ ಸಿದ್ಧಾರ್ಥನ ಬಳಿ ಕುಳಿತು–

ಗೌತಮಿ: ಸಿದ್ಧಾರ್ಥ, ನಿನಗೆ ಬೇಟೆಯಾಡಲು ಭಯವೇ? ಹೆದರಬಾರದು ಮಗು, ಮುಂದೆ ನೀನು ಯುದ್ಧ ಮಾಡಲು ಸಿದ್ಧನಾಗಬೇಕು. ಯುದ್ಧಕ್ಕೆ ಬೇಟೆಯೊಂದು ಸ್ಫೂರ್ತಿ; ಅದೊಂದು ಸಾಹಸ... ಬೇಟೆಯು ನಿನಗೆ ವೈರಿಯನ್ನು ಸದೆಬಡಿಯಲು ಒಳ್ಳೆಯ ಗುರಿ ಹಾಗೂ ಚಾಕಚಕ್ಯತೆಯನ್ನು ಕಲಿಸುತ್ತದೆ. ನಿನ್ನ ಗೆಳೆಯರೊಡನೆ ಹೋಗು ಮಗು.

ಸಿದ್ಧಾರ್ಥ; (ಸ್ವಲ್ಪ ನಿಧಾನಿಸಿ) ಅಮ್ಮಾ... ನನಗೆ ಅದೊಂದು ಹಿಂಸೆ ಎನಿಸುತ್ತದೆ. ಹಿಂಸೆಯಲ್ಲಿ ಯಾವ ಚಾಕಚಕ್ಯತೆ, ಸಾಹಸ, ಸಂತಸ!... ಅದಿರಲಿ, ನಾನೇಕೆ ಯುದ್ಧಕ್ಕೆ ಸಿದ್ಧನಾಗಬೇಕು? ಏತಕ್ಕಾಗಿ ಯುದ್ಧ ಮಾಡಬೇಕಮ್ಮಾ?

ಗೌತಮಿ: (ನಕ್ಕು) ಅದು ನಿನ್ನ ಕರ್ತವ್ಯ... ರಾಜನ ಧರ್ಮ ಸಿದ್ಧಾರ್ಥ

ಸಿದ್ಧಾರ್ಥ: (ನೋವಿನ ದನಿಯಲ್ಲಿ) ಅಲ್ಲ ಅಮ್ಮಾ... ಒಬ್ಬ ಮನುಷ್ಯ ಇನ್ನೊಬ್ಬನನ್ನು ಕೊಲ್ಲುವುದು ಕರ್ತವ್ಯವೆ? ಅದೂ ಧರ್ಮವೆ? ಇದು ನನಗೆ ಸರಿಯಾಗಿ ಅರ್ಥವಾಗದು!

ಗೌತಮಿ: ಹೌದು ಮಗು. ಕೊಲ್ಲುವುದು ರಾಜರುಗಳ ಧರ್ಮ. ಅವರು ಯುದ್ಧ ಮಾಡದಿದ್ದರೆ ರಾಷ್ಟ್ರವನ್ನು ರಕ್ಷಿಸುವವರು ಯಾರು? ಯೋಚಿಸು...

ಸಿದ್ಧಾರ್ಥ: (ಒಮ್ಮೆಗೇ ಗಹಗಹಿಸಿ ನಕ್ಕು, ಸಮಾಧಾನ ದಿಂದ) ಅಮ್ಮಾ ಇದು ತೀರಾ ಹಾಸ್ಯಾಸ್ಪದ. ಎಲ್ಲಾ ರಾಜರು ಪರಸ್ಪರ ನಿಸ್ವಾರ್ಥದಿಂದ ಪ್ರೀತಿಸುವುದಾದರೆ ಯಾವ ಹಿಂಸೆಯೂ ಇಲ್ಲದೆ ತಮ್ಮ ತಮ್ಮ ರಾಷ್ಟ್ರವನ್ನು ರಕ್ಷಿಸಲು ಸಾಧ್ಯವಾಗುವುದಿಲ್ಲವೆ?... ಅಮಾಯಕರ ಸಾವುನೋವುಗಳಿಗೆ ಯುದ್ಧ ಕಾರಣವಲ್ಲವೆ? ಅಮ್ಮಾ... ರಾಜ ತನ್ನ ರಾಜ್ಯದ ನೊಂದ ಜನರ ಸಂಕಟಗಳಿಗೆ ಸ್ಪಂದಿಸುವುದು ನಿಜವಾದ ಧರ್ಮವಲ್ಲವೆ?

ಗೌತಮಿ: ಮೌನವಾಗಿ ಯೋಚಿಸತೊಡಗಿದಳು.

ಎರಡು

ತನ್ನ ಸತ್ಯಶೋಧನೆಗಳನ್ನು ಬೋಧಿಸುತ್ತ ಪ್ರೇಮಯಾತ್ರೆ ಹೊರಟಿದ್ದ ಬುದ್ಧ ಒಮ್ಮೆ ತನ್ನ ಸಂಘದ ಸಂಗಾತಿಗಳೊಡನೆ ಕೇಶಪುತ್ತ ಪಟ್ಟಣದ ವನದಲ್ಲಿ ಉಳಿದಿದ್ದ ಆ ಪಟ್ಟಣದ ನಿವಾಸಿ ಕಾಲಮನು ತಥಾಗತ ಬಂದಿರುವ ವಿಷಯ ತಿಳಿದು ಕೂಡಲೇ ಅಲ್ಲಿಗೆ ಓಡೋಡಿ ಬಂದ.

ಅದೇ ತಾನೆ ಮೊದಲಿಗೆ ಬುದ್ಧನನ್ನು ನೋಡಿದ ಆತನನ್ನು ಬುದ್ಧನ ಮನಮೋಹಕ ರೂಪ ಬೆರಗಾಗಿಸಿತು; ಕಣ್ಣುಕಣ್ಣು ಬಿಡುತ್ತಾ ನಿಂತಿದ್ದ ಆತನನ್ನು ಬುದ್ಧ ತನ್ನ ಹತ್ತಿರ ಕರೆದ. ಬುದ್ಧನ ಮಾತಿನಲ್ಲಿ ಆತ್ಮೀಯತೆ ತುಂಬಿತುಳುಕುತ್ತಿತ್ತು. ಕಾಲಮ ಯಾಂತ್ರಿಕವಾಗಿ ಸಮೀಪ ಬಂದು ಕುಳಿತ. ಬುದ್ಧ ಕೆಲಹೊತ್ತು

ಆತನ ಯೋಗಕ್ಷೇಮ ವಿಚಾರಿಸಿದ. ಕ್ಷಣದಲ್ಲೇ ಅತ್ಯಂತ ಆಪ್ತನಾದ ಬುದ್ಧನ ಜೊತೆ, ತನಗಿರುವ ಗೊಂದಲಗಳನ್ನು ಹೇಗೆ ಹೇಳಬೇಕೆಂದು ಕಾಲಮ ಗೊಂದಲಕ್ಕೆ ಒಳಗಾದ. ಇದನ್ನು ಸೂಕ್ಷ್ಮವಾಗಿ ಗಮನಿಸಿದ ಬುದ್ಧ ನಸುನಕ್ಕು –

ಬುದ್ಧ: ಪ್ರಿಯ ಕಾಲಮ, ಗೊಂದಲಕ್ಕೆ ಒಳಗಾಗದೆ ನಿನಗೆ ಏನನಿಸುತ್ತದೆ ಅದನ್ನು ಹಾಗೇ ಹೇಳು.

ಕಾಲಮ: (ತಡವರಿಸುತ್ತ) ಗುರುಗಳೇ... ಅದು... ಈ ಕೇಶಪುತ್ತಕ್ಕೆ ಅನೇಕ ಸನ್ಯಾಸಿಗಳು, ವಿರಕ್ತರು, ಜ್ಯೋತಿಷಿಗಳು ಬರುತ್ತಾರೆ. ಬಂದವರು ತಮ್ಮ ತಮ್ಮ ವಿಚಾರಗಳನ್ನು ನಮಗೆ ತಿಳಿಸಿ ಅನುಸರಿಸಲು ಹೇಳುತ್ತಾರೆ. ಅದರೆ ಹಾಗೆ ಬಂದವರು ತಮಗಿಂತ ಮೊದಲು ಬಂದಿದ್ದ ಸನ್ಯಾಸಿಯ ಬಗೆಗೆ ಜೋರಾಗಿ ನಕ್ಕು, ಅಪಹಾಸ್ಯ ಮಾಡಿ, ಕಟುವಾಗಿ ಟೀಕಿಸುತ್ತಾರೆ. ಅವರು ತಮ್ಮ ವಿಷಯವನ್ನು ಮಾತ್ರ ಯೋಗ್ಯವೆಂದು ತಿಳಿಸಿ ಅನುಸರಿಸಲು ಹೇಳುತ್ತಾರೆ. ನಮ್ಮ ಊರಿನ ಅನೇಕರಿಗೆ ಇದರಿಂದ ಯಾರದು ನಿಜ, ಯಾರದು ಸುಳ್ಳು ಎಂದು ಪರಿಗಣಿಸಲಾಗದೆ ತಲೆಚಿಟ್ಟು ಹಿಡಿದಿದೆ... ಇವರಲ್ಲಿ ಯಾರ ಮಾತನ್ನು ನಂಬುವುದು...? ನಮಗೆ ಗೊಂದಲವಾಗಿದೆ.

ಬುದ್ಧ: (ನಿಧಾನಕ್ಕೆ ನಗುವನ್ನು ಚೆಲ್ಲುತ್ತ, ಆತನತ್ತ ದೃಷ್ಟಿ ನೆಟ್ಟು) ಪ್ರಿಯ ಕಾಲಮ... ಕೇವಲ ನೀನು ಕೇಳಿರುವುದನ್ನೇ ನಂಬಬೇಡ. ಕೇವಲ ಒಬ್ಬರಿಂದ ಒಬ್ಬರಿಗೆ ಹೇಳಿಕೆಯಿಂದ ಬಂದುದನ್ನೇ ಸತ್ಯವೆಂದು ಪರಿಗಣಿಸಬೇಡ. ಧರ್ಮಗ್ರಂಥಗಳು ಪವಿತ್ರವಾದವು ಎಂಬ ಕಾರಣಕ್ಕೇ ಅವುಗಳನ್ನು ಒಪ್ಪಬೇಡ. ಆ ಕ್ಷಣದಲ್ಲಿ ನಿಜವೆಂದು ಕೆಲವು ಕಂಡರೂ ಅವು ನಿರಂತರವಲ್ಲ. ಹಾಗೆ ಯಾರೋ ಊಹಾತ್ಮಕವಾಗಿ ಹೇಳಿದುದನ್ನೇ ದಿಟವೆಂದು

ಬೆಳದಿಂಗಳು

ದೇವರು, ಆತ್ಮ,
ಕರ್ಮಸಿದ್ಧಾಂತ ಇವುಗಳನ್ನು
ಕುರಿತು ಸುಮ್ಮನೆ
ಮಾತನಾಡುತ್ತ ಕಾಲಹರಣ
ಮಾಡಬೇಡಿ. ನೀವು
ಮಾಡಬೇಕಾದ ಕೆಲಸ
ಬಹಳಷ್ಟಿದೆ... ಸಂಗಾತಿಗಳೇ...
ನೀವೆಲ್ಲರೂ ಈವರೆಗೆ ಕಂಡ
ಸತ್ಯಗಳನ್ನು, ಸಂತಸದಿಂದ
ಜನರತ್ತ ತಲುಪಿಸಿ...
ಯಾವುದು ಅತ್ಯಂತ
ಹಿತಕಾರಿಯೋ ಅಂತಹ
ಕಡೆಗೆ ನಾವು ಸದಾ
ಸಾಗುತ್ತಿರಬೇಕು. ಎಲ್ಲೆಲ್ಲೂ
ನೀರವತೆ, ಬೆಳದಿಂಗಳು,
ಗಿಡಮರಗಳ ಎಲೆಗಳ
ಮೇಲೆ ಬಿದ್ದು ಪ್ರತಿ
ಫಲಿಸುತ್ತಿದ್ದ ಸೊಬಗನ್ನು
ನೋಡುತ್ತ ಬುದ್ಧ
ತಲ್ಲೀನನಾದ; ತಂಗಾಳಿಗೆ
ಎಲೆಗಳು ತಲೆದೂಗಿದುವು.
ದುಃಖತಪ್ತ ಸಂಘದ
ಸಂಗಾತಿಗಳಿಗೆ ತಥಾಗತನ
ಮಾತಿನಿಂದ ಈಗ ದಿಕ್ಕು
ತೋಚ ತೊಡಗಿತು. ಆ
ತುಂಬು ಬೆಳದಿಂಗಳಲ್ಲಿ
ಅವರೆಲ್ಲರಿಗೂ "ಮಧ್ಯಮ
ಮಾರ್ಗ"ದ ಆಳಅಗಲಗಳು
ಇನ್ನಷ್ಟು ಸ್ಪಷ್ಟವಾಗ
ತೊಡಗಿದುವು.

○ ಮಲ್ಲಿಗಹಳ್ಳಿ
ನರೇಂದ್ರಕುಮಾರ್

ಭ್ರಮಿಸಬೇಡ. ಸನ್ಯಾಸಿ, ಜ್ಯೋತಿಷಿ, ಗುರುವರ್ಯ ಯಾರೇ ಹೇಳಿದರೆಂಬ ಕಾರಣಕ್ಕೇ ನೀನು ಪ್ರಶ್ನಿಸದೆ, ಯೋಚಿಸದೆ ಅದು ನಿನಗೆ ಮನವರಿಕೆಯಾಗದೆ ಕುರಡಾಗಿ ಅವನ್ನು ನಂಬಬೇಡ ಗೆಳೆಯಾ... ಇನ್ನೂ ಹೇಳಬೇಕೆಂದರೆ ನಿನಗೆ ಸರಿ ಎನಿಸಿದ್ದು ಇನ್ನೊಬ್ಬರಿಗೆ ನಿರಂತರ ಶೋಷಣೆ ಅನಿಸುವುದಾದರೆ ಅದನ್ನು ಸಂಪೂರ್ಣವಾಗಿ ನಿರಾಕರಿಸು. ನಿನಗೆ ಮತ್ತು ನಿನ್ನ ಸುತ್ತಮುತ್ತಲವರಿಗೆ ಬಳಿತಾಗುವುದೆಂದು ಸಾಬೀತಾದರೆ ಅದೇ ಸತ್ಯ. ಅದನ್ನು ಅನಸರಿಸು. ಅದನ್ನು ಇತರರಿಗೂ ಹೇಳು... (ಮತ್ತೆ ನಸುನಗುತ್ತಾ) ಮಿತ್ರ ಕಾಲಮ, ನಿನಗೆ ನೀನೇ ಗುರು, ನೀನೇ ಸನ್ಯಾಸಿ, ಜ್ಯೋತಿಷಿ ಎಲ್ಲಾ.

ಬುದ್ಧನ ಕಣ್ಣಲ್ಲಿ ಕಣ್ಣಿಟ್ಟು ಇದನ್ನು ಕೇಳಿದ ಕಾಲಮನ ಕಣ್ಣುಗಳು ಹೊಳೆದವು; ಆತನ ಮನಸ್ಸು ನಿರಾಳವಾಯಿತು

ಬುದ್ಧ ಆತನಲ್ಲಾದ ಈ ಬದಲಾವಣೆ ಗಮನಿಸಿ ತಾನೂ ಇನ್ನಷ್ಟು ಸಂತಸಗೊಂಡ.

ಮೂರು

ಪ್ರೇಮತತ್ವಗಳನ್ನು ಎಡೆಬಿಡದೆ ಚಿಂತಿಸಿ, ಬೋಧಿಸುತ್ತಿದ್ದ ಬುದ್ಧ ಗೆಳಯರೊಟ್ಟಿಗೆ ಹೀಗೇ ಒಮ್ಮೆ ಶ್ರಾವಸ್ತಿಯ ಜೇತವನದಲ್ಲಿ ತಂಗಿದ್ದ.

ಬೆಳಿಗ್ಗೆ ಕೆಂಬಣ್ಣದ ಸೂರ್ಯೋದಯವನ್ನ ಮುಗ್ಧವಾಗಿ, ತದೇಕಚಿತ್ತದಿಂದ ನೋಡಿ ಹರ್ಷಿತನಾದ.

ಆತ ಎಂದಿನಂತೆ ಭಿಕ್ಷೆಗೆ ಹೋಗಿದ್ದಾಗ ಊರಿನಲ್ಲಿ ಗುಸುಗುಸು ಪಿಸಪಿಸನೆ ಆತಂಕದಿಂದ ಮಾತನಾಡುತ್ತಿದ್ದ ಜನರನ್ನು ಗಮನಿಸಿದ.

ಏನೆಂದು ತಿಳಿಯುವ ತವಕದಲಿ ಕೆಲವರಿಂದ ಮಾಹಿತಿಯನ್ನೂ ಕೇಳಿದ. ಜನರು, "ಇಲ್ಲೊಬ್ಬ ನರಭಕ್ಷಕನಿದ್ದಾನೆ' "ನಿರ್ದಯಿ' "ಕೊಲೆಗಡುಕ' "ಮನುಷ್ಯರ ಬೆರಳುಗಳನ್ನು ಕತ್ತರಿಸಿ ಮಾಲೆ ಮಾಡಿ ಹಾಕಿಕೊಳ್ಳುತ್ತಾನೆ' ಇತ್ಯಾದಿ ಇತ್ಯಾದಿಯಾಗಿ ಹೇಳಿದರು.

ಬುದ್ಧ:(ಒಮ್ಮೆಗೇ) ಆತ ಎಲ್ಲಿರುವನು ಗೆಳೆಯರೆ? ಭಯಗೊಂಡು ಮಾತೂ ಬಾರದೆ ಕೆಲವರು ತಮ್ಮ ತೋರುಬೆರಳಿನಿಂದ ಆ ಕಾಡಿನತ್ತ ತೋರಿದರು.

ನಿರ್ಭೀತ ಬುದ್ಧ ಕೂಡಲೇ ಅತ್ತ ಚಲಿಸಿದ;

ಸಮೃದ್ಧ ವೃಕ್ಷರಾಶಿಯ ನಡುವೆ "ಬೆರಳುಗಳ ಮಾಲೆಯನ್ನು ಧರಿಸಿದವ' ನನ್ನು ಹುಡುಕತೊಡಗಿದ

ಆ ಕ್ಷಣ ಮಿಂಚಿನಂತೆ ಒರಟು ಮನುಷ್ಯನೊಬ್ಬ ಬುದ್ಧನತ್ತ ಬಿರುಸಿನಿಂದ ಧಾವಿಸುತ್ತಿದ್ದ.

ಆತನ ಕೈಯಲ್ಲಿ ಬಲವಾದ, ಹರಿತವಾದ ಕತ್ತಿ; ಇನ್ನೊಂದು ಕೈಯಲ್ಲಿ ಯಾವುದೋ ಮಾರಕಾಸ್ತ್ರ

ಆ ಒರಟು ವ್ಯಕ್ತಿಯ ಕಣ್ಣುಗಳಲ್ಲಿ ಕ್ರೌರ್ಯ ಮಿಂಚುತ್ತಿತ್ತು. ಬುದ್ಧನನ್ನು ತಡೆದ ಆತನೆ ಅಂಗೂಲಿಮಾಲ.

ಅಂಗೂಲಿಮಾಲ: (ಆರ್ಭಟಿಸಿ) ಯೇ ನಿಲ್ಲು, ಯಾರು ನೀನು? ಇಲ್ಲಿಗ್ಯಾಕೆ ಬಂದೆ?

ಬುದ್ಧ: (ನಿರ್ಲಿಪ್ತವಾಗಿ) ಪ್ರಿಯ ಬಂಧು, ನಿನಗೋಸ್ಕರವೆ ಹುಡುಕುತ್ತ ಬಂದೆ.

ಬುದ್ಧನ ಮಾತಿನ ಆಪ್ತತೆ ಆತನಿಗೆ ತನ್ನ ಚಿಕ್ಕಂದಿನಲ್ಲಿ ಕಳೆದುಕೊಂಡ ಅವ್ವನ ಪ್ರೇಮವನ್ನು ನೆನಪಿಸಿತು.

ಅಷ್ಟು ಹೊತ್ತಿಗಾಗಲೇ ಧೈರ್ಯಶಾಲಿಗಳಾಗಿರುವ ಊರಿನ ಕೆಲವರು ಬುದ್ಧನಿಗೆ ಗೊತ್ತಾಗದಂತೆ ಹಿಂಬಾಲಿಸಿ ಬಂದು ಪೊದೆಗಳಲ್ಲಿ ಅವಿತು, ಇಣುಕಿ ಇಣುಕಿ ಏನಾಗಬಹುದೆಂದು ನೋಡತೊಡಗಿದ್ದರು.

ದೂರದಿಂದ ಅವರಿಗೆ ಬುದ್ಧ ಹಾಗೂ ಅಂಗೂಲಿಮಾಲರ ಮಾತುಗಳು ಕೇಳಿಸಿಯೂ ಕೇಳಿಸದಂತಿತ್ತು.

ಇಬ್ಬರೂ ಏನೇನು ಮಾತನಾಡಿದರೋ; ಒಂದಷ್ಟು ಸಮಯ ಹೀಗೇ ಸಾಗಿತು. ಈ ನೋಡುಗರೇ ನಿಬ್ಬೆರಗಾಗುವಂತೆ ಒಮ್ಮಿಂದೊಮ್ಮೆಗೆ ಅಂಗೂಲಿಮಾಲಾ ತನ್ನ ಕೈಯಲಿದ್ದುದನ್ನು ದೂರ ಎಸೆದ. ಅವು ಬಿದ್ದ "ಢಣ್" "ಢಣ್" ಶಬ್ದ ಕೇಳಿಸಿತು. ನಂತರ ಬುದ್ಧನನ್ನ ಅಪ್ಪಿಕೊಂಡ.

ಇದು ಸೋಜಿಗವೆನಿಸಿತು!

ಇಬ್ಬರೂ ಮಾತನಾಡುತ್ತ ಜೇತವನದತ್ತ ಬರತೊಡಗಿದರು. ಜನರೂ ಗುಂಪಾಗಿ ಪರಸ್ಪರ ಪಿಸುಗುಟ್ಟುತ್ತ ಇಬ್ಬರನ್ನೂ ಸಮೀಪಿಸಿದರು. ಆಗ ಬುದ್ಧನು ಎಲ್ಲರಿಗೂ "ನಿಜಕ್ಕಿಂತಲೂ ಸುಳ್ಳು ಮತ್ತು ಊಹೆಯೇ ಹೆಚ್ಚು ಭಯ ಆತಂಕ ಮೂಡಿಸುತ್ತದೆ ಅಲ್ಲವೇ?' ಎಂದು ಹೇಳುತ್ತಾ ಅದಕ್ಕೆ ಸಂಬಂಧಿಸಿದ ವಿಷಯವನ್ನು ಕುರಿತು ಜೋರುದನಿಯಲ್ಲಿ. ಮಾತನಾಡುತ್ತಾ ಆ ಗುಂಪಿನೊಂದಿಗೆ ಸಾಗಿದ.

ಅಷ್ಟರಲ್ಲಾಗಲೇ ಬುದ್ಧ ಕಾಡಿನತ್ತ ಹೋದ ವಿಷಯ ತಿಳಿದ ರಾಜ ಪ್ರಸೇನಜಿತು ತನ್ನ ಸೈನ್ಯದೊಡನೆ ಬುದ್ಧನ ಗುಂಪನ್ನು ಸಮೀಪಿಸಿದ. ಕೂಡಲೇ ತನ್ನ ಆತಂಕ ವ್ಯಕ್ತಪಡಿಸಿದ. ತಥಾಗತನಿಗೆ ಏನೂ ಆಗದಿರುವುದನ್ನು ಕಂಡು ಸಮಾಧಾನಗೊಂಡ. ಗಾಬರಿ ಆತನನ್ನು ನೋಡಿದ ಯಾರಿಗೂ ಗೋಚರವಾಗುತ್ತಿತ್ತು.

ಬುದ್ಧ: (ನೆಮ್ಮದಿಯಿಂದ) ಪ್ರಸೇನಜಿತು, ಈತನೇ ಅಂಗೂಲಿ ಮಾಲಾ; ಪಾಪ ನೊಂದವನು.

ಬುದ್ಧ ಪಕ್ಕದಲ್ಲೇ ಇದ್ದ ಅಂಗೂಲಿಮಾಲಾನ ಬೆನ್ನನ್ನು ಸವರಿದ. ಆತ ನಾಚಿಕೆಯಿಂದ ತಲೆತಗ್ಗಿಸಿದ.

ಪ್ರಸೇನಜಿತು: (ಮತ್ತಷ್ಟು ಗಾಬರಿಯಿಂದ) ಅರೆ! ಏನು? ಅಂಗೂಲಿಮಾಲಾ ಈತನೇ? ಹೌದೆ! ... ತಥಾಗತ ನಿಮಗೆ ಏನಾದರೂ ಆಗಿದ್ದರೆ ಏನು ಗತಿ? ಅದಕ್ಕೇ ನನ್ನ ಸೈನ್ಯದೊಡನೆ ಬಂದೆ... ಗುರುವೇ ಇದು ಹೇಗೆ ಸಾಧ್ಯ? ನಿಜವೇ?

ಕರುಣಾಳು ಬುದ್ಧ ಹಸನ್ಮುಖಿಯಾಗಿ ಹೇಳಿದ–

"ಗೆಳೆಯಾ, ಪ್ರೀತಿಯೊಂದಿದ್ದರೆ ಎಲ್ಲವೂ ಸಾಧ್ಯ!'

ಪ್ರಸೇನಜಿತು, ಅಂಗೂಲಿಮಾಲಾ ಎಲ್ಲರೂ ಬುದ್ಧನ ಮಾತಿಗೆ ಆಕರ್ಷಿತರಾದರು.

ನಾಲ್ಕು

ಬುದ್ಧದೇವನಿಗೆ ಸುತ್ತಾಟದ ಆನಂದದಲ್ಲಿ ಎಂಭತ್ತು ವರ್ಷಗಳು ತುಂಬಿಹೋಗಿತ್ತು. ಆತ ಪ್ರಕೃತಿ ಪ್ರೇಮಿ: ಆತನ ಸೌಂದರ್ಯ ಪ್ರಜ್ಞೆ ಅಪಾರವಾದುದು. ಅವನು ಪ್ರಕೃತಿಯ ನದಿ, ಚಿಗುರು, ಹೂವು, ಹಣ್ಣು, ಚಿಟ್ಟೆ, ಹಕ್ಕಿ, ಹಾಗೂ ಬಗೆಬಗೆಯ ಅಸಂಖ್ಯ ಜೀವಿಗಳನ್ನು ಮುಗ್ಧವಾಗಿ ನೋಡುತ್ತಾ, ಅನುಭವಿಸುತ್ತ ಸಂತೃಪ್ತಗೊಳ್ಳುತ್ತಿದ್ದ; ಹಾಗೇ ಸಂಘದ ಒಡನಾಡಿಗಳಿಗೂ ಅವುಗಳ ಕುರಿತು ಆಸಕ್ತಿ ಹೆಚ್ಚಿಸಿದ್ದ.

ಕಾಲಮ ಕೇವಲ ನೀನು ಕೇಳಿರುವುದನ್ನೇ ನಂಬ ಬೇಡ. ಕೇವಲ ಒಬ್ಬರಿಂದ ಒಬ್ಬರಿಗೆ ಹೇಳಿಕೆಯಿಂದ ಬಂದುದನ್ನೇ ಸತ್ಯವೆಂದು ಪರಿಗಣಿಸಬೇಡ. ಧರ್ಮ ಗ್ರಂಥಗಳು ಪವಿತ್ರವಾದವು ಎಂಬ ಕಾರಣಕ್ಕೇ ಅವುಗಳನ್ನು ಒಪ್ಪಬೇಡ. ಆ ಕ್ಷಣದಲ್ಲಿ ನಿಜವೆಂದು ಕೆಲವು ಕಂಡರೂ ಅವು ನಿರಂತರವಲ್ಲ. ಹಾಗೆ ಯಾರೋ ಊಹಾತ್ಮಕವಾಗಿ ಹೇಳಿದುದನ್ನೇ ದಿಟವೆಂದು ಭ್ರಮಿಸಬೇಡ. ಸನ್ಯಾಸಿ, ಜ್ಯೋತಿಷಿ, ಗುರುವರ್ಯ ಯಾರೇ ಹೇಳಿದರೆಂಬ ಕಾರಣಕ್ಕೇ ನೀನು ಪ್ರಶ್ನಿಸದೆ, ಯೋಚಿಸದೆ ಅದು ನಿನಗೆ ಮನವರಿಕೆಯಾಗದೆ ಕುರಡಾಗಿ ಅವನ್ನು ನಂಬಬೇಡ ಗೆಳೆಯಾ...

ಕುಶಿನಾರದ ಪ್ರಶಾಂತ ವನದಲ್ಲಿ ಉಳಿದಿದ್ದ ಆತ ಈಗ ಬಹಳ ನಿತ್ರಾಣಗೊಂಡಿದ್ದ. ಚುಂದನ ಮನೆಯಲ್ಲಿ ಊಟ ಮಾಡಿದ ನಂತರ, ಆತನಿಗೆ ಅಜೀರ್ಣದಿಂದಾಗಿ ಭೇದಿ ಆಗತೊಡಗಿತ್ತು.

ತಾನು ಇನ್ನು ಹೆಚ್ಚು ಸಮಯ ಬದುಕಲಾರೆನೆಂದು ಆತನಿಗೆ ಗೊತ್ತಿತ್ತು. ಆಗತಾನೆ ಬಂದಿದ್ದ ಸುಬದ್ದನಿಗೆ ತನ್ನ ಚಿಂತನೆಗಳನ್ನು ಸಂಕ್ಷಿಪ್ತವಾಗಿ ಹೇಳಿ ವಿಶ್ರಮಿಸಿಕೊಳ್ಳುತ್ತಿದ್ದ.

ಅಂದು ವೈಶಾಖದ ಬೆಳದಿಂಗಳ ರಾತ್ರಿ, ಪೂರ್ಣಚಂದ್ರ ತೆಳುಮೋಡದ ಪರದೆಯೊಳಗಿನಿಂದ ಬೆಳಕು ಚೆಲ್ಲುತ್ತಿದ್ದ. ಸಂಘದ ಗೆಳೆಯರು ದೂರದಲ್ಲಿ ಬಿಕ್ಕಳಿಸುತ್ತಿದ್ದರು. ಕೆಲವರು ಮರೆಯಲ್ಲಿ ಅಳುತ್ತಿದ್ದರು; ಅನೇಕರ ಕಣ್ಣಾಲಿಗಳು ತೇವಗೊಂಡಿದ್ದುವು. ಆನಂದನಿಗಂತೂ ಮಾತನಾಡಲು ಹೋದರೆ ಅಳುವೇ ಬರುತಿತ್ತು.

"ಇನ್ನು ಯಾರು ತಮಗೆ ದಿಕ್ಕು' ಎನ್ನುವ ಪ್ರಶ್ನೆ ಅವರೆಲ್ಲರ ಮುಂದಿತ್ತು. ಬುದ್ಧದೇವ ಪ್ರೀತಿಯಿಂದ ಮೆಲ್ಲನೆ ಎಲ್ಲರನ್ನೂ ತನ್ನ ಬಳಿ ಕರೆದ.

ಬುದ್ಧ: (ಮೆದುವಾಗಿ) ಪ್ರಿಯ ಸ್ನೇಹಿತರೆ, ನೀವೆಲ್ಲರೂ ಊಟ ಮಾಡಿದಿರಾ?... ಬನ್ನಿ ಹತ್ತಿರ... ಸಾವು ನನ್ನನ್ನು ಸಮೀಪಿಸುತ್ತಿದೆ.. ಪುನರ್ಜನ್ಮವಿಲ್ಲದ ಕಾರಣ ಸತ್ತ ನಂತರ ನಾವು ಯಾರೂ ಮತ್ತೊಮ್ಮೆ ಎಂದಿಗೂ ಸಂಧಿಸಲಾರೆವು. ನಾನು ಅನೇಕ ಬಾರಿ ಹೇಳಿದಂತೆ ಸಾವು ಸ್ವಾಭಾವಿಕ... ನೀವು ಆತಂಕ ಪಡುವ ಅಗತ್ಯವಿಲ್ಲ: ನಾವೆಲ್ಲರು ಪರಸ್ಪರ ಆಲೋಚಿಸಿ, ಆಚರಿಸಿದ ಚಿಂತನೆಗಳನ್ನು ಜನರಿಗೆ ತಿಳಿಸಿರಿ. ಹಿಂಸೆ ಹಾಗೂ ಒಣ ಆಡಂಬರವಿಲ್ಲದೆ ಮನುಷ್ಯ ತನ್ನ ಮೂಲಭೂತ ಅಗತ್ಯಗಳೊಟ್ಟಿಗೆ ಬದುಕಲು ಸಾಧ್ಯವಾಗಬೇಕು; ಜೀವನಪ್ರೀತಿ ಅತ್ಯಂತ ಮೌಲಿಕವಾದುದು. ಜನತೆಗೆ ದುರಾಸೆ ಕೆಟ್ಟದೆಂಬ ಅರಿವು ಬಂದರೆ ಸಾಕು ಎಷ್ಟೋ ಬದಲಾವಣೆ ಸಾಧ್ಯ... ಗೆಳೆಯರೆ, ನಾವು ಒಟ್ಟಾಗಿ ಚಿಂತಿಸಿ ಹರಡುತ್ತಿರುವ ಯಾವುದೇ ಅತಿರೇಕಗಳಿಲ್ಲದ "ಮಧ್ಯಮ ಮಾರ್ಗ'ವನ್ನು ನೀವು ಇನ್ನಷ್ಟು ಮುಕ್ತವಾಗಿ ಚರ್ಚಿಸಿ, ಅದನ್ನು ವಿಸ್ತರಿಸಿ. ದೇವರು, ಆತ್ಮ, ಕರ್ಮಸಿದ್ಧಾಂತ ಇವುಗಳನ್ನು ಕುರಿತು ಸುಮ್ಮನೆ ಮಾತನಾಡುತ್ತ ಕಾಲಹರಣ ಮಾಡಬೇಡಿ. ನೀವು ಮಾಡಬೇಕಾದ ಕೆಲಸ ಬಹಳಷ್ಟಿದೆ... ಸಂಗಾತಿಗಳೇ... ನೀವೆಲ್ಲರೂ ಈವರೆಗೆ ಕಂಡ ಸತ್ಯಗಳನ್ನು, ಸಂತಸದಿಂದ ಜನರತ್ತ ತಲುಪಿಸಿ... ಸಕಲರ ಏಳಿಗೆಗಾಗಿ ಮತ್ತು ಯಾವುದು ಅತ್ಯಂತ ಹಿತಕಾರಿಯೋ ಅಂತಹ ಕಡೆಗೆ ನಾವು ಸದಾ ಸಾಗುತ್ತಿರಬೇಕು... (ಸ್ವಲ್ಪ ಸುಧಾರಿಸಿಕೊಳ್ಳುತ್ತ).. ಇನ್ನೂ ಏನಾದರೂ ಅನುಮಾನಗಳಿದ್ದರೆ ಕೇಳಿ ಮಿತ್ರರೆ?

ಎಲ್ಲರೂ ಮೌನವಾಗಿದ್ದರು; ಎಲ್ಲೆಲ್ಲೂ ನೀರವತೆ. ಬೆಳದಿಂಗಳು ಗಿಡಮರಗಳ ಎಲೆಗಳ ಮೇಲೆ ಬಿದ್ದು ಪ್ರತಿಫಲಿಸುತ್ತಿದ್ದ ಸೊಬಗನ್ನು ನೋಡುತ್ತ ಬುದ್ಧ ತಲ್ಲೀನನಾದ; ತಂಗಾಳಿಗೆ ಎಲೆಗಳು ತಲೆದೂಗಿದುವು.

ದುಃಖತಪ್ತ ಸಂಘದ ಸಂಗಾತಿಗಳಿಗೆ ತಥಾಗತನ ಮಾತಿನಿಂದ ಈಗ ದಿಕ್ಕು ತೋಚತೊಡಗಿತು.

ಎಲ್ಲೆಲ್ಲೂ ಹಾಲು ಚೆಲ್ಲಿದಂತೆ ದಟ್ಟವಾಗಿದ್ದ ಆ ತುಂಬುಬೆಳದಿಂಗಳಲ್ಲಿ ಅವರೆಲ್ಲರಿಗೂ "ಮಧ್ಯಮ ಮಾರ್ಗ'ದ ಆಳಅಗಲಗಳು ಇನ್ನಷ್ಟು ಸ್ಪಷ್ಟವಾಗತೊಡಗಿದುವು. □

ಆಲಿಬಾಬಾ ಗುಹೆಯ ರಹಸ್ಯ ಮತ್ತು ಬುದ್ಧನ ಬೆಳಕು

ಸುಭಾಷ್ ಪಾಳೇಕರ್ ತಮ್ಮ ನೈಸರ್ಗಿಕ ಕೃಷಿ ಪದ್ಧತಿಗೆ ಹಿನ್ನೆಲೆಯಾಗಿ ವೈಜ್ಞಾನಿಕ ವಿವರಗಳನ್ನು ಕೊಡುವ ಮುನ್ನ ತಮ್ಮ ಈ ನೈಸರ್ಗಿಕ ಕೃಷಿಗೆ ಆಧಾರವಾಗಿರುವ ಕೆಲ ಸಂಗತಿಗಳನ್ನು ಹೇಳಬಯಸುತ್ತಾರೆ. ಅವರ ಮಾತುಗಳಲ್ಲೇ ಕೇಳಿ.

'ನಮ್ಮ ಪ್ರಾಚೀನ ಭಾರತೀಯ ಕೃಷಿಗೆ ಸುಮಾರು ಹತ್ತು ಸಾವಿರ ವರ್ಷಗಳ ಇತಿಹಾಸವಿದೆ. ಮೂಲ ಭಾರತೀಯ ಕೃಷಿ ಪದ್ಧತಿ ಇವತ್ತಿಗೂ ಇಡೀ ಜಗತ್ತಿಗೆ ಆದರ್ಶಪ್ರಾಯವಾಗಿದೆ. ಕಳೆದ ಶತಮಾನದ ಆರಂಭದ ದಿನಗಳಲ್ಲಿ ಬ್ರಿಟನ್ನಿನಿಂದ ಡಾ.ಸರ್ ಆಲ್ಬರ್ಟ್ ವಿಲಿಯಂ ಎಂಬ ಕೃಷಿ ವಿಜ್ಞಾನಿ ಭಾರತಕ್ಕೆ ಬಂದಿದ್ದರು. ಭಾರತದ ಕೃಷಿ ಪದ್ಧತಿ, ಅದರ ಅಭಿವೃದ್ಧಿಗೆ ಸಂಬಂಧಿಸಿ ಕೈಗೊಳ್ಳಬೇಕಾದ ಕ್ರಮ ಇತ್ಯಾದಿ ಕುರಿತು ಅವರು ಬ್ರಿಟಿಷ್ ಸರಕಾರಕ್ಕೆ ವರದಿ ಸಲ್ಲಿಸಬೇಕಾಗಿತ್ತು. ಸರ್ ಆಲ್ಬರ್ಟ್ ವಿಲಿಯಂ ಇಡೀ ದೇಶ ಸುತ್ತಾಡಿದರು. ಅಧ್ಯಯನ ಮಾಡಿದರು, ಸಂಶೋಧನೆ ನಡೆಸಿದರು, ಭಾರತೀಯ ವ್ಯವಸಾಯ ಸಂಸ್ಕೃತಿಯ ಇತಿಹಾಸವನ್ನೆಲ್ಲ ಜಾಲಾಡಿದರು. ಅಂತಿಮವಾಗಿ ಅವರು ತಮ್ಮ ವರದಿಯಲ್ಲಿ 'ನಮ್ಮ ಮುಂದುವರಿದಿರುವ ರಾಷ್ಟ್ರಗಳಿಂದ ಭಾರತೀಯ ರೈತರು ಏನನ್ನೂ ಕಲಿಯಬೇಕಾಗಿಲ್ಲ. ಬದಲಾಗಿ ಅವರಿಂದಲೇ ನಾವು ಕಲಿಯುವಂಥದ್ದು ಬಹಳಷ್ಟಿದೆ. ಆ ಮಟ್ಟಿಗೆ ಭಾರತೀಯ ಕೃಷಿ ಪದ್ಧತಿ ಸ್ವಯಂ ಪರಿಪೂರ್ಣವಾಗಿದೆ'

ಇಂದು ಆ ಚಿತ್ರಣಗಳೆಲ್ಲ ನನ್ನ ಕಣ್ಣ ಮುಂದಿವೆ. ಖಾಲಿ ಈ ನಲವತ್ತು ವರ್ಷಗಳಲ್ಲಿ ನಾವು ಏನಾಗಿ ಹೋಗಿದ್ದೇವೆ? ಕನಸುಗಾರ ನೆಹರೂ 'ಹಸಿರು ಕ್ರಾಂತಿ'ಗೆ ಚಾಲನೆ ನೀಡಿದರು. ಮಿಶ್ರ ಆರ್ಥಿಕ ನೀತಿಯನ್ನು ಜಾರಿಗೆ ತಂದರು. ಇಲ್ಲಿ ಬಂಡವಾಳಶಾಹಿ–ಶ್ರಮಜೀವಿ ಇಬ್ಬರೂ ಉದ್ಧಾರವಾಗಲಿಲ್ಲ. 'ಹಸಿರು ಕ್ರಾಂತಿ' ಮತ್ತು ಮಿಶ್ರ ಆರ್ಥಿಕ ನೀತಿ – ಈ ಎರಡರಲ್ಲೂ ಇದ್ದ ತಪ್ಪುಗಳ ಪರಿಣಾಮವನ್ನು ಎಲ್ಲರೂ ಉಂಡಿದ್ದೇವೆ, ಮತ್ತೂ ಉಣ್ಣುತ್ತಿದ್ದೇವೆ.

ಭಾರತಕ್ಕೆ ಆರ್ಯರು ಬರುವ ಮುಂಚೆಯೇ ಇಲ್ಲಿ ಸಮೃದ್ಧವಾದ ಕೃಷಿ ಪದ್ಧತಿ ಮತ್ತು ಸಂಸ್ಕೃತಿ ಇತ್ತು. ಹರಪ್ಪ, ಮಹೇಂಜಧಾರೋ ಉತ್ಖನನ ಎಷ್ಟೆಲ್ಲ ರಹಸ್ಯಗಳನ್ನು ಹೊರಗೆಡವಿತು! ನಮ್ಮ ಪ್ರಾಚೀನ ಭಾರತೀಯ ಋಷಿ – ಮುನಿಗಳು ಕೃಷಿಯಲ್ಲಿ ಬಹುವಾಗಿ ಆಸ್ಥೆ ವಹಿಸಿದ್ದರು. ಅವರ ಸತತ ಪ್ರಯೋಗಶೀಲತೆಯ ಪರಿಣಾಮವಾಗಿ ಕೃಷಿ ಹಂತ ಹಂತವಾಗಿ ಅಭಿವೃದ್ಧಿ ಯಾಯಿತು. ಪ್ರಾಚೀನ ನೈಸರ್ಗಿಕ ಕೃಷಿ ಸಂಸ್ಕೃತಿಯ ಕುರುಹುಗಳನ್ನು ನಮ್ಮ ಇವತ್ತಿನ ವಿಧರ್ಬಾ ಪ್ರದೇಶದಲ್ಲಿ ಕಾಣಬಹುದು. ಇಲ್ಲಿನ ರೈತಾಪಿ ಮಹಿಳೆಯರು 'ಋಷಿ ಪಂಚಮಿ' ಎಂಬ ಹಬ್ಬ ಆಚರಿಸುತ್ತಾರೆ. ಸೇಂದ್ರೀಯ ಪದ್ಧತಿಯಲ್ಲಿ ಬೆಳೆ ಬೆಳೆದು; ಬೆಳೆದ ಹಣ್ಣು, ಧಾನ್ಯ, ತರಕಾರಿಗಳನ್ನು ಹರಿವ ನೀರಿನಲ್ಲಿ ಬಿಟ್ಟು ಅಂದು ಉಪವಾಸ ಆಚರಿಸುವರು. ಪ್ರಾಚೀನ ಸಂಸ್ಕೃತಿಯ ಅದೆಷ್ಟೋ ಉಪಯುಕ್ತ ಮೌಲ್ಯಗಳನ್ನು ಅಲ್ಲಲ್ಲಿ ನಮ್ಮ ಹಳ್ಳಿಗಾಡಿನ ರೈತಾಪಿ ಮಹಿಳೆಯರು ಪೀಳಿಗೆಯಿಂದ ಪೀಳಿಗೆಗೆ ವರ್ಗಾಯಿಸಿಕೊಂಡು ಬಂದಿದ್ದಾರೆ.

ಆರ್ಯರು ಇಲ್ಲಿಗೆ ಬಂದ ಬಳಿಕ, ಅಲ್ಲಲ್ಲೇ ನೆಲೆಯೂರಿ ನಿಲ್ಲುವಂತಾದ ಬಳಿಕ ಕೃಷಿ ವಿಧಾನಗಳು ಬದಲಾಗುತ್ತಾ, ಅಭಿವೃದ್ಧಿಯಾಗುತ್ತಾ ಸಾಗಿಬಂದವು. ನಮ್ಮದೇ ಪ್ರಾಚೀನ ಕೃಷಿ ಪದ್ಧತಿ ಮತ್ತು ಸಂಸ್ಕೃತಿಯ ಮೇಲೆ ರೂಪುಗೊಂಡ ವೇದಗಳಲ್ಲಿ ನಾನಾಬಗೆಯ ಕೃಷಿ ಪದ್ಧತಿಗಳ ಉಲ್ಲೇಖಗಳಿವೆ. ಬುದ್ಧ, ಅಶೋಕ, ಅಕ್ಬರ್ ಮುಂತಾದ ಯಾರ ಕಾಲವೇ ಆಗಿರಲಿ ಎಲ್ಲವೂ ಕೃಷಿಯ ಮೇಲೆಯೆ ಅವಲಂಬಿತವಾಗಿದ್ದವು.

ಅಥರ್ವಣ ವೇದಶಾಸ್ತ್ರದಲ್ಲಿ ಒಂದು ಶ್ಲೋಕ ಹೀಗಿದೆ. 'ಜೀವೊ ಜೀವಸ್ಯ ಜೀವನಂ, ಜೀವ ಜೀವಾತ ಜಾಯತೇ'. ಇದರ ಅರ್ಥವ್ಯಾಪ್ತಿಯ ಹರಹು ದೊಡ್ಡದು. ಸಂಕ್ಷಿಪ್ತವಾಗಿ ಹೇಳುವುದಾದರೆ ಜೀವವು ಜೀವವನ್ನು ಬೆಳಗಿಸುತ್ತದೆ. ಜೀವ, ಜೀವದಿಂದ ಜೀವಕ್ಕೆ ಸಾಗುತ್ತದೆ ಮತ್ತು ಜೀವವು ಜೀವದಲ್ಲೆ ಲೀನವಾಗುತ್ತದೆ. ನೈಸರ್ಗಿಕ ಕೃಷಿಯಲ್ಲಿ, ಪರಿಸರದಲ್ಲಿ ಈ ತತ್ವ ಅಡಗಿದೆ.

ಬುದ್ಧನ ಮೂಲಕ ಅವನ ಪ್ರೀತಿ, ಕಾರುಣ್ಯದ ಬೆಳಕಿನಲ್ಲಿ ಈ ದೇಶ ಪ್ರಜ್ವಲಿಸಿತ್ತು. ಬುದ್ಧನಿಗೂ ಮುಂಚೆ ಭಾರತದಲ್ಲಿ ಯಜ್ಞ, ಯಾಗಾದಿಗಳು ಅತಿರೇಕದ ಮಟ್ಟ ದಾಟಿದ್ದವು. ಹಿಂಸೆಯ ತತ್ವ ಮತ್ತು ಆರ್ಭಟಗಳು ಪ್ರಬಲವಾಗಿದ್ದವು. ಬುದ್ಧನ ಆಗಮನ ಹೊಸ ಅರಿವು, ಬೆಳಕು, ಬದಲಾವಣೆಗಳಿಗೆ ದಾರಿ ಮಾಡಿಕೊಟ್ಟಿತ್ತು.

ಜಪಾನಿನ ಮಸನೊಬು ಫುಕುವೋಕರ ಬಗೆಗೆ ಮೊದ ಮೊದಲು ನಮ್ಮ ಪುಣೆ, ಮುಂಬಯಿಗಳಲ್ಲೆಲ್ಲ ಬರಿ ತಪ್ಪು, ತಪ್ಪು ಮಾಹಿತಿಗಳೇ ಇದ್ದವು. 'ಎರೆಹುಳು ತಂದು ವರ್ಮಿ ಕಾಂಪೋಸ್ಟ್ ಮಾಡುತ್ತಾರೆ, ಧ್ಯಾನ ಮಾಡುತ್ತಾರೆ, ತಪಸ್ಸು ಮಾಡುತ್ತಾರೆ, ಅಗ್ನಿಹೋತ್ರಿ ಯಾಗ ಮಾಡುತ್ತಾರೆ, ಯೋಗ ಮಾಡುತ್ತಾರೆ ಹಾಗೆ–ಹೀಗೆ ಅಂತೆಲ್ಲ. ನಮ್ಮ ಮರಾಠಿ ಪತ್ರಿಕೆಗಳು ಕೂಡ ಇದೇ ಅರ್ಥ ಬರುವಂತೆ ಬರೆಯುತ್ತಿದ್ದವು. ಇದೆಲ್ಲ ಸುಳ್ಳು ಅಂತ ಗೊತ್ತಾದದ್ದು ನಾನವರನ್ನು ಕಂಡು ಮಾತಾಡಿಸಿದ ಮೇಲೆಯೇ. ಫುಕುವೋಕರಲ್ಲಿ

ನೈಸರ್ಗಿಕ ಕೃಷಿ

ಈ ಜಗತ್ತು ಜೀವ ತಳೆದು ಇಷ್ಟು ಸಾವಿರ ವರ್ಷಗಳಾದವು. ಈ ಭೂಮಿಯ ಮೇಲೆ ವ್ಯವಸಾಯ ಶುರುವಾಗಿ ಹತ್ತು ಸಾವಿರ ವರ್ಷಗಳಾದವು. ಬೇಸಾಯದಲ್ಲಿ ಸಗಣಿ ಬಳಕೆಗೆ ಬಂದು ಐದೂವರೆ ಸಾವಿರ ವರ್ಷಗಳಾದವು. ಈ ಭೂಮಿಯ ಮೇಲೆ ಬೇಸಾಯ ಕಲೆ ಎಂಬುದು ಹತ್ತು ಸಾವಿರ ವರ್ಷಗಳಿಂದ ಬಾಳಿ, ಬದುಕಿ, ಬೆಳೆದು ಬಂದಿದೆ. ಜೊತೆಗೆ ಕಳೆದ ಈ ಐವತ್ತು ವರ್ಷಗಳಲ್ಲಿ ಅದು ಕೆಡಬಾರದಷ್ಟು ಕೆಟ್ಟಿದೆ. ಈ ಕಾರಣಕ್ಕೆ ಇಡೀ ಜಗತ್ತು ಮರಣೋನ್ಮುಖಿಯಾಗಿದೆ. ಇಂಥ ಮರಣೋನ್ಮುಖಿ ಯಾದ ಜಗತ್ತನ್ನು ಸುಭಾಷ್ ಪಾಳೇಕರರ ನೈಸರ್ಗಿಕ ಕೃಷಿ ವಿಜ್ಞಾನ ಜೀವೋನ್ಮುಖಿಯಾಗಿಸಲು ಹೊರಟು ನಿಂತಿದೆ.

○ಸ್ವಾಮಿ ಆನಂದ್.ಅರ್

ಶೂನ್ಯ ಬಂಡವಾಳ - ಸಮೃದ್ಧ ಬೆಳೆ

3

ಪಾಳೇಕರರ ಜೀವಾಮೃತ



ಬುದ್ಧನ ಪ್ರಭಾವ ಗಾಢವಾಗಿದೆ. ಬುದ್ಧನ ಕಾಣ್ಕೆಗಳು ಅವರ ವ್ಯವಸಾಯ ಭೂಮಿಯಲ್ಲಿ ಪ್ರತಿಫಲನಗೊಳ್ಳುತ್ತವೆ. 'ಕೊಡುವುದು-ಪಡೆಯುವುದು ಮತ್ತು ಪಡೆದುದನ್ನು ಪಡೆದಲ್ಲಿಗೇ ಹಿಂದಿರುಗಿಸುವುದು' ಫುಕುವೋಕರ ಬೇಸಾಯ ಕ್ರಮದಲ್ಲಿ ಅಡಗಿರುವ ತತ್ವ. 'ಜೀವೋ ಜೀವಸ್ಯ ಜೀವನಂ, ಜೀವ ಜೀವಾತ ಜಾಯತೇ' ಶ್ಲೋಕವನ್ನು ಫುಕುವೋಕರ ಬಾಳು ಮತ್ತು ಕೃಷಿಗೆ ಅನ್ವಯಿಸಲು ಯತ್ನಿಸುತ್ತೇನೆ. ನಿಸರ್ಗದಲ್ಲಿ ಈ ನಿಯಮ ಅಡಗಿದೆ ಎಂಬುದನ್ನು ನಾನು ವಿಶೇಷವಾಗಿ ಹೇಳಬೇಕಾಗಿಲ್ಲ ಅಲ್ಲವೆ?

ನಾನು ಕೃಷಿ ವಿಜ್ಞಾನದಲ್ಲಿ ಪದವಿ ಪಡೆದ ವ್ಯಕ್ತಿ. ಆಕಳ ಸಗಣಿ, ಗಂಜಳ ಕುರಿತು ನಾನು ಹೊಸದಾಗಿ ಹೇಳುತ್ತಿಲ್ಲ. ಐದು ಸಾವಿರ ವರ್ಷಗಳ ಹಿಂದೆಯೇ ನಮ್ಮ ವ್ಯವಸಾಯ ಕ್ರಮದಲ್ಲಿ ಸಗಣಿಗಿರುವ ಮಹತ್ವದ ಅರಿವಾಗಿದೆ. ಆ ಮಹತ್ವದ ಅರಿವು ಮಾಡಿಕೊಟ್ಟವರು ನಮ್ಮ ಗೊಲ್ಲರು. ಈ ಆಧುನಿಕ ಬೇಸಾಯದ ಕಾಲಘಟ್ಟದಲ್ಲಿ ನಮ್ಮ ಹೊಸ ತಲೆಮಾರಿನ ರೈತರು ಹಳೆಯದನ್ನೆಲ್ಲ ಮರೆತಿದ್ದಾರೆ. ರಾಸಾಯನಿಕ ಗೊಬ್ಬರ, ಕ್ರಿಮಿನಾಶಕ, ಕೀಟನಾಶಕ ಬಳಸಿ ಮಾಡುವ ಕೃಷಿಯಲ್ಲಿ ಅವರಿಗೆ ಭವಿಷ್ಯವೇ ಇಲ್ಲ. ಬೆಳೆಯುವ ನೆಲ ಮತ್ತು ಸುತ್ತಲ ಪರಿಸರ ಉಸಿರು ಕಟ್ಟಿಸುವಂತೆ ಮಾಡಿರುವಾಗ ನಮ್ಮ ರೈತ ಹಳೆಯದಕ್ಕೆ ಹಿಂದಿರುಗಲಾಗದೆ, ಹೊಸದರಲ್ಲಿ ಬಾಳಲಾಗದೆ ಪರಿತಪಿಸುತ್ತಿದ್ದಾನೆ. ಈ ನಡುವೆ ವ್ಯವಸಾಯ ಭೂಮಿಗೆ ಅರ್ಥಹೀನ ಅಗ್ನಿಹೋತ್ರಿಯಾಗ, ಪಂಚಗವ್ಯ, ವರ್ಮಿ ಕಾಂಪೋಸ್ಟ್, ಬಯೋ ಕಾಂಪೋಸ್ಟ್ ಇತ್ಯಾದಿಗಳು ಬಂದಿವೆ. ಚಿತ್ರ ವಿಚಿತ್ರ ವಿಧಾನಗಳೆಲ್ಲ ಜಾರಿಗೆ ಬಂದು ವ್ಯವಸಾಯ ಎಂಬುದು ಪೂರ್ತಿ ಕಗ್ಗಂಟಿನ ವ್ಯವಹಾರವಾಗತೊಡಗಿದೆ. ರಾಸಾಯನಿಕ ಗೊಬ್ಬರ, ಕೀಟ ಹಾಗೂ ಕಳೆನಾಶಕಗಳು ನಮ್ಮ ವ್ಯಕ್ತಿತ್ವಗಳನ್ನು, ನಮ್ಮ ಅರಿವಿಗೇ ಬಾರದಂತೆ ವಿಕಾರಗೊಳಿಸಿಬಿಟ್ಟಿವೆ. ಇದರಿಂದಾಗಿ ಅನಾರೋಗ್ಯಕರ ಮನಸ್ಸು ಮತ್ತು ಅನಾರೋಗ್ಯಕರ ಸಮಾಜ ನಿರ್ಮಾಣವಾಗುತ್ತಿದೆ. ನಮ್ಮ ರಾಜಕಾರಣವೂ ಈ ಅನಾರೋಗ್ಯಕರ ಸಮಾಜದ ಒಂದು ಭಾಗವೇ ಆಗಿದೆ. ಈ ಅವಘಡದ ಅರಿವು ಇಂದು ಬಹುತೇಕ ಎಲ್ಲೆಲ್ಲೂ ಕಾಣಿಸಿಕೊಳ್ಳುತ್ತಿದೆ.

ಆರಂಭದಲ್ಲಿ ನಾನು ಕೃಷಿಗೆ ಸಂಬಂಧಿಸಿದ ದೇಶ-ವಿದೇಶಗಳ ಗ್ರಂಥಗಳನ್ನೆಲ್ಲ ಪರಿಶೀಲಿಸುತ್ತ ಬಂದೆ. ಹಾಗೆಯೇ ನಮ್ಮ ಪ್ರಾಚೀನ ಬೇಸಾಯ ಕ್ರಮ, ವೇದಗಳಲ್ಲಿ ಹುದುಗಿ ಹೋಗಿದ್ದ ಸಂಗತಿಗಳತ್ತೆಲ್ಲ ಕಣ್ಣಾಡಿಸಿದೆ. ಹಾಗೆಯೇ ಇವತ್ತಿಗೂ ಆ ಬೇಸಾಯ ಪದ್ಧತಿಯ ಲಕ್ಷಣಗಳನ್ನೆಲ್ಲ ಒಳಗೊಂಡಿದ್ದ ಆದಿವಾಸಿ ಬುಡಕಟ್ಟು ಜನರ ಪ್ರದೇಶಗಳಿಗೆಲ್ಲ ಪದೇ ಪದೆ ಎಡತಾಕಿದೆ. ಮಾನವ ಹಸ್ತಕ್ಷೇಪವಿರದ ನಮ್ಮ ಅರಣ್ಯಗಳು, ಪಾಳುಬಿದ್ದ ಜಮೀನುಗಳು, ಕೆರೆ-ಕಟ್ಟೆ ನಡುವಿನ ಹಂದರಗಳು, ಬೆಟ್ಟ-ಗುಡ್ಡಗಳು, ನದಿ ಪಾತ್ರಗಳು; ಅತಿ ಹೆಚ್ಚು ಮಳೆ ಬರುವ ಮತ್ತು ಅತಿ ಕಡಿಮೆ ಮಳೆ ಇರುವ ಪ್ರದೇಶಗಳು; ಋತುಮಾನಗಳು, ಸ್ಥಳೀಯ ಬೀಜಗಳು, ಬೆಳೆಗಳು, ಜನರ ಆಹಾರ ಪದ್ಧತಿ; ಅತಿವೃಷ್ಟಿ, ಅನಾವೃಷ್ಟಿ ಇತ್ಯಾದಿ ಸಂಗತಿಗಳನ್ನೆಲ್ಲ ಗಮನವಿಟ್ಟು ಅಧ್ಯಯನ ನಡೆಸುತ್ತಾ ಬಂದೆ. ಇಷ್ಟಾದರೂ ಕಲಿಯುವುದು, ನೋಡುವುದು, ತಿಳಿಯುವುದು ಬಹಳಷ್ಟಿದೆ.

ಇಷ್ಟೆಲ್ಲ ಆದ ಮೇಲೆಯೆ ನನಗೆ ಆಲಿಬಾಬನ ಗುಹೆಯ ರಹಸ್ಯದ ಅರಿವಾಗಿದ್ದು. ಆ ರಹಸ್ಯ ಇಷ್ಟೆ: 'ನಿಸರ್ಗವನ್ನು ಅರಿಯುವುದು'. ನಿಸರ್ಗದಲ್ಲೇ ಎಲ್ಲವೂ ಅಡಗಿದೆ. ನಾವು ಮಾತ್ರ ವ್ಯರ್ಥ ಸರ್ಕಸ್ ಮಾಡುತ್ತಿದ್ದೇವೆ ಅಷ್ಟೆ. ನನಗೂ ಮೊದಲು ಇದು ಫುಕುವೋಕರಿಗೆ



ಅರ್ಥವಾಗಿದೆ. ಈ ಸೃಷ್ಟಿಯಲ್ಲಿ ಮಾನವನಿಗೂ ಮುಂಚೆ ಮರಗಿಡಗಳು ಬಂದಿವೆ. ನಿಸರ್ಗವು ಮರಗಿಡಗಳಿಗೆ ಈ ಭೂಮಿಯೊಂದಿಗೆ ಅಚಲ ಸಂಬಂಧವನ್ನು ಕಲ್ಪಿಸಿದೆ. ಅವುಗಳ ಸಂರಕ್ಷಣೆಯನ್ನೂ ನಿಸರ್ಗವೇ ಮಾಡಿದೆ. ನಿಸರ್ಗವು ಸೃಷ್ಟಿಯ ಕ್ರಿಯೆಯಲ್ಲಿ ತಾನು ಸೃಷ್ಟಿಸುವ ಪ್ರತಿಯೊಂದು ವಸ್ತುವಿನ ಪಾಲನೆ, ಪೋಷಣೆಯನ್ನು ತಾನೇ ಮಾಡುತ್ತದೆ. ಮಗು ಹುಟ್ಟುವ ಮುಂಚೆಯೇ ತಾಯಿಯ ಎದೆಯಲ್ಲಿ ಹಾಲು ಸೃಷ್ಟಿಯಾಗುತ್ತದೆ. ಮಗುವಿಗೆ ಮೂರು ವರ್ಷಗಳಾಗುವವರೆಗೆ ಈ ಕ್ರಿಯೆ ನಿರಂತರ. ನಿಸರ್ಗಕ್ಕೆ ಎಲ್ಲರ ಮತ್ತು ಎಲ್ಲದರ ಕುರಿತು ಕಾಳಜಿ ಇದೆ. ಇಷ್ಟು ಸರಳ ಸಂಗತಿ ಅರ್ಥವಾದರೆ ಸಾಕು. ಬೀಜ ಬಿತ್ತಿ, ಬೆಳೆ ಬೆಳೆಯುವ ರೈತಾಪಿ ಕೆಲಸ ಸಲೀಸಾಗುತ್ತದೆ.

ಒಮ್ಮೆ ನನ್ನನ್ನು ಗೋವಾದ ಕೃಷಿಕರ ವಾರ್ಷಿಕ ಸಮ್ಮೇಳನಕ್ಕೆ ಅಲ್ಲಿನ ಸರಕಾರ ಆಹ್ವಾನಿಸಿತ್ತು. ಅಲ್ಲಿನ ವಿಶ್ವವಿದ್ಯಾಲಯದ ಅಧ್ಯಾಪಕರು ಮತ್ತು ಕೃಷಿ ಅಧಿಕಾರಿಗಳು ಗೋವಾದ ಕಾಡುಗಳಲ್ಲಿ ಸಹಜವಾಗಿ ಬೆಳೆದಿರುವ ಗೇರು ಮರಗಳನ್ನೂ, ತಾವೇ ತಮ್ಮ ಸಂಶೋಧನಾ ಕೇಂದ್ರದಲ್ಲಿ ಬೆಳೆಸಿರುವ ಮರಗಳನ್ನೂ ತೋರಿಸಿದರು. ಕಾಡಿನಲ್ಲಿ ಬೆಳೆದ ಗೇರು ಬೀಜಗಳು ಪೂರ್ಣ ವಿಷಮುಕ್ತ, ಸ್ವಾದಿಷ್ಟ ಮತ್ತು ಸತ್ವಪೂರಿತ. ಜೊತೆಗೆ ಇಳುವರಿಯೂ ಹೆಚ್ಚು. ಈ ಕಾಡುಗಳಿಂದ ಗೇರು ಫಸಲು ತರುವವರು ವರ್ಷಕ್ಕೊಮ್ಮೆ ಮಾತ್ರ ಕಾಡಿಗೆ ಹೋಗುತ್ತಾರೆ. ಉಳಿದ ದಿನಗಳಲ್ಲಿ ಅವುಗಳತ್ತ ತಿರುಗಿಯೂ ನೋಡುವುದಿಲ್ಲ. ಆದರೆ ಗೇರು ಸಂಶೋಧನಾ ಕೇಂದ್ರದಲ್ಲಿ ಎಲ್ಲ ಬಗೆಯ ಕಾಳಜಿ ವಹಿಸಿ, ಗೊಬ್ಬರ, ನೀರು ನೀಡಿ ಆರೈಕೆ ಮಾಡಿ, ರೋಗಗಳ ಹತೋಟಿಗೆ ಔಷಧಿ ಸಿಂಪಡಿಸಿದ್ದರೂ ಇಳುವರಿ ಕಡಿಮೆ ಮತ್ತು ಕಾಳಿನ ಗಾತ್ರ, ಸತ್ವದಲ್ಲೂ ಕುಂದು. ಅಲ್ಲಲ್ಲಿ ಅರಣ್ಯಗಳಲ್ಲಿ ಕಾಣಸಿಗುವ ನಿಂಬೆ, ಮಾವು, ಹುಣಸೆ ಮುಂತಾದ ಮರಗಳನ್ನು ಗಮನಿಸಿ. ಪ್ರತಿಯೊಂದು ಮರದಲ್ಲೂ ಎಲೆಗಳು ಕಡಿಮೆ ಇರುತ್ತವೆ. ಆದರೆ ಫಸಲು ಮಾತ್ರ ಹೆಚ್ಚು. ತೌಲನಿಕವಾಗಿ ಕೃಷಿ ವಿ.ವಿ.ಗಳ ಸಂಶೋಧನಾ ಕೇಂದ್ರದಲ್ಲಿರುವ ಮರಗಳನ್ನು ಗಮನಿಸಿ. ನಾನು ವಿಧರ್ಬಾ ಮತ್ತು ಆದಿವಾಸಿ ಪ್ರದೇಶಗಳಲ್ಲಿ ಸುತ್ತಾಡುವಾಗ ಕೂಡ ಇದನ್ನು ಗಮನಿಸಿದ್ದೇನೆ. ಮಾನವ ಹಸ್ತಕ್ಷೇಪ ಇಲ್ಲದೆಡೆಯಲ್ಲೆಲ್ಲ ಫಸಲಿಗೆ ಯಾವ ಕುಂದೂ ಇರುವುದಿಲ್ಲ. ಕೀಟಗಳನ್ನೂ ಕೂಡ ನಿಸರ್ಗವೇ ನಿಯಂತ್ರಿಸುತ್ತದೆ. ವಿಧರ್ಬಾ ಪ್ರದೇಶದಲ್ಲಿ ರೈತರ ಹೆಚ್ಚಿನ ಹಸ್ತಕ್ಷೇಪವಿಲ್ಲದೆ ಬೆಳೆದ ಕಿತ್ತಳೆ ತೋಟಗಳು ಫಲಭರಿತವೂ, ಆರೋಗ್ಯ ಪೂರ್ಣವೂ ಆಗಿರುತ್ತವೆ. ಅಲ್ಲಿನ ಹೊಂಬಣ್ಣದ ಕಿತ್ತಳೆಗೆ ವಿಶಿಷ್ಟ ರುಚಿ, ಸ್ವಾದಗಳೆಲ್ಲ ಇವೆ. ನಾನು ಆ ಎಲ್ಲ ಮೂಲಗಳಿಂದ ರೈತಾಪಿ ಜನರಿಗೆ ನೆರವಾಗುವ ಶ್ರೇಷ್ಠವೂ, ಉತ್ಕೃಷ್ಟವೂ ಆದ ಸಂಗತಿಗಳನ್ನು ತಂದಿದ್ದೇನೆ. ಹಾಗೆಯೇ ದೇಸಿ ಆಕಲ ಸಗಣಿ, ಗಂಜಳಗಳಲ್ಲಿರುವ ಮಹತ್ವವನ್ನು ಕೂಡ ಅರ್ಥಮಾಡಿಕೊಂಡಿದ್ದೇನೆ. ನಮ್ಮ ಪ್ರಯೋಗಾಲಯದಲ್ಲಿ ದೇಶ-ವಿದೇಶಗಳ ನಾನಾ ಭಾಗಗಳ ನಾನಾ ತಳಿಯ ಜಾನುವಾರುಗಳ ಸಗಣಿ, ಗಂಜುಳಗಳ ಮೇಲೆಲ್ಲ ನಾವು ಪ್ರಯೋಗ ನಡೆಸಿದ್ದೇವೆ. ಈ ಹಿನ್ನಲೆಯಲ್ಲೇ ನಾನು ದೇಸಿ ಆಕಳುಗಳ ಕರುಳಲ್ಲಿ ಹುಟ್ಟುವ ಪಿಎಸ್‌ವಿ ಬ್ಯಾಕ್ಟೀರಿಯಾಗಳಿಂದಾಗಿ ಅವುಗಳ ತೊಪ್ಪೆ ಮತ್ತು ಗಂಜುಳಗಳಲ್ಲಿ ಬೆಳೆಗೆ ಪೂರಕವಾದ ಕೋಟ್ಯಾನುಕೋಟಿ ಜೀವಾಣುಗಳು ಸೃಷ್ಟಿಯಾಗುತ್ತವೆ, ಇದು ನಿಸರ್ಗ ಸೃಷ್ಟಿ; ಮಾನವ ಸೃಷ್ಟಿ - ಅಲ್ಲ ಎಂದಿರುವುದು.

ಸೃಷ್ಟಿ ಕ್ರಿಯೆಯಲ್ಲಿ ನಿಸರ್ಗವು ಕ್ಷಣ ಕ್ಷಣವೂ ಹೊಸ ಹೊಸ ಹೊಸ ಸೃಷ್ಟಿಯ ಬಗ್ಗೆ ಗಮನ ಹರಿಸುತ್ತದೆ. ಅದರಲ್ಲಿ ಏಕತೆ ಇರುವುದಿಲ್ಲ. ವೈವಿಧ್ಯತೆಗೆ ಹೆಚ್ಚು ಒತ್ತು. ಮಾನವ ಸಮಾಜವನ್ನೆ ಗಮನಿಸಿ; ಒಬ್ಬ ವ್ಯಕ್ತಿ ಇದ್ದಂತೆ ಮತ್ತೊಬ್ಬ ಇರಲಾರ. ಅವಳಿ-ಜವಳಿ, ತ್ರಿವಳಿಗಳು ಇದ್ದರೂ ವ್ಯಕ್ತಿತ್ವದಲ್ಲಿ ಭಿನ್ನತೆ ಇರುತ್ತದೆ. ರೂಪ, ಆಕಾರಗಳಲ್ಲೂ ಭಿನ್ನತೆಯನ್ನು ಗಮನಿಸಬಹುದು. ಅದೇ ರೀತಿ ಒಂದು ಮರದ ಫಲ ಮತ್ತೊಂದು ಮರದ ಫಲದಂತೆ ಇರುವುದಿಲ್ಲ. ಅಷ್ಟೇ ಅಲ್ಲ, ಪ್ರತಿಯೊಂದು ಮರದ ಪ್ರತಿಯೊಂದು ಫಲವೂ ಬೇರೆ ಬೇರೆಯಾಗಿರುತ್ತದೆ. ಕಿತ್ತಳೆ, ದ್ರಾಕ್ಷಿ, ಮಾವು, ದಾಳಿಂಬೆ, ಮೋಸಂಬಿ, ಬಾಳೆ - ಹೀಗೆ ಪ್ರತ್ಯೇಕ ಗಿಡಗಳಲ್ಲಿ ಪ್ರತ್ಯೇಕವಾದ ಸ್ವಭಾವ, ವೈಶಿಷ್ಟ್ಯಗಳಿರುತ್ತವೆ. ಅವುಗಳ ಜೀವಾಣುಗಳು ಕೂಡ ಬೇರೆ ಬೇರೆಯಾಗಿಯೆ ಇರುತ್ತವೆ.

ನಮ್ಮ ದೇಶದ ಒಟ್ಟು 32 ಕೋಟಿ 90 ಲಕ್ಷ ಹೆಕ್ಟೇರು ಭೂಮಿ ಜೈವಿಕವಾಗಿ ವಿವಿಧ ಬಗೆಗಳನ್ನು, ಸ್ವರೂಪಗಳನ್ನು, ಭಾವನೆಗಳನ್ನು ಒಳಗೊಂಡಿದೆ. ಭಾರತದಲ್ಲಿ ವನಸ್ಪತಿಯ 48 ಸಾವಿರ ಜಾತಿಗಳಿವೆ. 80 ಸಾವಿರ ಉಪಜಾತಿಗಳಿವೆ. ಹಾಗೆಯೇ ಲಕ್ಷೋಪಲಕ್ಷ ಪ್ರಾಣಿ, ಕೀಟಗಳ ಜಾತಿ, ಉಪಜಾತಿಗಳಿವೆ. ಈ ವೈವಿಧ್ಯತೆಯಿಂದಾಗಿಯೆ ಇವೆಲ್ಲವೂ ಒಂದಕ್ಕೊಂದು ಸಂಬಂಧವನ್ನು ಹೊಂದಿವೆ. ಅವು ಒಂದನ್ನೊಂದು ಅವಲಂಬಿಸಿ ಬಾಳುತ್ತವೆ ಮತ್ತು ಇತರರನ್ನು ಬಾಳಲು ಬಿಡುತ್ತವೆ. ಹೀಗಾಗಿಯೇ ನಾವು ಬೆಳೆ ಬೆಳೆಯುವ ಪದ್ಧತಿಯಲ್ಲಿ ಮಿಶ್ರ ಬೆಳೆಗಳಿಗೆ ಹೆಚ್ಚು ಒತ್ತು ಕೊಡಬೇಕು.

ಇರಲಿ. ಮುಂದಿನ ಸಂಗತಿಗಳಿಗೆ ಹೋಗುವ ಮುನ್ನ ಈ ಪೀಠಿಕೆ ಅನಿವಾರ್ಯವಾಗಿತ್ತು. ನನ್ನ ವಿಚಾರವೇ ಶ್ರೇಷ್ಠ, ಎಲ್ಲವೂ ನನ್ನದೆ ಅನ್ನುವುದು ಯಾವುದೂ ಇಲ್ಲ. ನಾವು ಮುಖ್ಯವಾಗಿ ನಿಸರ್ಗವನ್ನು ಅರ್ಥಮಾಡಿಕೊಳ್ಳಬೇಕು. ಬೇಸಾಯದ ವಿಷಯದಲ್ಲಿ, ನಾವು ಬೆಳೆಯುವ ಬೆಳೆಗಳ ವಿಷಯದಲ್ಲಿ ನಮಗಿರ ಬೇಕಾದ ಜವಾಬ್ದಾರಿ ಎಷ್ಟು; ನಮ್ಮ ಶ್ರಮ, ಕಾಳಜಿ ಎಷ್ಟರ ಮಟ್ಟಿಗಿರಬೇಕು ಇತ್ಯಾದಿಗಳ ಕುರಿತಂತೆ ಹೇಳುತ್ತಾ ಹೋಗುವೆ. ನಾವು ಪಡೆಯುವ ತಿಳುವಳಿಕೆ ನಮ್ಮ ನಮ್ಮ ಮಟ್ಟಗಳಲ್ಲೇ ಉಳಿದು ಹೋಗಬಾರದು. ನೆರೆಹೊರೆಯ ರೈತನಿಗೂ, ನಮ್ಮ ಸುತ್ತಲ ಸಮುದಾಯಕ್ಕೂ ಇದನ್ನು ತಿಳಿಸಿ ಹೇಳಬೇಕು. ಸಾಲಗಳಿಲ್ಲದ, ಋಣಭಾರಗಳಿಲ್ಲದ ರೈತ, ಸ್ವಾವಲಂಬಿ ಹಳ್ಳಿ, ಸದೃಢ ಗ್ರಾಮಭಾರತ ನಿರ್ಮಾಣವಾಗಬೇಕು. ವೈವಿಧ್ಯತೆಗಳ ನಡುವೆಯೇ ಪರಸ್ಪರ ಸಹಕಾರ, ಸಮಾನತೆ, ಸಹಬಾಳ್ವೆ - ಇದು ನಿಸರ್ಗ ನಿಯಮ.

(ಮುಂದುವರೆಯುವುದು)

ಚರ್ಚೆ

'ಅಹಿಂದ' ಕುರಿತ ಚರ್ಚೆ ನಾಡಿನಲ್ಲೀಗ ವ್ಯಾಪಕವಾಗಿ ನಡೆಯುತ್ತಿದೆ. ೧೯೯೮ರಲ್ಲಿ ಕೋಲಾರದಲ್ಲಿ ಆರಂಭಗೊಂಡಿದ್ದ 'ಅಹಿಂದ' ಇಂದು ರಾಜಕೀಯ ಸ್ಥಿತ್ಯಂತರಗಳಿಂದಾಗಿ ಇಡೀ ನಾಡಿನಲ್ಲಿ ಸಂಚಲನವನ್ನು ಹುಟ್ಟಿ ಹಾಕಿದೆ. ಸಾಮಾಜಿಕ ಬದಲಾವಣೆಗೆ ಕಾರಣವಾಗುವ ಇಂಥ ಚರ್ಚೆಗಳು ಆರಂಭವಾದಾಗಲೆಲ್ಲಾ 'ಸಂವಾದ' ಪತ್ರಿಕೆ ತಳೆದಿರುವ ಆರೋಗ್ಯಕರ ನಿಲುವು ಹಾಗೂ ಅದು ರೂಪಿಸುತ್ತಾ ಬಂದಿರುವ ಚಿಂತನೆಗಳ ಬಗೆಗೆ 'ಸಂವಾದ'ದ ಓದುಗರಿಗೆಲ್ಲ ಅರಿವಿದೆ. 'ಅಹಿಂದ' ರಾಜಕಾರಣವು ದಿಕ್ಕು ತಪ್ಪದಂತೆ ನಡೆಯಲು ಕರ್ನಾಟಕದ ಪ್ರಜ್ಞಾವಂತ ವಲಯ ಈ ನಿಟ್ಟಿನಲ್ಲಿ ಹೊಸ ಚಿಂತನೆಯನ್ನು ರೂಪಿಸಬೇಕೆಂಬ ಆಶಯದೊಂದಿಗೆ ಈ ಸಲದಿಂದ 'ಅಹಿಂದ' ಕುರಿತ ಸಂವಾದ, ಪ್ರಶ್ನೋತ್ತರ ಹಾಗೂ ಚರ್ಚೆಗಳನ್ನು ಆರಂಭಿಸುತ್ತಿದ್ದೇವೆ.

○ಡಾ. ನಟರಾಜ್ ಹುಳಿಯಾರ್

'ಅಹಿಂದ' ಮತ್ತು ಕರ್ನಾಟಕದ ರಾಜಕಾರಣ

ಸುಮಾರು ಏಳು ವರ್ಷಗಳ ಕೆಳಗೆ 'ಮೂಕ ಜನರ ಮಡಿಲಿಂದ ಮೂಡಿ ಬಂದಿದೆ ಅಹಿಂದ' ಎಂಬ ಘೋಷಣೆಯೊಂದಿಗೆ ಕೋಲಾರದಲ್ಲಿ 'ಅಹಿಂದ'ದ (ಅಲ್ಪಸಂಖ್ಯಾತ, ಹಿಂದುಳಿದ, ದಲಿತ ಒಕ್ಕೂಟ) ಬೃಹತ್ ಸಮಾವೇಶ ನಡೆಯಿತು. ಸಿದ್ಧರಾಮಯ್ಯ, ಕೆ.ಎಚ್.ಮುನಿಯಪ್ಪ, ಜಾಲಪ್ಪ, ಧರಂಸಿಂಗ್, ಜಿ.ಪರಮೇಶ್ವರ್, ದೇವನೂರ ಮಹಾದೇವರಿಂದ ಹಿಡಿದು ಕರ್ನಾಟಕದ ಹತ್ತಾರು ಜನ ರಾಜಕೀಯ ನಾಯಕರು ಹಾಗೂ ಸಹಸ್ರಾರು ಕಾರ್ಯಕರ್ತರು ಈ ಸಮಾವೇಶದಲ್ಲಿ ಪಾಲ್ಗೊಂಡಿದ್ದರು. ಈ ಸಮಾವೇಶದ ಬ್ಯಾನರುಗಳಲ್ಲಿ ಬಸವಣ್ಣ, ದೇವರಾಜ ಅರಸು, ಟಿಪ್ಪು ಸುಲ್ತಾನ್, ಅಂಬೇಡ್ಕರ್, ಲೋಹಿಯಾ ಹಾಗೂ ಶಾಂತವೇರಿ ಗೋಪಾಲಗೌಡರ ಚಿತ್ರಗಳಿದ್ದವು. ಈ ಚಿತ್ರಗಳು 'ಅಹಿಂದ'ದ ದಿಕ್ಕು, ಧೋರಣೆಗಳನ್ನು ಖಚಿತವಾಗಿ ಸಾರುತ್ತಿದ್ದವು. ಆನಂತರ 'ಅಹಿಂದ' ಒಂದು ಚಿಂತನೆಯಾಗಿ ಕರ್ನಾಟಕದಲ್ಲಿ ಹಲವು ರೂಪಗಳಲ್ಲಿ ಉಳಿಯಿತಾದರೂ, ಬೆಳೆದು ತನ್ನ ನೆಲೆಯನ್ನು ವಿಸ್ತರಿಸಲಾಗಲಿಲ್ಲ.

2004ರ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಕರ್ನಾಟಕದಲ್ಲಿ ಆರಂಭಗೊಂಡ ಪರ್ಯಾಯ ರಾಜಕಾರಣದ ಚರ್ಚೆ ಸಾಮಾಜಿಕ ಚಳುವಳಿಗಳ ರಾಜಕೀಯ ಏಕತೆಯ ಅಗತ್ಯವನ್ನು ತೀವ್ರವಾಗಿ ಪ್ರತಿಪಾದಿಸುತ್ತಾ ಬಂದಿತು. ಈ ಚರ್ಚೆಗಳು ದಲಿತ – ರೈತ ಹಾಗೂ ಪ್ರಗತಿಪರ ಚಳುವಳಿಗಳನ್ನು ಒಗ್ಗೂಡಿಸುವ 'ಸರ್ವೋದಯ ಕರ್ನಾಟಕ'ದ ಹುಟ್ಟಿನವರೆಗೂ ಬಂದು ನಿಂತಿವೆ. ಇಂಥ ಸನ್ನಿವೇಶಕ್ಕೆ ಪೂರಕವಾಗಿ, ಮತ್ತೆ 'ಅಹಿಂದ'ದ ಆಶಯ ಕರ್ನಾಟಕದಲ್ಲಿ ಹಬ್ಬಲಾರಂಭಿಸಿದೆ. ಮೂಲತಃ ವೃತ್ತಿರಾಜಕಾರಣಿಗಳ ನೇತೃತ್ವದಲ್ಲಿ ಆರಂಭಗೊಂಡಿರುವ ಇವತ್ತಿನ 'ಅಹಿಂದ'ಕ್ಕೂ ಮೂಲ 'ಅಹಿಂದ'ಕ್ಕೂ ಇರುವ ಸಂಬಂಧವನ್ನು ಡಾ॥ ಪೂರ್ಣಾನಂದ ಅವರು ತಮ್ಮ ಅಹಿಂದದಿಂದ ಈ ಅಹಿಂದದವರೆಗೆ' ಎಂಬ ಪುಟ್ಟ ಪುಸ್ತಕದಲ್ಲಿ ಸರಿಯಾಗಿ ಗುರುತಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಇವತ್ತಿನ 'ಅಹಿಂದ'ವನ್ನು ಕೂಡ ಮೂಲ 'ಅಹಿಂದ'ದ ತಾತ್ವಿಕ ಹಾದಿಯಲ್ಲೇ ಮುಂದುವರಿಸುವ ಅಗತ್ಯವಿದೆ. ಈ ನಿಟ್ಟಿನಲ್ಲಿ, ಕೋಲಾರದಲ್ಲಿ 'ಅಹಿಂದ' ಸ್ಥಾಪಿಸಿದವರ ಹೆಗಲ ಮೇಲೆ ಕೂಡ ದೊಡ್ಡ ಮಟ್ಟದ ಹೊಣೆಗಾರಿಕೆ ಇದ್ದೇ ಇದೆ.

ಒಂದು ಕಾಲಕ್ಕೆ ದೇವರಾಜ ಅರಸರು ಸಾಮಾಜಿಕ ಬದ್ಧತೆಯಿಂದ ಹಾಗೂ ತಮ್ಮ ರಾಜಕೀಯ ಉಳಿವಿನ ದೃಷ್ಟಿಯಿಂದ ಅಸಂಘಟಿತ ದುರ್ಬಲ ಜಾತಿಗಳನ್ನು ಒಗ್ಗೂಡಿಸುವ ರಾಜಕಾರಣವನ್ನು ರೂಪಿಸಿದರು. ಇದು ತಬ್ಬಲಿ ಜಾತಿಗಳು ರಾಜಕೀಯಾಧಿಕಾರಕ್ಕಾಗಿಯಾದರೂ ಒಟ್ಟಿಗೆ ಬರುವಂಥ ಒಂದು ಸರಳ ಸೂತ್ರವಾಗಿ ಈ ತನಕ ಹಾಗೂ ಹೀಗೂ ನಡೆಯುತ್ತಾ ಬಂದಿದೆ. ಆದರೆ ಈ ರಾಜಕಾರಣಕ್ಕೆ ವಿಸ್ತೃತ ತಾತ್ವಿಕ ನೆಲೆಯನ್ನು ಹಾಗೂ ನಿರಂತರವಾಗಿ ಆರ್ಥಿಕ ಕಾರ್ಯಕ್ರಮಗಳನ್ನು ರೂಪಿಸುವ ದೊಡ್ಡ ಮಟ್ಟದ ಕೆಲಸ ಮಾತ್ರ ನಡೆಯಲಿಲ್ಲ. ಇದನ್ನೊಂದು ನಿರ್ಣಾಯಕ ರಾಜಕೀಯ ಶಕ್ತಿಯನ್ನಾಗಿ ಹಾಗೂ ಸಾಮಾಜಿಕ ಎಚ್ಚರವನ್ನಾಗಿ ಹಬ್ಬಿಸುವ ಕೆಲಸ ಕೂಡ ಅರಸು ಅವರ ಕಾಲದಲ್ಲಾಗಲೀ, ಆನಂತರವಾಗಲೀ ನಡೆಯಲಿಲ್ಲ. ಈ ನಿಟ್ಟಿನಲ್ಲಿ ದಲಿತ ಹಾಗೂ ಹಿಂದುಳಿದ ವರ್ಗಗಳ ಬುದ್ಧಿಜೀವಿಗಳು ಆಗಾಗ್ಗೆ ಮಾಡಿದ ಪ್ರಯತ್ನಗಳು ಕೂಡ ಸಣ್ಣ ಪುಟ್ಟ ಸಾಂಸ್ಕೃತಿಕ ವಲಯಕ್ಕಷ್ಟೆ ಸೀಮಿತವಾಗಿ ಬಿಟ್ಟವು. ಬಂಡಾಯ, ಸಾಹಿತ್ಯ ಸಂಘಟನೆ, 'ಸುದ್ದಿಸಂಗಾತಿ' ಹಾಗೂ 'ಲಂಕೇಶ್ ಪತ್ರಿಕೆ'ಯ ಪ್ರಯತ್ನಗಳು ಈ ಪ್ರಜ್ಞೆಯನ್ನು ಒಗ್ಗೂಡಿಸುವ ಕೆಲಸವನ್ನು ಮಾಡುತ್ತಾ ಬಂದರೂ, ಆ ಪ್ರಯತ್ನ ಕೂಡ ಸಾಂಸ್ಕೃತಿಕ ವಲಯದಿಂದಾಚೆಗೆ ಬೆಳೆಯಲಿಲ್ಲ. ಹೀಗಾಗಿ ಚುನಾವಣೆಯಲ್ಲಿ ಭಾಗವಹಿಸುವ ಸಾಮಾನ್ಯರು, ಮಧ್ಯಮ ವರ್ಗ ಹಾಗೂ ಅದರ ಭಾಗವಾಗಿರುವ ಸರ್ಕಾರಿ ನೌಕರರು, ಅಧಿಕಾರಶಾಹಿ ಮುಂತಾದ ವರ್ಗಗಳಿಗೆ 'ಅಹಿಂದ' ಪ್ರಜ್ಞೆ ವ್ಯಾಪಕವಾಗಿ ಹಬ್ಬಲಿಲ್ಲ.

ಈ ಹಿನ್ನೆಲೆಯಲ್ಲಿ ಪ್ರಬಲ ಜಾತಿಗಳು ಹಾಗೂ ಹಣಬಲದ ರಾಜಕೀಯದ ಎದುರು ಇವತ್ತು ದಲಿತರು, ಕೆಳಜಾತಿಗಳು ಹಾಗೂ ಅಲ್ಪ ಸಂಖ್ಯಾತರನ್ನು ಒಗ್ಗೂಡಿಸುವ 'ಅಹಿಂದ' ರಾಜಕಾರಣದ ಎದುರು ಹಲವು ಸವಾಲುಗಳು ಹಾಗೂ ಅಗತ್ಯಗಳಿವೆ. ಮೊದಲನೆಯ ಅಗತ್ಯವೆಂದರೆ ಈ ಒಕ್ಕೂಟದಲ್ಲಿ ಯಾವುದೇ ಒಂದು ಜಾತಿ ಪ್ರಬಲವಾಗಿ ಕಾಣದಿರುವಂತೆ ನೋಡಿಕೊಳ್ಳುವ ಅಪ್ಪಟ ಜಾತ್ಯತೀತ ತಾತ್ವಿಕತೆ. ಹಾಗೆಯೇ ಎಲ್ಲ ಜಾತಿಗಳಿಂದ ವೈಚಾರಿಕ ನಾಯಕತ್ವವನ್ನು ರೂಪಿಸಬೇಕಾದ ಅಗತ್ಯ ಕೂಡ ಇದೆ. ಅದರ ಜೊತೆಗೇ ಜಾತೀಯ ಪ್ರತ್ಯೇಕತೆಯನ್ನು ಮನಸ್ಸಿನ ಮಟ್ಟದಲ್ಲಿ ಕಡಿಮೆ ಮಾಡುತ್ತಲೇ ವಿವಿಧ ಜಾತಿಗಳನ್ನು ರಾಜಕೀಯವಾಗಿ, ಸಾಮಾಜಿಕ ವಾಗಿ ಒಗ್ಗೂಡಿಸುವ ಹಾಗೂ ಜಾಗತೀಕರಣದ ಕಾಲದಲ್ಲಿ ಈ ವರ್ಗಗಳ ಆರ್ಥಿಕ ಪ್ರಗತಿಯ ಹೊಸ ಕಾರ್ಯನೀತಿ ತಯಾರಿಸುವ ಸವಾಲೂ ಇದೆ.

ಜಾತಿಮೂಲದ ನೀಚತನ ಹಾಗೂ ಅವ್ಯಕ್ತ ಜಾತೀಯತೆಯ ಪ್ರಶ್ನೆಗಳನ್ನು ನಮ್ಮ ಸಾಂಸ್ಕೃತಿಕ ವಲಯ ಕಳೆದ ಕೆಲವು ವರ್ಷಗಳಲ್ಲಿ ಕಡೆಗಣಿಸುತ್ತ ಬಂದಂತಿದೆ. ನಾವು ಜಾತ್ಯತೀತತೆಯನ್ನು ಪ್ರತಿಪಾದಿಸುತ್ತಿರುವಾಗ ಕೂಡ ನಮ್ಮ ಸಮಾಜದ ಜಾತಿ ಮೂಲ ವರ್ತನೆಗಳನ್ನು ಎಚ್ಚರದಿಂದ ಗಮನಿಸಲೇಬೇಕಾಗಿದೆ. ಹಾಗೆ ಮಾಡದಿದ್ದರೆ, ಹಾಗೂ ಅದಕ್ಕೆ ಪರಿಹಾರ ಹುಡುಕದಿದ್ದರೆ, ಮಾತು ಬಲ್ಲ ಕೆಲವೇ ಜಾತಿಗಳು ಹಲವು ಬಗೆಯ ಅಧಿಕಾರಗಳನ್ನು ಹಿಡಿಯುತ್ತಲೇ ಇರುತ್ತವೆ. ಕೆಲ ವರ್ಷಗಳ ಕೆಳಗೆ 'ಕ್ರಿಕೆಟ್ ಬ್ರಾಹ್ಮಣತ್ವ' (ಅಥವಾ 'ಕ್ರಿಕೆಟ್ ಬ್ರಾಹ್ಮಿನಿ ಸಂ') ಕುರಿತ ಪ್ರಶ್ನೆಯನ್ನು ಕೆಲವು ಪತ್ರಕರ್ತರು ಎತ್ತದಿದ್ದರೆ, ಗಲ್ಲಿಯಲ್ಲಿ ಕ್ರಿಕೆಟ್ ಆಡುತ್ತಿದ್ದ ಯುವರಾಜ್‌ಸಿಂಗ್, ಯಾದವ್, ಮಹೇಂದ್ರ ಸಿಂಗ್‌ದೋನಿ, ಜಹೀರ್‌ಖಾನ್ ಥರದವರು ಭಾರತದ ಕ್ರಿಕೆಟ್ ತಂಡದೊಳಕ್ಕೇ ಬರುತ್ತಿರಲಿಲ್ಲ. ಈ ಥರದ ಜಾತಿ ಸೂಕ್ಷ್ಮಗಳು ಒಬ್ಬ ಜ್ಯೋತಿಬಸು ಕೆಳಗಿಳಿದ ನಂತರ ಇನ್ನೊಬ್ಬ ಭಟ್ಟಾಚಾರ್ಯನನ್ನು ಮುಖ್ಯ ಮಂತ್ರಿಯನ್ನಾಗಿ ಮಾಡುವ ಇಂಡಿಯಾದ ಮಾರ್ಕ್ಸಿಸ್ಟರಿಗೆ ಅರ್ಥವಾಗುವುದು ಕಷ್ಟ. ಈ ಸೂಕ್ಷ್ಮಗಳ ಬಗ್ಗೆ ಅಂಬೇಡ್ಕರ್‌ವಾದ, ಪೆರಿಯಾರ್‌ವಾದ, ಲೋಹಿಯಾ ವಾದಗಳು ನಮ್ಮನ್ನು ಸದಾ ಎಚ್ಚರಿಸುತ್ತಿರುತ್ತವೆ. ಆದ್ದರಿಂದ ಈ ಬಗೆಯ ವಾದಗಳ ತಾತ್ವಿಕತೆ 'ಅಹಿಂದ'ದ ಕಾರ್ಯಕರ್ತರು, ನಾಯಕರು ಹಾಗೂ ಚಿಂತಕರಿಗೆ ಅಗತ್ಯವಾಗಿದೆ.

ಹಲವು ದಶಕಗಳ ಕೆಳಗೆ ಬಾಬಾಸಾಹೇಬ್ ಅಂಬೇಡ್ಕರ್ ಅವರ ರಿಪಬ್ಲಿಕನ್ ಪಕ್ಷ ಹಾಗೂ ಲೋಹಿಯಾ ಅವರ ಸಮಾಜವಾದಿ

ಪಕ್ಷಗಳಿಂದ ಹಿಡಿದು ಡಿ.ಎಂ.ಕೆ. ಹಾಗೂ ಬಹುಜನ ಸಮಾಜ ಪಕ್ಷಗಳವರೆಗೂ 'ಅಹಿಂದ' ರೀತಿಯ ರಾಜಕಾರಣದ ಪ್ರಯೋಗ ನಡೆಯುತ್ತಾ ಬಂದಿದೆ. ಆದರೆ ಕರ್ನಾಟಕದಲ್ಲಿ ಈ ಪ್ರಯೋಗ ಹೆಚ್ಚಾಗಿ ಚುನಾವಣೆಯ ಕಾಲದ ಹೊಂದಾಣಿಕೆಯಾಗಿ ಮಾತ್ರ ಎಲ್ಲ ಪಕ್ಷಗಳಲ್ಲೂ ನಡೆಯುತ್ತಾ ಬಂದಿದೆ. ಹೀಗಾಗಿ ಈ ಪ್ರಯೋಗಗಳಲ್ಲಿ ಭಾಗಿಯಾದ ಅನೇಕ ಜಾತಿಗಳು ಚುನಾವಣೆಯ ನಂತರ ತಂತಮ್ಮ ಜಾತಿ ಚಿಪ್ಪುಗಳಿಗೆ ಮರಳಿ ನಿಷ್ಕ್ರಿಯವಾಗುತ್ತಾ ಬಂದಿವೆ. ಸಾಂಸ್ಕೃತಿಕವಾಗಿ ಪರಸ್ಪರ ತೀರಾ ಹತ್ತಿರವಿರುವ ಜಾತಿಗಳು ಸಾಮಾಜಿಕವಾಗಿ ಒಟ್ಟಿಗೇ ಇರಬಲ್ಲವು. ಆದರೆ ಈ ಸಾಧ್ಯತೆಯನ್ನು ಕೂಡ ವಿವಿಧ ರಾಜಕೀಯ ಪಕ್ಷಗಳು, ಜಾತೀಯ ನೀಚತನಗಳು ಹಾಗೂ ಸ್ಥಳೀಯ ರಾಜಕಾರಣದಲ್ಲಿನ ಚಿಲ್ಲರೆ ನಾಯಕತ್ವದ ಪ್ರಶ್ನೆಗಳು ನಾಶಮಾಡುತ್ತಾ ಬಂದಿವೆ. ಜೊತೆಗೆ, ಲೋಹಿಯಾ ಅವರು ಹಿಂದೊಮ್ಮೆ ಗುರುತಿಸಿದಂತೆ, 'ಶೂದ್ರರಲ್ಲಿ ಹೊಟ್ಟೆಕಿಚ್ಚಿನ ಪ್ರವೃತ್ತಿ ಹಾಗೂ ಪರಸ್ಪರರ ಕಾಲೆಳೆಯುವ ಸಣ್ಣತನ ಹೆಚ್ಚು ಇರುವುದು' ಕೂಡ ಹಿಂದುಳಿದ ಜಾತಿಗಳ ಸಂಘಟನೆಗಳು ಹೆಚ್ಚು ಕಾಲ ನಡೆಯದಿರಲು ಕಾರಣವಾಗಿದೆ. ಒಂದು ಸಭೆಯಲ್ಲಿ ಯಾರು ವೇದಿಕೆಯ ಮೇಲೆ ಕೂರುತ್ತಾರೆ ಅಥವಾ ಕೂರುವುದಿಲ್ಲ ಎಂಬ ಸಣ್ಣ ಪ್ರಶ್ನೆಗಳ ಕಾರಣಕ್ಕೇ ಇಂಥ ಸಂಘಟನೆಗಳು ಒಡೆದಿರುವ ಉದಾಹರಣೆಗಳೂ ನಮ್ಮ ಕಣ್ಣ ಮುಂದೇ ಇವೆ. ಇವನ್ನೆಲ್ಲ ಮೀರುವುದು ಅಂಥ ದೊಡ್ಡ ಕೆಲಸವೇನಲ್ಲ. ಉದಾರತೆ ಹಾಗೂ ಘನತೆಗಳಿಂದ ಇಂಥ ಸಣ್ಣತನಗಳನ್ನು ಮೀರಬೇಕಾಗಿದೆ.

ಚುನಾವಣಾ ರಾಜಕಾರಣವನ್ನು ಮೀರಿದ ಸಾಮಾಜಿಕ, ರಾಜಕೀಯ ಸವಾಲುಗಳನ್ನು ಈ ಜಾತಿಗಳು ಒಟ್ಟಾಗಿ ಎದುರಿಸುವುದನ್ನು ಕಲಿಸಬಲ್ಲ ವೇದಿಕೆಗಳನ್ನು ರೂಪಿಸುವಲ್ಲಿ ಕರ್ನಾಟಕದ ರಾಜಕೀಯ ಪಕ್ಷಗಳು ಸೋತಿವೆ. ಜೊತೆಗೆ, ಭಾರತದಲ್ಲಿ ಕೆಳಜಾತಿಯಿರಲಿ, ಮೇಲುಜಾತಿಯಿರಲಿ, ಪ್ರತಿಯೊಂದು ಜಾತಿಯೂ ತಾನೇ ಶ್ರೇಷ್ಠವೆಂದು ಸಾಧಿಸುವ ಪೈಪೋಟಿಯಲ್ಲಿ ತೊಡಗಿರುತ್ತದೆ. ಜಾತಿ ಪದ್ಧತಿಯ ಈ ಕಟುವಾಸ್ತವವನ್ನು ನಾವು ಮರೆಯಬಾರದು, ಈ ದೃಷ್ಟಿಯಿಂದ ಒಂದು ಹಿಂದುಳಿದ ಜಾತಿಯ ಅಥವಾ ದಲಿತ ನಾಯಕರನ್ನು ಇನ್ನೊಂದು ಹಿಂದುಳಿದ ಜಾತಿಯ ಜನ ಸಹಜವಾಗಿ ಒಪ್ಪಿ ಅನುಸರಿಸುವಂತೆ ಮಾಡಬಲ್ಲ ಮಾನಸಿಕ, ವೈಚಾರಿಕ ಮನಸ್ಥಿತಿಯನ್ನು ರೂಪಿಸುವುದು ಕೂಡ ಅತ್ಯಂತ ಮುಖ್ಯವಾಗಿದೆ. ಇದು ಸಮಾವೇಶಗಳ ಭರಾಟೆಯಿಂದ ಆಗುವಂಥದ್ದಲ್ಲ. ಇದು ಕಾರ್ಯಕರ್ತರ ಅಧ್ಯಯನ ತರಗತಿಗಳ ಮೂಲಕ ಆಗಬೇಕಾದ ಕೆಲಸ. ದಲಿತರ ದಹನವಾದಾಗ ಅಥವಾ ಕೋಮುಗಲಭೆಗಳಾದಾಗ ಅಲ್ಪಸಂಖ್ಯಾತ-ಹಿಂದುಳಿದ-ದಲಿತ ಜಾತಿಗಳು ಒಟ್ಟಾಗಿ ಈ ಸಮಸ್ಯೆಗಳನ್ನು ಎದುರಿಸಬೇಕಾದ ಕ್ರಮವನ್ನು ಹಾಗೂ ಅಗತ್ಯವನ್ನು ವೈಚಾರಿಕ ತರಬೇತಿಗಳು ಮಾತ್ರ ಈ ಜಾತಿ ಸಂಘಟನೆಗಳ ಕಾರ್ಯಕರ್ತರಿಗೆ ಮನವರಿಕೆ ಮಾಡಿಕೊಡ ಬಲ್ಲವು.

ಲೋಹಿಯಾ ಅವರು ದಲಿತರ ದೇವಾಲಯ ಪ್ರವೇಶದ ಪ್ರಶ್ನೆಯನ್ನು ತಮ್ಮ ಪಕ್ಷದ ಅಧಿಕೃತ ಕಾರ್ಯಕ್ರಮವನ್ನಾಗಿಸಿಕೊಳ್ಳುವುದರ ಮೂಲಕವೇ ದಲಿತರ ಹಾಗೂ ಹಿಂದುಳಿದವರ ವೈಚಾರಿಕ ಪ್ರಜ್ಞೆಯನ್ನು ರೂಪಿಸುತ್ತಿದ್ದರು; ಅವರನ್ನು ತಮ್ಮ ಪಕ್ಷದ ತೆಕ್ಕೆಗೂ ತರುತ್ತಿದ್ದರು. ಈ ಬಗೆಯಲ್ಲಿ ಸಾಂಸ್ಕೃತಿಕವಾಗಿ ಜನರನ್ನು ತಿದ್ದುವ, ಒಗ್ಗೂಡಿಸುವ ರಾಜಕಾರಣದ ಮಹತ್ವವನ್ನು ನಾವು ಸರಿಯಾಗಿ ಅರಿಯಬೇಕಾಗಿದೆ. ಈ ದೃಷ್ಟಿಯಿಂದ, ಹಳ್ಳಿಕೇರಿಯಲ್ಲಿ ದಲಿತರ ಬಹಿಷ್ಕಾರದಂಥ ಘಟನೆಯನ್ನು ಪ್ರತಿಭಟಿಸುವುದರ ಮೂಲಕವೇ ಕರ್ನಾಟಕದ 'ಅಹಿಂದ' ರಾಜಕಾರಣ ಕೈಗೆತ್ತಿಕೊಳ್ಳಬೇಕಾಗಿದೆ.

ಕಳೆದ ಹತ್ತು, ಹದಿನೈದು ವರ್ಷಗಳಲ್ಲಿ ಭಾರತದಾದ್ಯಂತ ಕೆಳಜಾತಿಗಳ ಐಡೆಂಟಿಟಿಗಳು ರಾಜಕಾರಣದ ಕೇಂದ್ರಕ್ಕೆ ಬರಲಾರಂಭಿಸಿದವು ಕಾನ್ಷೀರಾಮ್, ಮುಲಾಯಂಸಿಂಗ್, ಮಾಯಾವತಿ, ಲಾಲೂ ಪ್ರಸಾದ್ ಯಾದವ್ ಥರದ ನಾಯಕರಿಂದಾಗಿ ಕೆಳಜಾತಿಗಳು ರಾಜ್ಯಗಳ ಮಟ್ಟದಲ್ಲಿ ಅಧಿಕಾರ ಹಿಡಿಯುವ ಬೆಳವಣಿಗೆ ಶುರುವಾಯಿತು. ಇದನ್ನು ಕಂಡು ಹೆದರಿದ ಮತೀಯವಾದಿಗಳು 'ಹಿಂದೂ ಒಂದು' ಎಂಬ ಹುಸಿ ಘೋಷಣೆಯ ಮೂಲಕ ಕೆಳಜಾತಿಗಳ ಒಕ್ಕೂಟಗಳ ಶಕ್ತಿಯನ್ನು ಕಡಿಮೆ ಮಾಡಲೆತ್ನಿಸಿದರು. ಈ ಹುನ್ನಾರದ ನಡುವೆಯೂ ದಲಿತ, ಕೆಳಜಾತಿಗಳ ಮರುಹೊಂದಾಣಿಕೆ ವ್ಯಾಪಕವಾಗುತ್ತಲೇ ಬಂದಿದೆ. ಈ ದೃಷ್ಟಿಯಿಂದ ಕಾಂಚಾ ಇಳಯ್ಯ ಮುಂತಾದ ಅಂಬೇಡ್ಕರ್‌ವಾದಿ ಚಿಂತಕರು ರೂಪಿಸುತ್ತಿರುವ, ದಲಿತರು ಹಾಗೂ ಇತರ ಶೂದ್ರ ಜಾತಿಗಳ ಬಹುಜನರನ್ನು ಒಳಗೊಳ್ಳುವ 'ದಲಿತ್ ಬಹುಜನ್' ಪರಿಕಲ್ಪನೆ ಕೂಡ ಕರ್ನಾಟಕದ 'ಅಹಿಂದ' ರಾಜಕಾರಣಕ್ಕೆ ಅತ್ಯಗತ್ಯವಾಗಿದ.

'ಅಹಿಂದ ಒಕ್ಕೂಟ ತಬ್ಬಲಿ ಜಾತಿಗಳನ್ನು ಒಗ್ಗೂಡಿಸುವುದರ ಜೊತೆಗೇ ಮೇಲು ಜಾತಿಗಳ ಪ್ರಜ್ಞಾವಂತರನ್ನೂ ಒಳಗೊಂಡು ಜಾತಿನಾಶದ ಪ್ರಜ್ಞೆಯನ್ನು ಬಿತ್ತದಿದ್ದರೆ ಪ್ರಯೋಜನವಿಲ್ಲ. 'ಒಂದು ಹೊಲದಲ್ಲಿ ಸಾಧ್ಯವದಷ್ಟೂ ಮಟ್ಟಿಗೆ ಬಿತ್ತನೆಯ ಬೀಜವು ಮಹಿಳೆ, ಅಸ್ಪೃಶ್ಯ, ಶೂದ್ರ ಹಾಗೂ ಮುಸಲ್ಮಾನ ಮೂಲದ್ದಾಗಿರಬೇಕು. ಇಂಥವರನ್ನು ಮುಖಂಡರ ಸ್ಥಾನದಲ್ಲಿ ಕೂಡಿಸಬೇಕು. ಬೀಜದಿಂದ ಬೆಳೆಯುಂಟು ಮಾಡುವ ಗೊಬ್ಬರ ಬ್ರಾಹ್ಮಣನಾಗಿರಬೇಕು. ಈ ಬಗೆಯ ಹೊಸ ಪಕ್ಷವನ್ನು ಕಟ್ಟುವುದು ನನ್ನ ಹಂಬಲವಾಗಿದೆ'. ಎಂಬ ಲೋಹಿಯಾ ಅವರ ಮಾತನ್ನು ಇಲ್ಲಿ ನೆನಪಿಸಿಕೊಳ್ಳಬೇಕು. ಹಾಗೆಯೇ, 'ಜಾತಿವಿನಾಶದ ಮುಂಚೂಣಿಯಲ್ಲಿ ಬ್ರಾಹ್ಮಣರು ಇರಬೇಕು' ಎಂಬ ಅಂಬೇಡ್ಕರ್ ಅವರ ಸಲಹೆಯನ್ನು ಮರೆಯಬಾರದು

'ಜಾತಿಪದ್ಧತಿಯ ವಿರುದ್ಧ ಹಾಗೂ ಹಿಂದುಳಿದ ಜಾತಿಗಳಿಗೆ ಆದ್ಯತಾ ಅವಕಾಶಗಳನ್ನು ಕಲ್ಪಿಸುವುದರ ಪರ ತೀವ್ರ ಹೋರಾಟ ಮಾಡಬಲ್ಲಂಥ ನಿಜವಾದ ಹೋರಾಟಗಾರರ ಪಡೆಗೆ ಮೇಲುಜಾತಿಗಳಿಂದ ಹೆಚ್ಚಿನ ಸಂಖ್ಯೆಯ ಜನರನ್ನು ಸೇರಿಸಿಕೊಳ್ಳಲು ಪಕ್ಷವು ಈ ತನಕ ಯಶಸ್ವಿಯಾಗಿಲ್ಲ' ಎಂದು ಲೋಹಿಯಾ ಅವರು ಸಮಾಜವಾದಿ ಪಕ್ಷ ರೂಪಿಸುವ ಕಾಲದಲ್ಲಿ ಕೊರಗಿದ್ದರು. ಈ ದೃಷ್ಟಿಯಿಂದ ಕರ್ನಾಟಕದಲ್ಲಿ ಸ್ವಲ್ಪ ಭಿನ್ನವಾದ ವಾತಾವರಣವಿದೆ. ಬಸವತತ್ವದ ಅನುಯಾಯಿಗಳಾದ ಕೆಲವು ಪ್ರಗತಿಪರ ಸ್ವಾಮೀಜಿಗಳು 'ಅಹಿಂದ'ದ ಕಲ್ಪನೆಯನ್ನು ಒಪ್ಪಿರುವುದು ಗಮನಾರ್ಹವಾದ ಬೆಳವಣಿಗೆಯಾಗಿದೆ. ಇವರ ಜೊತೆಗೇ ಜಾತಿವಿನಾಶದ ಆಶಯವನ್ನು ಬಿತ್ತುತ್ತಾ ಬಂದಿರುವ ಕನ್ನಡ ಲೇಖಕ, ಲೇಖಕಿಯರು ಚಿಂತಕರು ಹಾಗೂ ಪತ್ರಕರ್ತರ ಪಡೆ ಕೂಡ ಇವತ್ತು 'ಅಹಿಂದ' 'ಸರ್ವೋದಯ ಕರ್ನಾಟಕ' ಹಾಗೂ 'ಬಹುಜನ ಸಮಾಜ ಪಕ್ಷ'ಗಳ ರಾಜಕಾರಣದ ತಾತ್ವಿಕತೆಯನ್ನು ಗಟ್ಟಿಗೊಳಿಸುವ, ವಿಸ್ತೃತಗೊಳಿಸುವ ಅಗತ್ಯವಿದೆ.

ಕಳೆದ ಹತ್ತು, ಹದಿನೈದು ವರ್ಷಗಳಲ್ಲಿ ಭಾರತದಾದ್ಯಂತ ಕೆಳಜಾತಿಗಳ ಐಡೆಂಟಿಟಿಗಳು ರಾಜಕಾರಣದ ಕೇಂದ್ರಕ್ಕೆ ಬರಲಾರಂಭಿಸಿದವು ಕಾನ್ಷೀರಾಮ್, ಮುಲಾಯಂಸಿಂಗ್, ಮಾಯಾವತಿ, ಲಾಲೂ ಪ್ರಸಾದ್ ಯಾದವ್ ಥರದ ನಾಯಕರಿಂದಾಗಿ ಕೆಳಜಾತಿಗಳು ರಾಜ್ಯಗಳ ಮಟ್ಟದಲ್ಲಿ ಅಧಿಕಾರ ಹಿಡಿಯುವ ಬೆಳವಣಿಗೆ ಶುರುವಾಯಿತು. ಇದನ್ನು ಕಂಡು ಹೆದರಿದ ಮತೀಯವಾದಿಗಳು 'ಹಿಂದೂ ಒಂದು' ಎಂಬ ಹುಸಿ ಘೋಷಣೆಯ ಮೂಲಕ ಕೆಳಜಾತಿಗಳ ಒಕ್ಕೂಟಗಳ ಶಕ್ತಿಯನ್ನು ಕಡಿಮೆ ಮಾಡಲೆತ್ನಿಸಿದರು. ಈ ಹುನ್ನಾರದ ನಡುವೆಯೂ ದಲಿತ, ಕೆಳಜಾತಿಗಳ ಮರುಹೊಂದಾಣಿಕೆ ವ್ಯಾಪಕವಾಗುತ್ತಲೇ ಬಂದಿದೆ. ಈ ದೃಷ್ಟಿಯಿಂದ ಕಾಂಚಾ ಇಳಯ್ಯ ಮುಂತಾದ ಅಂಬೇಡ್ಕರ್‌ವಾದಿ ಚಿಂತಕರು ರೂಪಿಸುತ್ತಿರುವ, ದಲಿತರು ಹಾಗೂ ಇತರ ಶೂದ್ರ ಜಾತಿಗಳ ಬಹುಜನರನ್ನು ಒಳಗೊಳ್ಳುವ 'ದಲಿತ್ ಬಹುಜನ್' ಪರಿಕಲ್ಪನೆ ಕೂಡ ಕರ್ನಾಟಕದ 'ಅಹಿಂದ' ರಾಜಕಾರಣಕ್ಕೆ ಅತ್ಯಗತ್ಯವಾಗಿದೆ. ಕಾರಣ, ಕರ್ನಾಟಕದಲ್ಲಿ 'ಹಿಂದುಳಿದ ವರ್ಗ' ಎನ್ನುವುದು ಸಾಮಾಜಿಕ ರಾಜಕೀಯ ನೆಲೆಯ ಒಂದು ಅಮೂರ್ತ ವರ್ಗವಾಗಿ ಮಾತ್ರ ಕಾಣಬರುತ್ತದೆಯೇ ಹೊರತು ಹಿಂದುಳಿದ ವರ್ಗಗಳ ನಿರ್ದಿಷ್ಟವಾದ ವರ್ಗ ಪ್ರಜ್ಞೆಯ ಪ್ರತಿನಿಧಿಯಾಗಿ ಅಲ್ಲ. ಆದ್ದರಿಂದಲೇ ಹಿಂದುಳಿದ ಜಾತಿ, ವರ್ಗಗಳನ್ನು ಭಾವನಾತ್ಮಕವಾಗಿ ಹಾಗೂ ವೈಚಾರಿಕವಾಗಿ ಬೆಸೆಯುವ ದೊಡ್ಡ ಸಿದ್ಧಾಂತವೊಂದು ಇಪ್ಪತ್ತನೆಯ ಶತಮಾನದ ಕರ್ನಾಟಕದಲ್ಲಿ ರೂಪುಗೊಳ್ಳಲಿಲ್ಲ.

ಅಲ್ಲದೆ, ಹಾವನೂರ್ ಆಯೋಗದ ನಂತರ ಇಲ್ಲಿ ಕಾಣಿಸಿಕೊಂಡ, ಹಿಂದುಳಿದ ವರ್ಗಗಳ ಮೇಲ್ಮುಖ ಚಲನೆಯ ಬಯಕೆಯಿಂದ ಹುಟ್ಟಿದ ಹೊಸ ಪ್ರಜ್ಞೆ ಕೂಡ ಪೆರಿಯಾರರ ಬ್ರಾಹ್ಮಣೇತರ ಚಳುವಳಿಯ ಮಾದರಿಯಲ್ಲಿ ಒಗ್ಗೂಡಿ ಗಟ್ಟಿಯಾಗಲಿಲ್ಲ. ಹೀಗಾಗಿ, ದಲಿತತತ್ವದ ಹಾಗೆ ಶೂದ್ರತ್ವ ಹಾಗೂ ಹಿಂದುಳಿದ ವರ್ಗಗಳ ತತ್ವ ಇಲ್ಲಿ ಆಳವಾಗಿ ಬೇರೂರಲಿಲ್ಲ. ಅಂಬೇಡ್ಕರ್‌ವಾದವನ್ನು ದಲಿತ ಚಳುವಳಿ ಹಾಗೂ ದಲಿತ ಕೇಂದ್ರಿತ ಪಕ್ಷಗಳು ಗಂಭೀರವಾಗಿ ಅನುಸರಿಸುತ್ತಾ ಬಂದಿವೆ. ಆದರೆ ಹಿಂದುಳಿದ ಜಾತಿಗಳನ್ನು ತಯಾರು ಮಾಡಬೇಕಾದ ಪಕ್ಷಗಳು ಹಾಗೂ ಜಾತಿ ಸಂಘಟನೆಗಳು ಅಂಬೇಡ್ಕರ್‌ವಾದವನ್ನಾಗಲೀ, ಲೋಹಿಯಾವಾದವನ್ನಾಗಲೀ ಸರಿಯಾಗಿ ಅನುಸರಿಸಲೇ ಇಲ್ಲ. ಅಂಬೇಡ್ಕರ್, ಲೋಹಿಯಾ ಸಿದ್ಧಾಂತಗಳನ್ನು ವಿವಿಧ ಶೂದ್ರ ಸಂಘಟನೆಗಳು ತಮ್ಮ ತಳಹದಿಯನ್ನಾಗಿರಿಸಿಕೊಂಡಿದ್ದರೆ, ಇಷ್ಟು ಹೊತ್ತಿಗೆ ಕರ್ನಾಟಕದಲ್ಲಿ ಹಿಂದುಳಿದ ವರ್ಗಗಳ ಸಮಗ್ರ ಸಿದ್ಧಾಂತವೊಂದು ರೂಪುಗೊಂಡಿರುತ್ತಿತ್ತು.

ಈ ದೃಷ್ಟಿಯಿಂದ, ಕರ್ನಾಟಕದ ಇವತ್ತಿನ ರಾಜಕಾರಣದಲ್ಲಿ ಅಲ್ಪಸಂಖ್ಯಾತ, ಹಿಂದುಳಿದ ಹಾಗೂ ದಲಿತರ ಹೊಂದಾಣಿಕೆ ಕುರಿತಂತೆ ಖಚಿತ ತಾತ್ವಿಕತೆ, ಬದ್ಧತೆ ಹಾಗೂ ನಿಖರವಾದ ಸಾಂಸ್ಕೃತಿಕ- ರಾಜಕೀಯ ಎಚ್ಚರವಿರುವ ಕಾರ್ಯಕರ್ತನ್ನುಳ್ಳ ಪಕ್ಷಗಳು ಎರಡೇ. ಒಂದು ಬಹುಜನ ಸಮಾಜಪಕ್ಷ. ಇನ್ನೊಂದು, ರೈತ-ದಲಿತ ಚಳುವಳಿಗಳನ್ನು ಬೆಸೆಯಲೆತ್ನಿಸುತ್ತಿರುವ ಸರ್ವೋದಯ ಕರ್ನಾಟಕ ಪಕ್ಷ. ಇವತ್ತು ಸಿದ್ಧರಾಮಯ್ಯ, ಮಹಾದೇವಪ್ಪ, ಇಬ್ರಾಹಿಂ ಮೊದಲಾದ ನಾಯಕರು ಆರಂಭಿಸಿರುವ ರಾಜಕಾರಣ ಈ ರೀತಿಯ ಪಕ್ಷಗಳ ಜೊತೆಗೆ ಕೈಜೋಡಿಸಿದಾಗ ಮಾತ್ರ 'ಅಹಿಂದ' ಚಿಂತನೆ ಹಾಗೂ 'ಅಹಿಂದ' ಮತಗಳು ಒಗ್ಗೂಡುವ ಸಾಧ್ಯತೆಗಳಿವೆ. ಈಗ

(೨೯ನೇ ಪುಟಕ್ಕೆ)

'ಅಹಿಂದ' ಅನಿವಾರ್ಯ

ಡಾ|| ಎಸ್. ಚಂದ್ರಶೇಖರ್

ಅಹಿಂದ ಚರ್ಚೆ ಮತ್ತು ಕರ್ನಾಟಕದ ರಾಜಕಾರಣ

ಪ್ರಶ್ನೆ: ಭಾರತದ ಆಧುನಿಕ ರಾಜಕಾರಣದ ವಿವಿಧ ಘಟ್ಟಗಳಲ್ಲಿ 'ಅಹಿಂದ' ರೀತಿಯ ಬೆಳವಣಿಗೆಗಳ ಚಾರಿತ್ರಿಕ ಹೆಜ್ಜೆಗಳನ್ನು ಗುರುತಿಸುವುದು ಸಾಧ್ಯವೆ?

ಉತ್ತರ: ಉದಾರವಾದಿ ಜನತಾಂತ್ರಿಕ ಗಾಳಿ ಬೀಸಲು ಆರಂಭವಾದ ಹತ್ತೊಂಬತ್ತನೆ ಶತಮಾನದಿಂದ ಇಂಥದೊಂದು ಪ್ರಕ್ರಿಯೆಯನ್ನು ಗುರುತಿಸಬಹುದು. ಜ್ಯೋತಿರಾವ್ ಫುಲೆಯವರ ಸತ್ಯಶೋಧಕ ಸಮಾಜ, ಪಂಜಾಬಿನ ಆದಿಧರ್ಮ ಮತ್ತು ಬಂಗಾಳದ ನಾಮಶೂದ್ರ ಚಳುವಳಿಗಳು ಆಕ್ರಮದಲ್ಲಿ ಪ್ರಾರಂಭವಾದವು. ಇಪ್ಪತ್ತನೇ ಶತಮಾನಕ್ಕೆ ಬಂದರೆ ಭಾರತದೆಲ್ಲೆಡೆ ಈ ಪ್ರಕ್ರಿಯೆಗೆ ಚಾಲನೆಸಿಕ್ಕಿತು. ಮದ್ರಾಸ್, ಮೈಸೂರು, ಮುಂಬೈ ಹೀಗೆ ಬ್ರಾಹ್ಮಣೇತರ ಚಳವಳಿಗಳು ಹಾಗೂ ಅದರ ಬೆನ್ನಿಗೆ ಅಂಬೇಡ್ಕರ್ ನೇತೃತ್ವದ ದಲಿತ ಚಳವಳಿ ಮತ್ತು ಪೆರಿಯಾರರ ದ್ರಾವಿಡ ಚಳವಳಿಗಳು ಹುಟ್ಟಿ ಬೆಳೆದರೆ ಸ್ವಾತಂತ್ರೋತ್ತರ ಭಾರತದಲ್ಲಿ ಮರುಧೃವೀಕರಣ ಪ್ರಾರಂಭವಾಗಿದೆ. ಇದಕ್ಕೆ ಕಾರಣಗಳು ಹಲವಾರು.

ಪ್ರಶ್ನೆ: 'ಅಹಿಂದ' ದಂಥ ಧೃವೀಕರಣ ಕರ್ನಾಟಕದ ರಾಜಕೀಯಕ್ಕೆ ಇಂದು ಅನಿವಾರ್ಯವೆ?

ಉತ್ತರ: ಇಂಥ ಧೃವೀಕರಣದ ಅನಿವಾರ್ಯತೆಯನ್ನು ಮನಗಾಣುತ್ತಿರುವುದು ಇದು ಮೊದಲನೆ ಬಾರಿಗಂತೂ ಅಲ್ಲ ಅಲ್ಲವೇ? ಯಾಕೆಂದರೆ ಕರ್ನಾಟಕದಲ್ಲೇ ಬ್ರಾಹ್ಮಣೇತರ ಪರಿಷತ್ತೂ ಒಳಗೊಂಡು ಈ ರೀತಿಯ ಚಟುವಟಿಕೆ ನಡೆದೇ ಇದೆ. ಅಂಥ ಪ್ರಯತ್ನಕ್ಕೆ ಸ್ವಾತಂತ್ರಾನಂತರ ಚಾಲನೆ ಸಿಕ್ಕಿದ್ದು ದೇವರಾಜ ಅರಸರಿಂದ. ಆದರೆ ಅರಸರು ಪ್ರಯತ್ನಸಿದ್ದು ಅಧಿಕಾರ ಕೇಂದ್ರೀಕೃತ ಮಾಡಿಕೊಂಡಿದ್ದ ಒಂದು ರಾಷ್ಟ್ರೀಯ ಪಕ್ಷದ ಅಡಿಯಲ್ಲಿ. ಸಂಗತಿಯನ್ನು ಮರೆಯಲಾಗದು. ಆದ್ದರಿಂದಲೇ ಆ ಪ್ರಯತ್ನಕ್ಕೆ ತೀವ್ರ ಮಿತಿಗಳಿದ್ದವು. 'ರಾಜ್ಯದ ಇಂದಿನ ರಾಜಕೀಯಕ್ಕೆ ಇದು ಅನಿವಾರ್ಯವೇ' ಎಂದರೆ ಉತ್ತರ 'ಹೌದು'. ಆದರೆ ಅದು ಎಂಥವರ ನಾಯಕತ್ವದಲ್ಲಿ ಇರುತ್ತದೆ, ಅದರ ಬದ್ಧತೆ, ರಾಜಕೀಯ ಸಿದ್ಧಾಂತ, ಪ್ರಣಾಳಿಕೆಗಳು ಹೇಗಿರುತ್ತವೆ ಎನ್ನುವುದನ್ನು ಅವಲಂಬಿಸಿ ಅದರ ಭವಿಷ್ಯ ನಿರ್ಧರವಾಗಬಲ್ಲದು. ಚುನಾವಣೆ-ಅಧಿಕಾರಗಳನ್ನು ಮಾತ್ರ ದೃಷ್ಟಿಯಲ್ಲಿಟ್ಟುಕೊಂಡು ಕೇವಲ ನಾಯಕರ ಮಟ್ಟದಲ್ಲಿ ಆಗುವ ಹೊಂದಾಣಿಕೆಗಳು ಫಲಕಾರಿ ಆಗುವುದು ಅನುಮಾನ.

ಪ್ರಶ್ನೆ: 'ಅಹಿಂದ' ರೀತಿಯ ಜಾತಿಗಳ ಒಗ್ಗೂಡುವಿಕೆ ಸಾಂಸ್ಕೃತಿಕ ಮಟ್ಟದಲ್ಲಿ ಹೇಗೆ ಆಗಬಲ್ಲದು?

ಉತ್ತರ: ದುರದೃಷ್ಟ ವಶಾತ್ ಈ ಹೊತ್ತು ಸಾಂಸ್ಕೃತಿಕ ಭಾರತವೆಂದರೆ ಅದು ಹಿಂದೂ-ಮುಸ್ಲಿಂ ಕೋಮುವಾದಿಗಳ ಆಡೊಂಬಲದಂತೆ ಮೇಲ್ನೋಟಕ್ಕಾದರೂ ಕಾಣುತ್ತದೆ. ನಿಮ್ಮ ಪ್ರಶ್ನೆಗೆ ಸಿದ್ಧ ಸಂಕ್ಷಿಪ್ತ ಉತ್ತರವಂತೂ ಸಾಧ್ಯವಿಲ್ಲ. ಈ ವಿಚಾರದಲ್ಲಿ ಗಾಂಧಿ - ಲೋಹಿಯಾ-ಅಂಬೇಡ್ಕರ್ ಇವರ ಚಿಂತನೆಗಳನ್ನು ಸಾಮರಸ್ಯಗೊಳಿಸಿ ಏನಾದರೂ ಮಾಡಬೇಕಿದೆ. ಜಾಗತೀಕರಣದ ಹೊಡೆತದಲ್ಲಿ ಮಾಧ್ಯಮಗಳು ಬಿತ್ತರಿಸುತ್ತಿರುವ ಹುಸಿ ಸಂಸ್ಕೃತಿ ನಾವು ನಿಂತಿರುವ ನೆಲವನ್ನೇ ಅಲುಗಾಡಿಸುತ್ತಿರುವಾಗ ಅದು ಸುಲಭಾ ಸಾಧ್ಯವಾದದ್ದಲ್ಲ.

ಪ್ರಶ್ನೆ: ಕರ್ನಾಟಕದಲ್ಲಿ ಪೆರಿಯಾರ್ ಮಾದರಿ ಚಳುವಳಿಯನ್ನು 'ಅಹಿಂದ' ಚಳುವಳಿ ಪುನರಾವರ್ತಿಸಲು ಸಾಧ್ಯವೆ? ಪುನರಾವರ್ತಿಸುವ ಅಗತ್ಯವಿದೆಯೆ?

ಉತ್ತರ: ಪೆರಿಯಾರ್ ಚಳವಳಿಯಂಥದ್ದನ್ನು ಪುನರಾವರ್ತಿಸುವುದು ಅಗತ್ಯವಿದೆಯೇ ಎನ್ನುವ ಪ್ರಶ್ನೆಗಿಂತಲೂ ಸಾಧ್ಯವಿದೆಯೇ ಎನ್ನುವ ಪ್ರಶ್ನೆಯೇ ಹೆಚ್ಚು ಪ್ರಸ್ತುತ. ಪೆರಿಯಾರರ ಚಳವಳಿ ನನ್ನ ಪ್ರಕಾರ ಸಮಾಜದ ಬ್ರಾಹ್ಮಣೇತರ ಮೇಲ್ಪದರವನ್ನು ಮಾತ್ರ ಆಕರ್ಷಿಸಿತು. ಅದೂ ರಾಜಕೀಯಕಾರಣಗಳಿಗಾಗಿ. ಸಾಂಸ್ಕೃತಿಕ ಪೆರಿಯಾರರನ್ನು ಒಪ್ಪಿ ಆ ರೀತಿ ನಡೆದವರು ಅತ್ಯಲ್ಪ ಮಂದಿ. ಅದರಿಂದ ಸಮಾಜದ ಮೇಲಾದ ಪ್ರಭಾವವೂ ಅಷ್ಟಕ್ಕಷ್ಟೇ. ಆದ್ದರಿಂದ ದಲಿತ ಕಲಾಮಂಡಳಿ, ಸಮುದಾಯ ಮುಂತಾದ ಸಾಂಸ್ಕೃತಿಕ ಸಂಘಟನೆಗಳ ಮಾದರಿ ಈಗಾಗಲೇ ಕರ್ನಾಟಕದಲ್ಲಿದೆ. ಆ ಪರಂಪರೆಯನ್ನು ಅಗತ್ಯವಿರುವಷ್ಟು ಸುಧಾರಣೆಗಳೊಂದಿಗೆ ಮುಂದುವರೆಸುವುದು ಸಾಧ್ಯವಿದೆ, ಅಗತ್ಯವಿದೆ ಮತ್ತು ತುರ್ತೂಇದೆ.

ಪ್ರಶ್ನೆ: ಚರಿತ್ರೆಯಲ್ಲಿ ಈಗಾಗಲೇ ನಡೆದಿರುವ ಈ ರೀತಿಯ ಬೆಳವಣಿಗೆಗಳ ಹಿನ್ನಲೆಯಲ್ಲಿ ಅಹಿಂದ ಹಿಡಿಯಬೇಕಾದ ದಿಕ್ಕುಗಳು ಯಾವುವು ಎಂದು ನಿಮಗನಿಸುತ್ತದೆ?

> ಚಾರಿತ್ರಿಕ, ರಾಜಕೀಯ ಬೆಳವಣಿಗೆಗಳನ್ನು ಅವಲಂಬಿಸಿ ದಿಕ್ಕುಗಳು ನಿರ್ಧಾರವಾಗುತ್ತವೆ. ಈ ಹೊತ್ತು ಕರ್ನಾಟಕದ ಅಧಿಕಾರ ರಾಜಕಾರಣದಲ್ಲಾದ ಪಲ್ಲಟಗಳು 'ಅಹಿಂದ'ಕ್ಕೆ ಒಂದು ರೀತಿಯ ಚಾಲನೆ ದೊರಕಿಸಿಕೊಟ್ಟಿವೆ. ಆದ್ದರಿಂದಲೇ ನಾಯಕತ್ವದ ಬದ್ಧತೆ, ತಾತ್ವಕತೆ, ರಾಜಕೀಯ ಮುತ್ಸದ್ದತನ ಮತ್ತು ಪ್ರಣಾಳಿಕೆಗಳು ಇಲ್ಲಿ ಮುಖ್ಯ. ನನಗಿಲ್ಲಿ ಮತ್ತೆ ಮುಖ್ಯವಾಗುವುದು ಅಂಬೇಡ್ಕರ್ - ಗಾಂಧಿಗಳೂ ಆಧುನಿಕ ಭಾರತದ ರಾಜಕೀಯ ಸಂಸ್ಕೃತಿಗೆ ಕೊಟ್ಟ ಹೊಸ ಆಯಾಮಗಳೇ. ಮೇಲ್ನೋಟಕ್ಕೆ ಅಂಬೇಡ್ಕರ್ ಅವರು ಗಾಂಧಿ ಪ್ರಯತ್ನಗಳ ವಿರುದ್ಧ ವಿರುವಂತೆಕಂಡರೂ ಅಂಬೇಡ್ಕರ್‌ರ ಪ್ರಯತ್ನಗಳೂ ಗಾಂಧಿ ಪ್ರಯತ್ನಗಳಿಗೆ ಆಳದಲ್ಲಿ ಪೂಣಿವಾಗಿಯೇ ಕೆಲಸ ಮಾಡಿದಂತೆ ಅನ್ನಿಸುತ್ತದೆ.

ಉತ್ತರ: ಚಾರಿತ್ರಿಕ, ರಾಜಕೀಯ ಬೆಳವಣಿಗೆಗಳನ್ನು ಅವಲಂಬಿಸಿ ದಿಕ್ಕೂಗಳು ನಿರ್ಧಾರವಾಗುತ್ತವೆ. ಈಗಿನ ಬೆಳವಣಿಗೆಯನ್ನೇ ನೋಡಿ. ಈ ಹೊತ್ತು ಕರ್ನಾಟಕದ ಅಧಿಕಾರ ರಾಜಕಾರಣದಲ್ಲಾದ ಪಲ್ಲಟಗಳು 'ಅಹಿಂದ'ಕ್ಕೆ ಒಂದು ರೀತಿಯ ಚಾಲನೆ ದೊರಕಿಸಿ ಕೊಟ್ಟಿವೆ. ಆದ್ದರಿಂದಲೇ ನಾಯಕತ್ವದ ಬದ್ಧತೆ, ತಾತ್ವಿಕತೆ, ರಾಜಕೀಯ ಮುತ್ಸದ್ದಿತನ ಮತ್ತು ಪ್ರಣಾಳಿಕೆಗಳು ಇಲ್ಲಿ ಮುಖ್ಯ. ನನಗಿಲ್ಲಿ ಮತ್ತೆ ಮುಖ್ಯವಾಗುವುದು ಅಂಬೇಡ್ಕರ್ - ಗಾಂಧಿಗಳು ಆಧುನಿಕ ಭಾರತದ ರಾಜಕೀಯ ಸಂಸ್ಕೃತಿಗೆ ಕೊಟ್ಟ ಹೊಸ ಆಯಾಮಗಳೇ. ಗಾಂಧೀಜಿ ಕಾಂಗ್ರೆಸ್ ಮತ್ತು ರಾಷ್ಟ್ರೀಯ ಚಳವಳಿಗಳನ್ನು ನಿಜ ಅರ್ಥದಲ್ಲಿ ಭಾರತೀಯರೆಲ್ಲರ ಚಳವಳಿಯನ್ನಾಗಿ ಪರಿವರ್ತಿಸಲು ಪ್ರಯತ್ನಿಸಿದರು. ಮೇಲ್ನೋಟಕ್ಕೆ ಅಂಬೇಡ್ಕರ್ ಅವರು ಗಾಂಧಿ ಪ್ರಯತ್ನಗಳ ವಿರುದ್ಧ ವಿರುವಂತೆಕಂಡರೂ ಅಂಬೇಡ್ಕರ್‌ರ ಪ್ರಯತ್ನಗಳೂ ಗಾಂಧಿ ಪ್ರಯತ್ನಗಳಿಗೆ ಆಳದಲ್ಲಿ ಪೂರಕವಾಗಿಯೇ ಕೆಲಸ ಮಾಡಿದಂತೆ ನನ್ನಂಥವರಿಗೆ ಅನ್ನಿಸುತ್ತದೆ. ಆದ್ದರಿಂದ ಎಷ್ಟೇಭಿನ್ನಾಭಿಪ್ರಾಯಗಳೀದ್ದರೂ ಒಟ್ಟಾರೆ ತುಳಿತ - ದಮನಗಳಿಗೆ ಒಳಗಾದವರ ಬಗೆಗಿನ ನಿಜವಾದ ಕಾಳಜಿಯಿರುವವರೆಲ್ಲಾ ಒಂದಲ್ಲ ಒಂದು ಹಂತದಲ್ಲಿ ಕೂಡಿಯೇ ಇರಬೇಕಾದ ಅನಿವಾರ್ಯತೆ ಇರುತ್ತದೆ. ಸ್ವಪ್ರತಿಷ್ಠೆ ಒಣ ಜಂಭಗಳಿಲ್ಲದ, ತಾತ್ವಿಕ ಸ್ಪಷ್ಟತೆ ಇರುವ, ವಿಶಾಲ ಮನೋಭಾವ ಮತ್ತು ಸಮಾಧಾನ ಚಿತ್ತ ವಿರುವ ನಾಯಕತ್ವವೊಂದು ಈ ದಿಕ್ಕುಗಳನ್ನು ನಿರ್ಧರಿಸಬಹುದು. ಆದರೆ ಸಂಘಟನೆಗೆ ಶಿಸ್ತೂ ಇರಬೇಕು. ಆದರೆ ಈ ಹಿಂದೆ ನಮ್ಮ ದೇಶ-ರಾಜ್ಯಗಳ ವಿವಿಧ ಸಮಾಜವಾದಿ ಪಕ್ಷಗಳಲ್ಲಿ ಇದ್ದಂಥ 'ಶಿಸ್ತ'ಲ್ಲ! ಅದರ ಪರಿಣಾಮ ನಮ್ಮ ಕಣ್ಣಮುಂದಿದೆ. ಹಾಗೆಯೇ ಪ್ರೊ. ಎಂ.ಡಿ. ನಂಜುಂಡಸ್ವಾಮಿಯವರ ರೀತಿಯ ಶಿಸ್ತೂ ಅಲ್ಲ. ಅದು ಜನತಾಂತ್ರಿಕ ಶಿಸ್ತು ಆಗಿರಬೇಕಷ್ಟೆ.

ಪ್ರಶ್ನೆ: 'ಅಹಿಂದ'ದಲ್ಲಿ ಭಾಗಿಯಾಗಿರುವ ಜಾತಿಗಳ ಜಾತಿಪ್ರಜ್ಞೆ ವರ್ಗಪ್ರಜ್ಞೆಯಾಗುವ ವರ್ಗಗಳನ್ನು ಸೂಚಿಸ ಬಲ್ಲಿರಾ?

ಉತ್ತರ: ಜಾತಿಪ್ರಜ್ಞೆ - ವರ್ಗಪ್ರಜ್ಞೆಯಾಡುವ ಮಾರ್ಗಗಳ ಬಗ್ಗೆ ಲೋಹಿಯಾ ಮತ್ತು ಅಂಬೇಡ್ಕರ್ ಚಿಂತನೆಗಳಿವೆ. ಆದರೆ ಆಧುನಿಕ ಭಾರತದಲ್ಲಿ ಜಾತಿ-ವರ್ಗ ಎರಡೂ ಸ್ವಾರ್ಥದಲ್ಲಿ ತೊಡಗಿರುವಂತೆ ಕಾಣುತ್ತದೆ. ಅಶಿಕ್ಷಿತ ಸಮುದಾಯಗಳೂ ಅಪ್ರಜ್ಞೆಪೂರ್ವಕವಾಗಿ ಜಾತಿಗೆ ಕಟ್ಟು ಬಿದ್ದಿದ್ದರೆ, ಬಹುತೇಕ ಶಿಕ್ಷಿತರು ಸಮಯಸಾಧಕರಾಗಿ ಎರಡನ್ನೂ ತಮ್ಮ ಸ್ವಾರ್ಥಸಾಧನೆಗೆ ಬಳಸಿ ಕೊಳ್ಳುತ್ತಿರುವಂತೆ ಕಾಣುತ್ತದೆ. ನಮ್ಮ ಕಾರ್ಮಿಕ-ರೈತ ಚಳವಳಿಗಳೂ ಇದಕ್ಕೆ ಹೊರತಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಗಾಂಧಿ ಪ್ರತಿಪಾದಿಸಿದ 'ಹೃದಯ ಪರಿವರ್ತನೆ' ಯಾಗುವ ವಾತಾವರಣವೊಂದನ್ನು ಸೃಷ್ಟಿಸುವುದು ಸಾಧ್ಯವೇ? ಇಲ್ಲಿ ಸಮಾಜವನ್ನು ಜಾತ್ಯತೀತಗೊಳಿಸಲು ಸಾಧ್ಯವೆ? ಹೇಗೆ! ಇವೆಲ್ಲಾ ಪ್ರಶ್ನೆಗಳಾಗಿಯೇ ಇವೆ. ಇದಕ್ಕೆ ಉತ್ತರ-ಕೊಡುವುದು ಕಷ್ಟ. ಆದರೆ ಗಾಂಧಿಯಂತೆ ಅಂಬೇಡ್ಕರರಂತೆ ಅಥವಾ ಲೋಹಿಯಾರಂತೆ ನಿರಂತರವಾಗಿ ಜನರೊಡನೆ ಬೆರೆಯುತ್ತಾ, ಅವರಲ್ಲಿ ವೈಚಾರಿಕ ಜಾಗೃತಿಯುಂಟು ಮಾಡಬಲ್ಲ ಒಂದು ಪಡೆಯ ಅವಶ್ಯಕತೆ ಇದೆ. ಅದು

ಸಾಮಾಜಿಕ ಚಳವಳಿಯಾಗಿ ಬೆಳೆಯಬೇಕು

○ಡಾ|| ಲಕ್ಷ್ಮೀಪತಿ ಬಾಬು

ಅಹಿಂದ ಚರ್ಚೆ ಮತ್ತು ಕರ್ನಾಟಕದ ರಾಜಕಾರಣ

ಸಂವಾದ: ಕೋಲಾರದಲ್ಲಿ 1998ರಲ್ಲಿ 'ಅಹಿಂದ' ಒಕ್ಕೂಟ ಶುರುವಾದಾಗ ನೀವೂ ಅದರ ಸಂಸ್ಥಾಪಕರಲ್ಲಿ ಒಬ್ಬರಾಗಿದ್ದಿರಿ. 'ಅಹಿಂದ'ವನ್ನು ಆರಂಭಿಸಬೇಕೆಂಬ ಪ್ರೇರಣೆ ಹೇಗೆ ಹುಟ್ಟಿತು?

ಡಾ.ಲಕ್ಷ್ಮೀಪತಿ ಬಾಬು: ನಾನು 'ಸಮಾಜವಾದಿ ಯುವಜನ ಸಭಾ'ದ ಕಾಲದಿಂದಲೂ ಪ್ರೊ|| ನಂಜುಂಡಸ್ವಾಮಿಯವರ ಪ್ರಭಾವದಲ್ಲಿ ಬೆಳೆದವನು. ಆ ಕಾಲದಿಂದಲೂ ಹಿಂದುಳಿದ ಜಾತಿಗಳನ್ನು ಒಟ್ಟಿಗೆ ತರುವ ಯೋಚನೆ ನಮ್ಮ ಸ್ನೇಹಿತರಲ್ಲಿತ್ತು. ನಾವು 1997ರಲ್ಲಿ ಚಿಕ್ಕಬಳ್ಳಾಪುರದಲ್ಲಿ ಬಲಿಜ ಸಮ್ಮೇಳನವೊಂದನ್ನು ಮಾಡಿದೆವು. ಅಲ್ಲಿ ಕೇವಲ ಬಲಿಜ ಜಾತಿಯ ನಾಯಕರಿರಲಿಲ್ಲ. ಬದಲಿಗೆ ಅನೇಕ ಹಿಂದುಳಿದ ಜಾತಿಯ ನಾಯಕರಿದ್ದರು. ಯಾವುದೇ ಹಿಂದುಳಿದ ಜಾತಿಯ ಸಮ್ಮೇಳನ ಕೇವಲ ಆ ಜಾತಿಯ ಜನರ ಸಮ್ಮೇಳನವಾಗದೆ. ಇತರ ಹಿಂದುಳಿದ ಜಾತಿಗಳ ನಾಯಕರು ಹಾಗೂ ಜನರು ಪಾಲ್ಗೊಳ್ಳುವಂತಾಗಬೇಕು ಎಂಬ ಆರೋಗ್ಯಕರ ಧೋರಣೆ ಅಲ್ಲಿಂದ ಶುರುವಾಯಿತು. ವಿಶೇಷವೆಂದರೆ, ಆ ಸಮ್ಮೇಳನವನ್ನು ಸಿದ್ಧರಾಮಯ್ಯನವರೇ ಉದ್ಘಾಟಿಸಿದ್ದರು. ನಂತರ, 1998ರಲ್ಲಿ ಕೋಲಾರದಲ್ಲಿ 'ಅಹಿಂದ'ದ ಬೃಹತ್ ಅಧಿವೇಶನ ನಡೆದಾಗ, ಆ ಸಮಾವೇಶವನ್ನು ಸಿದ್ಧರಾಮಯ್ಯನವರೇ ಉದ್ಘಾಟಿಸಿದರು...

ಸಂವಾದ: 1998ರ 'ಅಹಿಂದ' ಒಕ್ಕೂಟ ರೂಪಿಸುವಲ್ಲಿ ಯಾರ್ಯಾರು ಕ್ರಿಯಾಶೀಲರಾಗಿದ್ದರು?

ಡಾ|| ಬಾಬು: ದೊಡ್ಡ ಪಟ್ಟಿಯನ್ನೇ ಕೊಡಬಹುದು. ಪ್ರೊ|| ಕೆ.ನಾರಾಯಣಸ್ವಾಮಿ, ಎ.ಜಿ.ಸುಧಾಕರ್, ಅಫ್ರೋಜ್ ಪಾಷ, ಡಾ|| ಗೋವಿಂದ ರಾಜು, ಡಾ|| ರಾಮಚಂದ್ರ, ಡಾ|| ಸರೋಜ, ಲಕ್ಷ್ಮೀಪತಿ ಕೋಲಾರ, ಸಿ.ಎಸ್. ದ್ವಾರಕನಾಥ್, ಸಿ.ಎಂ.ಮುನಿಯಪ್ಪ, ನಾ.ಮುನಿಸ್ವಾಮಿ, ಮಾಲೂರು ನಾರಾಯಣಸ್ವಾಮಿ, ನಿಸಾರ್ ಅಹಮದ್, ಡಾ|| ಪೂರ್ಣನಂದ್, ವೆಂಕಟೇಶ್, ಭಂಗವಾದಿ ನಾರಾಯಣಪ್ಪ, ನಂಜುಂಡಪ್ಪ, ಪಿಚ್ಚಳ್ಳಿ ಶ್ರೀನಿವಾಸ್ ಇನ್ನೂ ಹತ್ತಾರು ಚಿಂತಕರು, ನಾಯಕರು ಈ ಒಕ್ಕೂಟ ರೂಪಿಸಲು ದುಡಿದರು. ಹಿರಿಯರಾದ ಜಾಲಪ್ಪ, ವಿ.ಆರ್.ಸುದರ್ಶನ್ ಕೂಡ 'ಅಹಿಂದ'ದ ಜೊತೆಗಿದ್ದರು. ಆ ನಂತರ ಮಂಡ್ಯ, ಹಾಸನಗಳಲ್ಲೂ ಆರಂಭಗೊಂಡಿತು.

ಸಂವಾದ: ಅವತ್ತಿನ 'ಅಹಿಂದ'ದ ಮುಖ್ಯ ಆಶಯಗಳೇನು?

ಡಾ|| ಬಾಬು: ಅದನ್ನು ನಮ್ಮ ಸಮಾವೇಶದ ಕರಪತ್ರದಲ್ಲೇ ಹೇಳಿದ್ದೇವೆ:

"ಜಾತಿ ಎನ್ನುವುದು ಒಂದು ವಾಸ್ತವ. ಇದಕ್ಕೆ ಚಲನಶೀಲತೆ ಇಲ್ಲ" ಎಂದ ಡಾ|| ಲೋಹಿಯಾರ ಮಾತು ಅಕ್ಷರಶಃ ಸತ್ಯವೆಂಬುದನ್ನು ನಾವಿಂದು ಅರ್ಥ ಮಾಡಿಕೊಂಡಿದ್ದೇವೆ. ವೈದಿಕ ಹಾಗೂ ಬಲಿಷ್ಠ ಜಾತಿಗಳು ತಮ್ಮ ಕೈಯಲ್ಲಿ ಜಾತಿ ಅಸ್ತ್ರಗಳನ್ನು ಹಿಡಿದು ನಮ್ಮ ಕಣ್ಣ ಮುಂದೆಯೇ ನಮ್ಮ ತೋಟದ ಹಣ್ಣುಗಳನ್ನು ಕಿತ್ತು ತಿನ್ನುತ್ತಿವೆ! ಸಾಮಾಜಿಕವಾಗಿ ಇದೆಲ್ಲಕ್ಕಿಂತ ರಾಜಕೀಯವಾಗಿ ನಮ್ಮನ್ನು ಪಾತಾಳಕ್ಕೆ ತುಳಿದು ವಾಮನ ಅಟ್ಟಹಾಸದಲ್ಲಿ ನಗುತ್ತಿವೆ!

ಕುರುಬ, ಕುಂಬಾರ, ಕುಮ್ಮಾರ, ಕಮ್ಮ, ಕಾಟಿಕ, ಕೊಡವ, ಕೊರಮ, ಕೊರಚ, ಜಟ್ಟಿ, ಜೈನ್, ಬೌದ್ಧ, ಈಡಿಗ, ಬೇಡ, ಬೆಸ್ತ, ಬಲಿಜ, ಗೊಲ್ಲ, ಗಾಣಿಗ, ತಿಗಳ, ತೊಗಟವೀರ, ಅಗಸ, ಕ್ಷೌರಿಕ, ದೇವಾಂಗ, ವಿಶ್ವಕರ್ಮ, ಸಾದರ, ಸಾಲಿ, ಉಪ್ಪಾರ, ರಾಜುಕ್ಷತ್ರಿಯ, ನಟವ, ಲಂಬಾಣಿ, ಬೋವಿ, ದರ್ಜಿ, ಮೊದಲಿಯಾರ್, ಮರಾಠ, ಸಿಂಗ್, ಕಲಾಯಿಗರೇ ಮುಂತಾದ ಹಿಂದುಳಿದವರೆಲ್ಲ ಒಗ್ಗೂಡಿ ನಮ್ಮ ಬಂಧುಗಳಾದ ಮುಸ್ಲಿಂ, ಕ್ರೈಸ್ತ, ದಲಿತ ಹಾಗೂ ಎಲ್ಲಾ ಆದಿವಾಸಿ ಜನರೊಂದಿಗೆ ಸಂಘಟಿತರಾಗುವ ಐತಿಹಾಸಿಕ ಅನಿವಾರ್ಯತೆಯೊದಗಿದೆ.

ಕೋಲಾರ ಜಿಲ್ಲೆ ಅಲ್ಪಸಂಖ್ಯಾತರ ಹಿಂದುಳಿದವರ ಹಾಗೂ ದಲಿತರ ಜಿಲ್ಲೆ. ಈ ಅಶಕ್ತ ಅಸಂಘಟಿತ ಜಾತಿಗಳೇ ಇಲ್ಲಿನ ಬಹುಸಂಖ್ಯಾತರು! ಆದರೆ ಇಲ್ಲಿನ ಅಲ್ಪಸಂಖ್ಯಾತರಾದ ಸಂಘಟಿತ ಬಲಿಷ್ಠ ಜಾತಿಗಳು ನಮ್ಮ ಸವಲತ್ತುಗಳನ್ನು ತಮ್ಮ ಬಲಿಷ್ಠ ಬಾಹುಗಳಿಂದ ಕಸಿದುಕೊಳ್ಳುತ್ತಿವೆ.

ಒಂದು ಕಾಲದಲ್ಲಿ ಈ ಜಿಲ್ಲೆಯಲ್ಲಿ ಒಬ್ಬ ನಟವ, ಬಲಜ, ಗೊಲ್ಲ, ಸಾದರ, ಕ್ಷೌರಿಕ, ಕಮ್ಮ, ಮುಸ್ಲಿಂರು ಶಾಸಕರಾಗುತ್ತಿದ್ದರು. ಆಗ ಅಂತಹ ಸಾಧ್ಯತೆಯಿತ್ತು. ಆದರೆ ಈಗ ಭೂತಗನ್ನಡಿ ಹಿಡಿದು ನೋಡಿದರು ಒಬ್ಬೇ ಒಬ್ಬ ಹಿಂದುಳಿದವ, ಅಲ್ಪಸಂಖ್ಯಾತನಾದವನು ಶಾಸಕನಾಗಿ ಕಾಣುತ್ತಿಲ್ಲ, ಇದಕ್ಕೆ ಕಾರಣವೇನು?

ನಾವು ಜಾತಿ–ವಿಜಾತಿಗಳಾಗಿ ಒಡೆದು ಛಿದ್ರವಾಗಿರುವುದು, ನಾವು ಅಸಂಘಟಿತರಾಗಿರುವುದು, ನಾವು ಆತ್ಮಗೌರವವನ್ನು ಕಳಕೊಂಡು ಬಲಿಷ್ಠ ಜಾತಿಗಳ ಗುಲಾಮರಾಗಿರುವುದು ಹಾಗೂ ನಮ್ಮ ಹಕ್ಕುಗಳಿಗಾಗಿ ನಾವಿಂದು ಬೀದಿಗಿಳಿಯದೇ ಇರುವುದು ನಮ್ಮ ಹಿಂದುಳಿದಿರುವಿಕೆಗೆ ಕಾರಣವಾಗಿದೆ.

ನಾವಿಂದು ಆತ್ಮಸ್ಥೈರ್ಯದಿಂದ ಸಿಡಿದೇಳಬೇಕಿದೆ. ನಮ್ಮ ಹಕ್ಕು, ಭಾಧ್ಯತೆಗಳಿಗಾಗಿ ಬೀದಿಗಿಳಿಯಬೇಕಿದೆ. ನಮ್ಮ ನಡುವೆ ನಿಂತಿರುವ ಹುಸಿ ಅಡ್ಡಗೋಡೆಗಳನ್ನು ನೆಲಸಮ ಮಾಡಿ ಕೈಜೋಡಿಸಬೇಕಿದೆ. ನಾವಿಂದು ಸಂಘಟಿತರಾಗಬೇಕಿರುವುದು ನಮ್ಮ ಆತ್ಮಗೌರವವನ್ನು ರಕ್ಷಿಸಿಕೊಳ್ಳಲು, ನಮ್ಮ ಹಕ್ಕುಗಳನ್ನು ದಕ್ಕಿಸಿಕೊಳ್ಳಲು ಮತ್ತು ನಮ್ಮ ತೋಟದ ಹಣ್ಣುಗಳನ್ನು ಉಳಿಸಿಕೊಳ್ಳಲು!

ನಮ್ಮ ಹೋರಾಟ ಯಾವುದೇ ಜಾತಿಯ ಯಾವುದೇ ಪಂಗಡದ ವಿರುದ್ಧವೂ ಅಲ್ಲ ಮತ್ತು ಯಾವುದೇ ರಾಜಕೀಯ ಪಕ್ಷದ ವಿರುದ್ಧವೂ ಅಲ್ಲ ನಮ್ಮ ಹೋರಾಟ ನಮ್ಮ ಸಂಕೋಲೆಗಳನ್ನು ಬಿಡಿಸಿಕೊಳ್ಳುವುದಕ್ಕಾಗಿ. ನಮ್ಮ ಸಾಮಾಜಿಕ, ಸಾಂಸ್ಕೃತಿಕ ಹಾಗೂ ರಾಜಕಾರಣದ ಅಸ್ತಿತ್ವ ಉಳಿಸಿಕೊಳ್ಳುವುದಕ್ಕಾಗಿ.

ಆದ್ದರಿಂದ ನಾವಿಂದು ಬುದ್ಧನ ಕಾಣ್ಕೆ, ಬಸವನ ಬದ್ಧತೆ, ಅಂಬೇಡ್ಕರ್ ಪ್ರಜ್ಞೆ, ಲೋಹಿಯಾ ಸಿದ್ಧಾಂತ, ಶಾಂತವೇರಿಯ ನೈತಿಕತೆಯ ಹಿನ್ನಲೆಯಿಟ್ಟುಕೊಂಡು ಟಿಪ್ಪುವಿನ ಕೆಚ್ಚಿನಿಂದ ಹೋರಾಡಬೇಕಿದೆ. ಇದಕ್ಕೆ ದೇವರಾಜ ಅರಸರ ಆಶಯ ವೇದಿಕೆಯಾಗಲಿದೆ. ಈ ದಿಸೆಯಲ್ಲಿ ಈ ರಾಜ್ಯದಲ್ಲಿ ಹಿಂದುಳಿದವರಿಗೆ, ದಲಿತರಿಗೆ, ಅಲ್ಪಸಂಖ್ಯಾತರಿಗೆ ದನಿ ನೀಡಿದ ದಿ|| ದೇವರಾಜ ಅರಸರ ಜನ್ಮದಿನದಂದು ಅಂದರೆ 20-8-98 ರಂದು ಲಕ್ಷಾಂತರ ಜನ ಕೋಲಾರದಲ್ಲಿ ನೆರೆದು ನಮ್ಮ ಸಂಘಟನಾಶಕ್ತಿಯನ್ನು ತೋರಬೇಕಿದೆ.

ಸಂವಾದ: ಅಲ್ಲಿಂದಾಚೆಗೆ 'ಅಹಿಂದ' ಏಕೆ ಬೆಳೆಯಲಿಲ್ಲ?

ಡಾ|| ಬಾಬು: ಬೆಳೆಸುವ ಕಾಳಜಿ, ಉತ್ಸಾಹ ನಮ್ಮಲ್ಲಿ ಅನೇಕರಿಗಿತ್ತು. ಕೆಲವರು ವಿವಿಧ ರಾಜಕೀಯ ಪಕ್ಷಗಳ ಜೊತೆ ಹೋದರು. ಹೀಗಾಗಿ ಅದು ದೊಡ್ಡ ಮಟ್ಟದಲ್ಲಿ ಬೆಳೆಯಲಿಲ್ಲ

ಸಂವಾದ: ಇವತ್ತಿನ ಬದಲಾದ ರಾಜಕೀಯ ಸನ್ನಿವೇಶದಲ್ಲಿ ಅಹಿಂದ ಹೊಸ ರೀತಿಯಲ್ಲಿ ಬೆಳೆಯಬಹುದು ಎಂದು ನಿಮಗನ್ನಿಸುತ್ತದೆಯೆ?

ಡಾ|| ಬಾಬು: ರಾಜಕೀಯ ಆಕಾಂಕ್ಷೆಗಳು ಎಲ್ಲರಿಗೂ ಇರಬಹುದು. ಆದರೆ ಚುನಾವಣೆಯ ಆಚೆಗೂ 'ಅಹಿಂದ' ಜಾತಿಗಳ ಕಷ್ಟ ಸುಖ, ಅವುಗಳ ಆರ್ಥಿಕ ಸ್ಥಿತಿ ಮುಂತಾದವುಗಳನ್ನು ಗಮನದಲ್ಲಿಟ್ಟುಕೊಂಡು 'ಅಹಿಂದ' ಚಳುವಳಿ ಬೆಳೆಯಬೇಕು ಎಂಬುದು ನಮ್ಮಂಥವರ ಅನಿಸಿಕೆ.

ಸಂವಾದ: ಕೋಲಾರದಲ್ಲಿ ಸಕ್ರಿಯವಾಗಿದ್ದ 'ಅಹಿಂದ'ತಂಡ ಇವತ್ತಿನ 'ಅಹಿಂದ'ದಲ್ಲೂ ಸಕ್ರಿಯವಾಗುವುದೆ.?

ಡಾ|| ಬಾಬು: ಮುಖ್ಯವಾಗಿ ಸಾಮಾಜಿಕ ಎಚ್ಚರಕ್ಕಾಗಿ, ಸಾಮಾಜಿಕ ಚಳುವಳಿಯಾಗಿ 'ಅಹಿಂದ'ವನ್ನು ಬೆಳೆಸಲು ನಾವು ಯಾವಾಗಲೂ ಸಿದ್ಧ. □

'ಅಹಿಂದ' ಅನಿವಾರ್ಯ

ವಿಶೇಷವಾಗಿ ಸಹಾನುಭೂತಿ, ಅಂತಃಕರಣ ಮತ್ತು ತಾಳ್ಮೆಯ ಜೊತೆಗೆ ಅಪಾರ ಕಾಮನ್‌ಸೆನ್ಸ್ ಮತ್ತು ಬೌದ್ಧಿಕ ತಿಕ್ಷತೆ ಇರುವ ಪಡೆಯಾಗಿರಬೇಕು. ಜೊತೆಗೆ ರಾಜಕಾರಣಿಗಳ ಸಹಕಾರವೂ ಅಗತ್ಯ. ಹಾಗಿದ್ದಾಗ ಜಾತಿಪ್ರಜ್ಞೆ, ವರ್ಗಪ್ರಜ್ಞೆಯಾಗುವುದಕ್ಕಿಂತಲೂ ಹೆಚ್ಚಾಗಿ, ಮಾನವರ ಆತ್ಮಗೌರವ ಪ್ರಜ್ಞೆಯಾಗಿ ಬೆಳೆಯಲು ಸಾಧ್ಯ.

ಪ್ರಶ್ನೆ: 'ಅಹಿಂದ' ರೀತಿಯಲ್ಲಿ ಜಾತಿಗಳ ಒಗ್ಗೂಡುವಿಕೆ ಕೋಮುವಾದದ ಬೆನ್ನೆಲುಬು ಮುರಿಯಲು ನೆರವಾಗಬಹುದೆ?

ಉತ್ತರ: ಕೋಮುವಾದದ ಬೆನ್ನೆಲುಬಾಗಿರುವುದು ವಿಕೃತಗೊಳಿಸಿರುವ ಚರಿತ್ರೆ ಮತ್ತು ವಿಕೃತಗೊಂಡ ಮತ–ಧರ್ಮಗಳೇ. ದಮನಿತ ಜಾತಿಗಳ ಒಗ್ಗೂಡುವಿಕೆ ಒಂದು ಹಂತದವರೆಗೆ ಕೋಮುವಾದವನ್ನು ತಡೆಗಟ್ಟಬಲ್ಲದು. ಆದರೆ ಅದು ಮತ್ತೆ ಅಧಿಕಾರ ರಾಜಕಾರಣದ ಮೇಲೇ ಅವಲಂಬಿಸಿದೆ. ಆದ್ದರಿಂದ ಸಮಾಜದ ಸ್ವಾಸ್ಥ್ಯ ಮತ್ತು ಸಾಮರಸ್ಯವನ್ನು ಉಳಿಸಿ–ಬೆಳೆಸುವ ಚರಿತ್ರೆಯ ಬರವಣಿಗೆ–ಕಲಿಕೆ, ಮತ್ತು ನಿಜಮತ–ಧರ್ಮಗಳ ಅರಿವು ಅತ್ಯಗತ್ಯ. ಹಾಗೆಯೇ ಕೋಮುವಾದವನ್ನು, ಬೌದ್ಧಿಕವಾಗಿ ಮತ್ತು ಸಕ್ರಿಯವಾಗಿ ಎದುರಿಸಿ ನಿರಂತರ ಹೋರಾಡುವುದು ಅನಿವಾರ್ಯ. ಈ ಬಗ್ಗೆ ಮತ್ತೆ ಗಾಂಧೀಜಿಯವರ ಈ ಕೆಳಗಿನ ಮಾತುಗಳನ್ನು ನೆನಪಿಸಿಕೊಳ್ಳುತ್ತೇನೆ:

"ಪಠ್ಯಪುಸ್ತಕಗಳ ಮೂಲಕ ನಮ್ಮ ಶಾಲೆ–ಕಾಲೇಜುಗಳಲ್ಲಿ ಚರಿತ್ರೆಯ ವಿಕೃತಗೊಳಿಸಿದ ಮಾದರಿಗಳನ್ನು ಕಲಿಸುವವರೆಗೆ ನಮ್ಮ ದೇಶದಲ್ಲಿ ಕೋಮು ಸಾಮರಸ್ಯವನ್ನು ಶಾಶ್ವತವಾಗಿಸಲು ಸಾಧ್ಯವಿಲ್ಲ".

ಅಹಿಂದಕ್ಕೆ ಕುರುಬರೇ ಸಮರ್ಥ ನಾಯಕರು!

ದಲಿತ-ಹಿಂದುಳಿದ ಮತ್ತು ಅಲ್ಪಸಂಖ್ಯಾತ ಸಮುದಾಯಗಳ ಎಚ್ಚೆತ್ತ ಪ್ರಜ್ಞೆಯು ಚರಿತ್ರೆಯ ಪುನರಾವರ್ತನೆಗೆ ಆಸ್ಪದ ಕೊಡದೆ, ಈ ಸಲ 'ಅಹಿಂದ'ದ ಮೂಲಕ ಚರಿತ್ರೆಗೆ ಹೊಸವ್ಯಾಖ್ಯಾನವನ್ನು ನೀಡುವುದರ ಮೂಲಕ ರಾಜ್ಯದ ಚಿತ್ರಣವನ್ನೇ ಬದಲಾಗಿಸಲು ಹೊರಟಿರುವುದು ಸ್ವಾಗತಾರ್ಹ ಬೆಳವಣಿಗೆಯಾಗಿದೆ. ಅಹಿಂದ ಎಬ್ಬಿಸಿರುವ ಸುನಾಮಿಯ ಅಲೆಗಳಿಂದ ಕಂಗಾಲಾಗಿರುವ ಎಲ್ಲಾ ರಾಜಕೀಯ ಪಕ್ಷಗಳು ಅನಿವಾರ್ಯವಾಗಿ ದಲಿತ, ಹಿಂದುಳಿದ ಮತ್ತು ಅಲ್ಪ ಸಂಖ್ಯಾತ ಜನಾಂಗಗಳ ಜಪ ಮಾಡಲೇಬೇಕಾದ ಸಂಕಷ್ಟಕ್ಕೆ ಈಡಾಗಿವೆ! ಇದುವರೆಗೆ ಜೈಹಿಂದ್ ಘೋಷಣೆಯಲ್ಲಿ ಮೈ ಮರೆಯುತ್ತಿದ್ದ ಬಿ.ಜೆ.ಪಿ ಪಾಲಿಗಂತೂ ಅಹಿಂದ ನ್ಯೂಕ್ಲಿಯರ್ ಅಸ್ತ್ರವಾಗಿ ಬೆದರಿಕೆಯೊಡ್ಡಿದೆ. ಮೇಲ್ಜಾತಿಗಳ ಯಜಮಾನಿಕೆಯನ್ನು ತುಂಡರಿಸಿ, ತಳಸಮುದಾಯಗಳ ಪ್ರಭುತ್ವವನ್ನು ಸ್ಥಾಪಿಸಲು ಈ ಸಂದರ್ಭದಲ್ಲಿ ಅಹಿಂದ ಅನಿವಾರ್ಯವಾಗಿದೆ.

○ ವೈ. ಮರಿಸ್ವಾಮಿ



ಕರ್ನಾಟಕದ ಜನಸಂಖ್ಯೆಯಲ್ಲಿ ಶೇ.8ಕ್ಕಿಂತಲೂ ಅಧಿಕ ಸಂಖ್ಯೆಯಲ್ಲಿರುವ ಕುರುಬರು ಶೇ.11ರಷ್ಟಿರುವ ಲಿಂಗಾಯತ ಮತ್ತು ಶೇ.10ರಷ್ಟಿರುವ ಒಕ್ಕಲಿಗರ ನಂತರದ ಮೂರನೇ ದೊಡ್ಡ ಜನಾಂಗವಾಗಿದ್ದಾರೆ. ಒಕ್ಕಲಿಗರು ದಕ್ಷಿಣ ಕರ್ನಾಟಕದಲ್ಲಿ ಹಾಗೂ ಲಿಂಗಾಯುತರು ಉತ್ತರ ಕರ್ನಾಟಕದಲ್ಲಿ ಅಧಿಕ ಸಂಖ್ಯೆ ಯಲ್ಲಿದ್ದರೆ, ಕುರುಬರು ಕರಾವಳಿ ಕರ್ನಾಟಕವನ್ನು ಹೊರತುಪಡಿಸಿ ಉಳಿದೆಲ್ಲೆಡೆ ಕಣ್ಣಿಗೆ ಕುಕ್ಕುವ ಗೂನೀಯ ಸಂಖ್ಯೆಯಲ್ಲಿದ್ದಾರೆ. ಒಕ್ಕಲಿಗ ಲಿಂಗಾಯತರಷ್ಟಲ್ಲದಿದ್ದರೂ ಇತರ ಜಾತಿಯವರಿಗಿಂತ ಹೆಚ್ಚಿನ ಭೂ ಒಡೆತನವನ್ನು ಹೊಂದಿದ್ದಾರೆ. ಕುರಿ ಸಾಕಾಣಿಕೆಯು ಇಂದಿಗೂ ಕೂಡ ಕುರುಬ ಜನಾಂಗದ ಪುಮುಖ ಕಸುಬಾಗಿ ಮುಂದುವರಿಯುತ್ತಿದೆ. ಕೃಷಿಯ ನಂತರ ಕುರಿಸಾಕಾಣಿಕೆಯು ಇಂದಿಗೂ ಗ್ರಾಮಾಂತರ ಪ್ರದೇಶದ ಮಹತ್ವದ ಆರ್ಥಿಕ ಚಟುವಟಿಕೆಯಾಗಿದೆ. ಈ ಜನಾಂಗದ ಸುಧಾರಿತ ಆರ್ಥಿಕತೆಯ ಸಂಕೇತವಾಗಿ ಒಬ್ಬ ಸಾಮಾನ್ಯ ಕುರಿಗಾಹಿಯ ಕಿವಿಯಲ್ಲಿ ಚಿನ್ನದ ಓಲೆ, ಕೈಯಲ್ಲಿ ಉಂಗುರುವನ್ನು ನೋಡಬಹುದು. ತಾವು ಮುಂದುವರಿದ ಯಾವ ಜಾತಿಯವರಿಗಿಂತಲೂ ಕಡಿಮೆಯಲ್ಲ ಎಂದು ಬಿಂಬಿಸಿಕೊಳ್ಳಲು ಕೆಲವು ಕಡೆಗಳಲ್ಲಿ ಇವರು ತಮ್ಮನ್ನು 'ಕುರುಬಗೌಡರು' ಎಂದು ಕರೆದುಕೊಂಡು ಹೆಮ್ಮೆಯಿಂದ ಬೀಗುವುದುಂಟು!

ಕಾಳಿದಾಸನಂಥ ಶ್ರೇಷ್ಠ ಕವಿ/ವಿದ್ವಾಂಸ, ಕನಕದಾಸರಂಥ ಧಾರ್ಮಿಕ ನೇತಾರ, ವೀರ ಸಂಗೊಳ್ಳಿ ರಾಯಣ್ಣನಂಥ ಸ್ವಾತಂತ್ರ್ಯ ಹೋರಾಟಗಾರರ ಪರಂಪರೆಯನ್ನು ಹೊಂದಿರುವ ಕುರುಬ ಸಮಾಜ ಸಾಂಸ್ಕೃತಿಕವಾಗಿ ಶ್ರೀಮಂತ ಹಿರಿಮೆಯನ್ನು ಹೊಂದಿದೆ. ಬೀರಪ್ಪ, ಬೀರದೇವರು, ಬೀರೇಶ್ವರ, ಭೈರವೇಶ್ವರ ಇತ್ಯಾದಿ ಹೆಸರುಗಳಿಂದ ಪ್ರಚಲಿತದಲ್ಲಿರುವ ಬೀರಣ್ಣನೇ ಕುರುಬರ ಆರಾಧ್ಯ ದೈವ. ಒಕ್ಕಲಿಗರ ಸ್ವತ್ತಾಗಿರುವ ಬಾಲಗಂಗಾಧರನಾಥ ಸ್ವಾಮಿಗಳ ಆದಿಚುಂಚನಗಿರಿ ಮಠವೂ ಕೂಡ ಮೂಲತಃ ಕುರುಬರ ಭೈರವೇಶ್ವರನ ಪರಂಪರೆಗೆ ಸೇರಿದ್ದು ಎಂಬ ವಿವಾದವೂ ಇದೆ! ಧಾರ್ಮಿಕವಾಗಿ ವೈದಿಕ ಪುರೋಹಿತರ ಪೌರೋಹಿತ್ಯವನ್ನು ಧಿಕ್ಕರಿಸುತ್ತ ಬಂದಿರುವ ಕುರುಬರು ಕಾಗಿನೆಲೆಯಲ್ಲಿ ತಮ್ಮ ಜನಾಂಗಕ್ಕಾಗಿಯೇ ಧಾರ್ಮಿಕ ಪೀಠವೊಂದನ್ನು ಸ್ಥಾಪಿಸಿಕೊಂಡು, ತಮ್ಮ ಜನಾಂಗದವರೊಬ್ಬರನ್ನು ಮಠಾಧೀಶರನ್ನಾಗಿ ನೇಮಕ ಮಾಡಿ ಕೊಂಡಿರುವುದನ್ನಿಲ್ಲಿ ಸ್ಮರಿಸಬಹುದು. ಶಿಕ್ಷಣ ಮತ್ತು ಬ್ಯಾಂಕಿಂಗ್ ಕ್ಷೇತ್ರಗಳಲ್ಲೂ ಇತ್ತೀಚೆಗೆ ಕೈ ಹಾಕುತ್ತಿರುವ ಕುರುಬರು ಸರ್ಕಾರದ ಯಂತ್ರದಲ್ಲೂ ಆಯಕಟ್ಟಿನ ಜಾಗಗಳಲ್ಲಿದ್ದಾರೆ.

ಮಣ್ಣಿನ ಮಕ್ಕಳಾದ ಕುರುಬರು ಅಸಾಧ್ಯ ಶ್ರಮ ಜೀವಿಗಳು. ನಡುಸುತ್ತಿ, ಹೆಗಲಮೇಲೆ ಕಂಬಳಿ ಎಸೆದುಕೊಂಡು, ಕೈಯಲ್ಲೊಂದು ಬಡಿಗೆ ಹಿಡಿದು ಹೊರಟರೆಂದರೆ, ಅಂದು ಮಾಡಬೇಕಾಗಿರುವ ಕೆಲಸ ಖತಂ ಆದಂತೆಯೇ! ನೆತ್ತಿ ಸುಡುವ ಬಿಸಿಲು, ಮೈಸೀಳಿ ಹಾಕುವ ಚಳಿ, ರಪರಪನೆ ಬಡಿಯುವ ಮಳೆಯನ್ನೂ ಲೆಕ್ಕಿಸದೆ ಕಾಡು ಮೇಡುಗಳಲ್ಲಿ ಅಲೆಯುತ್ತ ಕೆಲವೊಮ್ಮೆ ನೂರಾರು ಮೈಲಿ ಕುರಿಗಳನ್ನು ಮೇಯಿಸುತ್ತಲೇ ಹೋಗುತ್ತಾರೆ. ಕುರಿಸಾಕಾಣಿಕೆಯ ಬಿರುಸಿನ ಕಾಯಕದಲ್ಲಿ ಕ್ಷೌರ ಮಾಡಿಕೊಳ್ಳಲೂ ಸಮಯ ಸಿಗದೆ ಜಟಾಧಾರಿಗಳಾಗಿ ಸಾಕ್ಷಾತ್ ಸನ್ಯಾಸಿಗಳಾಗಿ ಕಂಗೊಳಿಸುವುದುಂಟು.

ಕುರಿಗಳನ್ನು ಗಬಕ್ಕನೆ ಹಿಡಿಯಲು ಬರುವ ತೋಳ, ಕತ್ತೆಕಿರುಬ, ಸಿಂಹ, ಚಿರತೆಗಳೊಂದಿಗೆ ಬಡಿಗೆ ಕವಣೆಗಳೊಂದಿಗೆ ಬಡಿದಾಡುವ ಕುರುಬರು ಅಡವಿ ತಾಯಿಯ ಮಮತೆಯ ಮಕ್ಕಳು. ಗಾಯಗೊಂಡ ಕುರಿಗಳನ್ನು ಸ್ವಂತ ಮಗುವಿನಂತೆ ಕಕ್ಕುಲಾತಿಯಿಂದ ಜತನ ಮಾಡುವ ಅವರು, ಅವೇನಾದರೂ ಸತ್ತುಹೋದರೆ ಮಮ್ಮಲ ಮರುಗಿ ಕಣ್ಣೀರು ಹರಿಸುತ್ತಾರೆ. ಕುರಿಗಳು ಮರಿ ಹಾಕಿದಾಗ ಸಂಭ್ರಮದಿಂದ ಅವುಗಳನ್ನು ಎದೆಗೆ ಅವಚಿಕೊಂಡು ಸಂಭ್ರಮದಿಂದ ಮುದ್ದಾಡುತ್ತಾರೆ.

ಮಾನವೀಯತೆಯ ಸಂಕೇತವಾಗಿರುವ ಕುರುಬರು ಶೌರ್ಯವಂತರೂ ಹೌದು. ಶೂರತನ ಎನ್ನುವುದನ್ನು ಹುಟ್ಟುತ್ತಲೇ ಬುತ್ತಿಕಟ್ಟಕೊಂಡು ಬಂದವರು. ಈಗಲೂ ಕುರುಬರ ಓಣಿಗಳಲ್ಲಿ ಗರಡಿಮನೆಗಳನ್ನು, ಮಣ ಭಾರದ ಎತ್ತುವ ಕಲ್ಲುಗಳನ್ನು, ಉಸುಕಿನ ಚೀಲಗಳನ್ನು ನೋಡಬಹುದು. ಇವರು ಶೂರತನದ ಜೊತೆಗೆ ಕುರಿಯ 'ಮುಗ್ಧತೆ'ಯ ಹಾಲನ್ನುಂಡು ಬೆಳೆದವರು. ಕಣ್ಣೆದುರಿನ ಅನ್ಯಾಯವನ್ನು ಕೆಚ್ಚೆದೆಯಿಂದ ಪ್ರತಿಭಟಿಸುವ ಎಂಟೆದೆ ಬಂಟರು. ಅಂತೆಯೇ ಮೇಲ್ಜಾತಿಗಳ ಸೊಕ್ಕಿನ ಕ್ರೌರ್ಯವನ್ನು ಒಬ್ಬಂಟಿಗಳಾಗಿ ಎದುರಿಸಲು ಹೋಗಿ ಚಚ್ಚಿಸಿಕೊಂಡವರು. ಚಚ್ಚಿಸಿಕೊಳ್ಳುತ್ತಲೇ ಇರುವವರು. ಕನಕ ಗೋಪುರ ಧ್ವಂಸ ಪ್ರಕರಣ ಮತ್ತು ಸಿದ್ಧರಾಮಯ್ಯನವರ ಪ್ರಕರಣ ತೀರಾ ಇತ್ತೀಚೆಗಿನ ಎರಡು ಪ್ರಮುಖ ಸ್ಯಾಂಪಲ್‌ಗಳಷ್ಟೇ!

ಸಾಂಸ್ಕೃತಿಕವಾಗಿ ತಮ್ಮತನವನ್ನು ಗಟ್ಟಿಯಾಗಿ ಉಳಿಸಿಕೊಂಡಿರುವ ಕರ್ನಾಟಕದ ಏಕೈಕ ಸಮುದಾಯವೆಂದರೆ-ಅದು ಕುರುಬ ಸಮುದಾಯ ಮಾತ್ರ. ಕುರುಬರ ಡೊಳ್ಳಿನ ರಗ್ಯಮ್ ಡೊಳ್ಳಮ್ - ರಗ್ಯಮ್ ಡೊಳ್ಳಮ್ ಎಂದು ಹೊರಹೊಮ್ಮುವ ಶಬ್ದ ನರಪೇತಲನಲ್ಲೂ ಸ್ಫೂರ್ತಿಯ ಚಿಲುಮೆ ಉಕ್ಕಿಸಬಲ್ಲದು. ಇಂದಿಗೂ ಉತ್ತರಕರ್ನಾಟಕದಲ್ಲಿ ಡೊಳ್ಳಿನ ಪದಗಳಿಗೆ ಅಪಾರ ಜನಪ್ರಿಯತೆ ಇದೆ. ಯಾವುದೇ ಕಾರ್ಯಕ್ರಮಕ್ಕೆ/ಸಮಾರಂಭಕ್ಕೆ ಕಳೆಕಟ್ಟಬೇಕಾದರೆ ಅಲ್ಲಿ ಕುರಬರ ಡೊಳ್ಳಿನ ಕುಣಿತದೊಂದಿಗೆ ಮಾದಿಗರ ತಮಟೆಯ ಜುಗಲ್‌ಬಂದಿ ಇರಲೇಬೇಕು! ಇದರೊಂದಿಗೆ ಹೊಲೆಯರ ಹಾಡು, ಕೊರವರ ಶಹನಾಯಿಮ ಭಜಂತ್ರಿಯ ಡೋಲು ಸೇರಿತೆಂದರೆ ಅದೊಂದು ಅದ್ಭುತ; ವರ್ಣಿಸಲಾಗದ ಭಾರತದ ತಳ ಸಮುದಾಯಗಳ ಸಾಂಸ್ಕೃತಿಕ ಮಿಲನ!

ಹೀಗೆ ತಳ ಸಮುದಾಯಗಳೊಂದಿಗೆ ತಾಯಿ ಕರುಳಿನ ಸಂಬಂಧವನ್ನು ಬೆಳೆಸಿಕೊಂಡಿರುವ ಕುರುಬ ಸಮುದಾಯವಿಂದು ಹಿಂದುಳಿದ ಜಾತಿಗಳಲ್ಲೇ ಅತ್ಯಂತ ಪ್ರಜ್ಞಾಪೂರ್ವಕವಾಗಿ ಸಂಘಟಿತವಾಗುತ್ತ, ಬ್ರಾಹ್ಮಣ ಸಾಮಾಜಿಕ ವ್ಯವಸ್ಥೆಯ ಅಸಮಾನತೆಯ ವಿರುದ್ಧ ಸಮರ ಸಾರಿ ಸಾಮಾಜಿಕ ನ್ಯಾಯಕ್ಕಾಗಿ ಕನ್ನಡದ ನೆಲದಲ್ಲಿ ತೊಡೆ ತಟ್ಟಿ ನಿಂತಿರುವುದು ಹೆಮ್ಮೆಯ ಸಂಗತಿ. ಬ್ರಾಹ್ಮಣರನ್ನು ಬಿಟ್ಟರೆ ಕರ್ನಾಟಕದಲ್ಲಿ ಮಿಲಿಟೆಂಟ್ ಆಗಿ ಸಂಘಟಿತರಾಗುತ್ತಿರುವವರು ಲಿಂಗಾಯತರೂ ಅಲ್ಲ; ಒಕ್ಕಲಿಗರಂತೂ ಅಲ್ಲವೇ ಅಲ್ಲ; ಕುರುಬರು!

ಕುರುಬರ ಮುಗ್ಧತೆ. ಸತ್ಯದೆಡೆಗಿನ ನಿಷ್ಠೆ, ಸಿರಿವಂತರ ಸೊಕ್ಕಿನ ವಿರುದ್ಧದ ದಂಗೆ, ತಮ್ಮ ಆರಾಧ್ಯ ದೈವದ ಮೇಲಿನ ಭಯಭಕ್ತಿಯನ್ನು ಕುರಿತು ಅನೇಕ ಪ್ರಸಂಗಗಳು, ಕಥೆಗಳು, ನಾಟಕಗಳು, ಜನಪದ ಗೀತೆಗಳು, ಪೌರಾಣಿಕ ಮತ್ತು ಐತಿಹಾಸಿಕ ಐತಿಹ್ಯಗಳು, ಗ್ರಂಥಗಳು ಹೇರಳವಾಗಿವೆ. ಕನ್ನಡದಲ್ಲಂತೂ ಕುರುಬರ ಬದುಕನ್ನೇ ಕೇಂದ್ರವಾಗಿಟ್ಟುಕೊಂಡು ಬೆಳ್ಳಿತೆರೆಗಪ್ಪಳಿಸಿದ ಚಿತ್ರಗಳು ಭರ್ಜರಿಯಾಗಿ ಸಕ್ಸಸ್ ಆಗಿ ರೊಕ್ಕ ಮೂಡಿವೆ. ಡಾ॥

ಅಹಿಂದ ಚರ್ಚೆ ಮತ್ತು ಕರ್ನಾಟಕದ ರಾಜಕಾರಣ

ರಾಜ್ ಅಭಿನಯದ ಬಂಗಾರದ ಪಂಜರ, ಭಕ್ತ ಕನಕ ದಾಸ, ಕವಿರತ್ನ ಕಾಳಿದಾಸ ಮತ್ತು ವಿಷ್ಣುವರ್ಧನ್ ನಟಿಸಿರುವ ರುದ್ರನಾಗ, ಶಿವಣ್ಣನ ಕುರುಬನ ರಾಣಿ ಇತ್ಯಾದಿ ಸಿನೆಮಾಗಳನ್ನು ಇಲ್ಲಿ ಹೆಸರಿಸಬಹುದು. ಅದರಲ್ಲಂತೂ ಡಾ.ರಾಜ್ ಅಭಿನಯದ ಕವಿರತ್ನ ಕಾಳಿದಾಸ ಚಿತ್ರದ 'ಬೆಳ್ಳಿ ಮೂಡಿತೋ ಕೋಳಿ ಕೂಗಿತೋ – ಬಾನಾಗೇ ರಂಗು ಚೆಲ್ಲಿ ತೇರನೇರಿ ಸೂರ್ಯ ಬಂದ' ಹಾಡು ಕನ್ನಡಿಗರ ಹೃದಯದಲ್ಲಿ ಗಟ್ಟಿಯಾಗಿ ತಳವೂರಿಬಿಟ್ಟಿದೆ! ಕಲಾತಪಸ್ವಿ ರಾಜೇಶ್ ಅಲಿಯಾಸ್ ಎಲ್ಲಪ್ಪ, ಹಾಸ್ಯನಟ ಕರಿಬಸವಯ್ಯ, ಮಿಮಿಕ್ರಿ ದಯಾನಂದ್‌ರಂಥ ಕುರುಬ ಸಮುದಾಯದ ಕಲಾವಿದರು ಕನ್ನಡ ಚಿತ್ರರಂಗಕ್ಕೆ, ಸಾಂಸ್ಕೃತಿಕ ಜಗತ್ತಿಗೆ ಸಲ್ಲಿಸುತ್ತಿರುವ ಸೇವೆಯನ್ನು ಅಕ್ಷರಗಳಲ್ಲಿ ಹಿಡಿದಿಡಲು ಸಾಧ್ಯವೇ?

ಇಂತಹ ಮುಗ್ಧಮನಸ್ಸಿನ ಕುರುಬರನ್ನು ಹೀಯಾಳಿಸಲೆಂದು ಮನುವಾದಿಗಳು ಅನೇಕ ಕುಯುಕ್ತಿಗಳನ್ನು ನಿರಂತರವಾಗಿ ಮಾಡುತ್ತ ಬಂದಿದ್ದಾರೆ. ಕುರುಬ ಎಂದರೆ ದಡ್ಡ, ಪೆದ್ದ, ಹುಂಬ, ಹೆಡ್ಡ, ಅನಾಗರಿಕ ಇತ್ಯಾದಿ ವ್ಯಂಗ್ಯಾರ್ಥದಲ್ಲಿ ಬಳಸುತ್ತಿರುವುದನ್ನಿಲ್ಲಿ ಉಲ್ಲೇಖಿಸಬಹುದು. ಕುರುಬರ ಧಾರ್ಮಿಕ ಭಾವನೆಯ ಸಂಕೇತವಾಗಿದ್ದ ಕನಕಗೋಪುರ ಧ್ವಂಸದ ಪ್ರಕರಣ ಕೂಡ ಇದೇ ಸಾಲಿನಲ್ಲಿ ನಿಲ್ಲುತ್ತದೆ.

ಮಂಡಲ್ ವಿರೋಧಿ ಗಲಭೆಯ ಸಂದರ್ಭದಲ್ಲಿ, ಮನುವಾದಿಗಳ ಚಿತಾವಣೆಗೆ ಬಲಿಯಾಗಿ ಬಹುತೇಕ ಹಿಂದುಳಿದ ವರ್ಗದ ವಿದ್ಯಾರ್ಥಿಗಳು ಅದರಲ್ಲಿ ಭಾಗ ವಹಿಸುತ್ತಿದ್ದರು. ಆಗ ಪ್ರಜ್ಞಾವಂತ ಕುರುಬರು ದಲಿತ ಸಂಘರ್ಷ ಸಮಿತಿಯ ಜೊತೆ ಕೈ ಜೋಡಿಸಿ ಮನುವಾದಿಗಳ ಹುನ್ನಾರದ ವಿರುದ್ಧ ಬೀದಿಗಿಳಿದಿದ್ದರು, ಕನಕಗೋಪುರ ಧ್ವಂಸ ನಡೆದಾಗ ಕುರುಬರು ಕೇವಲ ತಮ್ಮ ಜಾತಿಸಂಘಟನೆ ಮುಖಂಡರ ಹೋರಾಟ ರೂಪಿಸಿದೆ,

ದಲಿತ-ಹಿಂದುಳಿದ ಮತ್ತು ಅಲ್ಪಸಂಖ್ಯಾತ ಸಂಘಟನೆಗಳನ್ನೂ ತೆಕ್ಕೆಯಲ್ಲಿ ಸೇರಿಸಿಕೊಂಡು ಪ್ರಬುದ್ಧತೆಯನ್ನು ಮೆರೆದಿದ್ದರು. "ಕನಕಗೋಪುರ ಕೆಡವಿಹಾಕಿರುವುದು ಕೇವಲ ಕುರುಬ ಜನಾಂಗಕ್ಕೆ ಮಾಡಿದ ಅವಮಾನವಲ್ಲ, ಇಡೀ ಶೋಷಿತ ಜನಾಂಗದ ಸ್ವಾಭಿಮಾನದ ಮೇಲೆ ನಡೆದಿರುವ ಪ್ರತಿಗಾಮಿ ಶಕ್ತಿಗಳ ಆಕ್ರಮಣ. ಅಪರಾಧಿಗಳು ಎಷ್ಟೇ ದೊಡ್ಡವರಾಗಿದ್ದರೂ ಸರ್ಕಾರ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳತ್ತದೆ" ಎಂದು ವೈದಿಕಶಾಹಿ ವಿರುದ್ಧ ಸಿದ್ಧರಾಮಯ್ಯನವರು ಬಹಿರಂಗವಾಗಿ ಸಮರ ಸಾರಿದ್ದರು.

ಜಾತ್ಯತೀತ ನಾಯಕ ಎಂದು ಸ್ವಘೋಷಣೆ ಮಾಡಿಕೊಂಡು Secularism ಎನ್ನುವುದನ್ನು ಬ್ರಾಕೆಟ್‌ನಲ್ಲಿ ಬಂಧಿಸಿರುವ ಮಹಾನ್ ಜಾತಿವಾದಿ ದೇವೇಗೌಡ ಹಾಗೂ ಮೇಲ್ಜಾತಿಯ ಕ್ಷತ್ರಿಯ ಜಾತಿಗೆ ಸೇರಿದ ಸಮಯಸಾಧಕ ಎನ್.ಧರ್ಮಸಿಂಗ್‌ರವರು, ಫುಲ್‌ಟೈಮ್ ರಾಜಕಾರಣ ಕಮ್ ಪಾರ್ಟ್‌ಟೈಮ್ ಮಠಾಧೀಶ ಪೇಜಾವರ ವಿಶ್ವೇಶ ತೀರ್ಥರ ಕೇಸರಿ ಬಳಗದ ಧಮ್‌ಕಿಗೆ ಬಾಲ ಮುದುರಿಕೊಂಡು ಸಿದ್ಧರಾಮಯ್ಯ ಮತ್ತವರ ಸಹಸಾಠಿಗಳನ್ನು ಬಲಿಹಾಕಿ ಬಿಟ್ಟರು! ಸಿದ್ಧರಾಮಯ್ಯನವರ ಬೆಂಬಲಿಗರೆಂಬ ಕಾರಣದಿಂದ ದಲಿತ ಜನಾಂಗದ ಡಾ.ಹೆಚ್.ಸಿ.ಮಹದೇವಪ್ಪ ಮತ್ತು ಬೇಡ ಜನಾಂಗದ ಸತೀಶ್ ಜಾರಕಿಹೊಳಿಯವರ ಮಗ್ಗಲು ಮುರಿದು ಹಾಕಿದರು.

ದುರ್ಬಲರು ಬಲಿತವರ ಧಾರ್ಮಿಕ, ಸಾಂಸ್ಕೃತಿಕ, ಸಾಮಾಜಿಕ ಮತ್ತು ರಾಜಕೀಯ ಯಜಮಾನಿಕೆಯ ದಾದಾಗಿರಿಯ ವಿರುದ್ಧ ಸೊಲ್ಲೆತ್ತಬಾರದೆಂಬುದೇ ದೇವೇಗೌಡ, ಧರ್ಮಸಿಂಗ್, ಪೇಜಾವರ ಹಾಗೂ ಒಟ್ಟಾರೆಯಾಗಿ ಈಗಿನ ಪ್ರಸ್ತುತ ಪ್ರತಿಗಾಮಿ ವ್ಯವಸ್ಥೆಯ ನಿರೀಕ್ಷೆಯಾಗಿತ್ತು. ಅಪೇಕ್ಷೆ ಯಾಗಿತ್ತು. ಈ ಹಿಂದೆ ಸಾಮಾಜಿಕ ನ್ಯಾಯದ ಹರಿಕಾರ ದೇವರಾಜ ಅರಸುರವರಂತಹ ಪೈಲ್ವಾನರನ್ನೇ ಬಲಿತೆಗೆದು ಕೊಂಡು ದಕ್ಕಿಸಿಕೊಂಡ ಚರಿತ್ರೆಯೂ ಈ ವ್ಯವಸ್ಥೆಯ ಬೆನ್ನಿಗಿತ್ತು.

ಆದರೆ, ದಲಿತ-ಹಿಂದುಳಿದ ಮತ್ತು ಅಲ್ಪ ಸಂಖ್ಯಾತ ಸಮುದಾಯಗಳ ಎಚ್ಚೆತ್ತ ಪ್ರಜ್ಞೆಯು ಚರಿತ್ರೆಯ ಪುನರಾವರ್ತನೆಗೆ ಆಸ್ಪದ ಕೊಡದೆ, ಈ ಸಲ 'ಅಹಿಂದ'ದ ಮೂಲಕ ಚರಿತ್ರೆಗೆ ಹೊಸ ವ್ಯಾಖ್ಯಾನವನ್ನು ನೀಡುವುದರ ಮೂಲಕ ರಾಜ್ಯದ ಚಿತ್ರಣವನ್ನೇ ಬದಲಾ ಗಿಸಲು ಹೊರಟಿರುವುದು ಸ್ವಾಗತಾರ್ಹ ಬೆಳವಣಿಗೆ.

ಅಹಿಂದ ಎಬ್ಬಿಸಿರುವ ಸುನಾಮಿಯ ಅಲೆಗಳಿಂದ ಕಂಗಾಲಾಗಿರುವ ಎಲ್ಲಾ ರಾಜಕೀಯ ಪಕ್ಷಗಳು ಅನಿವಾರ್ಯವಾಗಿ ದಲಿತ, ಹಿಂದುಳಿದ ಮತ್ತು ಅಲ್ಪ ಸಂಖ್ಯಾತ ಜನಾಂಗಗಳ ಜಪ ಮಾಡಲೇಬೇಕಾದ ಸಂಕಷ್ಟಕ್ಕೆ ಈಡಾಗಿವೆ! ಇದುವರೆಗೆ ಜೈಹಿಂದ್ ಘೋಷಣೆಯಲ್ಲಿ ಮೈ ಮರೆಯುತ್ತಿದ್ದ ಬಿ.ಜೆ.ಪಿ ಪಾಲಿಗಂತೂ ಅಹಿಂದ ನ್ಯೂಕ್ಲಿಯರ್ ಅಸ್ತ್ರವಾಗಿ ಬೆದರಿಕೆಯೊಡ್ಡಿದೆ. ಅಕ್ಟೋಬರ್ 23 ರಂದು ಬೆಂಗಳೂರಿನಲ್ಲಿ ದಲಿತ-ಹಿಂದುಳಿದ-ಕೊಳೆಗೇರಿ ನಿವಾಸಿಗಳ ಬೃಹತ್ ಸಮಾವೇಶವನ್ನು ಸಂಘಟಿಸುವುದಾಗಿ ಘೋಷಿಸುವಷ್ಟರ ಮಟ್ಟಿಗೆ ಬಿ.ಜೆ.ಪಿ ಬಗ್ಗಿಹೋಗಿದೆ!

ಬ್ರಾಹ್ಮಣ ಸಾಮಾಜಿಕ ವ್ಯವಸ್ಥೆಯನ್ನು ಬುಡಮೇಲು ಮಾಡುವುದರ ಮೂಲಕ ಮೇಲ್ಜಾತಿಗಳ ಯಜಮಾನಿಕೆಯನ್ನು ತುಂಡರಿಸಿ, ತಳಸಮುದಾಯಗಳ ಪ್ರಭುತ್ವವನ್ನು ಸ್ಥಾಪಿಸಲು ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ರಾಜಕೀಯ ಸಂಘರ್ಷ ಅಗತ್ಯವಾಗಿರುವ ಈ ಸಂದರ್ಭದಲ್ಲಿ ಅಹಿಂದದ ಲಯವನ್ನು ದಿಕ್ಕುತಪ್ಪಿಸುವ ಅನೇಕ ಷಡ್ಯಂತ್ರಗಳು ನಡೆಯುತ್ತಿವೆ.

> ಅಹಿಂದ ಸಮಾಜ ತನ್ನ ಭವಿಷ್ಯದ ದೃಷ್ಟಿಯಿಂದ ಕುರುಬರ ನಾಯಕತ್ವವನ್ನು ಒಪ್ಪಿಕೊಳ್ಳಬೇಕು. ಡಾ.ಬಿ.ಆರ್.ಅಂಬೇಡ್ಕರ್, ಬಾಬುಜಗಜೀವನ್‌ರಾಮ್, ಬುದ್ಧ, ಬಸವಣ್ಣ, ಪೆರಿಯಾರ್, ನಾರಾಯಣಗುರು, ಕನಕದಾಸ, ಟಿಪ್ಪು ಸುಲ್ತಾನ್, ಜೀಸಸ್‌ರಂಥ ಮಹಾನ್ ಮಾನವತಾವಾದಿಗಳ ವಿಚಾರಗಳನ್ನು ಕನ್ನಡ ನೆಲದಲ್ಲಿ ಜೀವಂತವಾಗಿಡಲು ಕುರುಬರು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದಾರೆ. ಮೇಲ್ಜಾತಿಗಳ ಸಹಸ್ರಾರು ವರ್ಷಗಳ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ರಾಜಕೀಯ ದಾಸ್ಯವನ್ನು ಧಿಕ್ಕರಿಸಿ ಸ್ವಾಭಿಮಾನದ ಹಣತೆ ಹಚ್ಚಲು ಕುರುಬಣ್ಣನ ಹೆಗಲಿಗೆ ಹೆಗಲು ಕೊಡೋಣ.

ಅಹಿಂದ ಜಾತಿವಾದಿಗಳ ಸಂಘಟನೆ. ಅದು ಕುರುಬರ ಸಂಘದ ಮತ್ತೊಂದು ಬ್ರಾಂಚ್, ಒಕ್ಕಲಿಗರನ್ನು ತೇಜೋವಧೆ ಮಾಡುವುದೇ ಅದರ ಕೆಲಸ. ಸಿದ್ರಾಮಯ್ಯನವರನ್ನು ಭವಿಷ್ಯದ ಮುಖ್ಯಮಂತ್ರಿಯನ್ನಾಗಿ ಮಾಡುವ ಹಿಡನ್ ಅಜೆಂಡವೇ ಅಹಿಂದದ ಬಂಡವಾಳ-ಇತ್ಯಾದಿ ರೂಮರ್‌ಗಳು-ಗಾಳಿ ಸುದ್ದಿಗಳು ಅಲ್ಲಲ್ಲಿ ಎದ್ದುಬರುತ್ತಿವೆ.

ಕರ್ನಾಟಕದ ಹಿಂದುಳಿದ ಜನಾಂಗಗಳಲ್ಲೇ ಅತಿದೊಡ್ಡ ಸಮಾಜವಾಗಿರುವ ಪ್ರಜ್ಞಾವಂತ ಕುರುಬ ಸಮಾಜವು, ಈ ನೆಲದಲ್ಲಿ ಆಳವಾಗಿ ಬೇರುಬಿಟ್ಟಿರುವ ಮೇಲ್ಜಾತಿಗಳ ಯಜಮಾನಿಕೆಯನ್ನು ಕಿತ್ತೆಸೆಯಲು ಮುಂದಾಳತ್ವ ವಹಿಸಿರುವುದರಲ್ಲಿ ತಪ್ಪೇನಿದೆ? ಬ್ರಾಹ್ಮಣ, ಲಿಂಗಾಯತ, ಒಕ್ಕಲಿಗರ ಸಂಘಟನೆಗಳಿಗಿಂತ ಕುರುಬರ ಸಂಘವು ಇತರೆ ಶೋಷಿತ ಜನಾಂಗಗಳಿಗೆ ಸಾವಿರಪಾಲು ಉತ್ತಮ. ಕುರುಬರು ಹಾಗೂ ಇತರ ತಳಸಮುದಾಯಗಳೊಂದಿಗೆ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಬೆಸುಗೆ ಇಂದಿಗೂ ಗಟ್ಟಿಯಾಗಿಯೇ ಇದೆ. ಕುಲದ ಶ್ರೇಷ್ಠತೆ, ಭೂಮಾಲೀಕತ್ವದ ಪೊಗರು, ಜಾತಿಯ ಬಲದಿಂದ ಬ್ರಾಹ್ಮಣ, ಲಿಂಗಾಯತ ಹಾಗೂ ಒಕ್ಕಲಿಗ ಜಾತಿಗಳ ರಾಜಕೀಯ ಮುಖಂಡರು ಈಗಾಗಲೇ ಈ ರಾಜ್ಯವನ್ನಾಳಿರುವಾಗ, ಕುರುಬ ಜನಾಂಗದ ಸಿದ್ಧರಾಮಯ್ಯನವರೇಕೆ ಭವಿಷ್ಯದ ಮುಖ್ಯಮಂತ್ರಿಯಾಗಬಾರದು? ದಲಿತ ಜನಾಂಗದಲ್ಲಿ ಹುಟ್ಟಿದ್ದರೂ ನಡವಳಿಕೆಯಲ್ಲಿ ದಿ.ವೀರೇಂದ್ರ ಪಾಟೀಲರ ಆತ್ಮದಂತೆ ವರ್ತಿಸುವ ಇಂದಿನ ಕೆ.ಪಿ.ಸಿ.ಸಿ. ಪ್ರೆಸಿಡೆಂಟ್ ಮಲ್ಲಿಕಾರ್ಜುನ ಖರ್ಗೆ ಪಟೇಲ್‌ಗಿಂತ, ಕುರುಬ ಜನಾಂಗದಲ್ಲಿ ಹುಟ್ಟಿ ಅಪ್ಪಟ ಕುರುಬನಾಗಿಯೇ ಗಟ್ಟಿತನ ಉಳಿಸಿಕೊಂಡಿರುವ ಸಿದ್ಧರಾಮಯ್ಯ ರಾಜ್ಯದ ಮುಖ್ಯಮಂತ್ರಿಯಾಗುವುದರಿಂದ ಅಹಿಂದ ಸಮಾಜಕ್ಕಾಗುವ ನಷ್ಟವೇನು? ಇದು ಹಿಡನ್ ಅಜೆಂಡ ಅಲ್ಲ – ವರ್ತಮಾನದ ಓಪನ್ ಅಜೆಂಡ ಆಗಬೇಕು.

ಅಹಿಂದ ಸಮಾಜ ತನ್ನ ಭವಿಷ್ಯದ ದೃಷ್ಟಿಯಿಂದ ಕುರುಬರ ನಾಯಕತ್ವವನ್ನು ಒಪ್ಪಿಕೊಳ್ಳಬೇಕು. ಡಾ॥ಬಿ.ಆರ್. ಅಂಬೇಡ್ಕರ್, ಬಾಬು ಜಗಜೀವನ್ ರಾಮ್, ಬುದ್ಧ, ಬಸವಣ್ಣ, ಪೆರಿಯಾರ್, ನಾರಾಯಣಗುರು, ಕನಕದಾಸ, ಟಿಪ್ಪು ಸುಲ್ತಾನ್, ಜೀಸಸ್‌ರಂಥ ಮಹಾನ್ ಮಾನವತಾವಾದಿಗಳ ವಿಚಾರಗಳನ್ನು ಕನ್ನಡ ನೆಲದಲ್ಲಿ ಜೀವಂತವಾಗಿಡಲು ಕುರುಬರು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದಾರೆ. ದೇವರಾಜ ಅರಸು ಕುರುಬರಾಗಿದ್ದಿರ ಬಹುದು ಎನ್ನುವಷ್ಟರ ಮಟ್ಟಿಗೆ ಅವರ ಆದರ್ಶಗಳನ್ನು ಹಚ್ಚಿಕೊಂಡಿದ್ದಾರೆ, ಬೆನ್ನು ಬಿದ್ದಿದ್ದಾರೆ. ಆದರೆ ಅರಸು ಮುಂದುವರಿದ ವರ್ಗಕ್ಕೆ ಸೇರಿದವರು ಎಂಬ ಸತ್ಯವನ್ನು ಕುರುಬರ ತಲೆಗೆ ಜಾತಿವಾದದ ಪಟ್ಟಕಟ್ಟಲು ವ್ಯರ್ಥ ಪ್ರಯತ್ನ ನಡೆಸಿರುವ ಮನುವಾದಿಗಳು ಮತ್ತವರ ಚೇಲಾಗಳು ಅರ್ಥ ಮಾಡಿಕೊಳ್ಳಬೇಕು.

ಬಿ.ಜೆ.ಪಿ.ಯ ಕೆ.ಎಸ್.ಈಶ್ವರಪ್ಪನವರಂತಹ ವಿಭೂಷಣರು, ಕೊಪ್ಪಳದ ದಲಿತರ ಮೇಲೆ ಕೆಂಡಕಾರುವಂತಹ ತಿಳಿಗೇಡಿಗಳು, ಕುರುಬ ಜನಾಂಗದಲ್ಲಿ ಅಲ್ಲಲ್ಲಿ ಕಳೆಯಂತೆ ಇದ್ದಾರಾದರೂ ಅಂಥವರನ್ನೇ ಮಾನದಂಡವನ್ನಾಗಿಟ್ಟುಕೊಂಡು ಇಡೀ ಕುರುಬ ಸಮುದಾಯವನ್ನೇ ಸಂಶಯದಿಂದ ನೋಡುವುದು ಬೇಡ. ಅಂಥವರನ್ನು ತಿದ್ದುವ, ಬಗ್ಗದಿದ್ದರೆ ಗುದುಮುರಿಗೆ ಕಟ್ಟುವ ನೈತಿಕ ಜವಾಬ್ದಾರಿಯನ್ನು ಕುರುಬ ನಾಯಕರು ಮತ್ತು ಧಾರ್ಮಿಕ ನೇತಾರರು ಮಾಡಬೇಕು. ನಾಡಿನ ಸ್ವಾತಂತ್ರ್ಯಕ್ಕಾಗಿ ಪ್ರಾಣತೆತ್ತ ಸಂಗೊಳ್ಳಿ ರಾಯಣ್ಣನ ವಂಶಸ್ಥರಾದ ಕುರುಬರ ನಾಯಕತ್ವ ಈ ಕ್ಷಣದ ಅವಶ್ಯಕತೆಯಾಗಿದೆ. □

ಸಾವಿಲ್ಲದ ಸತ್ಯದ ಕುರಿತು ಒಂದಿಷ್ಟು

ಅಹಿಂದ ಚರ್ಚೆ ಮತ್ತು ಕರ್ನಾಟಕದ ರಾಜಕಾರಣ

ಯಾರನ್ನು ಅಲ್ಪಸಂಖ್ಯಾತರು, ಹಿಂದುಳಿದವರು ಮತ್ತು ದಲಿತರು ಎಂದು ಮೂಲೆಗೆ ತಳ್ಳಿದ್ದರೋ, ಅವರು ಒಂದಾದರೆ, ಅವರು ಎದ್ದು ನಿಂತರೆ, ಯಾವ ಶಕ್ತಿಯೂ ಅವರನ್ನು ಎದುರಿಸಲು ಸಾಧ್ಯವೇ ಇಲ್ಲ. ವಾಸ್ತವವಾಗಿ ಅವರು ಅಲ್ಪಸಂಖ್ಯಾತರೂ ಅಲ್ಲ. ಹಿಂದುಳಿದವರಂತೂ ಅಲ್ಲವೇ ಅಲ್ಲ. ಅವರ ಹಕ್ಕನ್ನು ಕಸಿದು ಅವರನ್ನು ಈ ತನಕ ಮೂಲೆಗೆ ತಳ್ಳಲಾಗಿತ್ತು. ದೊರೆಯ ಮುಗ್ಧ ಮಗನನ್ನು ಸೆರೆಯಲ್ಲಿಟ್ಟು ಅಧಿಕಾರ ನಡೆಸಿದ ದುಷ್ಟ ಸೈನ್ಯಾಧಿಕಾರಿಯ ಆಡಳಿತಕ್ಕೆ ಇದನ್ನು ಹೋಲಿಸಬಹುದು.

❍ ಸಂಜೀವ ಬೋಳಾರ

ಗ್ರೀಕ್ ದಾರ್ಶನಿಕ ಪ್ಲೇಟೋ ಒಮ್ಮೆ ಹೇಳಿದ್ದ, "ಸತ್ಯಕ್ಕೆ ಸಾವಿಲ್ಲ, ಅದು ಕಾಲಾತೀತ" ಅಂತ.

ಯಾರಿಗೆ ಖುಷಿ ಅನ್ನಿಸಲಿ, ಬಿಡಲಿ, ಸತ್ಯಕ್ಕೆ ಸಾವಿಲ್ಲ. ಅದಕ್ಕೆ ಯಾವ ಮೇರೆಗಳೂ ಇಲ್ಲ. ಎಲ್ಲಾ ಕಾಲದಲ್ಲೂ, ಎಲ್ಲಾ ರಾಷ್ಟ್ರಗಳಲ್ಲೂ ಅದರ ಗುಣ ಒಂದೇ; ಸತ್ಯ ಸತ್ಯವನ್ನು ಎತ್ತಿ ಹಿಡಿಯುತ್ತದೆ, ಸತ್ಯವನ್ನು ಮಾತ್ರ. ಭಾರತ ದೇಶದಲ್ಲಿರುವ ಮುಸ್ಲಿಮರು, ಕ್ರೈಸ್ತರು, ಹಿಂದುಳಿದವರು ಮತ್ತು ದಲಿತರು ರೌದ್ರ ತಬ್ಬಲಿಗಳು. ಯಾರಿಗೂ ಬೇಡದವರು ಎನ್ನುವ ವಾದವೇ ವಿಕೃತ ಮನಸ್ಸಿನ ಸ್ವಾರ್ಥಿಗಳ ಸೃಷ್ಟಿ. ವಾಸ್ತವವಾಗಿ ಅವರು ಈ ಮಣ್ಣಿನ ಮಕ್ಕಳು. ಇಲ್ಲಿ ಇತರರಿಗಿಂತ ಹೆಚ್ಚಿನ ಅಧಿಕಾರ, ಅವಕಾಶ ಈ ವರ್ಗಕ್ಕೆ ದೊರೆಯಲೇ ಬೇಕಿತ್ತು.

ಸದ್ಯ, ಹಾಗಿಲ್ಲ. ಹಾಗೆಂದು ಯಾರೂ ನಿರಾಶರಾಗಬೇಕಿಲ್ಲ. ಗದ್ದುಗೆಯ ಮೇಲೆ ಕಣ್ಣಿಟ್ಟ ಸ್ವಾರ್ಥಿಗಳು ಇವರನ್ನು ಪಕ್ಕಕ್ಕೆ ಸರಿಸಿ, ಅವರ ಹಕ್ಕಿನ ಅವಕಾಶವನ್ನು ಅನುಭವಿಸುತ್ತ ಬಂದರು. ಹಾಗೆಂದು ಈ ವಂಚನೆಯ ಹುನ್ನಾರ ಖಾಯಂ ಆಗಿ ಉಳಿಯುವುದಿಲ್ಲ. ಉಳಿಯಲು ಸಾಧ್ಯವೂ ಇಲ್ಲ ಎನ್ನುವುದು ಸತ್ಯದ ವಾಸ್ತವ ಬಲ್ಲವರ ವಾದ. ಗದ್ದುಗೆಯ ಮಂದಿಗೆ ಇದು ಹಿಡಿಸದೆ ಹೋಗಬಹುದು. ಸತ್ಯದ ಪರ ವಾದಿಸುವವರು ಈ ಸ್ವಾರ್ಥಿಗಳ ಉರಿಗಣ್ಣಿಗೆ ಎರವಾಗಲೂಬಹುದು.

ಹಾಗೆಂದು ಸತ್ಯ ಎಂದೂ ಸುಳ್ಳಾಗುವುದಿಲ್ಲ. ಕಪೋಲ ಕಲ್ಪಿತ ಸುಳ್ಳಿನ ಕರಿಮುಗಿಲು ಸೂರ್ಯನನ್ನು ಸದಾ ಮರೆಮಾಚಲು ಸಾಧ್ಯವೇ ಇಲ್ಲ. ಮೋಡ ಮುಸುಕಿದ ಸೂರ್ಯ ಖಂಡಿತ ಹೊರಬರುತ್ತಾನೆ. ಇನ್ನಷ್ಟು ಪ್ರಕಾಶಮಾನವಾಗಿ ಕಂಗೊಳಿಸುತ್ತಾನೆ. ಇದು ವಾಸ್ತವ. ಪ್ಲೇಟೋನ ಪರಿಭಾಷೆಯಲ್ಲಿ ಹೇಳುವುದಿದ್ದರೆ, ಇದೇ ಸತ್ಯ. ಭಾರತದಲ್ಲಿ ಮುಸ್ಲಿಮರು, ಕ್ರೈಸ್ತರು, ಹಿಂದುಳಿದ ಪಂಗಡದವರು ಮತ್ತು ದಲಿತರು ತಬ್ಬಲಿಗಳಾಗಲು ಸಾಧ್ಯವೇ ಇಲ್ಲ. ಅವರು ಬಹುಸಂಖ್ಯಾತರು. ಈ ದೇಶದ ಆಡಳಿತದ ಮುಂಚೂಣಿಯಲ್ಲಿ ಇರಬೇಕಾದವರು. ಜನಪರ ನಿಲುವಿನ ಚಿಂತಕರು ವಿಚಾರಶೀಲರು ಹೇಳಿದ್ದೇ ಹೀಗೆ. ತಾನು ಕುಳಿತಿರುವ ನೆಲದ ಅಡಿಯಲ್ಲಿ ವಜ್ರದ ಗಣಿಯೇ ಇದ್ದರೂ ಇದರ ಅರಿವಿಲ್ಲದೆ ಬಿಡಿ ಕಾಸಿಗಾಗಿ ಕೈಯೊಡ್ಡುವ ಬಡ ತಾಯಿಯ ಸ್ಥಿತಿ ಇವರದ್ದು. ಜನಪರ ನಿಲುವಿನ ಮಂದಿ ಇದನ್ನು ಅರಿತದ್ದರು. ಹೀಗಾಗಿ ಯಾವ ಮುಲಾಜೂ ಇಲ್ಲದೆ ಈ ಸತ್ಯವನ್ನು ಹೇಳುತ್ತಲೇ ಬಂದರು.

ನಮ್ಮ ಚಿನ್ನದ, ಗಂಧದ ಬೀಡು ಅನ್ನಿಸಿಕೊಂಡ ಕರ್ನಾಟಕದ ಈಚೆಗಿನ ವಿದ್ಯಮಾನಗಳನ್ನು ಕೊಂಚ ಗಮನಿಸಿ. ಇತರ ಕಡೆಯಂತೆ ಇಲ್ಲಿಯೂ ಈ ಮಂದಿಯ ಮುಗ್ಧತೆಯನ್ನು, ನಿಷ್ಠೆಯನ್ನು 'ಜಾಣ ತಳಿ' ಸ್ವಾರ್ಥಕ್ಕಾಗಿ ಬಳಸಿಕೊಂಡಿತು. ಗದ್ದುಗೆ ಮತ್ತು ಅದು ನೀಡುವ ಅಧಿಕಾರ, ವೈಭವಗಳೆಲ್ಲ ಈ ಜಾಣ ತಳಿಗೆ ಚುನಾವಣೆಯ ಸಮಯ ಮತಪತ್ರದಲ್ಲಿ ಒಪ್ಪಿಗೆಯ ಗುರುತು ಒತ್ತುವ ಅಧಿಕಾರ ಈ ವರ್ಗಕ್ಕೆ. ಭಾರತ ದೇಶಕ್ಕೆ ಸರಿಸಾಟಿ ಯಾವುದಿದೆ? ಇಲ್ಲಿ ಎಲ್ಲರಿಗೂ ಒಂದೇ ಒಂದು ಮತ! ಕೊಳಚೆಯಲ್ಲಿ ಕ್ರಿಮಿಯಂತೆ ಬದುಕುವ ಬಡಪಾಯಿಗೂ ಈ ದೇಶದ ಮಹಾಪ್ರಧಾನಿಗೂ ಇದೊಂದರ ಮಟ್ಟಿಗೆ ಸಮಾನತೆ! ನೆನಪಿಡಿ. ಇದು ಒಂದು ವಿಷಯದಲ್ಲಿ ಮಾತ್ರ! ಈ ಬಡಪಾಯಿಗಳ ಮತವನ್ನು ಹೇಗೆ ಕೊಳ್ಳಬೇಕು ಎನ್ನುವುದು ಇವರಿಗೆ ಗೊತ್ತು. ಉಸಿರಾಡಿದಷ್ಟೇ ಸಹಜವಾಗಿ ಅವರು ಈ ಕೆಲಸವನ್ನು ಮಾಡುತ್ತಲೇ ಬಂದರು. ನೋಟಿನ ಕಂತೆ, ಕೋಮುವಾದ, ಜಾತೀಯತೆ, ಒತ್ತಡ, ಬೆದರಿಕೆ, ಗಂಟಲು ಹರಿದು ಹೋಗುವಂತೆ ಕುಡಿಸಿ ಬಿಡುವುದು– ಇವೆಲ್ಲ ಇವರು ಕಂಡುಕೊಂಡ ದಾರಿಗಳು.

ಅಲ್ಪಸಂಖ್ಯಾತರು, ಹಿಂದುಳಿದವರು ಮತ್ತು ದಲಿತರ ಕುರಿತು ನಿಜವಾದ ಕಾಳಜಿ ಯಾರಿಗೂ ಇಲ್ಲ. ಅಡ್ಡ ದಾರಿಯಲ್ಲಿ ತುಷ್ಟೀಕರಣದ ಪಗಡೆಯ ಗೆಳೆತನದಿಂದ ಸುಲಭವಾಗಿ ತುತ್ತು ಗಿಟ್ಟಿಸಲು ಸಾಧ್ಯ ಇರುವಾಗ ಅವರಲ್ಲಿ ಅರಿವು ಮೂಡಿಸುವ ಕೆಲಸ ಯಾರಿಗೆ ಬೇಕು? ಯಾಕೆ ಬೇಕು? ಎಲ್ಲರೂ ಮಾಡಿದ್ದು ಇದೇ ಕಾರ್ಯವನ್ನು. ಅವರು ತುಳಿದಿದ್ದು ತುಷ್ಟೀಕರಣದ ಅಡ್ಡ ದಾರಿ ಯನ್ನು. ವೇದಿಕೆಯ ಮೇಲಿಂದ ಕೆಟ್ಟ ಭಾಷೆಯಲ್ಲಿ ನಿಂದಿಸುವ ವರಿಗೂ ಇವರ ಮತ ಬೇಕು. ಇದಕ್ಕಾಗಿ ಯಾರಾದರೊಬ್ಬರಿಗೆ ಇಲ್ಲವೇ ಇಬ್ಬರು ಮೂವರಿಗೆ ಒಂದೆರಡು ಕುರ್ಚಿ ಕೊಟ್ಟರೆ ಸಾಕು. ತಮಗೂ ಅಲ್ಪಸಂಖ್ಯಾತರ ಮೇಲೆ ಅಕ್ಕರೆ ಇದೆ ಪ್ರೀತಿ ಇದೆ, ಅವರು ನಮಗೂ ಬೇಕು! ಕನಿಷ್ಠ ಅವರ ಮತದಾನವು ಬೇಕೇ ಬೇಕು. ಕ್ಷಮಿಸಿ ಮತ ಮಾತ್ರ ಬೇಕು ಎಂದರೆ ಚೆನ್ನಾಗಿರುತ್ತದೆ ಅನ್ನಿಸುತ್ತದೆ ಮತ ಸಿಕ್ಕಿದರೆ ಸಾಕೇಸಾಕು. ಮತ್ತೆ ಯೋಚನೆ ಇಲ್ಲ.

ಇದು ಭಾರತದಲ್ಲಿ ನಡೆದುಕೊಂಡು ಬಂದ ರಾಜಕೀಯ ವ್ಯವಸ್ಥೆ. ಈ ಸ್ಥಿತಿ ಎಷ್ಟರ ಮಟ್ಟಿಗೆ ಮುಂದುವರಿದಿದೆ ಅಂದರೆ ಗದ್ದುಗೆಯ ಮಂದಿಗೆ ಜನತೆಯ ನೆನಪಾಗುವುದು ಚುನಾವಣೆಯ ಕಾಲಕ್ಕೆ ಮಾತ್ರ, ಇಲ್ಲಿನ ಬಡಪಾಯಿ ಮತದಾರರೂ ಈ ವ್ಯವಸ್ಥೆಗೆ ಒಗ್ಗಿಕೊಂಡು ಬಿಟ್ಟಿದ್ದಾರೋ ಎನ್ನುವ ಸಂಶಯ ಹುಟ್ಟಿಸುವಷ್ಟರ ಮಟ್ಟಿಗೆ ಇಲ್ಲಿ ಚುನಾವಣೆ ಎನ್ನುವ ಯಂತ್ರ ನಡೆಯುತ್ತಲೇ ಇದೆ.

ಹಾಗೆಂದು ಸತ್ಯ ಸುಳ್ಳಾಗುವುದು ಸಾಧ್ಯವೇ ಹೇಳಿ? ವಂಚನೆ, ದಗಲ್ಬಾಜಿ ಎಷ್ಟು ಸಮಯ ಫಲ ಕೊಡಬಹುದು? ಈಚೆಗೆ ಇಲ್ಲಿನ ಅಲ್ಪಸಂಖ್ಯಾತರು, ಹಿಂದುಳಿದವರು ಮತ್ತು ದಲಿತರಲ್ಲಿಯೂ ಕೊಂಚ ಎಚ್ಚರ ಮೂಡಿದೆ. ಜನಪರ ನಿಲುವಿನ ಮಂದಿ ಹೇಳುತ್ತಾ ಬಂದದ್ದು ಸುಳ್ಳಲ್ಲ. ಅವರ ಮಾತಿನಲ್ಲಿ ಸತ್ಯ ಇದೆ ಎನ್ನುವ ಅರಿವು ಈ ವರ್ಗದಲ್ಲೂ ಮೂಡತೊಡಗಿದೆ. ಸತ್ಯಕ್ಕೆ ಸಂದ ಜಯ ಇದು. ಈ ಹೊತ್ತಿನಲ್ಲಿ ಗ್ರೀಕ್ ದಾರ್ಶನಿಕ ಪ್ಲೇಟೋ ನೆನಪಾಗುತ್ತಾನೆ. ಆತ ಹೇಳಿದ "ಸತ್ಯಕ್ಕೆ ಸಾವಿಲ್ಲ" ಎನ್ನುವ ಮಾತೂ ನೆನಪಾಗುತ್ತದೆ.

ಯಾರನ್ನು ಅಲ್ಪಸಂಖ್ಯಾತರು, ಹಿಂದುಳಿದವರು ಮತ್ತು ದಲಿತರು ಎಂದು ಮೂಲೆಗೆ ತಳ್ಳಿದ್ದರೋ, ಅವರು ಒಂದಾದರೆ, ಅವರು ಎದ್ದು ನಿಂತರೆ, ಯಾವ ಶಕ್ತಿಯೂ ಅವರನ್ನು ಎದುರಿಸಲು ಸಾಧ್ಯವೇ ಇಲ್ಲ. ವಾಸ್ತವವಾಗಿ ಅವರು ಅಲ್ಪಸಂಖ್ಯಾತರೂ ಅಲ್ಲ. ಹಿಂದುಳಿದವರಂತೂ ಅಲ್ಲವೇ ಅಲ್ಲ. ಅವರ ಹಕ್ಕನ್ನು ಕಸಿದು ಅವರನ್ನು ಈ ತನಕ ಮೂಲೆಗೆ ತಳ್ಳಲಾಗಿತ್ತು. ದೊರೆಯ ಮುಗ್ಧ ಮಗನನ್ನು ಸೆರೆಯಲ್ಲಿಟ್ಟು ಅಧಿಕಾರ ನಡೆಸಿದ ದುಷ್ಟ ಸೈನ್ಯಾಧಿಕಾರಿಯ ಆಡಳಿತಕ್ಕೆ ಇದನ್ನು ಹೋಲಿಸಬಹುದು. ದೊರೆಯ ಮಗನೇ ನಿಜವಾದ ಉತ್ತರಾಧಿಕಾರಿ. ನಾಳೆ ದೊರೆಯಾಗಬೇಕಾದವನು ಈತನೇ ಹೊರತು ದುಷ್ಟ ಸೇನಾಧಿಕಾರಿ ಅಲ್ಲ.

ಇತಿಹಾಸದಲ್ಲಿ ಇಂಥ ಘಟನೆಗಳು ನಡೆದು ಹೋಗಿವೆ. ಇಲ್ಲಿ ನಡೆದದ್ದು ಅದರ ಮರು ಪ್ರದರ್ಶನ. ಈಗ ಕಾಲ ಬದಲಾಗಿದೆ. ಇದು ಸರಿಯಾದ ಆಡಳಿತ ಅಲ್ಲ. ಯಂತ್ರ ಎಲ್ಲೋ ಕೊಂಡಿ ಕಳಚಿಕೊಂಡಿದೆ ಎನ್ನುವುದು ಗೊತ್ತಾಗಿದೆ. ಆದುದರಿಂದಲೇ ಈ ನಾಡಿನ ಅಲ್ಪಸಂಖ್ಯಾತರನ್ನು, ಹಿಂದುಳಿದವರನ್ನು ಮತ್ತು ದಲಿತರನ್ನು ಒಲೈಸುವ ಹೊಸ ಪ್ರಸಂಗ ಶುರುವಾಗಿದೆ. ನೀವೆಲ್ಲ ಕೇಳಿರುವ 'ಅಹಿಂದ' ಸಂಘಟನೆಯ ಹಿನ್ನಲೆ ಇದು. ಕರ್ನಾಟಕದಲ್ಲಿ ಮಾತ್ರವಲ್ಲ, ಭಾರತದ ಎಲ್ಲೇ ಇರಲಿ ಅಲ್ಪಸಂಖ್ಯಾತರನ್ನು, ಹಿಂದುಳಿದವರನ್ನು ಮತ್ತು ದಲಿತರನ್ನು ಕಡೆಗಣಿಸಿ, ಅವರನ್ನು ಅಪಮಾನಿಸಿ, ಅವರ ಹಕ್ಕನ್ನು ಕಸಿದುಕೊಂಡು ಆಡಳಿತ ನಡೆಸಲು ಸಾಧ್ಯವೇ ಇಲ್ಲ ಎನ್ನುವುದು ಸಾಬೀತಾಗಿದೆ.

ಇದು ಸತ್ಯ. ಗ್ರೀಕ್ ದಾರ್ಶನಿಕ ಪ್ಲೇಟೋ ಹೇಳಿದ ಸೂತ್ರದ ಮೂಲ ಇರುವುದೇ ಇಲ್ಲಿ. ಈ ದೇಶದ ಮುಸ್ಲಿಮರು, ಕ್ರೈಸ್ತರು, ಹಿಂದುಳಿದವರು ಮತ್ತು ದಲಿತರು ಹೊರಗಿನವರಲ್ಲ. ಅವರ ವಂಶದ ಬೇರು ಇರುವುದು ಈ ಮಣ್ಣಿನಲ್ಲೇ. ಅವರನ್ನು ವಂಚಿಸಿ ಈ ತನಕ ನಡೆಸಿದ ಶೋಷಣೆ ಸಾಕು. ಈಗಲಾದರೂ ನಿಜವಾದ ವಾರಸುದಾರನಿಗೆ ಅಧಿಕಾರ ದೊರೆಯಲಿ ಎನ್ನುವುದು ಹಗಲಿನಷ್ಟೇ ಸತ್ಯದ ವಾದ.

ಸಿದ್ಧರಾಮಯ್ಯ, ವಿಶ್ವನಾಥ್ ಮೊದಲಾದವರು ಈ ಸತ್ಯದ ಬೆಂಬಲಕ್ಕಿದ್ದಾರೆ. ಜನ ಎಚ್ಚೆತ್ತುಕೊಂಡಿದ್ದಾರೆ. ದೇವೇಗೌಡ ತನ್ನ ಮಂಪರಿನಿಂದ ಎಚ್ಚೆತ್ತು ಈ ಸ್ಥಿತ್ಯಂತರವನ್ನು ಬೆರಗುಗಣ್ಣಿಂದ ನೋಡುತ್ತಿದ್ದಾರೆ.

(೨೫ನೇ ಪುಟದಿಂದ)

ಭಾವನಾತ್ಮಕವಾಗಿ ಉಕ್ಕಿಬಂದಿರುವ 'ಅಹಿಂದ' ಅಭಿಮಾನಿಗಳ ಬೆಂಬಲ ಒಂದು ವಿಸ್ತಾರವಾದ ವೋಟಿನ ಕ್ಷೇತ್ರವಾಗಿ ಹಾಗೂ ತಾತ್ವಿಕ ವಲಯವಾಗಿ ಪರಿವರ್ತನೆಯಾಗುವುದು ಕೂಡ ಈ ರೀತಿಯ ಪಕ್ಷಗಳ ಸಿದ್ಧಾಂತದೊಂದಿಗೆ 'ಅಹಿಂದ' ರಾಜಕಾರಣ ಬೆಸೆದುಕೊಂಡಾಗ ಮಾತ್ರ. ಹಾಗೆ ನೋಡಿದರೆ, ಬಂಗಾರಪ್ಪನವರ ಸಮಾಜವಾದಿ ಪಕ್ಷದ ವೋಟಿನ ಕ್ಷೇತ್ರ ಕೂಡ 'ಅಹಿಂದವೇ ಆಗಿದೆ. ಸಮ್ಮಿಶ್ರ ರಾಜಕಾರಣದ ಈ ಯುಗದಲ್ಲಿ ಒಂದೇ ಬಗೆಯ ಸಿದ್ಧಾಂತಗಳ ಪಕ್ಷಗಳ ಒಕ್ಕೂಟ ಅನಿವಾರ್ಯ. ಈ ರೀತಿಯ ಧೃವೀಕರಣ ಆರಂಭವಾದರೆ ಕರ್ನಾಟಕದ ಜಾತ್ಯತೀತ ಸಂಘಟನೆಗಳು, ವಿವಿಧ ಬಗೆಯ ಚಳುವಳಿಗಳು, ಈ ರೀತಿಯ ಚಳುವಳಿಗಳ ಬಗ್ಗೆ ಸಹಾನುಭೂತಿಯಿರುವ ಲೇಖಕ-ಲೇಖಕಿಯರು, ಬುದ್ಧಿಜೀವಿಗಳು, ಪತ್ರಕರ್ತರು ಈ ಹೊಸ ರಾಜಕೀಯದತ್ತ ಆಶಾಭಾವದಿಂದ ತಿರುಗಲೇಬೇಕಾಗುತ್ತದೆ. ಹಿಂದೊಮ್ಮೆ ಜೆ.ಪಿ, ಲೋಹಿಯಾ, ಅಂಬೇಡ್ಕರ್ ರಾಜಕಾರಣವನ್ನು ಹಬ್ಬಿಸಿದ ಈ ಬಗೆಯ ಅನೇಕ ಸಾಂಸ್ಕೃತಿಕ ವಲಯಗಳು, ಕಿರುಪತ್ರಿಕೆಗಳು, ತಂಡಗಳು

'ಅಹಿಂದ' ಮತ್ತು ಕರ್ನಾಟಕದ ರಾಜಕಾರಣ

ಹಾಗೂ ವೇದಿಕೆಗಳು ಕೂಡ 'ಅಹಿಂದ' ರಾಜಕಾರಣವನ್ನು ಗಟ್ಟಿಗೊಳಿಸಲು ಹಾಗೂ ವಿಸ್ತರಿಸಲು ಅತ್ಯಗತ್ಯವಾಗಿವೆ.

ಚರಿತ್ರೆಯ ಕೆಲವು ಆಕಸ್ಮಿಕ ಬೆಳವಣಿಗೆಗಳಿಂದಾಗಿ ಇವತ್ತು ಸಿದ್ಧರಾಮಯ್ಯ, ಇಬ್ರಾಹಿಂ, ಮಹಾದೇವಪ್ಪ, ಕವಿ ಗೋವಿಂದಯ್ಯ, ಜಾರಕಿಹೋಳಿ, ಕೋದಂಡರಾಮಯ್ಯ, ಕೆ.ಬಿ. ಸಿದ್ಧಯ್ಯ ಮೊದಲಾದವರು ಹೊಸ ರೀತಿಯ ಜಾತಿಗಳ ಹೊಂದಾಣಿಕೆಯ ಮುಂಚೂಣಿಗೆ ಬಂದು ನಿಂತಿದ್ದಾರೆ. ಆದರೆ ವೃತ್ತಿರಾಜಕಾರಣಿಗಳ ಅಗತ್ಯ ಹಾಗೂ ಒತ್ತಡಗಳು ಬೇರೆ ಥರ ಇರುತ್ತವೆ. ಎಂಬುದು ಎಲ್ಲರಿಗೂ ಗೊತ್ತಿದೆ. ಅವರ ಅನುಯಾಯಿಗಳ ಥರಹೇವಾರಿ ಒತ್ತಡಗಳೂ ಅವರ ಮೇಲಿರುತ್ತವೆ. ಅಧಿಕಾರವಿಲ್ಲದ ಸಮಯದ 'ಖಾಲಿತನ' ಹಾಗೂ 'ನಿರುದ್ಯೋಗ'ದ ಹತಾಶೆಗಳು ಎಲ್ಲರಿಗೂ ಇರುವಂತೆ ವೃತ್ತಿರಾಜಕಾರಣಿಗಳಿಗೂ ಇರುತ್ತವೆ. ಹೀಗಾಗಿ ಅವರ ಬಹುತೇಕ ನಡೆಗಳು ಚುನಾವಣಾ ರಾಜಕಾರಣದ ಸುತ್ತಮುತ್ತಲೇ ತಿರುಗುತ್ತಿರುತ್ತವೆ. ಆದರೆ ಇಂಥ ಹೊಸ ಬೆಳವಣಿಗೆಗಳಿಂದ ಸ್ಫೂರ್ತಗೊಂಡು ಮುನ್ನುಗ್ಗುವ ಸೂಕ್ಷ್ಮ ಮನಸ್ಸಿನ ತರುಣ -ತರುಣಿಯರು, ಲೇಖಕ-ಲೇಖಕಿಯರು, ಚಿಂತಕರು, ಚಳುವಳಿಗಾರರು ಈ ರೀತಿಯ ಬೆಳವಣಿಗೆಗಳನ್ನು ದೀರ್ಘಾವಧಿ ಚಳುವಳಿಯಾಗಿಸುವ ಆಶಯ ಹೊತ್ತಿರುತ್ತಾರೆ. ಈ ಆಶಯಗಳನ್ನು 'ಅಹಿಂದ'ದ ಮುಂಚೂಣಿಯಲ್ಲಿರುವವರು ಸರಿಯಾಗಿ ಗ್ರಹಿಸಬೇಕು. ಈ ನಾಯಕರು ಕಾಂಗ್ರೆಸ್ ಸೇರುವುದಾದರೆ ಅದನ್ನು ಕೂಡಾ ಗುಪ್ತಕಾರ್ಯ ನೀತಿಯನ್ನಾಗಿ ಇಟ್ಟುಕೊಂಡಿರಬೇಕಾಗಿಲ್ಲ. 'ಹಾಗೊಮ್ಮೆ ಅವರು ಕಾಂಗ್ರೆಸ್ ಸೇರುವುದಾದರೆ ಅಹಿಂದವನ್ನು ಹೆಚ್ಚು ಮಾಡುವುದು ಬೇಡ' ಎಂಬ ದೇವನೂರ ಮಹಾದೇವರ ಸಲಹೆಯನ್ನು ಈ ನಾಯಕರು ಗಂಭೀರವಾಗಿ ಪರಿಗಣಿಸಬೇಕು. ಆದರೆ ಅವರು ಎಲ್ಲೇ ಇದ್ದರೂ 'ಅಹಿಂದ'ವನ್ನು ಕೆಳಜಾತಿಗಳನ್ನು ಬೆಸಯಬಲ್ಲ ನಿರಂತರ ಚಳುವಳಿಯಾಗಿ ಮುಂದುವರಿಸಲು ಸದಾ ಬೆಂಬಲವಾಗಿ ನಿಲ್ಲುವ ಬದ್ಧತೆ ತೋರಬೇಕು. ಹಾಗೇಯೇ ದೇವೇಗೌಡರು ಎತ್ತಿರುವ ಮೀಸಲಾತಿ ವರ್ಗೀಕರಣದ ಪ್ರಶ್ನೆಯನ್ನು ಕೂಡ ವೈಜ್ಞಾನಿಕವಾಗಿ ಪರಿಶೀಲಿಸಬೇಕು. ಅತಿ ಹಿಂದುಳಿದ ಜಾತಿ, ವರ್ಗಗಳಿಗೆ ನ್ಯಾಯ ದೊರಕಿಸಿಕೊಡುವುದು ತನ್ನ ಕರ್ತವ್ಯವೆಂದು 'ಅಹಿಂದ'ವೇ ತಿಳಿಯಬೇಕು. ದೇವೇಗೌಡರು ಕುಚೋದ್ಯಕ್ಕಾಗಿ ಈ ಪ್ರಶ್ನೆಯನ್ನೆತ್ತಿದ್ದಾರೆಂದು ಜರಿಯುವ ಮೂಲಕ ನ್ಯಾಯಬದ್ಧ ಪ್ರಶ್ನೆಯೊಂ ದನ್ನು ಕಡೆಗಣಿಸುವುದು ತಪ್ಪಾಗುತ್ತದೆ.

ಕರ್ನಾಟಕದಲ್ಲಿ ಕಳೆದೊಂದು ವರ್ಷ ದಲ್ಲಿ ಸಾಂಸ್ಕೃತಿಕ, ರಾಜಕೀಯ ಚಳುವಳಿಗಳಲ್ಲಿ ಭಾಗಿಯಾಗಿ ಹೊಸ ರೀತಿಯ ಚರ್ಚೆಗಳನ್ನು ನಡೆಸಬಲ್ಲ ತಂಡಗಳು ರೂಪುಗೊಳ್ಳುತ್ತಿರುವುದನ್ನು ನಾವೆಲ್ಲ ಸರಿಯಾಗಿ ಗಮನಿಸಬೇಕು. ಪ್ರಜಾ ಪ್ರಭುತ್ವವಾದಿ ಮಾರ್ಗದಲ್ಲಿ ಹಾಗೂ ಅಹಿಂಸೆಯ ನೆಲೆಯಲ್ಲಿ ನಡೆಯುವ ಚಳುವಳಿಗಳಲ್ಲಿ ಭಾಗಿಯಾಗುತ್ತಾ ಬಂದಿರುವ ಕರ್ನಾಟಕದ ಈ ಪ್ರಗತಿಪರ ವಲಯ, ಅದರಲ್ಲೂ ದಲಿತ, ಹಿಂದುಳಿದ ಜಾತಿಗಳ ಹಾಗೂ ಎಲ್ಲ ಜಾತಿಗಳಿಂದ ಬಂದ ಸೂಕ್ಷ್ಮ ಮನಸ್ಸಿನ ತರುಣ, ತರುಣಿಯರು ಒಂದು ಗಟ್ಟಿ ಕೇಂದ್ರಕ್ಕಾಗಿ ಹುಡುಕಾಡುತ್ತಿದ್ದಾರೆ. ಕರ್ನಾಟಕದಲ್ಲಿ ಕೋಮು ಸಾಮರಸ್ಯ ಆಂದೋಲನ ಹಾಗೂ ಪರ್ಯಾಯ ರಾಜಕಾರಣದ ಚರ್ಚೆಯಾಗಲೀ, ಅಥವಾ ಗ್ರಾಮೀಣ ಮಕ್ಕಳಿಗೂ ಒಂದನೆಯ ತರಗತಿಯಿಂದ ಇಂಗ್ಲಿಷ್ ಕಲಿಸಬೇಕೆಂಬುದನ್ನು ಕುರಿತ ಚರ್ಚೆಯಾಗಲಿ ನಡೆದಾಗ ಈ ವಲಯ ಅಪಾರ ಕಾಳಜಿಯಿಂದ ಕ್ರಿಯೆಗಿಳಿಯುತ್ತಾ ಬಂದಿದೆ. ಈ ರೀತಿಯ ಚರ್ಚೆ, ಕ್ರಿಯೆಗಳನ್ನು ಬೆಂಬಲಿಸುವ ಪತ್ರಿಕೆಗಳು, ವೇದಿಕೆಗಳು ಕೂಡ ಹೆಚ್ಚು ಹೆಚ್ಚಾಗಿ ಕಾಣಬರತೊಡಗಿವೆ. □

(ಹಿಂದಿನ ಪುಟದಿಂದ)

ಧರಮ್ ಸಿಂಗ್, ಆಂಟನಿ ತರಹದವರಿಗೆ ನೆಂಟರ ಮೇಲೆ ಪ್ರೀತಿ ಅಕ್ಕಿಯ ಮೇಲೆ ಆಸೆ ಎಂಬಂತಹ ಸ್ಥಿತಿ. ಮೈತ್ರಿಯ ಕಟ್ಟು ಹರಿದು ಬರಲು ಅಂಜಿಕೆ. ಬಾಯಿ ತುಂಬಾ ಬಿಸಿತುಪ್ಪ ಸುರಿದುಕೊಂಡವರ ಸ್ಥಿತಿ ಉಗುಳಿದರೂ ನಷ್ಟ ನುಂಗಲೂ ಕಷ್ಟ.

ಸದ್ಯ ಈ ಘಟನೆಯಿಂದ ಸತ್ಯ ಮೈಕೊಡವಿ ಎದ್ದು ನಿಂತಿದೆ. ಅಲ್ಪಸಂಖ್ಯಾತರು, ಹಿಂದುಳಿದವರು ಮತ್ತು ದಲಿತರು ಈ ಮಣ್ಣಿನ ನಿಜವಾದ ವಾರಸುದಾರರು ಎನ್ನುವ ಅರಿವು ಹರಡುತ್ತಿದೆ. ಈಗಲೂ ಕುತಂತ್ರಿಗಳು ಅಲ್ಪಸಂಖ್ಯಾತರನ್ನು ಹಿಂದುಳಿದವರಿಂದ ದೂರ ಇರಿಸುವ ಸಂಚು ಹೊಸೆಯುತ್ತಿದ್ದಾರೆ. ದುಷ್ಟರ, ಕುತಂತ್ರಿಗಳ ಜಾಯಮಾನವೇ ಅಷ್ಟು. ಸಾಯುವ ತನಕ ಅವರು ತಮ್ಮ ದುಷ್ಟ ಬುದ್ಧಿಯನ್ನು ಬಿಡುವುದಿಲ್ಲ.

ಜನ ಇದನ್ನು ಅರಿತುಕೊಳ್ಳಬೇಕು. ಯಾರ ಹಂಗಿಗೂ ಒಳಗಾಗದೆ ಸ್ವತಂತ್ರರಾಗಿ, ಒಂದಾಗಿ ನಿಲ್ಲಬೇಕು. ಒಗ್ಗಟ್ಟೊಂದೇ ನಮ್ಮ ಮಂತ್ರವಾಗಬೇಕು. ಐಕ್ಯಗಾನ ಒಂದೇ ನಮ್ಮ ಉಸಿರಾಗಬೇಕು. ಎಕೆಂದರೆ ನಾವು ಈ ಮಣ್ಣಿನ ನಿಜವಾದ ವಾರಸುದಾರರು.

(ಸೌಜನ್ಯ: 'ಸನ್ಮಾರ್ಗ') □

ಸಂವಾದ





ಚಂದಾದಾರರಲ್ಲಿ ಮನವಿ

'ಸಂವಾದ' ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಛೇರಿಯಲ್ಲಿ ಒಮ್ಮೆ ವಿಚಾರಿಸಿ- ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಛೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣ ವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨-೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಆದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

-ವ್ಯವಸ್ಥಾಪಕರು

ಪುಸ್ತಕ ಅವಲೋಕನ

ಸಂಘಪರಿವಾರವು ಅಂಬೆಡ್ಕರ್ ಮುಸ್ಲಿಮರನ್ನು ಕುರಿತು ಮಾಡಿದರು ಎನ್ನಲಾದ ೧೧ ಟೀಕೆಗಳನ್ನು ಅವು ಹೇಗೆ ಸುಳ್ಳುಗಳು ಎಂದು ನಿರಾಕರಿಸುತ್ತಾ ಹೋಗುವ ವಿನ್ಯಾಸದಲ್ಲಿ ಈ ಪುಸ್ತಕವಿದೆ. ಮುಸ್ಲಿಮರ ಬಗ್ಗೆ ಅಂಬೇಡ್ಕರರ ನಿಲುವು ಏನಾಗಿತ್ತು, ಅವರು ಯಾವಾಗ ಮತ್ತು ಯಾಕಾಗಿ ಈ ವಿಮರ್ಶೆ ಮಾಡಿದರು ಎಂಬುದನ್ನು ಸಂಘಪರಿವಾರವು ಚರಿತ್ರೆಯ ಸಂದರ್ಭದಿಂದ ತೆಗೆದು ನೋಡುವುದಕ್ಕೆ ಪ್ರತಿಯಾಗಿ, ಕೃತಿಯು ಅದನ್ನು ಭಾರತದ ರಾಜಕೀಯ, ಚಾರಿತ್ರಿಕ ಸನ್ನಿವೇಶದಲ್ಲಿಟ್ಟು ತಾತ್ವಿಕ ವಾದ ವಿಶ್ಲೇಷಣೆ ಮಾಡುತ್ತದೆ. ಅಂಬೇಡ್ಕರ್ ಅಸ್ಪೃಶ್ಯರ ಕಷ್ಟವನ್ನು ಅರಿಯಲಾಗದ ಮುಸ್ಲಿಂ ರಾಜಕೀಯ ನಾಯಕತ್ವದ ಮೇಲೆ, ಅದರಲ್ಲೂ ಮುಸ್ಲಿಂ ಲೀಗ್ ಮತ್ತು ಜಿನ್ನಾ ಮುಸ್ಲಿಮರ ಹೆಸರಿನಲ್ಲಿ ಮಾಡುತ್ತಿದ್ದ ರಾಜಕಾರಣದ ಮೇಲೆ ಕೋಪವಿತ್ತೆ ಹೊರತು ಮುಸ್ಲಿಂ ಸಮುದಾಯದ ಬಗೆಗಿನ ಪೂರ್ವಗ್ರಹವಲ್ಲ.

○ಪ್ರೊ॥ ರಹಮತ್ ತರೀಕೆರೆ

ಸುಳ್ಳು ಸೃಷ್ಟಿ ಮತ್ತು ಸತ್ಯದ ಅನಾವರಣ

೨೦ನೇ ಶತಮಾನದಲ್ಲಿ ಈ ಬಗೆಯ ಪುಸ್ತಕಗಳು ಹುಟ್ಟಿವೆ. ೨೧ನೇ ಶತಮಾನದಲ್ಲಿಯೂ ಹುಟ್ಟುತ್ತಿವೆ. ಮುಸ್ಲಿಮರು ತಾವು ದೇಶಪ್ರೇಮಿಗಳು ಎಂದು ಸಮರ್ಥನೆ ಕೊಡುವುದು, ಕಮ್ಯುನಿಸ್ಟರು ತಮ್ಮ ಸಿದ್ಧಾಂತ ವಿದೇಶದ್ದಾದರೂ ತಾವು ವಿದೇಶಿಯರೆಲ್ಲ ಎಂದು ಹೇಳಬೇಕಾಗಿರುವುದು, ಅಂಬೇಡ್ಕರ್ ಮುಸ್ಲಿಂ ವಿರೋಧಿಯಲ್ಲ ಅಥವಾ ಬ್ರಿಟಿಷರ ಏಜೆಂಟರಲ್ಲ ಎಂದು ವಿವರಣೆ ಕೊಡಬೇಕಾಗಿರುವುದು ಇವೆಲ್ಲ ವಿಚಿತ್ರ ಅನಿಸುತ್ತವೆ. ಆದರೆ ಇವು ವಾಸ್ತವವಾಗಿವೆ. ವಿಶೇಷ ಎಂದರೆ ಈ ಪ್ರಶ್ನೆಗಳು ಹುಟ್ಟುತ್ತಿರುವ ಮೂಲ ಮಾತ್ರ ಒಂದೆ. ಅದು ಸಂಘಪರಿವಾರ. ಅದು ಸ್ವತಃ ದೇಶಕ್ಕೆ ಹಿತವಲ್ಲದ ರೀತಿಯಲ್ಲಿ ಸಮಾಜವನ್ನು ಧರ್ಮದ ಹೆಸರಲ್ಲಿ ಒಡೆಯುತ್ತದೆ. ವಿದೇಶಿ ಬಂಡವಾಳಶಾಹಿ ಶಕ್ತಿಗಳಿಗೆ ದೇಶದ ಸಂಪತ್ತನ್ನು ಲೂಟಿಮಾಡಿಸುತ್ತದೆ. ವಿದೇಶಿಯ ರಾದ ಹಿಟ್ಲರ್, ಮುಸಲೋನಿ ಮುಂತಾದವರ ಚಿಂತನೆಗಳನ್ನು ಅನುಸರಿಸುತ್ತದೆ, ದೇಶದ ಉಚ್ಚವರ್ಗಗಳ ಹಿತವನ್ನು ಅದು ರಕ್ಷಿಸುತ್ತದೆ, ಅದು ದಲಿತರಿಗೆ, ಮಹಿಳೆಯರಿಗೆ, ಅಲ್ಪ ಸಂಖ್ಯಾತರಿಗೆ ದಮನ ಮಾಡುತ್ತದೆ ಹೀಗಾಗಿ ಅದಕ್ಕೆ ಪ್ರಶ್ನೆ ಕೇಳಬೇಕು ಮತ್ತು ಅದು ಉತ್ತರಿಸಬೇಕು. ಆದರೆ ಇದು ತಿರುಗಾಮುರುಗಾ ಆಗಿದೆ. ಅದು ಪ್ರಶ್ನೆಗಳನ್ನು ಎತ್ತುತ್ತಿದೆ. ಅದಕ್ಕೆ ಉತ್ತರವನ್ನು ಅದರಿಂದ ದಮನಿತರಾದವರು, ತಮ್ಮ ದುಡಿಮೆಯಿಂದ ದೇಶವನ್ನು ಕಟ್ಟುತ್ತಿರುವ ಸಮುದಾಯಗಳು ನೀಡುತ್ತಿವೆ. ಸಂಘಪರಿವಾರದ ಒಂದು ಯುದ್ಧತಂತ್ರವೆಂದರೆ ರಾಜಕೀಯ ಸೈದ್ಧಾಂತಿಕ ವಿರೋಧಿಗಳ ಮೇಲೆ ಆರೋಪಗಳನ್ನು ಮಾಡುವುದು. ಅವರು ಕಟಕಟೆಯಲ್ಲಿ ನಿಂತಂತೆ ಅದಕ್ಕೆ ಉತ್ತರಿಸುತ್ತಾ ಹೋಗುವುದು. ಈ ತಂತ್ರಕ್ಕೆ ನಿಜವಾದ ಪ್ರತಿತಂತ್ರವೆಂದರೆ ಪ್ರಶ್ನಿಸುತ್ತಿರುವವರನ್ನೇ ಪ್ರಶ್ನಿಸುವುದು. ಆದರೆ ಈ ದೇಶದ ರಾಜಕೀಯ ವಾಗ್ವಾದಗಳಲ್ಲಿ ವಿನ್ಯಾಸವನ್ನು ಇನ್ನೂ ಬದಲಿಸಲು ಅಗುತ್ತಿಲ್ಲ. ಪ್ರಶ್ನೆ ಕೇಳುವ ಆಕ್ರಾಮಕ ವಿಧಾನವನ್ನು ಜನಪರ ಚಿಂತನೆಗಳು ಪ್ರಜ್ಞಾಪೂರ್ವಕವಾಗಿ ಬೆಳೆಸಿಕೊಳ್ಳುವ ಅಗತ್ಯವಿದೆ.

ಆದರೆ ಸಂಘಪರಿವಾರ ಉದ್ದೇಶಪೂರ್ವಕವಾಗಿ ಮಾಡುವ ಆಕ್ಷೇಪಗಳ, ಎತ್ತುವ ಪ್ರಶ್ನೆಗಳು ಕಾಮನ್‌ಸೆನ್ಸಿಗೆ ಹೋಗಿರುತ್ತವೆ. ಮಾತ್ರವಲ್ಲ ಅದು ಹುಟ್ಟಿಸಿರುವ ಪೂರ್ವಗ್ರಹಗಳು ಶೈಕ್ಷಣಿಕ ವಲಯದಲ್ಲಿವೆ. ವಿದ್ವಾಂಸರಲ್ಲೂ ಪುನರುಕ್ತ ಅಗುತ್ತಿರುತ್ತವೆ. ಆದ್ದರಿಂದ ಒಂದು ಹಂತದಲ್ಲಿ ಈ ಬಗೆಯ ಪೂರ್ವಗ್ರಹ ನಿವಾರಣೆಯ ಕೆಲಸವನ್ನು ಮಾಡಬೇಕಾದ ಅನಿವಾರ್ಯತೆ ಇದೆ. ತೇಲ್‌ತುಂಬ್ಡೆ ಯವರ ಈ ಪುಸ್ತಕವು ಇಂತಹ ಅನಿವಾರ್ಯತೆಯಲ್ಲಿ ಹುಟ್ಟಿದ್ದು. ಸುಳ್ಳುಗಳು ಮತ್ತು ಸತ್ಯಾಂಶಗಳು ಎಂಬ ಅದರ ಉಪಶೀರ್ಷಿಕತೆಯಲ್ಲಿಯೇ ಇದು ಗೊತ್ತಾಗುತ್ತದೆ.

ಈ ಪುಸ್ತಕ ರಚನೆಗೆ ಒಂದು ನಿರ್ದಿಷ್ಟ ವಿದ್ಯಮಾನದ ಪ್ರೇರಣೆಯಿದೆ. ಅದೆಂದರೆ ಉತ್ತರ ಪ್ರದೇಶದ ಬಿಜೆಪಿ ಅಧ್ಯಕ್ಷರಾದ ವಿನಯ್ ಕಟಿಯಾರ್ ಮತ್ತು ಸಂಘಪರಿವಾರದ ಮುಖಂಡರು ಅಂಬೇಡ್ಕರ್ ಅವರು ಮುಸ್ಲಿಮರನ್ನು ವಿರೋಧಿಸುತ್ತಿದ್ದರು ಎಂದು ಮಾಡಿದ ಪ್ರಚಾರ. ಅದಕ್ಕೆ ಅವರು ಆಧರಿಸಿದ್ದು ಅಂಬೇಡ್ಕರ್ ಅವರು ೪೦ರ ದಶಕದಲ್ಲಿ ದೇಶವಿಭಜನೆಯ ಹಿನ್ನೆಲೆಯಲ್ಲಿ ಜಿನ್ನಾ ಮತ್ತು ಮುಸ್ಲಿಂ ಲೀಗಿನ ರಾಜಕಾರಣವನ್ನು ಕುರಿತು ಮಾಡಿದ ನಿಷ್ಠುರವಾದ ಕಾಮೆಂಟುಗಳನ್ನು: ಚಾರಿತ್ರಿಕ ಸಂದರ್ಭದಿಂದ ಈ ಉಲ್ಲೇಖಗಳನ್ನು ತೆಗೆದು ಅಂಬೇಡ್ಕರರು ಇಸ್ಲಾಮನ್ನು ಮುಸ್ಲಿಮರನ್ನು ವಿರೋಧಿಸುತ್ತಿದ್ದರು ಎಂದು ವಾದ ಮಂಡಿಸುವಲ್ಲಿ, ಅಂಬೇಡ್ಕರರನ್ನು ಒಂದು ಆಯುಧದಂತೆ ಬಳಸಿ, ಶತ್ರುವನ್ನು ಬಳಸಿಕೊಂಡು ಶತ್ರುವನ್ನು ದಮನ ಮಾಡುವ ಯುದ್ಧತಂತ್ರವಿತ್ತು. ಎರಡನೆಯದಾಗಿ ಉತ್ತರ ಪ್ರದೇಶದಲ್ಲಿ ದಲಿತರು ಮತ್ತು ಮುಸ್ಲಿಮರು ರಾಜಕೀಯವಾಗಿ ಒಂದುಗೂಡುವುದನ್ನು ತಡೆಯುವ ಉದ್ದೇಶವೂ ಇತ್ತು. ಈ ವಾದಕ್ಕೆ ಉತ್ತರ ಪ್ರದೇಶದ ಆಚೆಗಿನ ರಾಜಕೀಯ ಉದ್ದೇಶವೂ ಇತ್ತು. ಅದೆಂದರೆ ಜಾಗತೀಕರಣದ ಹೊತ್ತಲ್ಲಿ ನಡೆಯುತ್ತಿರುವ ಅಮೆರಿಕ ಮುಂತಾದ ಪಶ್ಚಿಮದ ದೇಶಗಳು, ಮುಸ್ಲಿಮರನ್ನು ಮತ್ತು ಇಸ್ಲಾಮನ್ನು ರಾಕ್ಷಸೀಕರಿಸುವ ದೊಡ್ಡ ಕಾರ್ಯಕ್ರಮಕ್ಕೆ ದನಿಗೂಡಿಸುವುದು. ಈ ರಾಜಕಾರಣವನ್ನು ವಿರೋಧಿಸುವುದು ಈ ಪುಸ್ತಕದ ಉದ್ದೇಶವಾಗಿದೆ.

ಅಂಬೇಡ್ಕರ್ ಮತ್ತು ಮುಸ್ಲಿಮರು
(ಸುಳ್ಳುಗಳು ಮತ್ತು ಸತ್ಯಾಂಶಗಳು)
ಲೇಖಕರು: ಆನಂದ್ ತೇಲ್‌ತುಂಬ್ಡೆ
ಅನು: ಪ್ರೊ॥ ಬಿ. ಗಂಗಾಧರ ಮೂರ್ತಿ
ಬೆಲೆ: ರೂ. ೪೦/- ಪುಟ ೯೪+೨
ಪ್ರಕಾಶಕರು: ಸಮತಾ ಪ್ರಕಾಶನ
ನಂ. ೮, ೨ನೇ ಮುಖ್ಯ ರಸ್ತೆ, ೩ನೇ ಅಡ್ಡ ರಸ್ತೆ,
ರಾಮಾಂಜನೇಯ ಬಡಾವಣೆ, ೨ನೇ ಹಂತ,
ಬೆಂಗಳೂರು-೫೬೦ ೦೯೬

ಈ ಪುಸ್ತಕ ರಚನೆಯ ಹಿಂದೆ ಕೆಲಸ ಮಾಡಿರುವ ಎರಡನೆಯ ಪ್ರೇರಣೆಯೆಂದರೆ, ಗುಜರಾತು ದಂಗೆಗಳಲ್ಲಿ ಮುಸ್ಲಿಮರನ್ನು ಕೊಲ್ಲುವಲ್ಲಿ ದಲಿತರೂ ಭಾಗಿಯಾಗಿದ್ದು. ಗುಜರಾತಿನಲ್ಲಿ ಎಲ್ಲ ರಾಜಕೀಯ ಪಕ್ಷಗಳೂ ಆದಿವಾಸಿ ಜನರನ್ನು ಕಡೆಗಣಿಸಿದ್ದ ಆದಿವಾಸಿಗಳನ್ನು ಸಂಘ ಪರಿವಾರ ಸಂಘಟಿಸಿದ್ದು ಸೋಜಿಗವಲ್ಲ. ಆದರೆ ಗುಜರಾತಿನ ಚರಿತ್ರೆಯುದ್ದಕ್ಕೂ ಸವರ್ಣೀಯರಿಂದ ಕಹಿಯನ್ನು ಉಂಡಿರುವ ದಲಿತರು ಕೋಮುವಾದಿಗಳ ಗುಲಾಮ ಗೂಂಡಾಗಳಂತೆ ಭಾಗವಹಿಸಿ ಮುಸ್ಲಿಮರ ಮಾರಣ ಹೋಮದಲ್ಲಿ ಭಾಗಿಯಾದ ಘಟನೆ ಲೇಖಕರಿಗೆ ದಂಗುಬಡಿಸಿದೆ. ಈ ಪ್ರಶ್ನೆಯನ್ನು ಚಾರಿತ್ರಿಕವಾಗಿ ಪರಿಶೀಲಿಸುವುದು ಕೂಡ ಈ ಕೃತಿಯ ಪ್ರೇರಣೆಗಳಲ್ಲಿ ಒಂದಾಗಿದೆ.

ಸಂಘಪರಿವಾರವು ಅಂಬೇಡ್ಕರ್ ಮುಸ್ಲಿಮರನ್ನು ಕುರಿತು ಮಾಡಿದರು ಎನ್ನಲಾದ ೧೧ ಟೀಕೆಗಳನ್ನು ಅವು ಹೇಗೆ ಸುಳ್ಳುಗಳು ಎಂದು ನಿರಾಕರಿಸುತ್ತಾ ಹೋಗುವ ವಿನ್ಯಾಸದಲ್ಲಿ ಈ ಪುಸ್ತಕವಿದೆ. ಮುಸ್ಲಿಮರ ಬಗ್ಗೆ ಅಂಬೇಡ್ಕರರ ನಿಲುವು ಏನಾಗಿತ್ತು, ಅವರು ಯಾವಾಗ ಮತ್ತು ಯಾಕಾಗಿ ಈ ವಿಮರ್ಶೆ ಮಾಡಿದರು ಎಂಬುದನ್ನು ಸಂಘಪರಿವಾರವು ಚರಿತ್ರೆಯ ಸಂದರ್ಭದಿಂದ ತೆಗೆದುನೋಡೂವುದಕ್ಕೆ ಪ್ರತಿಯಾಗಿ, ಕೃತಿಯು ಅದನ್ನು ಭಾರತದ ರಾಜಕೀಯ, ಚಾರಿತ್ರಿಕ

ಸನ್ನಿವೇಶದಲ್ಲಿಟ್ಟು ತಾತ್ವಿಕವಾದ ವಿಶ್ಲೇಷಣೆ ಮಾಡುತ್ತದೆ. ಅಂಬೇಡ್ಕರ್ ಅಸ್ಪೃಶ್ಯರ ಕಷ್ಟವನ್ನು ಅರಿಯಲಾಗದ ಮುಸ್ಲಿಂ ರಾಜಕೀಯ ನಾಯಕತ್ವದ ಮೇಲೆ, ಅದರಲ್ಲೂ ಮುಸ್ಲಿಂ ಲೀಗ್ ಮತ್ತು ಜಿನ್ನಾ ಮುಸ್ಲಿಮರ ಹೆಸರಿನಲ್ಲಿ ಮಾಡುತ್ತಿದ್ದ ರಾಜಕಾರಣದ ಮೇಲೆ ಕೋಪವಿತ್ತೆ ಹೊರತು ಮುಸ್ಲಿಂ ಸಮುದಾಯದ ಬಗೆಗಿನ ಪೂರ್ವಗ್ರಹವಲ್ಲ. ಪ್ರಖರ ವೈಚಾರಿಕರಾದ ಅವರಿಗೆ ಮುಸ್ಲಿಮರ ಸಾಂಪ್ರದಾಯಕತೆ ಧಾರ್ಮಿಕತೆ ಬಗ್ಗೆ ವಿಮರ್ಶೆಯಿತ್ತು. ಇದರ ಜತೆಗೆ ಸಮಾನತೆಯನ್ನು ಪ್ರತಿಪಾದಿಸುವ ಧರ್ಮಗಳಲ್ಲಿ ಒಂದಾದ ಇಸ್ಲಾಂ ಹಿಂದೂಧರ್ಮದ ಸಹವಾಸದಿಂದ ಅದರ ಅನಿಷ್ಟ ಪದ್ಧತಿಗಳನ್ನು ಹೇಗೆ ತಾನು ಸ್ವೀಕರಿಸಿದೆ ಎಂಬ ವಿಷಾದವೂ ಇತ್ತು. ಇದನ್ನೆಲ್ಲ ಆನಂದ್ ತೇಲ್‌ತುಂಬ್ಡೆ ವಿಸ್ತಾರವಾಗಿ ಚರ್ಚಿಸುತ್ತಾರೆ.

ಈ ಪುಸ್ತಕದ ಎರಡು ಮುಖ್ಯ ಆಯಾಮು ಎಂದರೆ ಒಂದು–ಸಂಘಪರಿವಾರದ ಸುಳ್ಳುಗಳಿಗೆ ಉತ್ತರಿಸುವುದು; ಈ ದೇಶದ ಮುಸ್ಲಿಂ ಸಮುದಾಯದ ಜತೆಗೆ ವಿಮರ್ಶಾತ್ಮಕವಾದ ರಾಜಕೀಯ "ಸಂವಾದ" ಮಾಡುವುದು ಇನ್ನೊಂದು. ಭಾರತದ ಮುಸ್ಲಿಮರ ಸಾಮಾಜಿಕ ಮನಶ್ಶಾಸ್ತ್ರದ ಮೇಲೆ, ಅದರ ಕಾಂಪ್ಲೆಕ್ಸಿಟಿಗಳ ಮೇಲೆ ಅಂಬೇಡ್ಕರ್ ಮಾಡಿರುವ ವಿಶ್ಲೇಷಣೆಯ ಉಲ್ಲೇಖಗಳನ್ನು ಆನಂದ್ ಈ ಕೃತಿಯಲ್ಲಿ ಕೊಡುತ್ತಾರೆ. ಅವು ಅಂಬೇಡ್ಕರರ ಸಮಾಜಶಾಸ್ತ್ರೀಯ ಮತ್ತು ರಾಜಕೀಯ ಪ್ರಖರತೆಯನ್ನು ಸೂಚಿಸುವ ಚಿಂತನೆಗಳಾಗಿವೆ. ಈ ದೃಷ್ಟಿಯಿಂದ ೯ನೇ ಅಧ್ಯಾಯವು ಬಹಳ ಮಹತ್ವದ್ದಾಗಿದೆ. ಅಂಬೇಡ್ಕರ್ ವಾದಗಳನ್ನು ತರ್ಕದ ಕಾನೂನಿನ ತರ್ಕದಲ್ಲಿ ಮುಂಡಿಸುವ ವಿಧಾನ (ಪು.೫೩); ಅವರು ಭಾರತದ ಸಮಾಜದ ಬಗ್ಗೆ ಮಾಡುವ ವಿಶನರಿ ಹೇಳಿಕೆಗಳು (ಪು.೫೪) ಅದ್ಭುತವಾಗಿವೆ.

ಇಷ್ಟೊಂದು ಉಪಯಕ್ತವಾದ ಪುಸ್ತಕವನ್ನು ಗಂಗಾಧರಮೂರ್ತಿ ಅವರು ಅನುವಾದ ಮಾಡಿದ್ದಾರೆ. ಮೂರ್ತಿಯವರು ಕನ್ನಡ ಮತ್ತು ಇಂಗ್ಲಿಷನ್ನು ಚೆನ್ನಾಗಿ ಬಲ್ಲವರು ಮಾತ್ರವಲ್ಲ, ತಮ್ಮನ್ನು ದಲಿತ ಚಳುವಳಿಗಳಲ್ಲಿ ತೊಡಗಿಸಿಕೊಂಡವರು. ಅವರು ಈ ಪುಸ್ತಕದ ರಾಜಕೀಯ ವಾಗ್ವಾದವನ್ನು ಅರ್ಥಮಾಡಿಕೊಂಡು ಅದರ ತಾತ್ವಿಕ ಸೂಕ್ಷ್ಮತೆ ಕೆಡದಂತೆ ಅನುವಾದ ಮಾಡಿದ್ದಾರೆ. ಅನುವಾದಕ್ಕೆ ಭಾಷೆ ಇದ್ದರೆ ಸಾಲದು. ಅನುವಾದ ಮಾಡುತ್ತಿರುವ ವಿಷಯದಲ್ಲಿ ತಾತ್ವಿಕ ಭಾವನಾತ್ಮಕ ಸಂಬಂಧವೂ ಇರಬೇಕು. ಆದರೆ ಇಲ್ಲಿನ ವಾಕ್ಯಗಳು ಉದ್ದುದ್ದವಾಗಿವೆ. ಸಾವಿರಾರು ಜನ ರಾಜಕೀಯ, ಸಾಮಾಜಿಕ ಕಾರ್ಯಕರ್ತರು ಓದುವ ಕೃತಿಗಳಿಗೆ ಪುಟ್ಟಪುಟ್ಟ ವಾಕ್ಯಗಳ ಶೈಲಿ ಉಚಿತ. ಜಟಿಲವಾದ ವಿಚಾರಗಳ ಭಾರವಿದ್ದಾಗಲಂತೂ ಪುಟ್ಟಪುಟ್ಟ ವಾಕ್ಯಗಳ ಅನುವಾದವು ಹೆಚ್ಚು ಉಪಯುಕ್ತವಾಗುತ್ತದೆ.

ಗಂಗಾಧರಮೂರ್ತಿ ಅವರ ಮುನ್ನುಡಿಯ ಒಂದು ಮಾತು ಇಲ್ಲಿ ಚರ್ಚಿಸಬೇಕು "ನಮ್ಮ ಜಾತ್ಯತೀತತೆಯು ಮುಸ್ಲಿಮರ ಪರವಹಿಸಿ ಹಿಂದೂ ಪ್ರಗತಿಪರರು ಮಾತನಾಡುವ ಹಾಗೂ ಹೋರಾಡುವ ಅನಾಥರಕ್ಷಕ ಪ್ರವೃತ್ತಿಯಾಗುತ್ತಿದೆ." ಎಂಬ ಮುಕುಲ್ ಕೇಶವನ್ ಹೇಳಿಕೆ ಉಲ್ಲೇಖಿಸಿ ಮೂರ್ತಿಯವರು "ನೆಲದ ಮೇಲಿನ ಬದುಕಿನಲ್ಲಿ ಸಮಾನ ಹಕ್ಕುಗಳನ್ನು ಅನುಭವಿಸ ಬೇಕಾದ ಮುಸ್ಲಿಂ ಜನಾಂಗ ನಮ್ಮೆಲ್ಲ ರೊಂದಿಗೆ ಕೈಜೋಡಿಸಿ ದೇಶದ ಬಹುಸಂಸ್ಕೃತಿಯ ಪ್ರಜಾಪ್ರಭುತ್ವವನ್ನು ಉಳಿಸಲು ಹೋರಾಡಬೇಕಿದೆ" ಎನ್ನುತ್ತಾರೆ. ಇವು ಬಹಳ ಮಹತ್ವದ ಮಾತುಗಳು. ಆದರೆ ಇದರ ಜೊತೆಗೆ ಇನ್ನೊಂದು ಸಂಗತಿಯನ್ನು ಹೇಳಬೇಕು. ಎಷ್ಟೋ ಹಿಂದೂ ಪ್ರಗತಿಪರರಲ್ಲಿ ಈ 'ಅನಾಥರಕ್ಷಕ' ಪ್ರವೃತ್ತಿ ಸಹ ಕಾಣುತ್ತಿಲ್ಲ. ಅನೇಕ ಜನರಲ್ಲಿ "ಹಿಂದೂ ಕೋಮುವಾದವು ಮುಸ್ಲಿಮರು ಎದುರಿಸಬೇಕಾದ ತಲೆನೋವು" ಎಂಬ ನಿರ್ಲಿಪ್ತತೆ ಮತ್ತು ತಪ್ಪುಗ್ರಹಿಕೆ ಬಹಳ ವ್ಯಾಪಕವಾಗಿದೆ. ಕೋಮುವಾದವು ದೇಶದ ಎಲ್ಲ ಬಡವರ, ಮಹಿಳೆಯರ, ದಲಿತರ ಶತ್ರು ಎಂಬುದರ ಅರಿವು ಕೂಡ ಹೋರಾಟಕ್ಕೆ ಅಗತ್ಯವಾಗಿದೆ. ಈ ಪುಸ್ತಕವು ಇಂತಹ ಕೂಡು ಹೋರಾಟಕ್ಕೆ ಬೇಕಾದ ಸೈದ್ಧಾಂತಿಕ ಪ್ರೇರಣೆಗಳನ್ನು ಕೊಡಬಲ್ಲ ಕೃತಿಯಾಗಿದೆ. ಇದರ ಅರ್ಪಣೆ ಸಹ ಇದಕ್ಕೆ ಪೂರಕವಾಗಿದೆ. ಅದು ಹೀಗಿದೆ: "ಗೋವು ಮಾತ್ರ ಪವಿತ್ರವೆನ್ನುವ ಗೋಮುಖ ವ್ಯಾಘ್ರಗಳಿಗೆ ಬಲಿಯಾದ ಜಜ್ಜರ್ ದಲಿತರಿಗೆ ಹಾಗೂ ಗುಜರಾತ್ ನರಮೇಧದಲ್ಲಿ ಪ್ರಾಣತೆತ್ತ ಸಂಕಷ್ಟಗಳಿಗೆ ಬಲಿಯಾದ ಅಸಹಾಯಕ ಮುಸ್ಲಿಮರ ನೆರವಿಗೆ ಧಾವಿಸಿ. ಕೋಮುವಾದಿಗಳನ್ನು ಎದುರು ಹಾಕಿಕೊಂಡು ದೃಢ ಸಂಕಲ್ಪದ ಕೆಚ್ಚನ್ನು ಮೆರೆದ, ಭಾರತಕ್ಕೆ ಉದಾತ್ತ ಭವಿಷ್ಯದ ಭರವಸೆಯನ್ನು ಮೂಡಿಸಿದ ಸಮಸ್ತರಿಗೆ. □

ಅಂಬೇಡ್ಕರ್ ಅವರಿಗೆ ತೀವ್ರತರ ಅಸಮಾಧಾನವಿದ್ದುದು ಅಸ್ಪೃಶ್ಯರ ಬಗ್ಗೆ ಪ್ರಾಮಾಣಿಕವಾದ ಕಾಳಜಿ ಇರದ ಮುಸ್ಲಿಂನಾಯಕತ್ವದ ಬಗ್ಗೆಯೇ ಹೊರತು ಮುಸ್ಲಿಂ ಸಮುದಾಯದ ಬಗೆಗಲ್ಲ. ದುಂಡು ಮೇಜಿನ ಪರಿಷತ್ತಿನ ವಿಶೇಷ ಸಂದರ್ಭದಲ್ಲಿ ಅವರು ಮುಸ್ಲಿಂ ನಾಯಕತ್ವದೊಂದಿಗೆ ಕೈಜೋಡಿಸುವ ಪ್ರಯತ್ನವನೂ ಮಾಡಿದರು. ಅವರ ಪ್ರಯತ್ನಕ್ಕೆ ಪ್ರೋತ್ಸಾಹ ದೊರೆಯದಾಯಿತು. ಮುಸ್ಲಿಂ ನಾಯಕರು ವಿಶಾಲ ತಳಹದಿಯ ಮೇಲೆ ತಮ್ಮೊಂದಿಗೆ ಸೇರಲು ನಿರಾಕರಿಸಿ ಪ್ರತ್ಯೇಕತೆಯನ್ನು ಕಾಯ್ದುಕೊಳ್ಳ ಬಯಸಿದರು. ಸಂಕುಚಿತ ಭಾವನೆಯನ್ನು ಪ್ರದರ್ಶಿಸಿದರು. ಅಂಬೇಡ್ಕರ್ ಅವರಿಗೆ ಅದೊಂದು ಕಹಿ ಅನುಭವ. ಅಸ್ಪೃಶ್ಯರ ಬೇಡಿಕೆಗಳ ಬಗ್ಗೆ ಸಹಾನುಭೂತಿ ಇಲ್ಲದಂತೆ ವರ್ತಿಸಿದ ಅವರು ವಿಶ್ವಾಸಾರ್ಹರಲ್ಲ ಎಂಬ ಅಭಿಪ್ರಾಯ ಅವರಲ್ಲಿ ಮೂಡಿತು. ಆದರೆ ಮುಸ್ಲಿಮರು? "ಸವರ್ಣೀಯ ಹಿಂದೂಗಳೂ ಅಸ್ಪೃಶ್ಯರೂ ಎಂದಾದರೂ ಒಗ್ಗೂಡಿ ತಮ್ಮ ಬೇಡಿಕೆಗಳನ್ನು ವಿರೋಧಿಸಬಹುದು ಎಂಬ ಸಂಶಯ ಮುಸ್ಲಿಮರನ್ನು ಕಾಡತೊಡಗಿತ್ತು. ಆದ್ದರಿಂದಲೇ ಅವರು ಅಸ್ಪೃಶ್ಯರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲು ಹಿಂದೆಗೆದರು." ಇದೇನೇ ಇದ್ದರೂ ಅಂಬೇಡ್ಕರ್ ಮತ್ತು ಮುಸ್ಲಿಮರ ನಡುವೆ ಹಗೆತನವೆಂಬುದಿರಲಿಲ್ಲ. ಬಹು ಸಂಖ್ಯಾತರ ಕೋಮುವಾದದ ಪ್ರಶ್ನೆ ಬಂದಾಗ ಈ ಎರಡು ಕೋಮುಗಳೂ ಒಂದಾಗಿ ಪರಿಹಾರ ಕಂಡುಕೊಂಡಿರುವ ಉದಾಹರಣೆಗಳು ನಮ್ಮ ಚರಿತ್ರೆಯಲ್ಲಿ ಕಾಣ ಸಿಗುತ್ತವೆ.

–ಕೃತಿಯಿಂದ

ಸಂವಾದ



ಲೇಖಕರಲ್ಲಿ ಮನವಿ

'ಸಂವಾದ'ವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ-ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನ ವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಶೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು.

'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

–ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು - ೫೬೦ ೦೯೧

ಸಾರ್ವಜನಿಕ ಉದ್ದಿಮೆಗಳ

ಲಾಭ-ನಷ್ಟದ ಲೆಕ್ಕಾಚಾರ

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ನಷ್ಟವನ್ನುಂಟುಮಾಡುವ ಸಾರ್ವಜನಿಕ ವಲಯದ ಉದ್ದಿಮೆಗಳನ್ನು (ಪಿಎಸ್ಇ) ದೇಶಕ್ಕೆ ಹೊರೆಯಾಗುತ್ತವೆ ಎಂಬ ಕಾರಣಕ್ಕೆ ಅವುಗಳ ಸಂಖ್ಯೆಯನ್ನು ಕಡಿತಗೊಳಿಸಬೇಕು ಎಂದು 1991 ರಿಂದ ಭಾರತದಲ್ಲಿ ಬಂಡವಾಳ ಹಿಂತೆಗೆತ/ಖಾಸಗೀಕರಣ ನೀತಿಯನ್ನು ಜಾರಿಗೊಳಿಸಲಾಯಿತು.

ಆದರೆ ಸತ್ಯವು ಇದಕ್ಕೆ ಸಂಪೂರ್ಣ ತದ್ವಿರುದ್ಧವಾಗಿದೆ. 2005ರ ವೇಳೆಗೆ ಬಂಡವಾಳ ಹಿಂತೆಗೆತ ಅಥವಾ ಮಾರಾಟದಿಂದ ಗಳಿಸಿದ ಬಿಟ್ಟು 47,000 ಕೋಟಿ ರೂಪಾಯಿಯ ಶೇ 92 ರಷ್ಟು ಇಂಥ ಲಾಭಗಳಿಸುವ ಸಾರ್ವಜನಿಕ ವಲಯದ ಉದ್ದಿಮೆಗಳಿಂದಲೇ ಬಂದಿದೆ.

ಆದ್ದರಿಂದ, ನಷ್ಟದಲ್ಲಿರುವ ಪಿಎಸ್ಇಗಳನ್ನು ಮಾರುವುದಕ್ಕೆ ಕಾರಣವಿರುತ್ತದೆ. ಲಾಭಗಳಿಸುವ ಪಿಎಸ್ಇಗಳನ್ನು ಮಾರಲು ಸಾಕಷ್ಟು ಕಾರಣಗಳಿರಲೇಬೇಕು. ಆದರೂ, ಸಾರ್ವಜನಿಕ ಕುತೂಹಲವನ್ನು ತುಳಿಯುವುದಕ್ಕೆ ಒಂದು ಹೊಸ ನೈತಿಕ ಬಲದ ಅವಶ್ಯಕತೆಯಿದೆ.

ಒಬ್ಬ ಉತ್ತಮ ಮಾರಾಟಗಾರನಾಗಿ ಕೇಂದ್ರ ಹಣಕಾಸು ಸಚಿವರಾದ ಎ.ಚಿದಂಬರಂ ಅರುಣ್‌ಶೌರಿಯವರ ಅಪರಾವತಾರವಾಗಿ ಶೀಘ್ರದಲ್ಲೆ ಕಂಡುಬರಬಹುದು. ಜನವರಿ 27, 2005 ರಂದು ಅವರು ರಾಷ್ಟ್ರೀಯ ಬಂಡವಾಳ ನಿಧಿಯ (ಎನ್.ಐ.ಎಫ್) ರಚನೆಯ ಬಗ್ಗೆ ಮತ್ತು ಮಾರಿದ ಉದ್ದಿಮೆಗಳಿಂದ ಬಂದ ಹಣವನ್ನು ಅದರಲ್ಲಿ ಠೇವಣಿ ಇಡಲಾಗುವುದು ಎಂದು ಘೋಷಿಸಿದ್ದಾರೆ. ಇದಕ್ಕೆ ಪ್ರತಿಯಾಗಿ ಎನ್.ಐ.ಎಫ್ ಸಾಮಾಜಿಕ ವಲಯದಲ್ಲಿ ಹಣವನ್ನು ತೊಡಗಿಸುತ್ತದೆ. ಇಂಥ ಉದಾತ್ತ ಕಾರಣಗಳನ್ನು ಇಟ್ಟು ಕೊಂಡು ಸಾಮಾಜಿಕ ಕಾಳಜಿಯಿಂದ ಎಲ್ಲ ಪಿಎಸ್ಇಗಳನ್ನು ಮಾರುವುದಿದ್ದರೆ ಯಾರೇ ದಲಿತ ಅಥವಾ ಭಾರತೀಯರ ಸಮಸ್ಯೆಯಿಲ್ಲ.

ಭಾರತವು ಅನೇಕ ಸಾಮಾಜಿಕ ಸಮಸ್ಯೆಗಳ ತವರೂರು. ಈ ಸಾಮಾಜಿಕ ಸಮಸ್ಯೆಗಳನ್ನು ಹೋಗಲಾಡಿಸದೆ, ಬೇರೆ ಯಾವ ರೀತಿಯಿಂದಲೂ ದೇಶ ಪ್ರಗತಿ ಕಾಣಲು ಸಾಧ್ಯವಿಲ್ಲ.

ನಮ್ಮ ಮುಖಂಡರು ಈ ಸಮಸ್ಯೆಗಳನ್ನು ನಿವಾರಿಸಲು ಕ್ರಮಗಳನ್ನು ತೆಗೆದುಕೊಳ್ಳಬೇಕು. ಇಂಥ ಘನ ಉದ್ದೇಶಕ್ಕಾಗಿ, ಸರ್ಕಾರವು ತಾಜ್‌ಮಹಾಲ್, ಚಾರ್‌ಮಿನಾರ್ ಅಥವಾ ಮೊಘುಲ್ ಉದ್ಯಾನವನ್ನು ಸಹ ಮಾರಲು ಹೊರಟರೆ ಯಾರೂ ಅಚ್ಚರಿಪಡಬೇಕಿಲ್ಲ.

ಹಣಕಾಸು ಸಚಿವರು 'ಸಾಮಾಜಿಕ ವಲಯ'ದ ಹೊಸ ಉದ್ದೇಶವನ್ನು ಹೊಂದಿದ್ದಾರೆ. ಇದು ಅವರು ಎನ್.ಐ.ಎಫ್.ನ ಸ್ಥಾಪನೆಯ ಘೋಷಣೆ ಮಾಡಿದಾಗಲೇ ಸ್ಪಷ್ಟವಾಗಿದೆ. ಅವರ ದೃಷ್ಟಿಯಲ್ಲಿ ಸಾಮಾಜಿಕ ವಲಯವೆಂದರೆ "ಶಿಕ್ಷಣ, ಆರೋಗ್ಯ ಮತ್ತು ಉದ್ಯೋಗ ದೃಷ್ಟಿ"ಯೇ ಆಗಿದೆ.

ಇಲ್ಲೆಲ್ಲೂ ದಲಿತ/ಆದಿವಾಸಿ ಅಥವಾ ಜಾತಿ ವ್ಯವಸ್ಥೆಯಿಂದಾದ ತಾರತಮ್ಯದ ಉಲ್ಲೇಖಲಿಲ್ಲ. ಇದರರ್ಥರೆಂದರೆ, ಎನ್.ಐ.ಎಫ್ ದಲಿತ/ಆದಿವಾಸಿ ಕಲ್ಯಾಣಕ್ಕಾಗಿ ಯಾವುದೇ ಬಂಡವಾಳ ಹೂಡುತ ಅಂತಃ ಸಾಕ್ಷಿ ಹೊಂದಿಲ್ಲ. ಇದು ತುಂಬಾ ಭೀಕರವಾದುದು.

ಚಿದಂಬರಂ ಅವರು ಜಾತಿಯೇ ಪ್ರಧಾನ ಅಂಶವಾಗಿ ರಚಿತವಾಗಿರುವ ಕ್ಯಾಬಿನೆಟ್‌ನ ಭಾಗವಾಗಿದ್ದಾರೆ. ಇವರೂ ಕೂಡಾ ಚುನಾವಣಾ ರಾಜಕೀಯದ ಭಾಗವಾಗಿದ್ದಾರೆ. ಟಿಕೇಟ್ ಹಂಚಿಕೆಯ ಸಂದರ್ಭದಲ್ಲೂ ಜಾತಿಯೇ ಪ್ರಮುಖ ಅಂಶವಾಗಿದೆ. ಅಲ್ಲದೆ, ಜಾತಿಯೂ ಮತದಾರರ ವರ್ತನೆಯ ಮೇಲೂ ಪರಿಣಾಮ ಬೀರುತ್ತದೆ. ಇವರೂ ಕೂಡಾ ಜಾತಿ ಮತ್ತು ಅಸ್ಪೃಶ್ಯತೆಯೆಂಬ ಇಟ್ಟಿಗೆಯಿಂದ ಕಟ್ಟಿದ ಸಮಾಜದ ಭಾಗವೇ ಆಗಿದ್ದಾರೆ.

ಜಾತಿಯು ಇಂಥ ಭೀಕರ ಸಾಮಾಜಿಕ ವಾಸ್ತವವಾಗಿರುವಾಗ ಇದು ಯಾಕೆ ಅವರ 'ಸಾಮಾಜಿಕ ವಲಯ' ತತ್ವದಲ್ಲಿ ಪ್ರತಿಫಲನಗೊಂಡಿಲ್ಲ? ಅಮೆರಿಕದಲ್ಲಿ ಯಾರಾದರೂ ಜನಾಂಗವನ್ನು ಗಣನೆಗೆ ತೆಗೆದುಕೊಳ್ಳದೆ ಸಾಮಾಜಿಕ ಕ್ಷೇತ್ರದ ಬಗ್ಗೆ ಮಾತಮಾಡಲು ಸಾಧ್ಯವೇ?

ಭಾರತದ ಯೋಜನಾಕಾರರು ಮತ್ತು ಅರ್ಥಶಾಸ್ತ್ರಜ್ಞರು ಬೌದ್ಧಿಕವಾಗಿ ತಾಲಿಬಾನಿಗಳಾಗಿದ್ದಾರೆ. ಸಮಗ್ರ ಅಭಿವೃದ್ಧಿಯು ದಲಿತರು/ಆದಿವಾಸಿಗಳನ್ನು ಮೇಲಕ್ಕೆತ್ತುತ್ತದೆ ಎಂದು ನಂಬಿದ್ದಾರೆ. ಇದೊಂದು ವಿಫಲ ವಾದ. ಎರಡನೇ ಮಹಾಯುದ್ಧದ ನಂತರ, ಅಮೆರಿಕವು ಆರ್ಥಿಕವಾಗಿ ಬಲಾಢ್ಯ ಶಕ್ತಿಯಾಗಿ ಉದಯಿಸಿತು. 1980ರ ವೇಳೆಗೆ ಅಮೆರಿಕವು ಸಮೃದ್ಧಿ ಎಣೆಯಿಲ್ಲದ್ದಾಗಿದೆ.

ಆದರೂ. ಕಪ್ಪುವರ್ಣೀಯರು ಇನ್ನೂ ಬಡವರಾಗಿದ್ದಾರೆ. ಜೊತೆಗೆ ಮುಖ್ಯವಾಹಿನಿಯ ಸಮಾಜದಿಂದ ಹೊರಗುಳಿದಿದ್ದಾರೆ. ಶ್ವೇತ ವರ್ಣೀಯರು ತಮ್ಮ ತಪ್ಪುಗಳನ್ನು ಅರಿತು ವೈವಿಧ್ಯತಾ ನೀತಿ/ಸಕಾರಾತ್ಮಕ ಕಾರ್ಯಕ್ರಮಗಳನ್ನು ರೂಪುಗೊಳಿಸಿದರು. ಅನೇಕ ಅಮೆರಿಕದ ನಗರಗಳನ್ನು ನಾಶಗೊಳಿಸಿದ 1967ರ ಜನಾಂಗಿಕ ದಂಗೆಗಳನ್ನು ಪರಿಶೀಲಿಸಿದ ಕೆರ್ನರ್ ಕಮೀಷನ್ ತನ್ನ ಶಿಫಾರಸ್ಸುಗಳಲ್ಲಿ "ಸಮಸ್ಯೆಗಳ ಆಳಕ್ಕಿಳಿದು ಸಮಾನ ನೆಲೆಯಲ್ಲಿ ಕಾರ್ಯಕ್ರಮಗಳನ್ನು ಜಾರಿಗೊಳಿಸಬೇಕು" ಎಂದು ವಾದಿಸಿದೆ. ಅಸ್ಪೃಶ್ಯತೆಯಿಂದ ಉಂಟಾದ 'ಸಮಸ್ಯೆಗಳ ಆಳ'ವನ್ನು ಗುರುತಿಸಲು ಯಾವುದಾದರೂ ಮಾಪಕ ವಿದೆಯೇ?

ಬೃಹತ್ ರಾಷ್ಟ್ರವಾದ ಭಾರತದಲ್ಲಿ ಯಾವನೇ ಒಬ್ಬ ದಲಿತ ಆವನ/ಅವಳ ಸುತ್ತಮುತ್ತಲಿನ ಪ್ರದೇಶದ ಯಾವುದೇ ಟೀ ಅಂಗಡಿಗೆ ಹೋಗಿರುವುದನ್ನು ನೋಡಿದ್ದೀರಾ?

ಇದು ದಲಿತರು ಎದುರಿಸಿದ ಸಮಸ್ಯೆಗಳ ಆಳವನ್ನು ವಿವರಿಸುತ್ತದೆ. ಅಸ್ಪೃಶ್ಯತೆ ಒಂದು ಸಾಮಾಜಿಕ ಸಮಸ್ಯೆ. ನಮ್ಮ ದೇಶದಲ್ಲಿ ಸಂಪತ್ತಿನ ಅಸಮ ಹಂಚಿಕೆಯಲ್ಲೂ ಸಹ ಇದರ ಬೇರುಗಳನ್ನು ಕಾಣಬಹುದು.

ಖಾಸಗೀಕರಣ ನೀತಿಯು ದಲಿತರನ್ನು ಇನ್ನೂ ಹೆಚ್ಚಾಗಿ ಘಾಸಿಗೊಳಿಸುತ್ತಿದೆ. ಸರ್ಕಾರಿ ಕೆಲಸದಲ್ಲಿರುವ ಸುಮಾರು ಅರ್ಧದಷ್ಟು ದಲಿತರು/ಅದಿವಾಸಿಗಳು ಇನ್ನೂ ಕೆಲವೇ ದಶಕಗಳಲ್ಲಿ ಹೊರದೂಡಲ್ಪಡುವ ಭಯವನ್ನು ಎದುರಿಸುತ್ತಿದ್ದಾರೆ. ಅಲ್ಲದೆ ಈ ನೀತಿಯಿಂದ ಉತ್ಪಾದನೆಗೊಳ್ಳುವ ಹಣವು ದಲಿತರು/ಆದಿವಾಸಿಗಳನ್ನು ತಲುಪುವುದಕ್ಕೆ ಯಾವುದೇ ರೂಪುರೇಷೆ ಇಲ್ಲ.

ಸರ್ಕಾರವು ಒಂದು ಚಾರಿತ್ರಿಕ ಅವಕಾಶವನ್ನು ಹೊಂದಿದೆ. ಇಷ್ಟೊಂದು ಹಣದಿಂದ, ಸರ್ಕಾರವು ದಲಿತ-ದಲಿತೇತರರ ನಡುವಣ ಬಿರುಕನ್ನು ಇನ್ನೆಂದೂ ಇಲ್ಲದಂತೆ

ದಲಿತ್ ಡೈರಿ

ಯಾರೇ ಆರ್ಥಶಾಸ್ತ್ರಜ್ಞನನ್ನು ಆರ್ಥಿಕ ಕುಸಿತದ ಬಗ್ಗೆ ಕೇಳದಾಗ ಅವರ ಪ್ರತಿಕ್ರಿಯೆಯೇನೆಂದರೆ ಅದೊಂದು ಆವರ್ತನೆ ಆಥವಾ ಆರ್ಥಿಕತೆಯು ತೀವ್ರ ಬೆಳವಣಿಗೆಯನ್ನು ಕಂಡು ಸ್ಥಿರತೆಯತ್ತ ಸಾಗುವುದು ಎನ್ನುತ್ತಾರೆ. ಯಾವುದೇ ಮುಕ್ತ ಆರ್ಥಿಕ ಕ್ಷೇತ್ರಗಳಲ್ಲಿ ವಾಣಿಜ್ಯ ಅವರ್ತನೆಯೊಂದು ಕ್ರಿಯಾಶೀಲವಾಗಿದ್ದು ಅದರೊಡನೆ ಹೊಂದಿಕೊಳ್ಳಬೇಕಾಗುತ್ತದೆ ಎಂಬುದನ್ನು ಗಮನಿಸಲೇಬೇಕು. ಸೆಪ್ಟೆಂಬರ್ 26, 2002ರ ವಿಶ್ವ ಆರ್ಥಿಕ ಸಮೀಕ್ಷೆಯ ಪ್ರಕಾರ. ಅಮೆರಿಕದ ಆರ್ಥಿಕತೆಯು ಎರಡನೇ ಮಹಾಯುದ್ಧಕ್ಕೆ ಮುಂಚೆ 90 ವರ್ಷಗಳಲ್ಲಿ 36 ವರ್ಷಗಳಷ್ಟು ಕುಸಿತ ಕಂಡಿತ್ತು-ಯುದ್ಧಾನಂತರದಲ್ಲಿ ಅಮೆರಿಕಾದ ಆರ್ಥಿಕತೆಯು ಕಾಲದ 26.5%ದಷ್ಟು ಕುಸಿತ ಕಂಡಿದೆ.

ಅನು : ವಿದ್ಯಾಕೆ,
ಡೊಮಿನಿಕ್.ಡಿ

ಮುಚ್ಚಬಹುದು. ಆದರೆ, ಇದಕ್ಕೆ ಸರ್ಕಾರವು ಸಮಸ್ಯೆಗಳ ಆಳವನ್ನು ಅರ್ಥೈಸಿ, ಸಮಾನವಾಗಿ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ಅವಶ್ಯಕತೆಯಿದೆ.

ಅದಕ್ಕಾಗಿ ಸರಕಾರವು ದಲಿತರ/ಆದಿವಾಸಿಗಳ ಶಿಕ್ಷಣ, ವ್ಯಾಪಾರ/ ಉದ್ಯಮಶೀಲತೆಯ ಅಭಿವೃದ್ಧಿ ಮತ್ತು ಸಮುದಾಯ ವಿಮಾ ಪಾಲಿಸಿ –ಇವುಗಳಲ್ಲಿ ಬಂಡವಾಳ ಹೂಡುವ ಆಕ್ರಮಣಕಾರಿ ತಂತ್ರವನ್ನು ಅಳವಡಿಸಿ ಕೊಳ್ಳಬೇಕು.

ದಲಿತರ ಮತ್ತು ಆದಿವಾಸಿಗಳ ಉನ್ನತಿಗೆ ಮಾಡುವ ಯಾವುದೇ ಹೂಡಿಕೆಯಿಂದ ಅವಳಿ ಪ್ರಯೋಜನವಿದೆ ಎಂಬುದನ್ನು ಯೋಜನಕಾರರು ಮನಗಾಣಬೇಕು.

ಇದು ಇಡೀ ಸಮುದಾಯವನ್ನು ಮೇಲಕ್ಕೆತ್ತುತ್ತದೆ. ಹಾಗೆಯೇ ಹೂಡಿದ ಹಣವು ಮಾರುಕಟ್ಟೆ ಅರ್ಥಿಕತೆಗೆ ತಕ್ಷಣವೇ ವಾಪಸು ಬರುತ್ತದೆ.

ದುರಂತದ ಸಂಗತಿಯೆಂದರೆ, ಯೋಜನಾಕಾರರು ಮತ್ತು ಅಭಿವೃದ್ಧಿ ಅರ್ಥಶಾಸ್ತ್ರಜ್ಞರು ಮಾರುಕಟ್ಟೆ ಆರ್ಥಿಕತೆಯ ಈ ಮೂಲಭೂತ ತತ್ವವನ್ನು ಒಪ್ಪಿಕೊಳ್ಳಲು ನಿರಾಕರಿಸುತ್ತಾರೆ.

ಘಾಸಿಗೊಂಡಿದೆ ಎಂಬುದನ್ನು ಸೂಚಿಸುತ್ತದೆ.

ವ್ಯಾಪಕವಾಗಿ ಕುಸಿತವನ್ನು ಉದ್ಯೋಗ, ಆದಾಯ, ಕೈಗಾರಿಕಾ ಉತ್ಪನ್ನ, ಸಗಟು ಮಾರಾಟ ಮತ್ತು ಚಿಲ್ಲರೆ ಮಾರಾಟದ ಇಳಿಕೆಯ ರೂಪದಲ್ಲಿ ಅರ್ಥೈಸಿಕೊಳ್ಳಬಹುದು.

ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಚಿಲ್ಲರೆ ಮಾರಾಟದ ಇಳಿಕೆಯು ಕಡಿಮೆ ಸಗಟ ಮಾರಾಟಕ್ಕೆ ಕಾರಣವಾಗುತ್ತದೆ. ಇದು ಆದಾಯ ಮತ್ತು ಉದ್ಯೋಗದ ಇಳಿಮುಖತೆಗೆ ಕಾರಣವಾಗಿ ಕೈಗಾರಿಕಾ ಉತ್ಪನ್ನದ ಮೇಲೆ ಪರಿಣಾಮ ಬೀರುತ್ತದೆ. ಇತರ ಅನೇಕ ಅಂಶಗಳ ಪೈಕಿ ಗ್ರಾಹಕರ ವರ್ತನೆಯು ವ್ಯಾಪಾರಿ ವರ್ತುಲ ಮತ್ತು ಕುಸಿತಕ್ಕೆ ಮಾರಕವಾಗುತ್ತದೆ. ಜಪಾನಿ–ಆರ್ಥಿಕತೆಯು ಕಳೆದ ಐದು ವರ್ಷಗಳಲ್ಲಿ ಕಂಡ ಮೂರು ಕುಸಿತಗಳಿಂದಾಗಿ ಕುಂಠಿತಗೊಂಡಿದೆ.

ಇದು ತುಂಬಾ ವಿಚಿತ್ರ ಎನ್ನಿಸಬಹುದು. "ಯುವಕರ ಶೇರದಾವರು ಕಡಿಮೆಯಾಗಿ ವೃದ್ಧರ ಶೇಕಡಾವಾರು ಹೆಚ್ಚಾಗಿರುವುದೆ ಇದಕ್ಕೆ ಕಾರಣವಾಗಿದೆ. ವೃದ್ಧರು ಮಾರುಕಟ್ಟೆಗೆ ಹೋಗುತ್ತಾರೆ. ಯಾವುದೇ ಆರ್ಥಿಕ ಜೀವನಕ್ಕೆ ಜನಾಂಗಿಕ/ಕುಲಸಮುದಾಯಗಳನ್ನು ಸೆಳೆದಿದೆ. ದಲಿತರ/ಆದಿವಾಸಿಗಳ ಮೊದಲ ತಲೆಮಾರಿನ ದ್ರೆಹಕರು ಹಣದ ವಹಿವಾಟಿಗೆ ತಡೆಯೊಡ್ಡುವುದಿಲ್ಲ. ಇದು ಆರ್ಥಿಕತೆಗೆ ಅವಶ್ಯಕವಾದುದು ಎಂಬುದನ್ನು ಸಂಶೋಧನೆಗಳು ತೋರಿಸಿ ಕೊಟ್ಟಿವೆ. "ನಮ್ಮ ಕೈಗಾರಿಕೆಗಳು ಅಮೆರಿಕ ಮಾದರಿಯನ್ನು ಅನುಸರಿ ಸಬೇಕಲ್ಲವೇ ಮತ್ತು ಆರ್ಥಿಕತೆಯಲ್ಲಿ ಬೆಳೆಯುವುದಕ್ಕೆ ಅವಕಾಶ ನೀಡಬೇಕಲ್ಲವೆ.

ಅರ್ಥಶಾಸ್ತ್ರದ ತತ್ವದ ಪ್ರಕಾರ ಆದಾಯವನ್ನು ಖರ್ಚುಮಾಡಬೇಕು ಅಥವಾ ಕೂಡಿಡಬೇಕು ಅಥವಾ ಎರಡೂ ಒಟ್ಟಿಗೆ ಸಾಗಬೇಕು. ಪ್ರವೃತ್ತಿಯಲ್ಲಿ ಅರ್ಥಶಾಸ್ತ್ರಜ್ಞನಾದ, ವೃತ್ತಿಯಲ್ಲಿ ನಾಗರಿಕ ಸೇವೆಯಲ್ಲಿರುವ ನನ್ನ ಸ್ನೇಹಿತ ಆನಂದ ಶ್ರೀಕೃಷ್ಣ ಹೇಳುವುದೇನೆಂದರೆ ಅದಾಯ ಮತ್ತು ವೆಚ್ಚದ ನಡುವಣ ಸಮತೋಲನವು ಕುಸಿದು ಬಿದ್ದಿದೆ. ಆದಾಯ ಏರುತ್ತಿದ್ದರೂ ವೆಚ್ಚವೂ ನಿಂತುಬಿಟ್ಟಿದೆ ಅಥವಾ ಎರಡೂ ಒಂದೇ ಪ್ರಮಾಣದಲ್ಲಿ ಏರುತ್ತಿಲ್ಲ. ಈ ಸಿದ್ಧಾಂತವು ಪ್ರಮುಖ ಅರ್ಥಶಾಸ್ತ್ರಜ್ಞರಾದ ಜಾನ್ ಮೇನಾರ್ಡ್ ರೇನ್ಸ್‌ಗೆ ಸೇರಿದ್ದೆಂದು ಹೇಳುತ್ತಾರೆ.

ಕುಸಿತದ ಬಗ್ಗೆ ವ್ಯರ್ಥ ಪ್ರಲಾಪ

ಯಾರೇ ಅರ್ಥಶಾಸ್ತ್ರಜ್ಞನನ್ನು ಆರ್ಥಿಕ ಕುಸಿತದ ಬಗ್ಗೆ ಕೇಳಿದಾಗ ಅವರ ಪ್ರತಿಕ್ರಿಯೆಯೇನೆಂದರೆ ಅದೊಂದು ಆವರ್ತನೆ ಅಥವಾ ಆರ್ಥಿಕತೆಯ ತೀವ್ರ ಬೆಳವಣಿಗೆಯನ್ನು ಕಂಡು ಸ್ಥಿರತೆಯತ್ತ ಸಾಗುವುದು ಎನ್ನುತ್ತಾರೆ. ಯಾವುದೇ ಮುಕ್ತ ಆರ್ಥಿಕ ಕ್ಷೇತ್ರಗಳಲ್ಲಿ ವಾಣಿಜ್ಯ ಅವರ್ತನೆಯೊಂದು ಕ್ರಿಯಾಶೀಲವಾಗಿದ್ದು ಅದರೊಡನೆ ಹೊಂದಿಕೊಳ್ಳ ಬೇಕಾಗುತ್ತದೆ ಎಂಬುದನ್ನು ಗಮನಿಸಲೇಬೇಕು. ಸೆಪ್ಟೆಂಬರ್ 26, 2002ರ ವಿಶ್ವ ಆರ್ಥಿಕ ಸಮೀಕ್ಷೆಯ ಪ್ರಕಾರ. ಅಮೇರಿಕದ ಆರ್ಥಿಕತೆಯು ಎರಡನೇ ಮಹಾಯುದ್ಧಕ್ಕೆ ಮುಂಚೆ 90 ವರ್ಷಗಳಲ್ಲಿ 36 ವರ್ಷಗಳಷ್ಟು ಕುಸಿತ ಕಂಡಿತ್ತು–ಯುದ್ಧಾನಂತರದಲ್ಲಿ (1948–1991) ಅಮೆರಿಕಾದ ಆರ್ಥಿಕತೆಯು ಕಾಲದ 26.5% ಶೇ.ದಷ್ಟು ಕುಸಿತ ಕಂಡಿದೆ. ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರು ಕುಸಿತ ಮತ್ತು ಅದರ ವ್ಯಾಪಾರ ಚಕ್ರವನ್ನು ಸೈದ್ಧಾಂತೀಕರಿಸುವುದರಲ್ಲಿ ಸರಿಯಾಗಿಯೇ ಇದ್ದಾರೆ.

1991–2005ರ ನಡುವೆ, ಅಮೆರಿಕದ ಆರ್ಥಿಕತೆಯಲ್ಲಿ ಒಂದೇ ಒಂದು ಸಲ ಕುಸಿತ ಕಂಡುಬಂದಿದೆ. ಅದೂ 2001ರಲ್ಲಿ ಎಂದು ಹೇಳಲಾಗುತ್ತದೆ. ಅದರೆ ಕೆಲವರು 2001 ರಲ್ಲಿ ಅಮೇರಿಕ ಆರ್ಥಿಕತೆಯು ಕುಸಿತದಿಂದ ಪಾರಾಗಿದೆ ಎಂದು ಹೇಳುತ್ತಾರೆ. 9/11 ಭಯೋತ್ಪಾದನಾ ಆಕ್ರಮಣದಿಂದಾಗಿ 2001 ರಲ್ಲಿ ಅಮೇರಿಕ ಆರ್ಥಿಕತೆಯು ಕುಸಿತದಿಂದ ತೊಂದರೆಗೊಳಗಾಗಿದೆ ಎಂದು ಅನೇಕರು ನಂಬಿದ್ದಾರೆ. 9/11 ರ ಘಟನೆ ನಡೆದಿಲ್ಲವೆಂದು ನಾವು ಊಹಿಸಿದರೆ, ನಾವು ಇನ್ನೊಂದು ಊಹೆಯನ್ನು ಮಾಡದಿರಲು ಸಾಧ್ಯವೇ? ಅದೇಂದರೆ ಅಮೇರಿಕ ಆರ್ಥಿಕತೆಯು 1991 ರಿಂದೀಚೆಗೆ ಕುಸಿತಕ್ಕೆ ಒಳಗಾಗಲೇ ಇಲ್ಲ.

ವಿಶ್ವ ಆರ್ಥಿಕ ಸಮೀಕ್ಷೆಯ ಪ್ರಕಾರ 1982 – 1992ರಲ್ಲಿ ಅಮೇರಿಕ ಆರ್ಥಿಕತೆಯು ಕಾಲದ ಶೇ 10ಕ್ಕಿಂತ ಕಡಿಮೆ ಕುಸಿತವನ್ನು ಕಂಡಿದೆ. 2001ರಲ್ಲಿ ಕುಸಿದಿತ್ತೆಂದು ಊಹಿಸಿದರೂ ಅದು 9/11 ರ ಘಟನೆ ನಡೆದಿರಲಿ ಅಥವಾ ಇಲ್ಲದಿರಲಿ, 1991–2005ರ ಅವಧಿಯಲ್ಲಿ ಅಮೆರಿಕ ಆರ್ಥಿಕತೆಯು ಕಾಲದ 7.14% ಕುಸಿತವನ್ನು ಕಂಡಿದೆ. ಇದು ವ್ಯಾಪಾರ ವರ್ತುಲ ನಿಜವಾಗಿಯೂ ಮಾನದಂಡಲಿದ್ದರೂ ಸರಿ. ಅಮೇರಿಕ ತನ್ನ ಹೊಸ ಗ್ರಾಹಕ ನೆಲೆಗಳನ್ನು ಹೆಚ್ಚಿಸಿಕೊಳ್ಳತ್ತಿದೆ. ಇದರಿಂದಾಗಿ ಕೊಳ್ಳುವಿಕೆ ಹೆಚ್ಚಾಗಿ ಚಿಲ್ಲರೆ ಮಾರಾಟವೂ ಏರುತ್ತದೆ. ಇದರಿಂದ ಸಗಟ ಮಾರಟವು ಹೆಚ್ಚುತ್ತದೆ. ಜಾರ್ಜಿಯ ವಿಶ್ವವಿದ್ಯಾಲಯದ ಸೆಲಿಗ್ ಸೆಂಟರ್ ಇದಕ್ಕೆ ಒಂದು ಉತ್ತರ ಕಂಡುಕೊಂಡಿದೆ. ಅದರ ವರದಿಯ ಶೀರ್ಷಿಕೆಯೇನೆಂದರೆ– ಬಹುಸಂಸ್ಕೃತಿಯ ಆರ್ಥಿಕತೆ 2004–ಅಮೆರಿಕದ ಅಲ್ಪಸಂಖ್ಯಾತರ ಖರೀದಿ ಶಕ್ತಿ ಎಲ್ಲವನ್ನು ಭರಿಸುತ್ತದೆ.

ಅಮೆರಿಕದ ಜನಾಂಗಿಕದ/ ಕುಲಗುಂಪುಗಳಿಗೆ ಮಾರುಕಟ್ಟೆ ಮುಕ್ತವಾಗಿದೆ, ಅವರು 2004ರಲ್ಲಿ 1820 ಡಾಲರ್ ಬಿಲಿಯನ್ ಖರ್ಚುಮಾಡಿದೆ. ಇನ್ನೊಂದು ರೀತಿ ಹೇಳುವುದಾದರೆ, ಚೈನಾ, ಭಾರತ ಮತ್ತು ರಷ್ಯ ಒಕ್ಕೂಟದ ಜಿಡಿಪಿಯನ್ನು ಒಟ್ಟು ಸೇರಿಸಿದರೆ ಎಷ್ಟಾಗುವುದೋ ಅಷ್ಟರ ಮಟ್ಟಿಗೆ (1985 ಡಾಲರ್ ಬಿಲಿಯನ್) ಖರ್ಚುಮಾಡುತ್ತಾರೆ, ಇದು ಅಮೆರಿಕ ಮಾರುಕಟ್ಟಯ ಶೇ. 15 ರಷ್ಟು. ಇದು 1980 ರಲ್ಲಿ ಕೇವಲ 5 % ಇತ್ತು.

1980–2004ರ ನಡುವೆ ಈ ಗುಂಪುಗಳಿಗೆ ನೀಡಿದ ಸಂಬಳ ಶೇ. 300ಕ್ಕೆ ಏರಿತು. ಇದು ವೈವಿಧ್ಯತೆಯ ಅವಧಿಯಾಗಿರುವುದರಿಂದ ಅಮೆರಿಕದ

> **ದಲಿತರ ಮತ್ತು ಅದಿವಾಸಿಗಳ ಉನ್ನತಿಗೆ ಮಾಡುವ ಯಾವುದೇ ಹೂಡಿಕೆಯಿಂದ ಅವಳಿ ಪ್ರಯೋಜನವಿದೆ ಎಂಬುದನ್ನು ಯೋಜನಕಾರರು ಮನಗಾಣಬೇಕು. ಇದು ಇಡೀ ಸಮುದಾಯವನ್ನು ಮೇಲಕ್ಕೆತ್ತುತ್ತದೆ. ಹಾಗೆಯೇ ಹೂಡಿದ ಹಣವು ಮಾರುಕಟ್ಟೆ ಅರ್ಥಿಕತೆಗೆ ತಕ್ಷಣವೇ ವಾಪಸು ಬರುತ್ತದೆ.**

ಈ "ಆದಾಯ ಮತ್ತು ವೆಚ್ಚ'ದ ಸಮತೋಲನದ ಕುಸಿತವು ಒಟ್ಟಿಗೆ ನಡೆದರೆ, ಆರ್ಥಿಕತೆಯ ಮೇಲೆ ಅದು ದುಷ್ಪರಿಣಾಮವನ್ನು ಉಂಟು ಮಾಡುತ್ತದೆ. ಜನರು ಖರೀದಿಸುವುದನ್ನು ಕಡಿಮೆ ಮಾಡಿದರೆ ಉಗ್ರಾಣಗಳ ಸಮಸ್ಯೆಯುಂಟಾಗುತ್ತದೆ. ಆಗ ಕಾರ್ಖಾನೆ ಮಾಲೀಕರು ಉತ್ಪಾದನೆಯನ್ನು ಕಡಿಮೆ ಮಾಡುತ್ತಾರೆ. ಆಗ ಉಂಟಾದ ಖೋತಾವು ನಿರುದ್ಯೋಗಕ್ಕೆ ಕಾರಣವಾಗುತ್ತದೆ. ಡೀಲರುಗಳ, ಸರಬರಾಜುದಾರರ ಮತ್ತು ಚಿಲ್ಲರೆ ವ್ಯಾಪಾರಿಗಳ ಆದಾಯವು ಕೆಳಗಿಳಿಯುತ್ತದೆ, ಅಂತ್ಯದಲ್ಲಿ, ತಯಾರಕರು ಮತ್ತು ಜನಸಾಮಾನ್ಯರು ಸಹ ತೊಂದರೆಗೊಳಗಾಗುತ್ತಾರೆ. ವಾಸ್ತವವಾಗಿ, ಹಣವನ್ನು ಉಳಿಸಿದ ಜನರು ಹಣವನ್ನು ಹಾಸಿಗೆ ಹಿಡಿಸುತ್ತಾರೆ. ಅದಕ್ಕೂ ಚಿಕಿತ್ಸೆ ಅವಶ್ಯಕವಾಗಿ ಬೇಕಾಗುತ್ತದೆ.

ಹಿಂದೂಸ್ತಾನ್ ಲೀವರ್ ಲಿಮಿಟೆಡ್ (ಹಚ್ ಎಲ್‌ಎಲ್)ಅನ್ನು ಉದಾಹರಣೆಯನ್ನಾಗಿ ನೋಡೋಣ. 118 ಬಿಲಿಯನ್ ರೂ.ಗಳ ವಾರ್ಷಿಕ ವಹಿವಾಟಿನ ಹೆಚ್.ಎಲ್.ಎಲ್ ಗ್ರಾಹಕ ವಸ್ತುಗಳ(ಎಫ್ ಎಂ ಸ್ಸಿಜಿ) ಮುಂಚೂಣಿ ಕಂಪನಿಯಾಗಿದೆ. ಹೆಚ್.ಎಲ್.ಎಲ್ ಇಡೀ ಇಂಡಿಯಾದಲ್ಲೆ ಹಂಚಿಹೋಗಿರುವ ಸುಮಾರು ಎರಡು ಲಕ್ಷ ವಿತರಕರ ಸರಪಳಿ ಮೂಲಕ ಹಣವು ಉತ್ಪಾದಿಸುತ್ತದೆ. ಎಂದರೆ ಪ್ರತಿಯೊಬ್ಬ ವಿತರಕನು ಸರಾಸರಿ ವರ್ಷವೊಂದಕ್ಕೆ 59 ಕೋಟಿ ರೂ ವ್ಯವಹಾರ ನಡೆಸುತ್ತಾನೆ. ವಿತರಕರು ಮಾರಾಟ ಏಜೆಂಟಾರುಗಳ ಮೂಲಕ ಹೆಚ್ ಎಲ್ ಎಲ್ ಉತ್ಪನ್ನಗಳನ್ನು ಮಾರಾಟ ಮಾಡುತ್ತಾರೆ. ಲಾಭವು ಹೆಚ್ ಎಲ್ ಎಲ್, ಅದರ ವಿತರಕರು, ಮಾರಾಟ ಏಜೆಂಟರು ಮತ್ತು ಚಿಲ್ಲರೆ ವ್ಯಾಪಾರಿಗಳ ನಡುವೆ ಹಂಚಲ್ಪಡುತ್ತದೆ.

ವಿತರಕರು ಎಲ್ಲ ವೆಚ್ಚಗಳನ್ನು ಭರಿಸಿದ ನಂತರವು, 1.5% ಲಾಭವನ್ನು ಪಡೆಯುವರೆಂದು ಉಹಿಸಿದರೆ, ಅದು ವಾರ್ಷಿಕವಾಗಿ 88.5 ಲಕ್ಷ ರೂ.ಗಳಾಗುತ್ತದೆ. ಹೆಚ್ ಎಲ್ ಎಲ್‌ನ ವಿತರಕ Mr.ಎಕ್ಸ್ ಎಂಬವರ ಆದಾಯ ಮತ್ತು ವೆಚ್ಚದ ಬಗ್ಗೆ ಒಂದು ಊಹೆ ಮಾಡೋಣ. ಮಿಸ್ಟರ್. ಎಕ್ಸ್ 1995ರಲ್ಲಿ ಕಂಪೆನಿಯ

ವಿತರಣಾ ಸರಪಳಿಗೆ ಸೇರಿದ, ಆ ಸಂದರ್ಭದಲ್ಲಿ ಮಿ. ಎಕ್ಸ್. ಸಾಮಾನ್ಯ ಆರ್ಥಿಕ ಹಿನ್ನೆಲೆಯುಳ್ಳ ನಿರುದ್ಯೋಗಿ.

1995ರಲ್ಲಿ ವಿತರಾಣಾ ಸರಪಳಿಗೆ ಸೇರಿದ ಹೆಚ್‌ಎಲ್‌ಎಲ್ ವಿತರಕನು 1995–96 ರಲ್ಲಿ 10 ಲಕ್ಷ ರೂ. ಲಾಭ ಗಳಿಸುತ್ತಾನೆ. ನಂತರ ಎಲ್ಲ ಹಣವನ್ನು ಖರ್ಚು ಮಾಡುತ್ತಾನೆ. ಮೊದಲ ಐದು ವರ್ಷಗಳಲ್ಲಿ ಕಾರು, ಟಿ.ವಿ ಫ್ರಿಡ್ಜ್, ಎ.ಸಿ, ಮನೆ ಇತ್ಯಾದಿಗಳ ಖರೀದಿ ಮಾಡುತ್ತಾನೆ. 2000–01ರಲ್ಲಿ 50 ಲಕ್ಷದ ಲಾಭದಲ್ಲಿ 8 ಲಕ್ಷವನ್ನು ಮಾತ್ರ ಉಳಿಸಿರುತ್ತಾನೆ. 2004–2005ರಲ್ಲಿ ಅವನ ಲಾಭವು 80.5 ಲಕ್ಷಕೇವಿರುತ್ತದೆ. ಅದರಲ್ಲಿ 55 ಲಕ್ಷವನ್ನು ಉಳಿಸುತ್ತಾನೆ. 2005–06 ಅಂದಾಜು 83.5 ಲಕ್ಷಗಳ ಲಾಭದಲ್ಲಿ 60 ಲಕ್ಷವನ್ನು ಉಳಿಸಬಲ್ಲ. ಹಾಗೆಯೇ ನಾಗರಿಕ ಬದುಕಿಗೆ ಬೇಕಾದ ಎಲ್ಲವನ್ನು ಗಳಿಸಿರುತ್ತಾನೆ.

ಮೇಲಿನ ಉಹೆಯಿಂದ ವೆಚ್ಚದ ರೀತಿಯನ್ನು ಗಮನಿಸಿದರೆ, ಒಂದು ನಿರ್ದಿಷ್ಟ ಕಾಲದ ನಂತರ, "ಆದಾಯ–ವೆಚ್ಚ"ದ ಸಮತೋಲನವು ಕುಸಿಯುತ್ತದೆ. ಮತ್ತು ಹಣದ ಕೂಡಿಡುವಿಕೆ ಪ್ರಾರಂಭವಾಗುತ್ತದೆ. ಕೂಡಿಟ್ಟ ಹಣವು ನಿತ್ರಾಣವಾಗಿ ಮಾರುಕಟ್ಟೆಯಲ್ಲಿ ಚಲಿಸಲು ಅಸಮರ್ಥವಾಗುತ್ತದೆ, ಅಗ ಹಣವು ಹಾಸಿಗೆ ಹಿಡಿದು, ಕೈಗಾರಿಕೆ ಮತ್ತು ಮಾರುಕಟ್ಟೆ ವಿಸ್ತರಣೆಯನ್ನು ತಡೆಯುತ್ತದೆ.

ಅಮೆರಿಕ ಅರ್ಥಿಕತೆಯು ಈ ತತ್ವವನ್ನು ಎದುರಿಸಿ, ಅಷ್ಟೇ ಸುಲಭದಲ್ಲಿ ಚೇತರಿಸಿಕೊಂಡಿದೆ. 3500 ದೊಡ್ಡ ಖಾಸಗಿ ವಲಯದ ಅಮೆರಿಕನ್ ಕಾರ್ಪೊರೇಶನ್

ಭಾರತದ ಎಲ್ಲ ತಂದೆತಾಯಿಯರಾದ ನ್ಯಾಯಾಧೀಶರು, ವ್ಯಾಪಾರಿಗಳು, ಅಧಿಕಾರಿಗಳು ತಮ್ಮ ಮಕ್ಕಳು ಅಮೆರಿಕ ವಿ.ವಿ ಯಲ್ಲಿ ಓದಬೇಕೆಂಬ ಕನಸು ಕಾಣುತ್ತಿರುತ್ತಾರೆ. ಅಮೆರಿಕರವು ಸರಾರಾತ್ಮಕ ಕ್ರಮ ವೈವಿಧ್ಯತೆಗಳ. ನೀತಿಯನ್ನು ಒಪ್ಪಿಕೊಳ್ಳುತ್ತಾರೆ. ಆದರೆ ಇವರೇ ಇಲ್ಲಿನ 'ಮೀಸಲಾತಿ' ಅಥವಾ ಸರಾರತ್ಮಕ ಕ್ರಮದ ಬಗ್ಗೆ ಕೇಳಿದಾಗ ಅಳುವುದಕ್ಕೆ ಶುರುಮಾಡುತ್ತಾರೆ. ಕೋಷ್ಟಕ ಎ ಯನ್ನು ನೋಡಿ. ಚಿಕಾಗೊ ವಿ. ವಿ. ಯು 78; ಜಾನ್ ಹಾಪ್‌ಕಿನ್ಸ್ 31, ಕೊಲಂಬಿಯಾ ವಿ. ವಿ. ಯು 72 ಶ್ರೇಷ್ಠ ವ್ಯಕ್ತಿಗಳನ್ನು ನೀಡಿದೆ.

'ರಾಷ್ಟ್ರೀಯ ಅಲ್ಪಸಂಖ್ಯಾತ ಸರಬರಾಜುದಾರರ ಅಭಿವೃದ್ಧಿ ಪರಿಷತ್ತನ್ನು (ಎನ್‌ಎಂಎಸ್ ಡಿಸಿ) ಸ್ಥಾಪಿಸಿದೆ. ಇದು ಕಪ್ಪು ವರ್ಣೀಯರನ್ನು /ಜನಾಂಗಿಕ ಅಲ್ಪಸಂಖ್ಯಾತರನ್ನು ಸರಬರಾಜುದಾರ/ ವಿತರಣಾ ಸರಪಳಿಗೆ ತಂದಿದೆ. ಅಮೆರಿಕದ ಕಾರ್ಮಿಕ ಇಲಾಖೆಯು ಸ್ಥಾಪಿಸಿದ ಫೆಡರಲ್ ಕಾಂಟ್ರಾಕ್ಟ್ ಕಂಪ್ಲೆಯನ್ಸ್ ಪ್ರೋಗ್ರಾಂ ಕಚೇರಿ (ಓಎಫ್‌ಸಿಸಿಪಿ) ಅವರನ್ನು ಸರ್ಕಾರಿ ಗುತ್ತಿಗೆಗಳಿಗೆ ಕರೆತರುತ್ತಿದೆ. ಈಗ ಈ ಗುಂಪುಗಳು ಚೈನಾ, ಇಂಡಿಯಾ ಮತ್ತು ರಷ್ಯ ಬಿಟ್ಟು ಜಿಡಿಪಿಯಷ್ಟು ಆದಾಯವನ್ನು ಹೊಂದಿವೆ. ಭಾರತವು ಅಮೆರಿಕ ಮಾದರಿಯನ್ನು ಅನುಸರಿಸಬೇಡವೇ? ದಲಿತರು/ಆದಿವಾಸಿಗಳನ್ನು ಸರಬ ರಾಜುದಾರ/ ಡೀಲರ್‌ಶಿಪ್/ಗುತ್ತಿಗೆ ಸರಪಳಿಗೆ ತರುವುದು ಬೇಡವೇ?

ದುಪ್ಪಟ್ಟ ಸ್ಥಾನಮಾನ

ಭಾರತದ ಎಲ್ಲ ತಂದೆತಾಯಿಯರಾದ ನ್ಯಾಯಾಧೀಶರು, ವ್ಯಾಪಾರಿಗಳು, ಅಧಿಕಾರಿಗಳು ತಮ್ಮ ಮಕ್ಕಳು ಅಮೆರಿಕ ವಿ.ವಿ ಯಲ್ಲಿ ಓದಬೇಕೆಂಬ ಕನಸು ಕಾಣುತ್ತಿರುತ್ತಾರೆ. ಅಮೆರಿಕರವು ಸರಾರಾತ್ಮಕ ಕ್ರಮ ವೈವಿಧ್ಯತೆಗಳ. ನೀತಿಯನ್ನು ಒಪ್ಪಿಕೊಳ್ಳುತ್ತಾರೆ. ಆದರೆ ಇವರೇ ಇಲ್ಲಿನ 'ಮೀಸಲಾತಿ' ಅಥವಾ ಸರಾರತ್ಮಕ ಕ್ರಮದ ಬಗ್ಗೆ ಕೇಳಿದಾಗ ಅಳುವುದಕ್ಕೆ ಶುರುಮಾಡುತ್ತಾರೆ. ಕೋಷ್ಟಕ ಎ ಯನ್ನು ನೋಡಿ. ಚಿಕಾಗೊ ವಿ. ವಿ. ಯು 78; ಜಾನ್ ಹಾಪ್‌ಕಿನ್ಸ್ 31, ಕೊಲಂಬಿಯಾ ವಿ. ವಿ. ಯು 72 ಶ್ರೇಷ್ಠ ವ್ಯಕ್ತಿಗಳನ್ನು ನೀಡಿದೆ. □

ಕಪ್ಪು ವಿದ್ಯಾರ್ಥಿಗಳನ್ನು ಅತ್ಯಧಿಕ ಪ್ರಮಾಣದಲ್ಲಿ ಹೊಂದಿರುವ ವೈದ್ಯಕೀಯ ಕಾಲೇಜು (2005)

ವೈದ್ಯಕೀಯ ಕಾಲೇಜು	ಬಿಟ್ಟ ವಿದ್ಯಾರ್ಥಿಗಳು	ಕರಿಯರು	ಕರಿಯರ ಶೇಕಡಾವಾರು
1) ಡ್ಯೋಕ್ ವಿಶ್ವವಿದ್ಯಾನಿಲಯ	467	70	14.98
2) ಕೇಸ್ ವೆಸ್ಟರ್ನ್ ರೊಸರ್ವ್	608	75	12.33
3) ಜಾನ್ಸ್ ಹಾಪ್‌ಕಿನ್ಸ್ ವಿ.ವಿ.	481	53	11.01
4) ಮಿಚಿಗನ್ ವಿ.ವಿ	170	18	10.58
5) ಚಿಕಾಗೊ ವಿ.ವಿ.	400	42	10.50
6)ಪಿಟ್ಸ್ ಬರ್ಗ್ ವಿ.ವಿ.	573	52	09.07
7) ಕೊಲಿಂಬಿಯಾ ವಿ.ವಿ	619	55	08.88
8) ಮೇಯೋ ವೈದ್ಯಕೀಯ ಕಾಲೇಜು	170	15	08.82
9) ಎಮ್ರೊ ವಿ.ವಿ.	453	36	07.94
10) ಅಲಿ ಬರ್ಮಿಂಗ್‌ಹ್ಯಾಂ ವಿ.ವಿ.	686	52	07.58
11 ಮೌಂಟ್ ಶಿನಾಯ್ ವೈದ್ಯಕೀಯ ಕಾಲೇಜು	483	33	06.83
12) ಟೆಕ್ಸಾಸ್ ವಿ.ವಿ.	884	60	06.78
13) ವರ್ಜಿನಿಯಾ ವಿ.ವಿ.	551	36	06.53
14) ಸ್ಟ್ಯಾನ್‌ಫೋರ್ಡ್ ವಿ.ವಿ.	459	25	05.44
15) ವಂಡರ್‌ಬಿಪ್ಟ್ ವಿ.ವಿ.	414	20	04.83
16) ಲೋಕಾ ವಿ.ವಿ.	581	21	03.61

ಮೂಲ: ಉನ್ನತ ಶಿಕ್ಷಣದಲ್ಲಿ ಕರಿಯರು ಪತ್ರಿಕೆ, 2005

ಪ್ರಮುಖ ವೈದ್ಯಕೀಯ ಕಾಲೇಜುಗಳಲ್ಲಿ ಕರಿಯರ ದಾಖಲಾತಿ ಪ್ರಮಾಣ:–

ವೈದ್ಯಕೀಯ ಕಾಲೇಜು	ದಾಖಲಾತಿ ಹೊಂದಿದ ಒಟ್ಟು ಕರಿಯ ಅಭ್ಯರ್ಥಿಗಳು(%)	ದಾಖಲಾತಿ ಹೊಂದಿದ ಒಟ್ಟು ಅಭ್ಯರ್ಥಿಗಳು (%)
ಡ್ಯೂಕ್ ವಿ.ವಿ.	– –	–
ಕೇಸ್ ವೆಸ್ಟರ್ನ್ ರಿಸರ್ವ್ ವಿ.ವಿ.	4630 448 (9.67%)	3540 (11.4%)
ಜಾನ್ ಹಾಪ್‌ಕಿನ್ಸ್ ವಿ.ವಿ	4385 247 (5.63)	362 25(6.90)
ಮೀಚಿಗನ್ ವಿ.ವಿ	4938 429 (8.68)	339 32(9.43)
ಚಿಕಾಗೊ ವಿ.ವಿ.	5619 265 (4.71)	164 28(17.07)
ಪಿಡ್ಸಬರ್ಗ್ ವಿ.ವಿ	4843 446 (9.20)	358 51(14.24)
ಕೊಲಂಬಿಯಾ ವಿ.ವಿ.	2415 151 (6.25)	187 21(11.20)
ಮೇಯೊ ವೈದ್ಯಕೀಯ ಕಾಲೇಜ್	2502 42 (1.67)	121 5(4.13)
ಎಮ್ರೊ ವಿ.ವಿ.	5052 323 (06.39)	663 38(5.73)
ಅಲಿ ಬರ್ಮಿಂಗ್‌ಹ್ಯಾಂ ವಿ.ವಿ.	1545 242 (15.66)	191 24(12.56)
ಮೌಂಟ್ ಶಿನಾಯ್ ವೈದ್ಯಕೀಯ ಕಾಲೇಜ್	4208 120 (2.85)	484 6(01.23)
ಟೆಕ್ಸಾಸ್ ವಿ.ವಿ	3010 418 (19.88)	196 32(16.32)
ವರ್ಜಿನಿಯಾ ವಿ.ವಿ	3541 140 (3.95)	290 13(04.48)
ಸ್ಟ್ಯಾನ್‌ಫೋರ್ಡ್ ವಿ.ವಿ.	5336 170 (3.18)	302 17(05.62)
ವಂಡರ್‌ಬಿಟ್ಸ್ ವಿ.ವಿ.	3741 300 (8.01)	326 20(06.13)
ಲೋವಾ ವಿ.ವಿ	2294 292 (12.72)	136 18 (13.23)

ಮೂಲ: ಉನ್ನತ ಶಿಕ್ಷಣದಲ್ಲಿ ಕರಿಯರು ಪತ್ರಿಕೆ, 2005



○ಎಲ್. ಮಹಲಿಂಗಪ್ಪ, ತಿಪಟೂರು

ಕುಲಕೆ ಕೋಡು ಹೆಗಲ ಕಂಬಳಿ
ತುಟಿಗೆ ತುಟಿಯು ಪಿಳ್ಳಂಗೋವಿ
ಬಿಸಿಲ ಹೂವು ಜಡೆಯ ಮುಡಿಗೆ
ಮೋಟು ಅರಿವೆಯ ಡಾಬು ಉಡಿಗೆ
ಗೆಳೆಯ ಬಾಳಿಗೆ ಬಿದಿರ ಕೋಲು
ಮೂಗರಿದ ಜೋಡ ಬಿಡದಕಾಲು
ಇವರೇ ನನ್ನ ಕವನ ಸಾಲು

ಬೆಳಗು-ಬೈಗು ನಡುವೆ ನೋಡು
ಕಾಡು-ಮೇಡೇ ಇವರ ಹಾಡು
ಹೊಳೆ ಬಿಸಿಲ ಬಿಸಿನೀರಿನ ಜಳಕ
ಮಳೆ ಹನಿಗಳ ಮುತ್ತಿಗೆ ಮೈಪುಳಕ
ಹಸಿರದೇವಿಯ ಉಸಿರ ಹಾಲು
ಗಾಳಿರತಿಗೆ ಒಪ್ಪಿಸಿದ ಒಡಲು
ಇವರೇ ನನ್ನ ಕವನ ಸಾಲು

ಬೈಗು-ಬೆಳಗು ನಡುವೆ ನೋಡು
ರೆಪ್ಪೆ-ಕಂಗಳ ವಿರಹ ಹಾಡು
ಜಾವ ಚಲುವೆಯ ಜೊತೆಗೆ ಸರಸ
ನಿದಿರ ದೇವಿಯ ಕೂಡ ಸರಸ
ಕುರಿಸಿರಿಗೆ ಇಡೀ ಇರುಳು ಕಾವಲು
ನೆರವಿದೆ ಇವರಿಗೆ ಚುಕ್ಕಿಯ ಸಾಲು
ಇವರೇ ನನ್ನ ಕವನ ಸಾಲು

ಚುಕ್ಕಿ ಬೆಳ್ಳಿ ನಿದ್ದೆಗಿಳಿಯುವ ವೇಳೆ
ಮಂದೆ ಮಂದಿಗದೇ ಹಗಲ ಕಹಳೆ
ಬಳಿದು ಬಾಚಿ ಸಿರಿಗಂಧ ಪಿಸಿಕೆ
ಹಿಗ್ಗುವರು ಮೂಸಿ ಮೂಸಿ ಕೈ ಮಲ್ಲಿಗೆ
ಕಳೆದು ಕೆಚ್ಚಲ ನಸಿರೆ ಸೀಲು
ಕರೆವರು ಮಡಕೆ ತುಂಬ ಹಾಲು
ಇವರೇ ನನ್ನ ಕವನ ಸಾಲು

ಗೌಡನೊಬ್ಬ ಗೂಡಿಗೆ ಹಿರಿಯ ಆಲ
ಶೂರನೊಬ್ಬ ಉದಿಗೆ ಪಾಳೆಯಗಾರ
ಮೇವುದಾಣ ತಿಳಿವ ದೂರದರ್ಶಿನಿ
ಕುರೀಕರೆವುದಲ್ಲಿಗೆ ಕೊಳಲ ದನಿ
ಕಿರುಬ ತೋಳ ಕಳ್ಳ ಬಳಿಗೆ ಬಾರರು
ಮಂದೆ ನಿಧಿಗೆ ನಾಯಿ ಸರ್ಪಗಾವಲು
ಇವರೇ ನನ್ನ ಕವನ ಸಾಲು

ಮುದ್ದು ಮೊಗದ ಮಗಳು ಕರಿಗೊದರಿ
ನೀಡುವರು ಸೊಪ್ಪಿನುಂಡೆ ತಲೆಸವರಿ
ಮಂದೆಗೆಲ್ಲ ಕಿರಿಮಗನೆ ಕೆಂಚಿ ಪರಮ
ಜಾಲಿಕಾಯ ಚಕ್ಕುಲಿ ಅದಕೆ ಸಂಭ್ರಮ
ಹಿಂಡಿಗೆಲ್ಲ ಹಿರಿಮಗನೆ ಉಂಡುಗೊದರಿ
ನೀಡುವರು ಹುರುಳಿಕಾಳ ಕಡಲೆ ಪುರಿ
ಇವರೇ ನನ್ನ ಕವನ ಸಿರಿ

ಊಡದು ಎಳಗಂದನ ಕುರಿ ಒದಿ ಮಾರಿ
ಒಯ್ಯುವರು ಒಳಲೆ ಹಾಲ ಹೆತ್ತವ್ವನಪರಿ
ಕಾಲುಸಾಗದ ಹೆಳವ ಹೊಟ್ಟೆ ಹೊತ್ತಮರಿ
ನಡೆಯುವರು ಹೆಗಲಿಗಿಟ್ಟು ಕೂಸುಮರಿ
ಕಲ್ಲೊಡನೆ ಚಲ್ಲಾಟವಾಡಿ ನೊಂದ ಕಾಲು
ಕಟ್ಟುವರು ತಾವೆ ಅರೆದು ಮದ್ದು ಹಿತ್ತಲು
ಇವರೇ ನನ್ನ ಕವನ ಸಾಲು

ವರುಷಕೆರಡು ಕೊಯ್ಲು ಮಂದೆ ಮುಡಿಗೆ
ಒಪ್ಪಿಸುವರು ಇದ್ದಲ್ಲೇ ತಿಮ್ಮಪ್ಪನ ಅಡಿಗೆ
ಚಾಡಿನೇಯುವ ನಿಪುಣ ಕುರುಬ ಜೇಡ
ಚಳಿಮಳೆಗೆ ಜಗ್ಗದು ಕಂಬಳಿ ದಡ
ಹಸುಳೆಗೆ ಕೆನೆ ಮೊಸರಿಗೆ ನೀಡಿ ಹಾಲು
ಎಸೆಯುವರು ಜಡ್ಡು ಜಾಪತ್ತಿಗೆ ಸವಾಲು
ಇವರೇ ನನ್ನ ಕವನ ಸಾಲು

ಸಾರಿಸಿ ನೆಲ ಒಲೆ ಮಡಕೆಯ ಸಾಲು
ಎರೆವರು ಜುಂಜಪ್ಪಗೆ ಮೀಸಲ ಹಾಲು
ಮಂದೆ ಕರೆದು ಕಳ್ಳೆಸುತ್ತ ರಕ್ಷಾ ಬಂಧ
ತಳಿಸುವರು ತುಳಸಿಯಿಂದ ತೀರ್ಥಗಂಧ
ಎತ್ತರಕೆ ಹಿಡಿದ ಜಾಡಿ ಬೆಟ್ಟದ ಸಾಲು
ತಗರ ನೆಗೆಸುವರು ಹನುಮಗೆ ಮೇಲು
ಇವರೇ ನನ್ನ ಕವನ ಸಾಲು

ಭೂತಪ್ಪದಿಗ್ದೇವಗೆ ದೊಡ್ಡೆಡೆಯ ತಿನಿಸಿ
ಬೆನ್ನಿಗಿದ್ದು ಕಾಯೆಂದು ಅಡ್ಡಬಿದ್ದು ನಮಿಸಿ
ಮಂದೆ ಮಕ್ಕಳ ಹಿತಕೆ ಅನುಗಾಲ ತಪಿಸಿ
ಕರಗಿದರು ಕುರಿಗಾಗಿ ಜೀವ ಜಾತ್ರೆ ಜಯಿಸಿ
ದೇಶ ಪ್ರಗತಿಗೆ ಇವರ ಕೊಡುಗೆ ಮಿಗಿಲು
ಸವಿಯಲಿಲ್ಲ ಒಮ್ಮೆಯಾದರೂ ಬೆಲ್ಲದ ಹಾಲು
ಇವರೇ ನನ್ನ ಕವನ ಸಾಲು

ಕಟ್ಟಿದ ಕಾರೇ ಗೂಡು ಚೀನದ ಗೋಡೆ
ಸುಳಿಯದಿಲ್ಲಿ ಸೂತಕದ ವೈರಿ ಪಡೆ
ತಪ್ಪಿ ನೆಡೆದರೆ ತೆತ್ತು ಮುಡುಪು ದಂಡ
ಕಟ್ಟಿಕೊಂಡರು ಕಟ್ಟು ಕಟ್ಟಳೆಯ ಖಂಡ
ಇವರ ಕುರೀಗೂಡು ನಾಡಿಗೆ ಜೇನುಗೂಡು
ತುಂಬಿದೆ ಗೂಡ ತುಂಬ ಮಂದೆಯ ಹಾಡು
ಇವರೇ ನನ್ನ ಕವನದ ಕಾಡು

ಗಾಂಧೀ ಹೆಜ್ಜೆಯ ಶೋಧ

ನೆನಪು

ಏಳು ದಶಕಗಳಿಂದ ನಿರಂತರವಾಗಿ ಇತಿಹಾಸಕಾರರು, ಕವಿಗಳು, ಸಾಹಿತಿಗಳು, ಅರ್ಥಶಾಸ್ತ್ರಜ್ಞರು, ರಾಜನೀತಿಜ್ಞರು, ರಾಜಕಾರಣಿಗಳು, ಜೀವನ ಚರಿತ್ರಕಾರರು, ಪತ್ರಿಕೋದ್ಯಮಿಗಳು, ವ್ಯಂಗ್ಯಚಿತ್ರಕಾರರು, ನಾಟಕಕಾರರು ಹೀಗೆ ಹತ್ತು ಹಲವು ನೆಲೆಗಳಿಂದ ಗಾಂಧೀಜಿಯವರ್ನು ಅವರ ಹೋರಾಟಗಳನ್ನು ಅವರವರ ಚೌಕಟ್ಟಿನಲ್ಲಿ ಸೆರೆ ಹಿಡಿಯುವ ಪ್ರಯತ್ನ ಮಾಡುತ್ತಾ ಬಂದಿದ್ದಾರೆ. 'ಬಾಪೂ' ಎಂದು ಸಂಬೋಧಿಸುವ ನೆಹರೂ ಅವರ ಬರವಣಿಗೆಗಳಿಂದ, ಗಾಂಧೀಜಿಯನ್ನು ಈ ನಾಡಿನಿಂದ ಓಡಿಸದೆ ಗುಜಾರಾತಿನಲ್ಲಿ ಅಹಿಂಸೆ ನೆಲೆಸುವುದಿಲ್ಲ ಎಂಬ ನರೇಂದ್ರ ಮೋದಿಯ ಆರ್ಭಟದವರೆಗಿನ ಅಭಿಪ್ರಾಯ ಕಾಣಬರುತ್ತವೆ. ಗಾಂಧಿ ಜಯಂತಿಯ ಸಂದರ್ಭದಲ್ಲಿ ಅವರ ಹೆಜ್ಜೆ ಗುರುತುಗಳನ್ನು ಕಂಡುಕೊಳ್ಳುವ ಪ್ರಯತ್ನ ಇಲ್ಲಿದೆ.

○ ಡಾ॥ ವಸು



ಏಳು ದಶಕಗಳಿಂದ ನಿರಂತರವಾಗಿ ಇತಿಹಾಸಕಾರರು, ಕವಿಗಳು, ಸಾಹಿತಿಗಳು, ಅರ್ಥಶಾಸ್ತ್ರಜ್ಞರು, ರಾಜನೀತಿಜ್ಞರು, ರಾಜಕಾರಣಿಗಳು, ಜೀವನ ಚರಿತ್ರಕಾರರು, ಪತ್ರಿಕೋದ್ಯಮಿಗಳು, ವ್ಯಂಗ್ಯಚಿತ್ರಕರರು, ನಾಟಕಕಾರರು ಹೀಗೆ ಹತ್ತು ಹಲವು ನೆಲಗಳಿಂದ ಗಾಂಧೀಜಿಯವರ್ನು ಅವರ ಹೋರಾಟಗಳನ್ನು ಅವರವರ ಚೌಕಟ್ಟನಲ್ಲಿ ನೆರೆಹಿಡಿಯುವ ಪ್ರಯ್ನಮಾಡುತ್ತಾ ಬಂದಿದ್ದಾರೆ. 'ಬಾಪೂ' ಎಂದು ಸಂಬೋಧಿಸುವ ನೆಹರೂ ಅವರ ಬರವಣಿಗೆಗಳಿಂದ, ಗಾಂಧೀಜಿಯಿಂದ ಈ ನಾಡಿನಿಂದ ಓಡಿಸದೆ ಗುಜಾರಾತಿನಲ್ಲಿ ಅಹಿಂಸೆ ನೆಲೆಸುವುದಿಲ್ಲ ಎಂಬ ನರೇಂದ್ರ ಮೋಧಿಯ ಆರ್ಭಟದವರೆಗಿನ ಅಭಿಪ್ರಾಯ ಕಾಣಬರುತ್ತವೆ. ಬರಹಗರನ ಉದ್ದೇಶ, ಹಿನ್ನೆಲೆ ತಿಳಿಯದೆ ಎಲ್ಲ ಪುಸ್ತಕಗಳೂ ಚರಿತ್ರೆಯೆಂದು ಸ್ವೀಕರಿಸಿದರೆ ಯಾರದೋ ಅಭಿಪ್ರಾಯವನ್ನು ನಮ್ಮದಾಗಿಸಿ ಕೊಳ್ಳುತ್ತೇವೆ.

ರಾಷ್ಟ್ರೀಯ ಹೋರಾಟದ ಸಂದರ್ಭದಲ್ಲಿ ಬಂದ ಇತಿಹಾಸಕಾರರನ್ನು ರಾಷ್ಟ್ರೀಯವಾದಿ ಇತಿಹಾಸಕಾರರೆಂದು ಗುರುತಿಸುತ್ತೇವೆ. ಈ ಬರಹಗಾರರು ರಾಷ್ಟ್ರೀಯ ಚಳವಳಿಯಲ್ಲಿ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್‌ನ ಪಾತ್ರವನ್ನು, ಪ್ರಮುಖವಾಗಿ ಪರಿಗಣಿಸುತ್ತಾರೆ. ಬ್ರಿಟಷ್ ಸಾಮ್ರಾಜ್ಯಶಾಹಿಯನ್ನು ಬಡಿದ ಏಕೈಕ ಶಕ್ತಿಯಾಗಿ ಕಾಂಗ್ರೆಸ್ ಕಾಣುವುದರಿಂದ ಅದರ ನಾಯಕತ್ವವನ್ನುವಹಿಸಿದ ಗಾಂಧೀಜಿಯವರನ್ನು ಭಾವುಕವಾಗಿ ಕಾಣುವುದರಲ್ಲಿ ಆಶ್ಚರ್ಯವಿಲ್ಲ. ಆರ್.ಸಿ.ಮಜುಂದಾರರ ಬರವಣಿಗೆಯನ್ನಿಪ್ರಮುಖವಗಿ ಉದಾಹರಿಸಬಹುದು. ಕಾಂಗ್ರೆಸ್‌ನ ಹೋರಾಟವನ್ನೇ ಜನಾಂದೋಲನವಾಗಿ ಪರಿಗಣಿಸುತ್ತಾ ಹಲವು ಸ್ಥಳದಲ್ಲಿ ನಡೆದ ಹೋರಾಟಗಳನ್ನು ಕಡೆಗಣಿಸಿರುವುದು ಈ ಬರವಣಿಗೆಳಲ್ಲಿ ಕಂಡುಬರುತ್ತದೆ. ರಾಷ್ಟ್ರೀಯತೆಯನ್ನು ಭಾವುಕವಾಗಿ ಸ್ವೀಕರಿಸಿದ ಈ ಹೋರಾಟಗಾರರಲ್ಲಿ ವೈಚಾರಿಕ ವಿಶ್ಲೇಷಣೆಯ ಕೊರತೆ ಎದ್ದು ಕಾಣುತ್ತದೆ. ಎಲ್ಲಾ ಕೊರತೆಗಳಾಚೆಗೂ ಸ್ವಾತಂತ್ರ್ಯ ಚಳವಳಿಯ ಬಗೆಗೆ ಮೊದಲು ಬಹು ದೀರ್ಘ ಅಧ್ಯಯನವನ್ನು ಮಾಡಿದ ಹೆಗ್ಗಳಿಕೆ ರಾಷ್ಟ್ರೀಯವಾದಿ ಇತಿಹಾಸಕಾರರಿಗೆ ಸಲ್ಲಬೇಕು. ಪ್ರಾಥಮಿಕ ಮಾಹಿತಿಯನ್ನು ಸಂಗ್ರಹಿಸಿ ನಿರೂಪಣಾತ್ಮಕ ವಾದ ಇತಿಹಾಸವನ್ನು ರಚಿಸಿದರು ಹಾಗೂ ಸುದೀರ್ಘಕಾಲ ಓದುಗರ ಒಪ್ಪಿಗೆಯನ್ನು ಪಡೆದ ಇತಿಹಾಸ ಇದಾಗಿದೆ.

ಗಾಂಧೀಜಿ ಮತ್ತು ರಾಷ್ಟ್ರೀಯ ಕಾಂಗ್ರೆಸ್‌ನ ಬಗೆಗೆ ಕಟುವಾದ ವಿಮರ್ಶೆ ಮಾರ್ಕ್ಸ್‌ವಾದಿ ಬರವಣಿಗೆಗಳಲ್ಲಿ ಕಂಡುಬರುತ್ತದೆ. ಇದಕ್ಕೆ ಸೈದ್ಧಾಂತಿಕ ಹಿನ್ನೆಲೆ ಪ್ರಮುಖಕಾರಣವಾಗಿತ್ತು. ಎಡಪಂಥೀಯರಾಗಿದ್ದು ರಾಷ್ಟ್ರೀಯ ಹೋರಾಟದಲ್ಲಿ ತೊಡಗಿದ್ದ ಎಂ.ಎನ್.ರಾಯ್, ನಂಬೂದರಿ ಪಾಡ್, ಆರ್.ಪಿ.ದತ್, ಎ.ಆರ್. ದೇಸಾಯ್ ಇವರಲ್ಲಿ ಪ್ರಮುಖರು. ಇವರ ವಿಚಾರಧಾರೆಗಳಲ್ಲಿ ಗಾಂಧೀಜಿ ಬೂರ್ಜ್ವಾ ಪ್ರತಿನಿಧಿಯಾಗಿ, ಆಧುನಿಕತೆ ಮತ್ತು ಕೈಗಾರಿಕೀಕರಣದ ವಿರೋಧಿಯಾಗಿ ಕಂಡುಬರುತ್ತಾರೆ. ಜಮೀನುದಾರರು ಹಾಗೂ ಬಂಡವಾಳಗಾರರ ಪರ ವಕ್ತರಾಗಿಯೂ ಟೀಕೆಗೆ ಒಳಗಾಗುತ್ತಾರರೆ. ಇಪ್ಪತ್ತನೆಯ ಶತಮಾನದ ದ್ವಿತಿಯಾರ್ಧದಲ್ಲಿ ಭಾರತದಲ್ಲಿ ತಲೆ ಎತ್ತಬಹುದಾಗಿದ್ದ ಕಮ್ಯೂಸಂ ಪೂರ್ಣ ಪ್ರಾಬಲ್ಯಕ್ಕೆ ಬಾರದಿರಲು ಗಾಂಧೀಜಿಯ ನಾಯಕತ್ವವೂ ಕಾರಣವಾಗಿತ್ತೆಂಬುದು ಒಂದು ವಾದ. ಭಾರತದ ಸಮಸ್ಯೆಗಳಿಗೆ ಮಾರ್ಕ್ಸ್‌ವಾದ ಕ್ಕಿಂತ ಭಿನ್ನವಾದ ನೆಲೆಯಲ್ಲಿ ಗಾಂಧೀಜಿ ಉತ್ತರವನ್ನು ಹುಡುಕಿದರೆಂಬುದು ವಾಸ್ತವ.

ಎಡಪಂಥೀಯ ಹೋರಾಟಗಳು ಹಾಗೂ ಕಾಂಗ್ರೆಸ್‌ನ ನಡುವೆ ಬಿಟ್ಟೂ ಬಿಡುವ ಸಂಬಂಧವಿತ್ತು. ಕಾಂಗ್ರೆಸ್‌ನ ಒಳಗೆ ಎಡಪಂಥೀಯ ಧೋರಣೆಯನ್ನು ಹೊಂದಿದ್ದ ನೆಹರೂ ಅವರಿಂದಾಗಿ ಕಾಂಗ್ರೆಸ್ ಸೋಷಿಯಲ್ ಪಾರ್ಟಿ ಹುಟ್ಟಿಕೊಂಡುದನ್ನು ಇಲ್ಲಿ ನೆನೆಯಬಹುದು ಎಡಂಥೀಯ ಹೋರಾಟದ ಹಿನ್ನೆಲೆಯಲ್ಲಿ ಚರ್ಚಿಸುವಾಗ ರಷ್ಯಾದ ನಂತರ ಅದರ ಬೆಂಬಲದಿಂದ ಭಾರತದಲ್ಲಿ ಕಮ್ಯೂನಿಸಂ ಬೆಳೆಯುವ ಎಲ್ಲಾ ಸಾಧ್ಯತೆಗಳೂ ಇದ್ದೂ ಕಮ್ಯೂನಿಸ್ಟ್ ರಾಷ್ಟ್ರವಾಗದೆ ಉಳಿದ ಕಾರಣವನ್ನು ಚಚಿಸುವಾಗ ರಾಷ್ಟ್ರೀಯ ಕಾಂಗ್ರೆಸ್‌ನ ಹೋರಾಟದ ಮುಂಚೂಣಿಯನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಕಾರ್ಮಿಕ ಮತ್ತು ರೈತ ಹೋರಾಟಗಳು ನಿರಂತರವಾಗಿದ್ದರೂ ಸಾಮ್ರಾಜ್ಯಶಾಹಿ ವಿರೋಧದ ಹೋರಾಟದಲ್ಲಿ ಎಲ್ಲವೂ ಕೈಜೋಡಿಸಿದವು. ಕಮ್ಯೂನಿಸ್ಟರ ಬರವಣಿಗೆ ಸ್ವಾತಂತ್ರ ಹೋರಾಟದ ಅಂತಿಮ ಗೆಲುವನ್ನು ಕಾರ್ಮಿಕ ರೈತ ಹೋರಾಟಗಳಲ್ಲಿ ಕಾಣುತ್ತವೆಯೇ ಹೊರತು ಗಾಂಧೀಜಿಯಲ್ಲಲ್ಲ.

ಆನಂತರ ಬಂದ ಮಾರ್ಕ್ಸ್‌ವಾದಿ ಇತಿಹಾಸ ಕಾರರನ್ನು ನವಮಾರ್ಕ್ಸ್‌ವಾದಿಗಳು ಎಂದು ಗುರುತಿಸಲಾ ಗಿದೆ. ಬಿಪಿನ್ ಚಂದ್ರ, ಆಶೀಶ್ ನಂದಿ, ಪಾರ್ಥಚಟರ್ಜಿ, ಬಿಖು ಪರೇಖ್ ಇವರ ಬರಹಗಳನ್ನು ಪ್ರಮುಖವಾಗಿ ಇಲ್ಲಿ ಅಧ್ಯಾಯನಮಾಡಬಹುದು. ಇವರು ತೀವ್ರ ವಿಶ್ಲೇಷಣಾತ್ಮಕ ಬರವಣಿಗೆಗಳ ರಚನೆಯಲ್ಲಿ ತೊಡುಗುತ್ತಾರೆ. ಅವರೇ ಹೇಳಿಕೊಳ್ಳುವಂತೆ Open endedness ನ ಕಾಯ್ದುಕೊಳ್ಳುತ್ತಾರೆ. ಗಾಂಧೀಜಿಯ ಹೋರಾಟವನ್ನು Open ended Struggle ಎಂದೇ ಕರೆದಿದ್ದಾರೆ.. ಮಾರ್ಕ್ಸ್ ಆಗಲೀ, ಗಾಂಧೀಜಿಯಾಗಲೀ ಮನುಕುಲದ ಹಿತಕ್ಕಾಗಿ ಹೋರಾಡಿದವರೆಂದು ಪರಿಗಣಿಸಿದಾಗ ಅವು ಪರಸ್ಪರ ವಿರುದ್ಧನೆಲೆಯಲ್ಲಿ ನಿಲ್ಲುವುದಿಲ್ಲ. ಅಹಿಂಸಾತ್ಮಕ ಹೋರಾಟ ಭಾರತದ ಸ್ವಾತಂತ್ರ್ಯ ವಳವಳಿಯ ವಿಧಾನವದುದರಿಂದ, ಹಾಗೆಯೇ ಕಾಂಗ್ರೆಸ್‌ನ ಎಲ್ಲ ವರ್ಗಗಳ ಹೋರಾಟವೂ ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರುದ್ಧವಾಗಿದ್ದರಿಂದ ಕಾಂಗ್ರೆಸ್‌ನ ಹೋರಟದಲ್ಲಿ ಗಾಂಧೀಜಿಯ ನಾಯಕತ್ವವನ್ನು ಅಲ್ಲಗಳೆಯಲಾಗುವುದಿಲ್ಲವೆಂದು ಒಪ್ಪಿಕೊಳ್ಳುತ್ತಾರೆ. ಒಟ್ಟಿನಲ್ಲಿ

ಮಾರ್ಕ್ಸ್‌ವಾದಿಗಳಲ್ಲಿ ಕಂಡುಬಂದ ಕಟು ವಿಮರ್ಶೆ ನವ ಮಾರ್ಕ್ಸ್‌ವಾದಿಗಳಲಿ ಕಾಣಬರುತ್ತಿಲ್ಲ.

ಕೇಂಬ್ರಿಡ್ಜ್ ಇತಿಹಾಸಕಾರರು ಭಾರತದ ಹೋರಾಟವನ್ನು ನೋಡುವ ರೀತಿಯಲ್ಲಿ ಸಾಮ್ರಾಜ್ಯಶಾಹಿಗಳ ಮನೋಭಾವನೆ ಕೆಲಸಮಾಡುತ್ತದೆ. ಗಾಂಧೀಜಿಯ ಹೋರಾಟದ ಸ್ವರೂಪವನ್ನು ವಿಮರ್ಶಿಸುತ್ತಾ ಗಾಂಧೀಜಿಯ ಅನುಯಾಯಿಗಳಲ್ಲಿ ಮೂರು ಪದರಗಳಿದ್ದವೆಂದೂ ಕರೆದಿದ್ದಾರೆ. ಅವರನ್ನು ಗುತ್ತಿಗೆದಾರರು, ಉಪ ಗುತ್ತಿಗೆದಾರರು ಕರೆಯುವ ಜುಡಿತ್ ಬ್ರೌನ್‌ರಂತಹ ಇತಿಹಾಸಕಾರರನ್ನು ಕೇಂಬ್ರಿಡ್ಜ್ ಗುತ್ತಿಗೆದಾರರೇ ಎಂದು ಭಾರತೀಯ ಚರಿತ್ರೆಕಾರರು ಪ್ರಶ್ನಿಸಿದ್ದಾರೆ. ಪ್ರತಿಷ್ಠಿತ ವರ್ಗದ ಬೆಂಬಲದಲ್ಲಿ ಗಾಂಧೀಜಿಯ ನಾಯಕತ್ವ ಉಳಿದಿತ್ತೆಂದೂ ಇವರ ಹೋರಾಟಗಳೆಲ್ಲಾ ಸ್ವಹಿತ ಸಾಧನೆಗಾಗಿ ಮಾಡಿದ ಯೋಜನೆಗಳು ಎಂದು ಹೇಳುವ ಮಾತುಗಳಲ್ಲಿ, ಇವರ ನಾಯಕತ್ವದಲ್ಲಿ ಭಾರತದಾದ್ಯಂತ ನೆಟ್‌ವರ್ಕ್ ಇತ್ತು ಎಂಬ ಮಾತುಗಳು ಸ್ಪಷ್ಟವಾಗಿ ಭಾರತದ ಬಗೆಗಿನ ತಾತ್ಸಾರರ ವ್ಯಕ್ತವಾಗುತ್ತದೆ. ವಿಮರ್ಶಿಸುತ್ತಾ ಗಾಂಧೀಜಿಯ ಅನುಯಾಯಿಗಳಲ್ಲಿ ಮೂರು ಪದರಗಳಿದ್ದವೆಂದೂ ಕರೆದಿದ್ದಾರೆ. ಅವರನ್ನು ಗುತ್ತಿಗೆದಾರರು, ಉಪ ಗುತ್ತಿಗೆದಾರರು ಕರೆಯುವ ಜುಡಿತ್ ಬ್ರೌನ್‌ರಂತಹ ಇತಿಹಾಸಕಾರರನ್ನು ಕೇಂಬ್ರಿಡ್ಜ್ ಗುತ್ತಿಗೆದಾರರೇ ಎಂದು ಭಾರತೀಯ ಚರಿತ್ರೆಕಾರರು ಪ್ರಶ್ನಿಸಿದ್ದಾರೆ. ಪ್ರತಿಷ್ಠಿತ ವರ್ಗದ ಬೆಂಬಲದಲ್ಲಿ ಗಾಂಧೀಜಿಯ ನಾಯಕತ್ವ ಉಳಿದಿತ್ತೆಂದೂ ಇವರ ಹೋರಾಟಗಳರಲ್ಲಾ ಸ್ವಹಿಸಾಧನೆಗಾಗಿ ಮಾಡಿದ ಯೋಜನೆಗಳನ್ನು ಎಂದು ಹೇಳುವ ಮಾತುಗಳಲ್ಲಿ, ಇವರ ನಯಕತ್ವದಲ್ಲಿ ಭಾರತದಾದ್ಯಂತ ನೆಟ್‌ವರ್ಕ್ಸ್ ಇತ್ತು ಎಂಬ ಮಾತುಗಳು ಸ್ಪಷ್ಟವಾಗಿ ಭಾರತದ ಬಗೆಗಿನ ತಾತ್ಸಾರ ವ್ಯಕ್ತವಾಗುತ್ತದೆ.

ಬ್ರಿಟಿಷ್ ವಿರುದ್ಧದ ಹೋರಾಟ ಒಂದು ಸಂಸ್ಥೆಯಿಂದ ಒಬ್ಬ ವ್ಯಕ್ತಿಯಿಂದ ಆಗದೆ ಹಲವು ವರ್ಗಗಳು ಅದರಲ್ಲಿ ಮುಳುಗಿದ್ದವು. ಅದರ ಸ್ಪಷ್ಟ ಚಿತ್ರಣ ಸಿಗಬೇಕಾದರೆ ಭಾರತದ ಸಮಾಜವನ್ನು ಹಲವು ಎಳೆಗಳಾಗಿ ಬಿಡಿಸಬೇಕಾಗುತ್ತದೆ. ರೈತರು, ಗುಡ್ಡಗಾಡು ಜನರು, ಕಾರ್ಮಿಕರು, ಮಾಧ್ಯಮ ವರ್ಗ, ರಾಷ್ಟ್ರೀಯ-ಕಾಂಗ್ರೆಸ್ ಇವು ವಿಭಿನ್ನ ಸ್ವರೂಪದಲ್ಲಿ ನಡೆಸಿದ ಹೋರಾಟದ ಅಧ್ಯಯನ ಮಾಡಬೇಕಾಗುತ್ತದೆ. ಸಮಾಜದ-ಕಡೆಗಣಿಕರ-ಹೋರಾಟವನ್ನು ಬೆಳಕಿಗೆ ತರುವ ಪ್ರಯತ್ನವನ್ನು ಮಾಡಿದವರು Subaltern Studies ನ ಇತಿಹಾಸಕಾರರು. ಇವರು ಇತಿಹಾಸ ಬರವಣಿಗೆಗೆ ಒಂದು ಹೊಸ ತಿರುವನ್ನು ನೀಡಿದರು. ರಣಜಿತ್ ಗುಹಾ ಅವರ ನೇತೃತ್ವದಲ್ಲಿ ಆರಂಭವಾದ ಈ ಚಿಂತನೆಗೆ ಹಲವು ಲೇಖಕರು ತಮ್ಮ ಕೊಡುಗೆಯನ್ನು ನೀಡಿದ್ದಾರೆ. ಜನರ ಇತಿಹಾಸವನ್ನು ಬರೆಯುವಾಗ ಕಂಡ ಒಳನೋಟಗಳು ಮಾರ್ಕ್ಸ್ ಚಿಂತನೆಗಿಂತ ಪೂರ್ಣದೂರವಾಗಿಯೂ ನಿಲ್ಲುವುದಿಲ್ಲ. ಹೋರಾಟ ನಾಯಕರಿಂದ ಆರಂಭವಾಗದೆ, ಆರಂಭವಾದ ಜನಾಂದೋಲನಗಳಿಗೆ ಹೇಗೆ ನಾಯಕರು ತಲೆದೋರಿದರೆಂಬ ಗ್ರಹಿಕೆ ಅವರದಾಗಿದೆ. ಈ ಸಂಪುಟಗಳಲ್ಲಿ ರೈತ ದಂಗೆಗಳ ಬಗೆಗೆ ಬರೆಯುತ್ತಾ ಗಾಂಧೀಜಿಯ ನಾಯಕತ್ವದ ವಿಶ್ಲೇಷಣೆ ಕಂಡುಬರುತ್ತದೆ. ಅದೇ ಸಂದರ್ಭದಲ್ಲಿ ರೈತ ಹೋರಾಟಕ್ಕೆ ಅವರ ಬದ್ಧತೆಯ ಬಗ್ಗೆ ಅನುಮಾನವನ್ನು ವ್ಯಕ್ತಪಡಿಸುತ್ತಾರೆ. ಏಕೆಂದರೆ ಜಮೀನುದಾರರು ಮತ್ತು ರೈತರ ನಡುವಿನ ಹೋರಾಟಕ್ಕಿಂತ ಗಾಂಧೀಜಿಗೆ ಬ್ರಿಟಿಷ್ ವಿರುದ್ಧದ ಹೋರಾಟವೇ ಮುಖ್ಯವಾಗಿತ್ತು.

ಶಾಂತಿ ಧೂತ

ಹೂದಳಗಳಂಚಿನ ಇಬ್ಬನಿ
-ಯೊಳಗಿಂದ ಸೂಸುವ
ಮಳೆ ಬಿಲ್ಲ ಬಣ್ಣ;
ಬಾನಂಗಳದಲಿ ಸುಂದರ
ರಂಗೋಲಿ ಪಾತರ
-ಗಿತ್ತಿಗಳ ಬೇಲಿ
ಬಾನಾಡಿಗಳ ಬಾನುಲಿ।

ಭುವಿಯಿಂದ ಬಾನೆಡೆಗೆ
ಶರಧಿ ದಿಗಂತಗಳ
ಬೆಸೆದು; ಹೊಂಗಿರಣಗಳ
ತಂಪೆರೆದು ಸಂಬಂಧಗಳ
ಹೊಸೆದು ನಿಸರ್ಗ-
ದೊಡಲನರಸುವ
ಚಿಲಿಪಿಲಿ ಸಂಕುಲ।

ಧರಣಿಯಪ್ಪುಗೆಯ
ಅಂಬರ ಚುಂಬನದ
ಸ್ವಚ್ಛಂದ ಹಾರಾಟ;

ಎತ್ತ ಸಾಗಿದರೇನು
ಹೊತ್ತು ಸಂದೇಶ?
ಇಳೆಯನರಿತ ಇಹ
ಪರದ ಕುಲ।

ಮೇರುಗಳಾಚೆಗಿನ
ಒಡಲ ಕುಡಿ
ಚಿಂವ್ ಗುಡುವಾಗ;
ಹರಿದ್ವರ್ಣ ತವರು
ಕೈ ಬೀಸಿ ಕರೆದಾಗ
ಅಂಬರದಿ ಸವಿಗಾನ
ಎತ್ತ ತನು-ಎತ್ತ ಮನ?

ವಿಶ್ವಮಾನವರಿಲ್ಲೆನಿತು?
ಅತ್ತ ಬಾನಲ್ಲಿ ತಾರಾ
ಮಂಡಲದಲ್ಲಿ ರವಿ
ಚಂದ್ರರ ಮಡಿಲಲ್ಲಿ;
ಶಾಂತಿ ವಾಹಕರಾಗಿ
ಅನಿಕೇತನರಾಗಿ
ಅದಮ್ಯ ಚೇತನವಾಗಿ।

○ ನಾ. ದಿವಾಕರ

ಇವರಲ್ಲದೆ ಮಹಾತ್ಮನ ಜೀವನ ಚರಿತ್ರೆಕಾರರಾದ ಲೂಯಿ ಫಿಷರ್, ಪ್ಯಾರೆಲಾಲ್, ತೆಂಡೂಲ್ಕರ್, ಬಿ. ಆರ್ ನಂದ ಗಾಂಧೀಜಿಯ ಹಿನ್ನೆಲೆಯಲ್ಲಿ ನಿಂತು ಸ್ವಾತಂತ್ರ್ಯ ಚಳವಳಿಯನ್ನು ಪರಿಶೀಲಿಸಿರುವ ರೀತಿಯಾಗಲೀ, ಸಮಗ್ರ-ಹೋರಾಟದಲ್ಲಿ ಗಾಂಧೀಜಿಯವರೊಬ್ಬರನ್ನೇ ಬೇರ್ಪಡಿಸುವ ರೀತಿಯಾಗಲೀ ತನ್ನದೇ ಆದ ಇತಿಮಿತಿಯನ್ನು ಹೊಂದಿರುತ್ತದೆ. ಕೆಲವೊಮ್ಮೆ ವೈಭವಿಕರಣಗೊಳ್ಳುತ್ತಾ, ಕೆಲವೊಮ್ಮೆ ಆರಾಧನಾ ಮಟ್ಟವನ್ನು ತಲುಪುವುದನ್ನು ಕಾಣಬಹುದು. ಹಾಗೆಯೇ ಅವರನ್ನು ಖಂಡಿಸಲಾಗಿಯೇ ಬರೆದ ಜೀವನ ಚರಿತ್ರೆಗಳು ಇರುವುದೂ ಸೋಜಿಗವಲ್ಲ.

ಕೋಮುವಾದಿಗಳ ಗುಂಡಿಗೆ ಬಲಿಯಾದ ಗಾಂಧೀಜಿ ಅವರ ಬರವಣಿಗೆಗಳಲ್ಲಿ ಖಳನಾಯಕರಾಗಿ ಬಿತ್ತಿತವಾಗುತ್ತಾರೆ. ನರೇಂದ್ರ ಮೋದಿ ಗಾಂಧೀಜಿಯನ್ನು ಗುಜರಾತಿನಿಂದ ಓಡಿಸದೆ ಹಿಂಸೆ ನಿಲ್ಲುವುದಿಲ್ಲ ಎಂಬ ಮಾತು ಬಿಟ್ಟು ಆರ್.ಎಸ್. ಎಸ್ ಧೋರಣೆಯನ್ನು ಸೂಚಿಸುತ್ತದೆ. ಕಾಂಗ್ರೆಸ್ ಪಕ್ಷದಲ್ಲಿ ಇದ್ದಾಗಲೂ ಇಲ್ಲದಿದ್ದಾಗಲೂ ಅದರ ನಾಯಕರಾಗಿದ್ದರು. ಆದರೆ ಕಾಂಗ್ರೆಸ್ ಮತ್ತು ಗಾಂಧೀ ಅಭಿಪ್ರಾಯಗಳು ಒಂದೇ ಅಲ್ಲ. ಹೊರನೋಟಕ್ಕೆ ಕಾಂಗ್ರೆಸ್‌ನ ಅಭಿಪ್ರಾಯವೆಲ್ಲ ಗಾಂಧೀಜಿಯ ಹೇಳಿಕೆಯಾಗಿ ಕಾಣುತ್ತದೆ.ವಾಸ್ತವದಲ್ಲಿ ಯಾವುದು ಗಾಂಧೀಜಿಗೆ ಬದ್ಧತೆಯಾಗಿತ್ತೋ ಅದು ಕಾಂಗ್ರೆಸ್‌ಗೆ 'ನೀತಿ' ಮಾತ್ರವಾಗಿರುತ್ತಿತ್ತು. ಯಾವುದು ಗಾಂಧೀಜಿಯ ಬದುಕಿನ ತತ್ವವಾಗಿತ್ತೋ ಅದು ಕಾಂಗ್ರೆಸ್‌ಗೆ ಅನಿವಾರ್ಯವಾದ ಕಾರ್ಯಯೋಜನೆಯಾಗಿತ್ತು. ಕಾಂಗ್ರೆಸ್‌ನ ಸದಸ್ಯತ್ವದಿಂದ ಹೊರ ಉಳಿದಿದ್ದಾಗಲೂ ಗಾಂಧೀಜಿಯ ಸಲಹೆಗಳನ್ನು High Command ಸಲಹೆಯಂತೆ ಸ್ವೀಕರಿಸಲಾಗುತ್ತಿತ್ತು. ಗಾಂಧೀಜಿಯ ನಾಯಕತ್ವಕ್ಕೆ ತಲೆಬಾಗಿ ಎಷ್ಟೋಬಾರಿ ಕಾಂಗ್ರೆಸ್ ಹೋರಾಟವನ್ನು ಕೈಗೆತ್ತಿಕೊಳ್ಳುತ್ತಿತ್ತು.

ಗಾಂಧೀಜಿಯನ್ನು ವೈಯಕ್ತಿಕವಾಗಿ ಇಷ್ಟಪಟ್ಟವರು, ಆರಾಧಿಸಿದವರು, ನಿಕಟವರ್ತಿಗಳೆಲ್ಲಾ ಅವರ ಸಿದ್ಧಾಂತಗಳನ್ನು ಒಪ್ಪಿಕೊಂಡವರಾಗಲಿಲ್ಲ. ಜವಾಹರ ಲಾಲ್ ನೆಹರೂ ಅವರೇ ಅದಕ್ಕೆ ಉತ್ತಮ ನಿದರ್ಶನ. ಗಾಂಧೀಜಿಯ ಉತ್ತರಾಧಿಕಾರಿಗಳೆನಿಸಿಕೊಳ್ಳುತ್ತಾ ಅವರ ನಿಕಟವರ್ತಿಗಳಾಗಿದ್ದರೂ, ಸೈದ್ಧಾಂತಿಕವಾಗಿ ಭಿನ್ನ ನೆಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಕಾಂಗ್ರೆಸ್‌ನ ಹಿನ್ನೆಲೆಯ ಬರವಣಿಗೆಗಳನ್ನು ಈ ಹಿನ್ನೆಲೆಯಲ್ಲಿ ಗಮನಿಸಬೇಕಾಗುತ್ತದೆ.

ಗಾಂಧೀಜಿಯವರನ್ನು ಅವರ ಸಿದ್ಧಾಂತವನ್ನು ನೇರವಾಗಿ ವಿರೋಧಿಸಿದವರಲ್ಲಿ ಸುಭಾಷ್ ಚಂದ್ರ ಬೋಸ್, ಅಂಬೇಡ್ಕರರು ಪ್ರಮುಖರು ಅಂಬೇಡ್ಕರರ ದಲಿತರ ಸಮಸ್ಯೆಯನ್ನು ನೊಂದನೆಲೆಯಲ್ಲಿ ಗಮನಿಸುವುದಕ್ಕೂ ಗಾಂಧೀಜಿಯವರ ಅನುಕಂಪದ ನೆಲೆಗೂ ನಡುವಿನ ವಾಗ್ವಾದವೆಂದು ಸ್ವೀಕರಿಸಬೇಕಾಗಿದೆ. ಗಾಂಧೀಜಿಯವರ ರಾಷ್ಟ್ರೀಯತೆಗಾಗಿ ಹೋರಾಟ ಹಾಗೂ ಅಂಬೇಡ್ಕರರ ಮಾನವ ವಿಮೋಚನೆಗಾಗಿ ನಡೆಸಿದ ಹೋರಾಟಗಳೆರಡೂ ಭಾರತದ ಚಾರಿತ್ರಿಕ ಸತ್ಯಗಳು ಹಾಗೂ ಮನ್ನಿಸಲೇಬೇಕಾದ ಹೋರಾಟಗಳಾಗಿವೆ. ಅಂಬೇಡ್ಕರ್ ವಾದಿಗಳಾಗಿ ಗಾಂಧೀಜಿಯ ಟೀಕಾತ್ಮಕ ಬರವಣಿಗೆಗಳನ್ನು ಗಮನಿಸಿದೆ, ಬ್ರಿಟಿಷ್ ದಾಸ್ಯದ ವಿರೋಧದ ಹೋರಾಟ ಎಷ್ಟು ಮುಖ್ಯವಾಗಿತ್ತೋ ಭಾರತದ ಜಾತಿ ವ್ಯವಸ್ಥೆಯ ಒಳಗಿನ ದಾಸ್ಯದ ವಿಮೋಚನೆಯೂ ಅಷ್ಟೇ ಮುಖ್ಯವಾಗಿತ್ತು ಎಂಬ ಸ್ವೀಕೃತಿಯನ್ನು ಮತ್ತಷ್ಟು ಸ್ಪಷ್ಟಪಡಿಸಿಕೊಳ್ಳಬೇಕಾಗಿದೆ. ಗಾಂಧೀಜಿಯವರು ತಮ್ಮನ್ನು ತಾವು ಆತ್ಮಕಥೆಯಲ್ಲಿ ಹೇಳಿಕೊಳ್ಳುವ ಪ್ರಯತ್ನ ಮಾಡಿದ್ದಾರೆ. ಈ ಎಲ್ಲ ವಿಭಿನ್ನ ನೆಲೆಗಳಿಂದ ಬಂದ ಬರವಣಿಗೆಗಳನ್ನು ನೋಡಿದ ನಂತರವೂ ಕಾಲ ಘಟ್ಟದ ಹಿನ್ನೆಲೆಯಲ್ಲಿ ತಾವು ನಿಂತನೆಲೆಯಲ್ಲಿ ಗಾಂಧೀಜಿಯವರನ್ನು ನೋಡುವ ಪ್ರಯತ್ನ ನಿರಂತರ ನಡೆಯುತ್ತಾ ಸಾಗಬೇಕಾಗಿದೆ. □

ಆಧುನಿಕ ಕನ್ನಡದ ಮೊದಲ ದಲಿತ ಕವಿ, ನಾಟಕಾರ ಡಿ.ಗೋವಿಂದದಾಸ್

ಆದರ್ಶ

ಅಪ್ಪಟ ಗಾಂಧಿವಾದಿಗಳಾಗಿದ್ದ ಗೋವಿಂದ ದಾಸ್ ಅವರಿಗೆ ದೇಶಿ ಸಂಸ್ಕೃತಿಯ ಬಗ್ಗೆ ತುಂಬು ಅಕ್ಕರೆಯಿತ್ತು. ಸ್ವತಃ ಕೋಲಾಟದ ಕಲಾವಿದರು, ಸೊಗಸಾದ ಹಾಡುಗಾರರು ಆಗಿದ್ದ ಇವರು ಜನಪದ ಕಲೆಗಳ ಮಹತ್ವದ ಬಗೆ ಸ್ಪಷ್ಟ ಅರಿವಿದ್ದವರಾಗಿದ್ದರು. ಸರಳ ಸ್ವಚ್ಛ ಹಾಗೂ ಪ್ರಾಮಾಣಿಕ ವ್ಯಕ್ತಿತ್ವಕ್ಕೆ ಹೆಸರಾಗಿದ್ದ ಗೋವಿಂದದಾಸ್ ಅವರು ಈ ಸಮಾಜ ದಲ್ಲಿರುವ ಅಸಮಾನತೆ, ಶೋಷಣೆಯ ವಿರುದ್ಧ ಎತ್ತುತ್ತಿದ್ದ ಧ್ವನಿಗಳು ಹಾಗೂ ನಾಡು, ನುಡಿ, ಸಂಸ್ಕೃತಿಯ ಬಗ್ಗೆ ತಮಗಿದ್ದ ಕಾಳಜಿ ಮುಂತಾದುವುಗಳನ್ನೆಲ್ಲ ತಮ್ಮ ಕಾವ್ಯದ ವಸ್ತುವನ್ನಾಗಿಸಿಕೊಂಡಿರುವುದು ಒಂದು ವಿಶೇಷ ಎನಿಸುತ್ತದೆ. ಕನ್ನಡ ನಾಡು ನುಡಿ ಸಂಸ್ಕೃತಿ ಹಾಗೂ ಸಮಾಜ ಸುಧಾರಣೆಗೆ ತಮ್ಮದೇ ಆದ ಕೊಡುಗೆಯನ್ನು ನೀಡಿರುವುದು ತುಂಬ ಮಹತ್ವದ ಸಂಗತಿ ಆಗಿದೆ.

ಂಡಾ.ಎಂ.ಎಸ್.ಶೇಖರ್

ಡಿ. ಗೋವಿಂದದಾಸ್ ಅವರು ನಮ್ಮ ಆಧುನಿಕ ಕನ್ನಡ ಸಾಹಿತ್ಯದ ಮೊದಲ ದಲಿತ ಕವಿ ಹಾಗೂ ನಾಟಕಕಾರರು. ಅಪ್ಪಟ ಗಾಂಧಿವಾದಿಗಳಾಗಿದ್ದ ಗೋವಿಂದದಾಸ್ ಅವರಿಗೆ ದೇಶಿ ಸಂಸ್ಕೃತಿಯ ಬಗ್ಗೆ ತುಂಬು ಅಕ್ಕರೆಯಿತ್ತು. ಸ್ವತಃ ಕೋಲಾಟದ ಕಲಾವಿದರು, ಸೊಗಸಾದ ಹಾಡುಗಾರರು ಆಗಿದ್ದ ಇವರು ಜನಪದ ಕಲೆಗಳ ಮಹತ್ವದ ಬಗೆ ಸ್ಪಷ್ಟ ಅರಿವಿದ್ದವರಾಗಿದ್ದರು. ಸರಳ ಸ್ವಚ್ಛ ಹಾಗೂ ಪ್ರಾಮಾಣಿಕ ವ್ಯಕ್ತಿತ್ವಕ್ಕೆ ಹೆಸರಾಗಿದ್ದ ಗೋವಿಂದದಾಸ್ ಅವರು ಈ ಸಮಾಜದಲ್ಲಿರುವ ಅಸಮಾನತೆ, ಶೋಷಣೆಯ ವಿರುದ್ಧ ಎತ್ತುತ್ತಿದ್ದ ಧ್ವನಿಗಳು ಹಾಗೂ ನಾಡು, ನುಡಿ, ಸಂಸ್ಕೃತಿಯ ಬಗ್ಗೆ ತಮಗಿದ್ದ ಕಾಳಜಿ ಮುಂತಾದುವುಗಳನ್ನೆಲ್ಲ ತಮ್ಮ ಕಾವ್ಯದ ವಸ್ತುವನ್ನಾಗಿಸಿಕೊಂಡು, ಅಭಿವ್ಯಕ್ತಿ ಮಾಧ್ಯಮವನ್ನಾಗಿಸಿಕೊಂಡಿರುವುದು ಒಂದು ವಿಶೇಷ ಎನಿಸುತ್ತದೆ. ಅಸ್ಪೃಶ್ಯ ಕುಟುಂಬದಲ್ಲಿ ಜನಿಸಿದ ಪ್ರತಿಭಾನ್ವಿತರಾದ ಗೋವಿಂದ ದಾಸ್ ಅವರಿಗೆ, ಆ ಕಾಲದಲ್ಲಿ ಯಾವುದೇ ಬಗೆಯ ಸಹಜವಾದ ಬೆಂಬಲ, ಪ್ರೋತ್ಸಾಹಗಳು ಇರಲಿಲ್ಲ. ಆದರೂ ನಿರಂತರವಾದ ತಮ್ಮ ಪರಿಶ್ರಮದಿಂದಲೆ ಬಹುಮುಖಿ ಕಾಳಜಿಯಿಂದ, ಸಾಧನೆಗೈಯುತ್ತ, ಕನ್ನಡ ನಾಡು, ನುಡಿ, ಸಂಸ್ಕೃತಿ ಹಾಗೂ ಸಮಾಜ ಸುಧಾರಣೆಗೆ ತಮ್ಮದೇ ಆದ ಕೊಡುಗೆಯನ್ನು ನೀಡಿರುವುದು ತುಂಬ ಮಹತ್ವದ ಸಂಗತಿ ಆಗಿದೆ.

ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲೋಕಿನ, ದಮ್ಮನಿಂಗಳ ಇವರ ಹುಟ್ಟೂರು. ಇದು ವಿಶ್ವವಿಖ್ಯಾತ ಶ್ರವಣಬೆಳಗೊಳಕ್ಕೆ ಸುಮಾರು ನಾಲ್ಕು ಮೈಲು ದೂರದಲ್ಲಿದೆ. ಸಾಂಸ್ಕೃತಿಕವಾಗಿ ತುಂಬ ವಿಶಿಷ್ಟವಾದ ದಮ್ಮನಿಂಗಳದಲ್ಲಿ ಜನಪದ ಕಲಾವಿದರ ಒಂದು ಪಡೆಯೆ ಇದೆ. ಇಂತಹ ಊರಿನ ಕೆಂಪಮ್ಮ-ದಾಸಪ್ಪ ದಂಪತಿಗಳ ಮಗನಾಗಿ ಗೋವಿಂದದಾಸರು ೧೯೧೦ರಲ್ಲಿ ಜನಿಸಿದರು. ಆ ಕಾಲಕ್ಕೆ ಕಿಕ್ಕೇರಿ, ಕೆ.ಆರ್.ಪೇಟೆ, ಮೈಸೂರು ಮುಂತಾದ ಕಡೆಗಳಲ್ಲಿ ದಾಸಪ್ಪ ಅವರು ಚರ್ಮದ ವ್ಯಾಪಾರಿಯಾಗಿ ಹೆಸರಾಗಿದ್ದರು. ಇವರದು ಧಾನ, ಧರ್ಮ, ನ್ಯಾಯ ನಿಷ್ಠೆಗೆ ಹೆಸರಾದ ಸಂಪ್ರದಾಯಸ್ಥ ಮನೆತನ, ತಮ್ಮ ಮಗ ಈ ವ್ಯಾಪಾರದ ಲೆಕ್ಕ ಇಟ್ಟುಕೊಳ್ಳುವಷ್ಟು ಕಲಿತುಕೊಂಡರೆ ಸಾಕು ಎಂಬ ತೃಪ್ತಿ ದಾಸಪ್ಪನವರಿಗೆ. ಆದರೆ ಮಗನಿಗೆ ಓದುವ ಆಸಕ್ತಿ ಹಾಗಾಗಿ ಗೋವಿಂದದಾಸರು ಶ್ರವಣಬೆಳಗೊಳಕ್ಕೆ ಕದ್ದು ಬಂದು ಶಾಲೆಗೆ ಸೇರಿದರು. ದುರಂತದ ಸಂಗತಿ ಎಂದರೆ, ಇಲ್ಲಿ ಓದುತ್ತಿರುವಾಗಲೆ ಊರಿಗೆ ಬೆಂಕಿರೋಗ ಬಂದು ಇವರ ತಾಯಿ-ತಂದೆಗಳಿಬ್ಬರು ಈ ರೋಗಕ್ಕೆ ತುತ್ತಾಗಿ ಒಂದೇ ದಿನ ತೀರಿಕೊಂಡದ್ದು. ಆಗ ಇವರ ತಾತ [ತಾಯಿಯ ತಂದೆ] ದೊಡ್ಡ ಚಿಕ್ಕಯ್ಯನವರು ತಮ್ಮ ಊರಾದ ಜಿನ್ನೇನಹಳ್ಳಿಗೆ [ಹಿರಿಶಾವೆ ಹೋಬಳಿ, ಚನ್ನರಾಯಪಟ್ಟಣ ತಾಲೋಕು] ಕರೆತಂದರು. ಅಲ್ಲಿಯ ಪ್ರಾಥಮಿಕ ಶಾಲೆಗೆ ಸೇರಿಸಿದರು. ಇವರು ಧೈವಭಕ್ತರು ಪರೋಪಕಾರಕ್ಕೆ ಹೆಸರಾದವರು. ಮೊಮ್ಮಗನನ್ನು ಪ್ರತಿಸಂಜೆ ಕೂರಿಸಿಕೊಂಡು, ರಾಮಾಯಣ-ಮಹಾಭಾರತ ಕತೆಗಳನ್ನು ಹೇಳುತ್ತಿದ್ದರಂತೆ. ಜೊತೆಗೆ ಪ್ರತಿ ಶನಿವಾರ ಮನೆಯಲ್ಲೆ ಹರಿಕಥೆ ಮತ್ತು ಭಜನೆಗಳು ನಡೆಯುತ್ತಿದ್ದವು. ಬಾಲಕ ಗೋವಿಂದದಾಸ್ ಅವರ ಮನಸ್ಸಿನ ಮೇಲೆ ಈ ಎಲ್ಲ ಪ್ರಭಾವಗಳು ಬೀರುತ್ತಿದ್ದವು. ಇಂತಹ ಪರಿಸರದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿದ ಗೋವಿಂದದಾಸರು, ಮಾಧ್ಯಮಿಕ ಶಿಕ್ಷಣಕ್ಕಾಗಿ, ಶ್ರೀನಾಲ್ವಡಿ ಕೃಷ್ಣರಾಜ ಒಡೆಯರು ತುಮಕೂರಿನಲ್ಲಿ ಬಡಮಕ್ಕಳಿಗಾಗಿ ತೆರೆದಿದ್ದ ನರಸಿಂಹರಾಜ ವಸತಿಶಾಲೆಯನ್ನು ಸೇರಿದರು. ಹರಿಕಥೆ ಮತ್ತು ಭಜನೆಯ ಹಾಡುಗಳನ್ನು ತುಂಬ ಸೊಗಸಾಗಿ ಹಾಡುತ್ತಿದ್ದ ದಾಸರು, ಇಲ್ಲಿನ ಗುರುವೃಂದದ ಪ್ರೀತಿಗೆ ಪಾತ್ರರಾಗುತ್ತಾರೆ. ಜೊತೆಗೆ ಗುರುಗಳು ಪಾಠ ಮಾಡುತ್ತಿದ್ದ ಕಾವ್ಯವನ್ನು ಆಸಕ್ತಿಯಿಂದ ಕೇಳಿ, ಅದನ್ನು ತುಂಬ ಸೊಗಸಾಗಿ ಹಾಡುತ್ತಿದ್ದರಂತೆ. ಆ ಕಾಲಕ್ಕೆ ಕವನ ಬರೆಯುವ ಹವ್ಯಾಸವನ್ನಿಟ್ಟುಕೊಂಡಿದ್ದ ಗೋವಿಂದದಾಸರು ತಾವು ಬರೆದ ಕವನಗಳನ್ನೆಲ್ಲ ಗೌಪ್ಯವಾಗಿಯೆ ಇಟ್ಟುಕೊಳ್ಳುತ್ತಿದ್ದರಂತೆ. ಒಂದು ಬಗೆಯ ಅಂತರ್ಮುಖಿ ವ್ಯಕ್ತಿತ್ವದ ಗೋವಿಂದದಾಸರಿಗೆ, ಶಾಲೆ ವಾತಾವರಣ ಎಷ್ಟೇ ಹಿತವಾಗಿದ್ದರೂ, ಬಾಲ್ಯದಲ್ಲಿಯ ತಾಯಿ-ತಂದೆಗಳಿಬ್ಬರನ್ನು ಕಳೆದುಕೂಂಡ ತಬ್ಬಲಿತನ ಕಾಡುತ್ತದೆ.

ಈ ವಯಸ್ಸಿಗೆ ಹಲವು ಬಗೆಯ ಕಷ್ಟಗಳನ್ನು ಅನುಭವಿಸಿದ ಗೋವಿಂದ ದಾಸರು ಅಸ್ಪೃಶ್ಯತೆಯ ಕಹಿ ಅನುಭವಗಳನ್ನೆಲ್ಲ ಮೂಕ ವೇದನೆಯಿಂದ ಅನುಭವಿಸುತ್ತಾರೆ.

ವಿದ್ಯಾರ್ಥಿದೆಸೆಯಿಂದಲೆ ಗಾಂಧೀಜಿಯವರ ಅಸ್ಪೃಶ್ಯತಾ ನಿವಾರಣ ಸುಧಾರಣಾ ಕೆಲಸಗಳು, ಸ್ವದೇಶಿ ಆಂದೋಲನ, ಸ್ವಾತಂತ್ರ್ಯ ಚಳುವಳಿ ಮುಂತಾದ ವಿಚಾರಧಾರೆಗಳಿಂದ ತುಂಬ ಗಂಭೀರವಾಗಿ ಪ್ರಭಾವಿತರಾಗುವ ಗೋವಿಂದದಾಸ್ ಅವರು, ಈ ಸಾಂಪ್ರದಾಯಿಕ ಶಿಕ್ಷಣದ ಬಗ್ಗೆ ಆಸಕ್ತಿಯನ್ನು ಕಳೆದುಕೊಂಡು ಅಲ್ಲಿ ಫೇಲಾಗುತ್ತಾರೆ ಹಾಗಾಗಿ ತುಮಕೂರನ್ನು ಬಿಟ್ಟು ಚಿಕ್ಕಮಗಳೂರಿನ ನರಸಿಂಹರಾಜ ವಸತಿ ಶಾಲೆಯನ್ನು ಸೇರುತ್ತಾರೆ. ಈ ವ್ಯಾಸಂಗದ ಅವಧಿಯಿಂದಲೂ ಸಮಾಜ ಸುಧಾರಣೆ ಮತ್ತು ಬರಹದಗೀಳನ್ನು ಹಚ್ಚಿಕೊಂಡಿದ್ದ ಇವರು ತಾವು ಬರೆದಿದ್ದ ಕವಿತೆಗಳನ್ನು ಅಲ್ಲಿಯೆ ಇದ್ದ ಮಾಸ್ತಿ ವೆಂಕಟೇಶ್ ಅಯ್ಯಂಗಾರರಿಗೆ ತೋರಿಸಿ, ಅವರಿಂದ ಪ್ರೋತ್ಸಾಹ ಸಿಕ್ಕಿ ಇನ್ನಷ್ಟು ಉತ್ಸಾಹದಿಂದ ಬರೆಯುತ್ತಾರೆ. ಜೊತೆಗೆ ಆ ಕಾಲಕ್ಕಾಗಲೆ ಕನ್ನಡ ನಾಡು, ನುಡಿಯ ಬಗ್ಗೆ ಜಾಗೃತಿಯನ್ನು

ಮೂಡಿಸುತ್ತ ಹೆಸರಾಗಿದ್ದ ಕವಿ ಬಿ.ಎಂ. ಶ್ರೀಕಂಠಯ್ಯ ಅವರನ್ನು ಭೇಟಿಯಾಗಿ, ತಮ್ಮ ಕವನಗಳನ್ನು ತೋರಿಸಿ ಅವರಿಂದಲೂ ಉಪಯುಕ್ತ ಸಲಹೆಗಳನ್ನು ಪಡೆದು ಕೊಂಡು ಗಂಭೀರವಾಗಿ ಕಾವ್ಯಕೃಷಿಯಲ್ಲಿ ತೊಡಗುತ್ತಾರೆ. ೧೯೩೦ರಲ್ಲಿ ಪ್ರಕಟವಾಗಿರುವ ತಮ್ಮ "ಹರಿಜನಾಭ್ಯುದಯ" ಕವನಸಂಕಲನದ ವಿಜ್ಞಾಪನೆಯಲ್ಲಿ ಪ್ರೋತ್ಸಾಹಿಸಿದ ಈ ಲೇಖಕರನ್ನೆಲ್ಲ ಗೌರವದಿಂದ ನೆನೆಸಿಕೊಂಡಿದ್ದಾರೆ.

ಮಾಧ್ಯಮಿಕ ಶಿಕ್ಷಣವನ್ನು ಚಿಕ್ಕಮಗಳೂನಲ್ಲಿ ಮುಗಿಸಿದ ನಂತರ ಆರ್ಥಿಕವಾಗಿ ತೊಂದರೆಯಲ್ಲಿದ್ದ ಗೋವಿಂದದಾಸರು, ಚಿಕ್ಕಮಗಳೂರು ಜಿಲ್ಲೆಯಲ್ಲಿ ಸ್ವಲ್ಪ ದಿನಗಳು ಶಾಲಾ ಶಿಕ್ಷಕರಾಗಿ ಕೆಲಸ ಮಾಡುತ್ತಾರೆ. ಅಲ್ಲಿಯೂ ಕೊಡ ಅಸ್ಪೃಶ್ಯತೆಯ ಅಪಮಾನವನ್ನು ಅನುಭವಿಸಿ ಕೆಲಸಕ್ಕೆ ರಾಜೀನಾಮೆ ನೀಡುತ್ತಾರೆ ಆಗ ಮಾಸ್ತಿಯವರು ಸರ್ಕಾರಿ ಕೆಲಸದಲ್ಲಿಯೆ ಮುಂದುವರಿಯುವಂತೆ ಸಲಹೆ ನೀಡುತ್ತಾರೆ ಆಗ ಗೋವಿಂದದಾಸರು 'ನನಗೆ ಸರ್ಕಾರಿ ಕೆಲಸ ಬೇಡ, ನಾನು ಭಾಷೆ ಮತ್ತು ಸಮಾಜ ಸುಧಾರಣೆಯ ಕೆಲಸವನ್ನು ಮಾಡುತ್ತೇನೆ. ಇದಕ್ಕೆ ತಮ್ಮ ಸಹಾಯವಿರಲಿ, ಎಂದು ತುಂಬ ವಿನಯದಿಂದಲೆ ತಿಳಿಸಿ, ಈ ಅಸ್ಪೃಶ್ಯತೆಯ ನಿವಾರಣೆಗಾಗಿ ಕೆಲಸ ಮಾಡಲೇಬೇಕು ಎಂಬ ನಿಶ್ಚಯದಿಂದ ತಮ್ಮ ತವರು ಜಿಲ್ಲೆಯಾದ ಹಾಸನಕ್ಕೆ ಬಂದು ಹರಿಜನ ಕೇರಿಗಳನ್ನು ಪ್ರವೇಶಮಾಡುತ್ತಾರೆ. ಈ ಜನಾಂಗದಲ್ಲಿದ್ದ ಅಜ್ಞಾನ, ಮೂಢನಂಬಿಕೆ, ಅಶುಚಿಯನ್ನು ಹೋಗಲಾಡಿಸಿ ಸ್ವಾಭಿಮಾನದ ಬದುಕನ್ನು ನಡೆಸುವಂಥ ವಿಚಾರಗಳನ್ನು ನೀಡುತ್ತಾರೆ. ಮುಖ್ಯವಾಗಿ ಮಕ್ಕಳನ್ನು ಕಡ್ಡಾಯವಾಗಿ ಶಾಲೆಗೆ ಸೇರಿಸಬೇಕು ಎಂಬ ಅರಿವನ್ನು ನೀಡುತ್ತ, ತಮ್ಮ ಸಾತ್ವಿಕ ಮನೋಧರ್ಮದಿಂದಲೆ ಜಾಗೃತಿಯನ್ನುಂಟು ಮಾಡಲು ಶ್ರಮಿಸುತ್ತಾರೆ, ಆಗ ಬರೆದ 'ಹರಿಜನರಿಗೆ ಹಿತಬೋಧೆ ಎಂಬ ಪದ್ಯದಲ್ಲಿ

ಏಳಿ ಹರಿಜನರೆಯನ್ನವರೇ ॥ಪ॥
ಏಳಿರಿ ತಾಳದೆ। ಎಚ್ಚರಗೊಳ್ಳಿರಿ ॥ಅ॥
ಸೇವಿಸದಿರಿಮದ್ಯಯಿ।ದೆಂದಿಗೂ
ಭಾವಿಸದಿರಿಸದ್ಯ ।
ಸೇವಿಸಿದೊಡೆಹಾಳೆಮ್ಮಯಬಾಳು

[ಹರಿಜನಾಭ್ಯುದಯ ಕವನಸಂಕಲನ] ಎಂದು ತುಂಬು ಕಳಕಳಿಯಿಂದ ಜಾಗೃತಿಯನ್ನುಂಟು ಮಾಡಲು ಪ್ರಯತ್ನಿಸಿದ್ದಾರೆ. ಸಮಾಜ ಸುಧಾರಣೆ ಮತ್ತು ಬರವಣಿಗೆಯಲ್ಲಿ ಆಸಕ್ತರಾಗಿದ್ದ ಗೋವಿಂದದಾಸರಿಗೆ, ಶಾಲೆಬಿಡುವುದು, ಮತ್ತೆ ಸೇರುವುದು ಇದು ಮಾಮೂಲಾಗಿರುತ್ತದೆ. ಹಾಗಾಗಿ ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಯಲ್ಲಿ ಹರಿಜನ ಜಾಗೃತಿ ಮೂಡಿಸುತ್ತಲೆ ಮತ್ತೆ ಓದಬೇಕೆನಿಸಿ ಹಾಸನದ ಸರ್ಕಾರಿ ಪ್ರೌಢಶಾಲೆಗೆ ಸೇರುತ್ತಾರೆ. ಇಲ್ಲಿ ಒಂದು ವರ್ಷ ಓದಿದನಂತರ ಬೆಂಗಳೂರಿನ ಕೊಲಿಜಿಯೆಟ್ ಹೈಸ್ಕೂಲನ್ನು [ಪೋರ್ಟ್ ಹೈಸ್ಕೂಲೆಂದು ಕರೆಯುತ್ತಾರೆ.] ಸೇರಿ, ನರಸಿಂಹರಾಜ ಹಾಸ್ಟೆಲಿನ ನಿವಾಸಿಯಾಗುತ್ತಾರೆ, ಅಲ್ಲಿದ್ದಾಗ ಪ್ರಸಿದ್ಧ ಸಮಾಜ ಸುಧಾಕರಾದ ಆರ್.ಗೋಪಾಲ ಸ್ವಾಮಿ ಅಯ್ಯರ್ ಅವರ ದಟ್ಟ ಪ್ರಭಾವಕ್ಕೆ ಒಳಗಾಗುತ್ತಾರೆ, ಅಯ್ಯರ್ ಅವರು, ಬೆಂಗಳೂರಿಗೆ ಭೇಟಿ ನೀಡುತ್ತಿದ್ದ; ಗಾಂಧೀಜಿ, ಮದನ್ ಮಾಳವೀಯ, ಸಿ.ಎಫ್.ಆಂಡ್ರೂಸ್, ಅನಿಬೆಸೆಂಟ್, ಅಲ್ಲಾದೆ ಕೃಷ್ಣಸ್ವಾಮಿ, ಮುತಾದವರುಗಳನ್ನು ಕರೆತಂದು ಉಪನ್ಯಾಸ ಕೊಡಿಸುತ್ತಿರುತ್ತಾರೆ. ಆ ಕಾಲಕ್ಕಾಗಲೆ 'ಹರಿಜನ ತರುಣ ಕವಿ' ಎಂದೆ ಹೆಸರಾಗಿದ್ದ ಗೋವಿಂದದಾಸ್ ಅವರು, ಹರಿಜನ ಸಮಾಜದ ಏಳಿಗೆಗೆ ಸಹಾಯ ಮಾಡುತ್ತಿದ್ದ, ಶ್ರೀನಾಲ್ವಡಿಕೃಷ್ಣರಾಜ ಒಡೆಯರ್

> **ಗೋವಿಂದದಾಸರು ದಲಿತರಲ್ಲಿದ್ದ ಅಜ್ಞಾನವನ್ನು ಹೋಗಲಾಡಿಸಿ, ಬದುಕಿನ ಆತ್ಮವಿಶ್ವಾಸವನ್ನು ಮೂಡಿಸುವಂಥ ಶಿಕ್ಷಣವನ್ನು ಅಗತ್ಯವಾಗಿ ಪಡೆದುಕೊಳ್ಳಬೇಕೆಂಬ ಅರಿವನ್ನು ಮೂಡಿಸಿದರು. ಸೇವರ್ಣೀಯರು ಹರಿಜನರನ್ನು ದೇವಸ್ಥಾನಗಳಿಗೆ ಸೇರಿಸದಿರುವುದನ್ನು ಖಂಡಿಸುತ್ತ, ಸರ್ಕಾರವೆ ದೇವಾಲಯಗಳನ್ನೆಲ್ಲ ವಹಿಸಿಕೊಂಡು, ಹರಿಜನರಿಗೆ ದೇವಾಲಯಗಳ ಪ್ರವೇಶಕ್ಕೆ ಅವಕಾಶ ಮಾಡಿಕೊಡಬೇಕೆಂದು ಸರ್ಕಾರಕ್ಕೆ ಒತ್ತಾಯ ತಂದರು.ವಿಶ್ವವಿಖ್ಯಾತ ಶ್ರವಣಬೆಳಗೊಳದಲ್ಲಿ ಗೊಮ್ಮಟನನ್ನು ನೋಡಲು ಕೂಡ ಹರಿಜನರಿಗೆ ಪ್ರವೇಶ ಇರಲಿಲ್ಲ. ಇದನ್ನು ೧೯೩೪ ರಲ್ಲಿಯೆ ಗೋವಿಂದದಾಸರು ಉಗ್ರವಾಗಿ ಖಂಡಿಸಿ, ಪ್ರತಿಭಟಿಸಿ, ದಲಿತರಿಗೆ ಪ್ರವೇಶ ದೊರಕಿಸಿಕೊಡುತ್ತಾರೆ . ಈ ಸಂದರ್ಭದಲ್ಲಿ ನಾನೆಂಥ ಭಾಗ್ಯಹೀನನೊ ಹೇ ಗೊಮ್ಮಟೇಶ ನೀನೆಂಥ ಪಕ್ಷಪಾತಿಯೊ ಹೇ ಭಕ್ತಿಕೋಶ, ಎಂದು ತುಂಬ ನೋವಿನಿಂದ ವಿಷಾದ ವ್ಯಕ್ತಪಡಿಸುತ್ತಾರೆ,**

ಅವರನ್ನು ಕುರಿತಂತೆ ಪದ್ಯ ಬರೆದು ಅವರಿಗೆ ಗೌರವ ಸೂಚಿಸಿದ್ದರಂತೆ.

ಮೂಲತಃ ಅಂತರ್ಮುಖಿ ವ್ಯಕ್ತಿತ್ವದವರಾಗಿದ್ದ ಗೋವಿಂದದಾಸ್ ಅವರು ತಾವು ವಾಸಿಸುತ್ತಿದ್ದ ನರಸಿಂಹಾರಾಜ ವಿದ್ಯಾರ್ಥಿ ನಿಲಯದಿಂದ, ಬೆಳಿಗ್ಗೆ ಪ್ರತಿನಿತ್ಯವು ಕುಮಾರಪಾರ್ಕಿನ ಹಿಂದುಗಡೆಯ ಗುಡ್ಡಗಳನ್ನೆಲ್ಲ ಸುತ್ತಾಡುತ್ತ, ಈಗಿನ ರೈಲ್ವೆಸ್ಟೇಷನ್‌ವರೆಗೂ, ವಾಯುವಿಹಾರಕ್ಕೆ ಹೋಗುತ್ತಿದ್ದರಂತೆ. ಒಂದು ದಿನ ರೈಲ್ವೆಸ್ಟೇಷನ್ ಹತ್ತಿರದಲ್ಲಿ ಉತ್ತರಭಾರತದ ಸಾಧುವೊಬ್ಬರು ಇವರನ್ನು ನೋಡುತ್ತಾರೆ. ಈ ಯುವಕನಲ್ಲಿ ಏನೊ ಒಂದು ವಿಶಿಷ್ಟತೆ ಇದೆ ಎಂಬುದನ್ನು ಗುರುತಿಸಿ ಪರಿಚಯಿಸಿಕೊಂಡು, ಮಗು ಭರತಖಂಡದ ದೊಡ್ಡ ದೊಡ್ಡ ಸ್ಥಳಗಳನ್ನು ನನ್ನ ಸ್ವಂತ ಖರ್ಚಿನಲ್ಲಿ ತೋರಿಸುತ್ತೇನೆ ಬರುತ್ತೀಯಾ? ಎಂದು ಕೇಳಿದರಂತೆ. ಆಗ ಈ ಸಾಂಪ್ರದಾಯಿಕ ಶಿಕ್ಷಣಕ್ಕಿಂತ ಜೀವನದ ಶಿಕ್ಷಣದ ಕಡೆ ಹೆಚ್ಚು ಒಲವಿದ್ದ ಗೋವಿಂದದಾಸ್ ಅವರು, ತುಂಬ ಸಂತೋಷದಿಂದ ಒಪ್ಪಿಕೊಂಡರಂತೆ. ಆ ಸಾಧುವಿನ ಜೊತೆಯಲ್ಲಿ ಹರಿದ್ವಾರ, ಗಯಾ, ಹೃಷಿಕೇಶ, ನಾಸಿಕ್, ಫಂಡರಾಪುರ, ಸೂರತ್, ದ್ವಾರಕಾ ಮುಂತಾದ ಸ್ಥಳಗಳನ್ನು ನೋಡುತ್ತಾರೆ. ಭಜನೆ ಮತ್ತು ಹರೆಕಥೆಯ ಹಾಡುಗಳನ್ನು ತುಂಬ ಸೊಗಸಾಗಿ ಹಾಡುತ್ತಿದ್ದ ಗೋವಿಂದದಾಸರನ್ನು, ಪ್ರವಾಸ ತಂಡದಲ್ಲಿದ್ದ ಸಾಧು ಹೆಂಗಸರು ಸೇರಿದ ಹಾಗೆ, ಅವರೆಲ್ಲರು ತುಂಬ ಪ್ರೀತಿಯಿಂದ ನೋಡಿಕೊಂಡರಂತೆ.

ಒಮ್ಮೆ ದೋಣಿಯಲ್ಲಿ ಸಾಗುತ್ತಿದ್ದಾಗ ಭಕ್ತಿಪೂರ್ವಕವಾಗಿ ಭಜನಗಳನ್ನು ಹಾಡು ತ್ತಿದ್ದ ಗೋವಿಂದದಾಸರು ಸಮುದ್ರಕ್ಕೆ ಬಿದ್ದುಬಿಟ್ಟರಂತೆ. ಆಗ ಸಾಧುತಂಡದಲ್ಲಿದ್ದ ಹೆಂಗಸರು ಇವರ ಜುಟ್ಟನ್ನು ಹಿಡಿದುಕೊಂಡು ಮೇಲೆತ್ತಿ ಇವರ ಪ್ರಾಣ ಉಳಿಸಿದರಂತೆ. ಈ ಎಲ್ಲ ಅನುಭವಗಳನ್ನು ಅಪ್ರಕಟಿತವಾಗಿರುವ ಅವರ ಆತ್ಮಕಥನದಲ್ಲಿ ದಾಖಲಿಸಿದ್ದಾರೆ. ಈ ಬಗೆಯ ಕೆಲ ಅನುಭವಗಳು, ೧೯೩೦ರಲ್ಲಿ ಪ್ರಕಟವಾಗಿರುವ "ಹರಿಜನಾಭ್ಯುದಯ" ಕವನ ಸಂಕಲನದ ಪದ್ಯದಲ್ಲಿಯೂ ಸೇರಿಕೊಂಡಿವೆ. ಇವರ ಅಪ್ರಕಟಿತ ಕೃತಿಗಳು: "ವಿಕ್ರಮ ವಿಜಯ" [ನಾಟಕ] "ನಡುನೀರಿನ ಹಡುಗು" [ನಾಟಕ] "ಕಲಿಯುಗದ ಮನು" [ನಾಟಕ]. ಗೋವಿಂದದಾಸರ ಈ ಅಪ್ರಕಟಿತ ಕೃತಿಗಳೆಲ್ಲವು ಅವರ ಹಸ್ತಾಕ್ಷರದಲ್ಲಿವೆ. ೧೯೭೧ರಲ್ಲಿ ಸರ್ಕಾರವು ಗೋವಿಂದದಾಸರಿಗೆ ಅವರ ಸಾಹಿತ್ಯ ಮತ್ತು ಸಮಾಜ ಸೇವೆಯನ್ನು ಗುರುತಿಸಿ ರಾಜ್ಯಪ್ರಶಸ್ತಿಯನ್ನು ನೀಡಿದೆ. ಆ ಪತ್ರದಲ್ಲಿ ಈ ಬಗೆಗಿನ ಎಲ್ಲ ವಿವರಗಳು ಸಿಕ್ಕುತ್ತವೆ.

ಪ್ರವಾಸದಿಂದ ವಾಪಸ್ಸಾದ ನಂತರವೂ ಪ್ರೌಢಶಿಕ್ಷಣವನ್ನು ಮುಗಿಸಿದರಾದರೂ ಮುಂದೆ ಶಿಕ್ಷಣ ಮುಂದುವರಿಸಲಿಲ್ಲ. ಗೋಪಾಲಸ್ವಾಮಿ ಅಯ್ಯರ್ ಗಾಂಧೀಜಿ ಮುಂತಾದವರ ಪ್ರಭಾವಕ್ಕೆ ಒಳಗಾಗಿದ್ದ ಗೋವಿಂದದಾಸರು, ಬರಹ ಮತ್ತು ಸಮಾಜ ಸುಧಾರಣೆ ಕಡೆ ಗಮನಹರಿಸುತ್ತಾರೆ ಹೀಗೆ ಇವರ ವಿಚಾರಧಾರೆಯನ್ನು ಜನಸಾಮಾನ್ಯರಿಗೆ ಮನತಾಕುವಂತೆ ತಿಳಿಸಲು ಅವರು ಆಯ್ಕೆ ಮಾಡಿಕೊಂಡು ಮಾಧ್ಯಮ ಎಂದರೆ ಬರವಣಿಗೆ. ಬುದ್ಧ, ನಾಲ್ವಡಿ ಕೃಷ್ಣ ರಾಜಒಡೆಯರ್, ಅಯ್ಯರ್, ಗಾಂಧೀ, ಅಂಬೇಡ್ಕರ್, ಮುಂತಾದವರ ವಿಚಾರಧಾರೆಗಳನ್ನು ಆಧರಿಸಿ, ತಾವೆ ರಚಿಸಿದ ಕವನಗಳನ್ನು ಮನಮುಟ್ಟುವಂತೆ ಹಾಡುತ್ತ ಜನರನ್ನು ಜಾಗೃತಿಗೊಳಿಸಿದರು. ಮುಖ್ಯವಾಗಿ ದಲಿತರಲ್ಲಿದ್ದ ಅಜ್ಞಾನವನ್ನು ಹೋಗಲಾಡಿಸಿ, ಬದುಕಿನ ಆತ್ಮವಿಶ್ವಾಸವನ್ನು ಮೂಡಿಸುವಂಥ ಶಿಕ್ಷಣವನ್ನು ಅಗತ್ಯವಾಗಿ ಪಡೆದು ಕೊಳ್ಳಬೇಕೆಂಬ ಅರಿವನ್ನು ಮೂಡಿಸಿದರು. ಸೇವರ್ಣೀ ಯರು ಹರಿಜನರನ್ನು ದೇವಸ್ಥಾನಗಳಿಗೆ ಸೇರಿಸದಿ ರವುದನ್ನು ಖಂಡಿಸುತ್ತ, ಸರ್ಕಾರವೆ ದೇವಾಲಯಗಳನ್ನೆಲ್ಲ ವಹಿಸಿಕೊಂಡು, ಹರಿಜನರಿಗೆ ದೇವಾಲಯಗಳ ಪ್ರವೇಶಕ್ಕೆ, ಅವಕಾಶ ಮಾಡಿಕೊಡಬೇಕೆಂದು ಸರ್ಕಾರಕ್ಕೆ ಒತ್ತಾಯ ತಂದರು. ವಿಶ್ವವಿಖ್ಯಾತ ಶ್ರವಣಬೆಳಗೊಳದಲ್ಲಿ ಗೊಮ್ಮಟನನ್ನು ನೋಡಲು ಕೂಡ ಹರಿಜನರಿಗೆ ಪ್ರವೇಶ ಇರಲಿಲ್ಲ. ಇದನ್ನು ೧೯೩೪ ರಲ್ಲಿಯ ಗೋವಿಂದದಾಸರು ಉಗ್ರವಾಗಿ ಖಂಡಿಸಿ ಪ್ರತಿಭಟಿಸಿ – ದಲಿತರಿಗೆ ಪ್ರವೇಶ ದೊರಕಿಸಿಕೊಡುತ್ತಾರೆ . ಈ ಸಂದರ್ಭದಲ್ಲಿ, 'ನಾನೆಂಥ ಭಾಗ್ಯಹೀನನೊ ಹೇ ಗೊಮ್ಮಟೇಶ ನೀನೆಂಥ ಪಕ್ಷಪಾತಿಯೇ ಹೇ ಭಕ್ತಿಕೋಶ' (ಗೊಮ್ಮಟೇಶ) ಎಂದು ತುಂಬ ನೋವಿನಿಂದ ವಿಷಾದ ವ್ಯಕ್ತಪಡಿಸುತ್ತಾರೆ, ಮೈಸೂರು ರಾಜ್ಯದ ಹರಿಜನ ಸೇವಾಸಂಘದ ಹಾಸನ ಜಿಲ್ಲಾ ಪ್ರಚಾರಕರಾಗಿ, ಮೈಸೂರು ರಾಜ್ಯದ ಆದಿ ಕರ್ನಾಟಕ ಅಭಿವೃದ್ಧಿ ಸಂಘದ ಉಪಾಧ್ಯಕ್ಷರಾಗಿ ಕೆಲಸ ಮಾಡುವಾಗ ಕೂಡ ಈ ಬಗೆಯ ಹಲವಾರು ಸುಧಾರಣೆ ಕೆಲಸಗಳನ್ನು ಮಾಡಿದ್ದಾರೆ.

ಸಾಧುವಿನೊಟ್ಟಿಗೆ ಉತ್ತರಭಾರತದ ಪ್ರವಾಸ ಗೋವಿಂದದಾಸರ ಬದುಕಿನ ಒಂದು ಪ್ರಮುಖ ಘಟ್ಟ. ಇದು ಅವರ ಬದುಕಿನ ದಿಕ್ಕನ್ನೆ ಬದಲಿಸಿತು. ಈ ಪ್ರಭಾವದಿಂದ ಗೋವಿಂದದಸರು ಅಸ್ಪೃಶ್ಯ ಅನಾಥ ಮಕ್ಕಳಿಗಾಗಿ ಅನಾಥಾಶ್ರಮವನ್ನು ತೆರೆಯಬೇಕೆಂದು ತೀರ್ಮಾನಿಸುತ್ತಾರೆ ಚಿಕ್ಕವಯಸ್ಸಿನಲ್ಲಿಯೆ ತಾಯಿ-ತಂದೆಯನ್ನು ಒಂದೇ ದಿನ ಕಳೆದುಕೊಂಡ ಗೋವಿಂದದಾಸರಿಗೆ ತಬ್ಬಲಿತನದ ನೋವು, ಅನಾಥಪ್ರಜ್ಞೆ ತೀವ್ರವಾಗಿ ಕಾಡುತಿತ್ತು ಅನ್ನಿಸುತ್ತದೆ. ಹಾಗಾಗಿ ಹಾಸನ ಜಿಲ್ಲೆಯ ಹೊಳೇ ನರಸಿಪುರ ತಾಲೋಕಿನ ಹಳೇಕೋಟೆ ಸಮೀಪದ ಮಾವಿನ ಕೆರೆ ಬೆಟ್ಟದ ತಪ್ಪಲಿನಲ್ಲಿ ಆಶ್ರಮಕ್ಕಾಗಿ ಸರ್ಕಾರದಿಂದ ಸುಮಾರು ನಾಲ್ಕು ಎಕರೆ ಭೂಮಿಯನ್ನು ಮಂಜೂರಿ ಮಾಡಿಸಿಕೊಳ್ಳುತ್ತಾರೆ. ಈ ಜಾಗ ಬೆಟ್ಟದ ತಪ್ಪಲಿನಲ್ಲಿ ಝುಳ ಝುಳ ಹರಿಯುವ ಹಳ್ಳದ

ದಂಡೆಯಲ್ಲಿದೆ. ಒಬ್ಬಿಬ್ಬರು ಅಲ್ಲಿ ಹೋಗಲು ಭಯ ಹುಟ್ಟಿಸುವಷ್ಟು ದಟ್ಟ ಕಾಡಿರುವ ನಿರ್ಜನ ಪ್ರದೇಶ. ಹಲವು ಬಗೆಯ ಪ್ರಾಣಿಪಕ್ಷಿಗಳ ವಾಸಸ್ಥಾನವಾದ ಈ ನಿರ್ಮಲ ಪ್ರದೇಶ, ಧ್ಯಾನ, ತಪಸ್ಸು, ಚಿಂತನೆ, ಹಾಗೂ ಕಾವ್ಯಸೃಷ್ಟಿಗೆ ಹೇಳಿ ಮಾಡಿಸಿದ ಜಾಗ. ಮೂಲತಃ ಕವಿಹೃದಯದ ಗೋವಿಂದದಾಸ್ ಅವರಿಗೆ ಬಲು ಇಷ್ಟವಾದ ಸ್ಥಳ ಇದಾಗಿತ್ತು. ಇಲ್ಲಿ ಮಕ್ಕಳಿಗೆ ಬೇಕಾಗುವ ಆಹಾರ, ತರಕಾರಿ, ಹಣ್ಣು ಹಂಪಲುಗಳನ್ನ ಬೆಳೆಯಲು ಜಾಗವನ್ನು ಹದ ಮಾಡಿ ಸಸಿಗಳನ್ನು ನೆಡಿಸಿದ್ದರಂತೆ. ಮುಂದಿನ ವರ್ಷ ಕರೆತರಲಿರುವ ಮಕ್ಕಳಿಗಾಗಿ ಆಶ್ರಮವನ್ನು ಹುಲ್ಲು ಜೋಪಡಿಗಳಿಂದ ತಮ್ಮದೇ ಆದ ದೃಷ್ಟಿಕೋನದಲ್ಲಿ ತುಂಬ ಅಂದವಾಗಿ ಕಟ್ಟಿಸಿದ್ದರಂತೆ. ಈ ನಿರ್ಜನ ಪ್ರದೇಶದಲ್ಲಿ ಒಂದು ವರ್ಷ ಅವರ ಪತ್ನಿಯವರೊಡನೆ ಕಳೆದಿದ್ದರು. ಇವರ ದಿನಚರಿಯೆ ವಿಶಿಷ್ಟವಾಗಿದೆ. ದಿನಕ್ಕೆ ಎರಡು ಊಟ ಮಾತ್ರ, ಬೆಳಿಗ್ಗೆ ಎದ್ದು ತೊರೆಯ ಸ್ನಾನ, ಬೆಟ್ಟ ಹತ್ತಿ ಅದರ ತುದಿಯಲ್ಲಿ ಕುಳಿತು ಧ್ಯಾನ ಮತ್ತು ತಪಸ್ಸು. ನಂತರ ಆಶ್ರಮವನ್ನು ಹದಗೊಳಿಸುವ ಕೆಲಸ. ಹನ್ನೊಂದು ಘಂಟೆಗೆ ಊಟ. ನಂತರ ಹಳ್ಳದಂಡೆಯ ನಿರ್ಜನ ಪ್ರದೇಶ ಆಶ್ರಮದಲ್ಲಿ ಕುಳಿತು, ಓದು, ಬರಹ, ಚಿಂತನೆ. ಸಂಜೆ ಮತ್ತೆ ತೊರೆಯ ಸ್ನಾನ, ಧ್ಯಾನ, ಭಜನೆ. ಈ ನಡುವೆ ಬಿಡುವು ಮಾಡಿಕೊಂಡು ಜನರ ಕೆಲಸ.

ಹೀಗೆ ಈ ಆಶ್ರಮವನ್ನು ತಮ್ಮ ಕರ್ಮಭೂಮಿಯನ್ನಾಗಿಸಿಕೊಂಡು, ಸಮಾಜ ಸೇವೆ ಮತ್ತು ಬರಹವನ್ನು ಬದುಕಿನ ಉಸಿರಾಗಿಸಿಕೊಂಡು, ಆರೋಗ್ಯಕರ ಸಮಾಜದ ಬಹುದೊಡ್ಡ ಕನಸನ್ನೊತ್ತು ಶ್ರಮಿಸುತ್ತಿದ್ದರು. ಇವರ ಸಮಾಜಸೇವೆಯನ್ನು ಗುರುತಿಸಿ ಆಗಿನ ಸರ್ಕಾರ ಗೋವಿಂದದಾಸ್ ಅವರನ್ನು 'ಡಿಪ್ರೆಸ್ಡ್ ಕಮಿಟಿ'ಯ ಸದಸ್ಯರನ್ನಾಗಿ ನೇಮಕ ಮಾಡಿತ್ತು.

ಈ ಕಮಿಟಿಯ ಮೀಟಿಂಗ್‌ಗಾಗಿ, ಇವರ ಪತ್ನಿಯನ್ನು ಪಕ್ಕದ ಕಾರ್ಲೆ ಗ್ರಾಮದ ನೆಂಟರ ಮನೆಯಲ್ಲಿ ಬಿಟ್ಟು ಬೆಂಗಳೂರಿಗೆ ಹೋಗಿದ್ದರು ಸಮಾಜ ಸುಧಾರಣೆಗಾಗಿ ಶ್ರಮಿಸುತ್ತಿದ್ದ ಇವರ ಕೆಲಸಗಳನ್ನು ಸಹಿಸದ ಕ್ರೂರ ಜಾತಿ ಕ್ರಿಮಿಗಳು, ಹೊಂಚುಹಾಕಿ, ಇವರಿಲ್ಲದ ಈ ಸಮಯದಲ್ಲಿ ಆಶ್ರಮದ ಗುಡಿಸಿಲುಗಳಿಗೆಲ್ಲ ಬೆಂಕಿ ಹಾಕಿ ಭಸ್ಮ ಮಾಡಿದರು. ಅಲ್ಲಿ ತಲೆ ಎತ್ತುತ್ತಿದ್ದ ಹೂವು, ಗಿಡ, ಮರ ಬಳ್ಳಿ, ಫಸಲುಗಳನ್ನೆಲ್ಲ ನಾಶ ಮಾಡಿದರು. ಕಾರ್ಲೆಯಲ್ಲಿದ್ದ ಇವರ ಅಭಿಮಾನಿಗಳು ಹಾಸನಕ್ಕೆ ಬಂದು, ಬೆಂಗಳೂರಿ ನಿಂದ ರೈಲಿನಲ್ಲಿ ಬರುತ್ತಿದ್ದ ಗೋವಿಂದದಾಸ್ ಅವರಿಗೆ ಈ ದುರಂತದ ಸುದ್ದಿಯನ್ನು ಮುಟ್ಟಿಸಿದರು. ಈ ಕ್ರೂರ ಸುದ್ದಿಯನ್ನು ಕೇಳಿದ ದಾಸರು ಅತೀವ ದುಃಖಕ್ಕೆ ಈಡಾಗುತ್ತಾರೆ. ಅವರ ಮಾತಿನಲ್ಲಿಯೆ ಹೇಳುವುದಾದರೆ "ಈ ಸುದ್ದಿಯನ್ನು ಕೇಳಿ ಒಂದೇ ಸಾರಿ ಇದ್ದಕ್ಕಿದ್ದ ಹಾಗೆಯೆ ಸಾವಿರ ಸಿಡಿಲು ಬಡಿದಂತಾಯಿತು. ಪ್ರಜ್ಞೆತಪ್ಪಿ ನೆಲದ ಮೇಲೆ ಬಿದ್ದುಬಿಟ್ಟೆನು. ಒಂದು ಘಂಟೆಯಾದ ನಂತರ ಚೇತರಿಸಿಕೊಂಡು ವಿಚಾರವನ್ನು ಕೇಳಿ ಆದುದಾಯಿತೆಂದು ಹೊರಟಿದ್ದೆ.

ಆದರೆ ಅನೇಕರು ಪುನಃ ಅಲ್ಲಿಗೆ ಹೋಗಬೇಡವೆಂದು ತಡೆದರು. ನಂತರ ಅದೇ ವ್ಯಥೆಯಲ್ಲಿ ಮೂರು ತಿಂಗಳು ಹಾಸಿಗೆಯನ್ನು ಹಿಡಿದೆನು" [ಇವರ ಆತ್ಮಕಥನದಿಂದ ಈ ಮಾತುಗಳನ್ನು ಆಯ್ದುಕೊಳ್ಳಲಾಗಿದೆ] ಎಂಬ ಅವರ ಮಾತುಗಳು, ಅಸ್ಪೃಶ್ಯ ಅನಾಥ ಮಕ್ಕಳ ಏಳಿಗೆ ಮತ್ತು ಗಹನವಾದ ಕಾವ್ಯ ಸೃಷ್ಟಿಯ ಕನಸನ್ನೊತ್ತು ನಿರ್ಮಾಣ ಮಾಡುತ್ತಿದ್ದ ಅವರ ಆಸೆ ಛಿದ್ರಗೊಂಡಾಗ, ಅವರ ಮುಗ್ಧ ಮನಸ್ಸಿಗಾದ ತೀವ್ರ ನೋವನ್ನು ವ್ಯಕ್ತಪಡಿಸುತ್ತವೆ. ಆಗ ಕವಿ ಗೋವಿಂದದಾಸ್ ಅವರು ತಮ್ಮ ದುಃಖಸಾಗರದ ಭಾರವನ್ನು 'ವಿಷಮುಳ್ಳುಲು' ಎಂಬ ಪದ್ಯದಲ್ಲಿ ಇಳಿಸಿರುವುದು ಹೀಗೆ

ಎಲ್ಲೆಲ್ಲೂ ವಿಷಮುಳ್ಳುಗಳಲ್ಲಪ್ಪಾ ಅಯ್ಯಯ್ಯಪ್ಪೊ ಸಾಕಪ್ಪ ॥ಪ॥ ಇನ್ನೆಲ್ಲಿ ಹರಿಜನ ಚಲಿಸುವ ಜಾಗಪ್ಪ
ಊರೊಳು ಹೊರಗುದಾರಿಗಳೊಳು, ಕೆರೆತೊರೆಗಳೆಲ್ಲ ಬರಿಮುಳ್ಳು
ನೀರು ಬಾವಿಪುರಪಟ್ಟಣದೊಳು, ನೆರೆದೇವರ ದೇಗುಲದೊಳು ಮುಳ್ಳು
ಮಠಮಾನ್ಯಗಳೊಳು, ಕೋಟೆಕೂಟದೊಳು ಪಾಠ ಶಾಲೆ ನವರಂಗದೊಳು
ಮಿತ್ರಸಮಾಜ ಪವಿತ್ರ ಮಧೀವನ ಮಾತೃ ಭೂಮಿ ವಿಷ ಮುಳ್ಳುಮಯ

ಕ್ರೂರ ಜಾತೀಯತೆಯಿಂದ ಮುಗ್ಧದಲಿತರಿಗೆ ಇಡೀ ಮಾತೃಭೂಮಿ ಹೇಗೆ ವಿಷಮುಳ್ಳ ಮಯವಾಗಿದೆ ಎಂಬದನ್ನು ಕವಿ ತುಂಬು ವಿಷಾದದಿಂದ ಎಳೆಎಳೆಯಾಗಿ ಬಿಚ್ಚಿ ತೋರಿಸಿದ್ದಾರೆ.

ಗಾಂಧೀಜಿಯವರನ್ನು ಕುರಿತ 'ದೇಶಭಕ್ತನ ಧೀರತ್ವ" ಎಂಬ ಪದ್ಯದಲ್ಲಿ

ಹುಟ್ಟಿದರೆ ಹುಟ್ಟಬೇಕುನಮ್ಮ
ದಿಟ್ಟ ಗಾಂಧೀಯಂತ। ಗಟ್ಟಿಗರೀಲೋಕದಲಿ
ಎರವಾಡ ಜೈಲೊಳಗೆ। ಒರಗಿ ಕುಳಿತು ಕೊಂಡು ಥರ ಥರನೆ ನಡುಗಿಸಿದ ಪರದೇಶದವರನ್ನು

ಎಂದು ಗಾಂಧೀಜಿಯವರ ವ್ಯಕ್ತಿತ್ವವನ್ನು ಚಿತ್ರಿಸುತ್ತಾರೆ. 'ಅಂಬೇಡ್ಕರ್' ಎಂಬ ಪದ್ಯದಲ್ಲಿ:

ಅಂಬೇಡ್ಕರರೆ ವಂಭತ್ತು ಕೋಟಿ ಜನರೊಡೆಯ ಜೈ ಜೈ ॥ಪ॥
ನಂಬಿಹೆವು ನಿಮ್ಮನು ನಾವೆಲ್ಲ
ಬೆಂಬಿಡದೆ ಭೇದವ ಹರಿಸೆಲ್ಲ
ಭಾರತ ಸಚಿವರ ಧೀರವೀರ ಸುವಿ
ಚಾರ ಪರವೆ ಸುಗುಣಾನ್ವಿತ ಜೈ

ಎಂದು, ದಲಿತರ ದಾರಿದೀಪವಾಗಿರುವ ಅಂಬೇಡ್ಕರ್ ಅವರನ್ನು ಕುರಿತಂತೆ ಮನತುಂಬಿ ಬರೆಯುತ್ತಾರೆ. ಗೌತಮಬುದ್ಧ ಎಂಬ ಪದ್ಯದಲ್ಲಿ

ರಾಜರಾಜಕುಮಾರ ನೀನಗುತೆ
ರಾಜ್ಯಭೋಗಂಗಳೆಲ್ಲ ನೀನೀಗುತೆ
ಮುದ್ದು ಮೋಹದ ಕಂದನಗಲುತೆ
ನಿದ್ರೆಯರ್ದಾಂಗಿನ್ನಗಲಿಪೋದೆಯ

ಎಂದು ಬುದ್ಧನ ತ್ಯಾಗವನ್ನು ಕೊಂಡಾಡುತ್ತಾರೆ. ಆರ್ ಗೋಪಾಲಸ್ವಾಮಿ ಅಯ್ಯರ್ ಅವರು ತೀರಿಕೊಂಡಾಗ,

ಗೋಪಾಲಸ್ವಾಮಿ ಅಯ್ಯರ್ ಗಾಂಧೀಜಿ ಮುಂತಾದವರ ಪ್ರಭಾವಕ್ಕೆ ಒಳಗಾಗಿದ್ದ ಗೋವಿಂದದಾಸರು, ಬರಹ ಮತ್ತು ಸಮಾಜ ಸುಧಾರಣೆ ಕಡೆ ಗಮನಹರಿಸುತ್ತಾರೆ ಹೀಗೆ ಇವರ ವಿಚಾರಧಾರೆ ಯನ್ನು ಜನಸಾಮಾನ್ಯರಿಗೆ ಮನತಾಕುವಂತೆ ತಿಳಿಸಲು ಅವರು ಆಯ್ಕೆ ಮಾಡಿಕೊಂಡು ಮಾಧ್ಯಮ ಎಂದರೆ ಬರವಣಿಗೆ. ಬುದ್ಧ, ನಾಲ್ವಡಿ ಕೃಷ್ಣ ರಾಜಒಡೆಯರ್, ಅಯ್ಯರ್, ಗಾಂಧೀ, ಅಂಬೇಡ್ಕರ್, ಮುಂತಾದವರ ವಿಚಾರಧಾರೆಗಳನ್ನು ಆಧರಿಸಿ, ತಾವೆ ರಚಿಸಿದ ಕವನ ಗಳನ್ನು ಮನಮುಟ್ಟುವಂತೆ ಹಾಡುತ್ತ ಜನರನ್ನು ಜಾಗೃತಿ ಗೊಳಿಸಿದರು.

ಹರಿಜನ ಗುರುವರ ಹಾರಿದೆಯಾ ಹರಿಪಾದವನೀ ಸೇರಿದೆಯಾ॥ಪ॥
ಮರೆಮಾಚುತೆ ಕಣ್ಮರೆಯಾದೆಯಾ ನೆರೆಶೋಕಗೈವ ಪರಿಮಾಡಿದೆಯಾ
ಇನ್ನಾರೆಮ್ಮನು ಕರೆಯುವರು ಬನ್ನಿರೆಲ್ಲೊಂದೊರಲವರು .

ಎಂದು ಕಂಬನಿ ಮಿಡಿದು ಅವರ ಹರಿಜನ ಸುಧಾರಣೆಯ ಕೆಲಸವನ್ನು ಸ್ಮರಿಸುತ್ತಾರೆ ದಲಿತರ. ಮೇಲಿನ ದೌರ್ಜನ್ಯದ ಭೀಕರ ಸ್ಥಿತಿಯನ್ನು ಕುರಿತಂತೆ

ಹರಿಜನ ದೌರ್ಜನ್ಯ ಜ್ವಾಲೆ ಉರಿಯುತಿಹುದು ಗಗನಕೇರಿ ॥ಪ॥
ಆವನೋವ ಸಹಿಸೆವು. ಬಡತನದ ಬೇಗೆಯನು ಸಹಿಸುವೆವು
ದಹಿಪಭೇದದ ನೋವ ಸೈಸೊ ಭಾರತಕ್ಕೆ ಧಿಕ್ಕಾರ

ಎಂದು ತಣ್ಣಗೆ ಆಕ್ರೋಶವನ್ನು ವ್ಯಕ್ತಪಡಿಸುವ ಕವಿ, ಈ ವ್ಯವಸ್ಥೆ ದಲಿತರನ್ನು ಮನುಷ್ಯರನ್ನಾಗಿಯೆ ನೋಡುತ್ತಿಲ್ಲ. ಆದುದ್ದರಿಂದ ಇಂತಹ ದುಃಸ್ಥಿತಿಯಿಂದ ಮುಕ್ತಿ ಸಿಕ್ಕಬೇಕಾದದರೆ ಮತಾಂತರವೆ ಅಂತಿಮವಾದುದು ಎಂಬ ನಿಲುವಿಗಿ ಬರುತ್ತಾರೆ.'

ಮತಾಂತರ ವೊಂದೆಮಹಾಮಂತ್ರ' ಎಂಬ ಪದ್ಯದಲ್ಲಿ:

ಮತಾಂತರವೊಂದೆ ಮಹಾಮಂತ್ರ॥ಪ॥
ಅಸ್ಪೃಶ್ಯತೆ ಬೇಗಳಿಪ ಸುತಂತ್ರ
ರಾಮಾಯಣಭಾರತ ಸವಿಮುಂದ
ಪರಮಪವಿತ್ರದೀ ಭರತಖಂಡ
ಅಸ್ಪೃಶ್ಯರ ಸುಡೊ ಜಮದಗ್ನಿಕುಂಡ
ಮುತಾಂತವೊಂದೆ ಮಹಾಮಂತ್ರ

ಎಂಬ ದಿಟ್ಟ ನಿಲುವಿಗೆ ಬರುತ್ತಾರೆ. ಹೀಗೆ ತಮ್ಮ ವಿಚಾರದ ಲಹರಿಗಾಗಿ ಪದ್ಯವನ್ನು ಮಾಧ್ಯಮವನ್ನಾಗಿ ದುಡಿಸಿಕೊಳ್ಳುವ ಕವಿ ಗೋವಿಂದದಾಸ್ ಅವರು ಇಲ್ಲೆ ನಿಲ್ಲುವುದಿಲ್ಲ. ಪ್ರಕೃತಿಪ್ರೇಮ, ನಾಡು, ನುಡಿ, ನಿಸರ್ಗ, ಸಂಸ್ಕೃತಿಯ ಕಡೆ ಕೂಡ ಗಮನ ಹರಿಸುತ್ತಾರೆ. ಅವರ 'ಮುಂಗೋಳಿ' ಎಂಬ ಪದ್ಯದಲ್ಲಿ.

ನಿನ್ನಾರು ಎಚ್ಚರಿಸಿದರು ಪೇಳೆಲೆಕೋಳಿ
ಇನ್ನು ಜಗವೆಲ್ಲ ನಿದ್ರಿಸುವ ಸಮಯದಲಿ
ರೆಕ್ಕೆಯನುಲಿಯತೆ ಪುಕ್ಕವನೊದರುತ್ತೆ

ಎಂದು ತಮ್ಮ ಸುತ್ತಣದ ಪರಿಸರಕ್ಕೂ ಜೀವ ತುಂಬುತ್ತಾರೆ

ಗೋವಿಂದದಾಸ್ ಅವರು ಒಂದರ್ಥದಲ್ಲಿ ಬೆಂಕಿಯಲ್ಲಿ ಅರಳಿದ ಹೂವಿನ ಕವಿ. ನವೋದಯ ಕಾವ್ಯದ ಕಾಲಘಟ್ಟದ ಮೊದಲ ತಲೆಮಾರಿನಲ್ಲಿ ಕಾವ್ಯ ಬರೆಯಲು ಪ್ರಾರಂಭಿಸಿದವರು. ಆದರೆ ಕಾವ್ಯ ಬರೆಯಯವುದಷ್ಟೆ ಇವರ ಕೆಲಸವಾಗಿರಲಿಲ್ಲ ಬಡತನದ ಬೇಗೆಯಲ್ಲಿ ನೋಯುತ್ತಲೆ, ಜಾತೀಯತೆಯ ಕ್ರೌರ್ಯದ ವಿರುದ್ಧ ಸೆಣಸುತ್ತಾರೆ. ಅತಂತ್ರ, ಅಭದ್ರತೆಯ ನಡುವೆಯೂ ವಿಚಿತ್ರವಾದ ಸ್ವಾಭಿಮಾನ, ಹಟದಿಂದ ಶಿಕ್ಷಣ ಪಡೆದು, ಧ್ವನಿಯೆ ಇಲ್ಲದವರ ಧ್ವನಿಯಾಗಲು ಸೋಲು ಗೆಲುವುಗಳ ನಡುವೆಯೂ ಶ್ರಮಿಸುತ್ತಾರೆ, ಮಾಸ್ತಿ, ಬಿ. ಎಂ. ಶ್ರೀ ಅವರಂಥ ಹಿರಿಯ ಕವಿಗಳ ಸಮಕಾಲೀನರಾಗಿದ್ದ ಗೋವಿಂದದಾಸರು, ಇವರಿಂದ ಸಣ್ಣ ಪುಟ್ಟ ಸಲಹೆಗಳನ್ನು ಪಡೆದುಕೊಂಡಿದ್ದಾರೆ.

ಆ ಕಾಲದಲ್ಲಿ ಮಾಧ್ಯಮಗಳೆ ಕಡಿಮೆ ಇದ್ದರೂ ಈ ಜಾತೀಯತೆಯ ಕ್ರಾರ್ಯ ಬೇರೆ. ಈ ಎಲ್ಲ

> **ಗೋವಿಂದದಾಸ್ ಅವರು ಒಂದರ್ಥದಲ್ಲಿ ಬೆಂಕಿಯಲ್ಲಿ ಅರಳಿದ ಹೂವಿನ ಕವಿ. ನವೋದಯ ಕಾವ್ಯದ ಕಾಲಘಟ್ಟದ ಮೊದಲ ತಲೆಮಾರಿನಲ್ಲಿ ಕಾವ್ಯ ಬರೆಯಲು ಪ್ರಾರಂಭಿಸಿದವರು. ಆದರೆ ಕಾವ್ಯ ಬರೆಯ ಯವುದಷ್ಟೆ ಇವರ ಕೆಲಸವಾಗಿರಲಿಲ್ಲ ಬಡತನದ ಬೇಗೆಯಲ್ಲಿ ನೋಯುತ್ತಲೆ, ಜಾತೀಯತೆಯ ಕ್ರೌರ್ಯದ ವಿರುದ್ಧ ಸೆಣಸುತ್ತಾರೆ. ಅತಂತ್ರ, ಅಭದ್ರತೆಯ ನಡು ವೆಯೂ ವಿಚಿತ್ರವಾದ ಸ್ವಾಭಿಮಾನ, ಹಟದಿಂದ ಶಿಕ್ಷಣ ಪಡೆದು, ಧ್ವನಿಯೆ ಇಲ್ಲದವರ ಧ್ವನಿಯಾಗಲು ಸೋಲು ಗೆಲುವುಗಳ ನಡುವೆಯೂ ಶ್ರಮಿಸುತ್ತಾರೆ, ಆ ಕಾಲದಲ್ಲಿ ಮಾಧ್ಯಮಗಳೆ ಕಡಿಮೆ ಇದ್ದರೂ ಈ ಜಾತೀಯತೆಯ ಕ್ರೌರ್ಯ ಬೇರೆ. ಈ ಎಲ್ಲ ಅಸಹಾಯಕತೆಯ ನಡುವೆಯೂ ಬರಹದ ಗೀಳನ್ನಚ್ಚಿಕೊಂಡ ದಾಸರು ಕವನ ಸಂಕಲನ ವನ್ನು ಹೊರತರಲು, ತಾವು ಬರೆದ ಕವನಗಳ ಬಗ್ಗೆ ಚರ್ಚಿಸಲು ದಾವಣಗೆರೆಯಲ್ಲಿದ್ದ ಪ್ರಖ್ಯಾತ ಸಾಹಿತಿಗಳಾದ ಹಾಸನದ ರಾಜ್‌ರಾವ್ ಹತ್ತಿರಕ್ಕೆ ನಡೆದುಕೊಂಡೆ ಹೋಗುತ್ತಾರೆ. ಇಂತಹ ಅಸ ಹಾಯಕ ಪ್ರತಿಭಾವಂತ ತರುಣ ಕವಿಯನ್ನು ನೋಡಿ ರಾಜ್‌ರಾವ್ ಸಹಾಯ ಮಾಡುತ್ತಾರೆ.**

ಅಸಹಾಯಕತೆಯ ನಡುವೆಯೂ ಬರಹದ ಗೀಳನ್ನಚ್ಚಿಕೊಂಡ ದಾಸರು ಕವನ ಸಂಕಲನವನ್ನು ಹೊರತರಲು, ತಾವು ಬರೆದ ಕವನಗಳ ಬಗ್ಗೆ ಚರ್ಚಿಸಲು ದಾವಣಗೆರೆಯಲ್ಲಿದ್ದ ಪ್ರಖ್ಯಾತ ಸಾಹಿತಿಗಳಾದ ಹಾಸನದ ರಾಜ್‌ರಾವ್ ಹತ್ತಿರಕ್ಕೆ ನಡೆದುಕೊಂಡೆ ಹೋಗುತ್ತಾರೆ. ಇಂತಹ ಅಸಹಾಯಕ ಪ್ರತಿಭಾವಂತ ತರುಣ ಕವಿಯನ್ನು ನೋಡಿ ರಾಜ್‌ರಾವ್ ಅವರು ಸಹಾಯ ಮಾಡುತ್ತಾರೆ. ಆ ಕಾಲಕ್ಕೆ ಕರ್ನಾಟ ಕಾಂಧ್ರ ಕವಿಗಳೆಂದು ಹೆಸರಾಗಿದ್ದ, ಹರಿಕಥಾ ವಿದ್ವಾಂಸ ರಾದ ಭಿ.ಭೀಮರಾಜ ಅವರಿಂದ ೧೯೩೭ರಲ್ಲಿ ಹಾಸನದ ಹರಿಜನ ಸೇವಕ ಸಂಘದವರು ಪ್ರಕಟಿಸಿರುವ, ತಮ್ಮ "ಹರಿಜನಾಭ್ಯುದಯ" ಕವನಸಂಕಲನಕ್ಕೆ ಮುನ್ನುಡಿ ಬರೆಸಿದ್ದಾರೆ. ತಮ್ಮ ಎಲ್ಲ ಅಭದ್ರತೆ, ಅಸಹಾಯ ಕತೆಗಳ ನಡುವೆ ಕೂಡ, ಬರವಣಿಗೆಯ ಗೀಳಿನಿಂದ ಈ ಬಗೆಯ ಪ್ರಯತ್ನ ಮಾಡಿರುವುದು ಗಮನಾರ್ಹ ಸಂಗತಿ ಎನಿಸುತ್ತದೆ.

ಹಾಸನದ ರಾಜ್‌ರಾವ್ ಅವರು ಗೋವಿಂದದಾಸ್ ಅವರ "ಹರಿಜನಾಭ್ಯುದಯ" ಕವನ ಸಂಕಲನಕ್ಕೆ ಮೆಚ್ಚುಗೆ ಬರೆಯುತ್ತ: "The language of the Poems is simple and homely. the matter of the Poems makes a direct appeal to the hearts of the poems makes a direct appeal to the hearts of the audience without wounding the susceptibilities of any one. Mr.Das has a sweet and an attractive style. He is a pioneer poet of the Adikarnataka Community and with due encouragement and cultivation of his powers he is sure to become a popular writer in kannada. He deserves every Encouragement at the hands of the Kannada Loving Public" ಎಂದು ಮನಮೆಚ್ಚಿ ಪ್ರೋತ್ಸಾಹಿಸಿದ್ದಾರೆ. ಈ ಕೃತಿಗೆ ಮುನ್ನುಡಿ ಬರೆದಿರುವ ಭಿ.ಭೀಮರಾಜು ಅವರು "ಶ್ರೀ ಡಿ. ಗೋವಿಂದದಾಸರು ಈ ಕೃತಿಯನ್ನು ರಚಿಸಿ ಹರಿಜನರಿಗೆ ಮಾತ್ರವಲ್ಲ. ಇಡೀ ಮಾನವ ಪ್ರಪಂಚಕ್ಕೇನೆ, ಅದರಲ್ಲೂ ಕರ್ನಾಟಕ ಜನರಿಗೆ, ಮಹದುಪಕಾರ ಮಾಡಿರುವರು" ಎಂದು ಅಭಿಪ್ರಾಯಪಟ್ಟಿದ್ದಾರೆ

ಗೋವಿಂದದಾಸ್ ಅವರ ಸಾಹಿತ್ಯ ಮತ್ತು ಸಮಾಜ ಸೇವೆಯನ್ನು ಗುರುತಿಸಿ ಸರ್ಕಾರ ೧೯೪೨ರಲ್ಲಿ ಮೈಸೂರು ಪ್ರಜಾಪ್ರತಿನಿಧಿ ಸಭಾದ ಸದಸ್ಯರನ್ನಾಗಿ (ಎಂ.ಆರ್.ಎ.) ನೇಮಕ ಮಾಡಿತು. ನಂತರ ೧೯೪೮ರಲ್ಲಿ ಮೈಸೂರು ರಾಜ್ಯದ ರಾಜ್ಯಾಂಗ ಸಭಾದ (ಎಂ.ಸಿ.ಎ.) ಹಾಸನ ಜಿಲ್ಲಾ ಪ್ರತಿನಿಧಿಯಾಗಿ, ೧೯೫೨ರಲ್ಲಿ ಬೇಲೂರು ತಾಲೋಕಿನ ವಿಧಾನಸಭಾ ಸದಸ್ಯಾರಾಗಿ ಕೆಲಸ ಮಾಡಿದರು. ಜೊತೆಗೆ ಹಾಸನ ಜಿಲ್ಲಾ ಬೋರ್ಡ್ ಸದಸ್ಯರಾಗಿ, ಚನ್ನರಾಯ ಪಟ್ಟಣ ಅಭಿವೃದ್ಧಿ ಮಂಡಳಿಯ ಸದಸ್ಯಾರಾಗಿ, ಸೆಂಟ್ರಲ್ ಡಿಪ್ರೆಸ್ಡ್ ಕ್ಲಾಸ್ ಕಮಿಟಿಯ ಸದಸ್ಯರಾಗಿ ಕೂಡ ಸೇವೆ ಮಾಡಿದ್ದಾರೆ. ೧೯೩೪ರಲ್ಲಿ ಕುವೆಂಪು ಅವರು ಅಧ್ಯಕ್ಷರಾಗಿದ್ದ ಮೈಸೂರು ಸ್ಟೇಟ್ ಕನ್ನಡ ಟೆಕ್ಸ್ಟ್‌ಬುಕ್ಕ ಕಮಿಟಿಯ ಸದಸ್ಯರಾಗಿ ೧೯೫೫ರಲ್ಲಿ ಮೈಸೂರು ರಾಜ್ಯದ ವಯಸ್ಕರ ಶಿಕ್ಷಣ ಸಮಿತಿಯ ಸದಸ್ಯರಾಗಿ ಕೆಲಸ ಮಾಡಿದ್ದಾರೆ.

೧೯೫೭ ರಲ್ಲಿ ಕಲ್ಕತ್ತದಲ್ಲಿ ನಡೆದ ವಯಸ್ಕರ ಶಿಕ್ಷಣ ಸಮಿತಿಯ ರಾಷ್ಟ್ರೀಯ ವಿಚಾರಗೋಷ್ಠಿಯಲ್ಲಿ ಮೈಸೂರು ರಾಜ್ಯದ ಡೆಲಿಗೇಟಾಗಿ ಭಾಗವಹಿಸಿದ್ದಾರೆ.

ಸರಳ, ಸ್ವಚ್ಛ ಹಾಗೂ ಪ್ರಾಮಾಣಿಕ ವ್ಯಕ್ತಿತ್ವಕ್ಕೆ ಹೆಸರಾದ ಇವರು ತಮ್ಮ ಅಧಿಕಾರವನ್ನು ಎಂದೂ ಸ್ವಾರ್ಥಕ್ಕೆ ಬಳಸಿಕೊಳ್ಳಲಿಲ್ಲ. ವಾಸ್ತವವಾಗಿ ಆರ್ಥಿಕವಾಗಿ ತುಂಬ ತೊಂದರೆಯಲ್ಲಿಯೆ ಇರುತ್ತಿದ್ದ ದಾಸರು, ಸ್ವಂತ ಬದುಕಿನಕಡೆ ಹೆಚ್ಚು ಗಮನ ಹರಿಸುತ್ತಿರಲಿಲ್ಲ. ಬದಲಾಗಿ ತಮ್ಮ ಮೂಲಮನೋಧರ್ಮವಾದ ಸಮಾಜ ಸುಧಾರಣೆ ನೆಲೆಯಲ್ಲಿಯೆ, ಸಾಮಾನ್ಯರ, ಸಾರ್ವಜನಿಕರ ಹಿತಕ್ಕಾಗಿ ಶ್ರಮಿಸುತ್ತಿದ್ದರು. ಮನುಷ್ಯತ್ವದ ಬಗ್ಗೆ ಗಾಢ ಪ್ರೀತಿಯನ್ನಿಟ್ಟುಕೊಂಡಿದ್ದ ದಾಸರಿಗೆ ಕಷ್ಟದಲ್ಲಿದ್ದವರಿಗೆ ಸಹಾಯ ಮಾಡುವುದು ಅವರ ವ್ಯಕ್ತಿತ್ವದ ಮುಖ್ಯ ಗುಣವಾಗಿತ್ತು. ಗೋವಿಂದದಾಸರನ್ನು ಗುರು ಎಂದು ತುಂಬು ಅಭಿಮಾನದಿಂದ ಸ್ಮರಿಸಿಕೊಳ್ಳುವ, ಸುಮಾರು ತೊಂಭತ್ತು ವರ್ಷ ವಯಸ್ಸಿನ ಹಿರಿಯ ಸ್ವಾತಂತ್ರ್ಯ ಹೋರಾಟಗಾರರೂ ಆದ ದಮ್ಮನಿಂಗಳದ ಡಿ. ಆರ್. ಮಂಜೇಗೌಕರು "ನೋಡಿ ಗೋವಿಂದದಾಸ್ ಕವಿಗಳು ಇಂಗ್ಲೀಷನರ್ಮೆಲೆ 'ಪರದೇಶಿ ಪರಂಗಿಯರು' ಅಂತ ಪದ್ಯ ಬರ್ದು ಪೋಲಿಸ್ನರು ಅವುರ್ನ ಹುಡ್ಕಾಡಿದ್ರ. ಗಾಂಧೀಜಿ ಯವರ್ನ ನೇರವಾಗಿ ನೋಡಿ ಅವ್ರ ಸೇವೆ ಮಾಡ್ದ ಪುಣ್ಯಾತ್ಮ. ಗಾಂಧೀಜಿಯವರು ಕೆಂಗೇರಿ, ನಂದಿಬೆಟ್ಟದ ಕಾರ್ಯಕ್ರಮಕ್ಕೆ ಬಂದಿದ್ರು, ಹೊಳೆ ಹಾಯುವಾಗ ಗಾಂಧೀ ಜೇರ್ನ ಕೈಯಿಡ್ಕಂಡು ಹಾಯ್ಸಿದ್ರಂತೆ, ಆಗ ಗಾಂಧೀಜಿ ಇವ್ರ ಹೆಗ್ಲ ಮೇಲೆ ಕೈ ಹಾಕಿದ್ರಂತೆ. ಅವ್ರ ಕೈ ಹೂವ್ನಂಗಿದ್ವು ಅಂತ ಹೇಳರು. ಗಾಂಧೀಜಿನ ನಾವು ನೇರವಾಗಿ ನೋಡ್ದವ್ರಲ್ಲ. ಫೋಟೊದಲಿ, ಪೇಪರ್ನಲಿ ನೋಡಿದಿವಿ. ಆದ್ರೆ ಗಾಂಧೀಜೀನ ಮುಟ್ಟಿ ಬಂದ ನಮ್ ಗೋವಿಂದ ದಾಸುರ್ನ ಮುಟ್ಟಿದ ಪುಣ್ಯ ನಮ್ಗಿದೆ. ಬಹಳ ದೊಡ್ಡ ಮನ್ಸ, ಎಂ.ಎಲ್. ಎ ಆಗಿದ್ದಾಗ, ಜಾತಿಭೇದ ಅನ್ನದೆ ಸಹಾಯ ಮಾಡಿದ್ದಾರೆ ಬಹಳ ಶಿಸ್ತು, ಶುಚಿ. ಸ್ನಾನ, ಪ್ರಾರ್ಥನೆ ಮಾಡ್ದೆ ಒಂದ್ಲೋಟ ನೀರ್ನು ಕುಡಿತಿರ್‍ನಿಲ್ಲ. ಅವ್ರಿಂದ ನಾನು ಬಹಳ ಕಲಿತ್ಕಂಡೆ. ಅವ್ರ ಬದ್ಕು ನಂಗೆ ಆದರ್ಶ" ಎಂದು ಹೃದಯ ಬಿಚ್ಚಿ ನೆನೆಯುತ್ತಾರೆ ಈ ಜಾತಿಕ್ರಿಮಿಯ ನಿಧಾನ ವಿಷ [Slow poison] ತುಂಬಿರುವ ಈ ಸಮಾಜದಲ್ಲಿ ನಿಜಕ್ಕೂ ಮನುಷ್ಯತ್ವದ ಬಗ್ಗೆ ಗೌರವವಿರುವ ಡಿ. ಆರ್ ಮಂಜೇ ಗೌಡರಂತಹ ಹಿರಿಯ ಜೀವಗಳು ಇದ್ದಾವಲ್ಲ ಎಂಬುದು ಸಮಾಧಾನದ ಸಂಗತಿ ಆಗಿದೆ. ಇಂತಹ ವ್ಯಕ್ತಿತ್ವಗಳು ಬದುಕುವ ಆಸೆಯನ್ನು ಚಿಗುರಿಸುತ್ತವೆ ಎಂಬುದು ಗಮನಾರ್ಹ ಸಂಗತಿ ಆಗಿದೆ.

ಗ್ರಾಮಸಮಾಜದೊಟ್ಟಿಗೆ ಗಾಢಸಂಬಂಧವನ್ನಿಟ್ಟುಕೊಂಡಿದ್ದ ಗೋವಿಂದದಾಸರು ತಾವು ಹುಟ್ಟಿದ ಊರಿನಲ್ಲಿ ಸುಮಾರು ೧೯೩೭ರಲ್ಲಿಯೆ ರಾಮೋತ್ಸವ ಎಂಬ ಸಾಂಸ್ಕೃತಿಕ ಉತ್ಸವವನ್ನು ಪ್ರಾರಂಭಿಸಿದರು. ಇದು ಪ್ರತಿವರ್ಷ ಏಪ್ರಿಲ್ ತಿಂಗಳಿನಲ್ಲಿ ನೆಡೆಯುತ್ತದೆ. ೧೯೮೭ರವರೆಗೂ ಬದುಕಿದ್ದ ದಾಸರು ಅವರು ಬದುಕಿದ್ದಾಗ ತುಂಬ ಲವಲವಿಕೆಯಿಂದ ಪಾಲ್ಗೊಂಡು ನಡೆಸುತ್ತಿದ್ದರು ದಲಿತರು. ತಮ್ಮಲ್ಲಿದ್ದ ಜಡತ್ವ, ಕೊಳಕುತನದಿಂದಲೆ ಸವರ್ಣೀಯರಿಂದ ತಿರಸ್ಕೃತರಾಗುತ್ತಿದ್ದುದನ್ನು ದಾಸರು ಅರಿತಿದ್ದರು. ಅದನ್ನು ತೊಡೆದು ಹಾಕಿ, ದಲಿತರಲ್ಲಿ ಜೀವನ ಶ್ರದ್ಧೆ, ಸ್ವಚ್ಛತೆ ಆತ್ಮಸ್ಥೈರ್ಯವನ್ನು ರೂಢಿಸಿಕೊಂಡು, ಬದುಕಿನಲ್ಲಿ ಜೀವಂತಿಕೆಯನ್ನು ತುಂಬುವ ಪ್ರಮುಖ ಉದ್ದೇಶದಿಂದಲೆ ಇದನ್ನು ಪ್ರಾರಂಭಿಸುತ್ತಾರೆ. ಈ ಉತ್ಸವದಲ್ಲಿ ತುಂಬ ವಿಶಿಷ್ಟವಾದ, ರೋಚಕವಾದ, ಜನಪದ ಪ್ರದರ್ಶನಗಳು ನಡೆಯುತ್ತವೆ. ಕೋಲಾಟ ಹುಲಿವೇಷ, ಕುಣಿತ, ವಾದ್ಯಮೇಳ, ಹಾಸ್ಯ, ನೃತ್ಯ. ಇದರಲ್ಲಿ ಪ್ರಮುಖವಾದವುಗಳು. ಜೊತೆಗೆ ಗೋವಿಂದ ದಾಸರು ರಚಿಸಿರುವ ಹಾಡುಗಳನ್ನು ಊರಿನ ಜನರು ಇಂದಿಗೂ ತುಂಬ ಶ್ರದ್ಧೆಯಿಂದ ಹಾಡುತ್ತಾರೆ. ಈ ಉತ್ಸವ ಆ ಊರಿನ ದಲಿತರಿಗೆ ಒಂದು ಸಾಂಸ್ಕೃತಿಕ ಅಂತಸ್ತು ಮತ್ತು ಘನತೆಯನ್ನು ತಂದುಕೊಟ್ಟಿದೆ ದಲಿತರು ಸಾಂಸ್ಕೃತಿಕವಾದ ಭದ್ರ ನೆಲೆಯಲ್ಲಿ ಬದುಕನ್ನು ರೂಪಿಸಿಕೊಳ್ಳಬೇಕೆಂಬ ಗೋವಿಂದದಾಸರ ಹಂಬಲ ಈಡೇರುತ್ತಿರುವುದು ತುಂಬ ಮಹತ್ವದ ಸಂಗತಿ ಆಗಿದೆ.

೧೯೭೧ರಲ್ಲಿ ಆಗಿನ ಸರ್ಕಾರ ಗೋವಿಂದ ದಾಸ್ ಅವರ ಸಾಹಿತ್ಯ ಮತ್ತು ಸಮಾಜ ಸೇವೆಯನ್ನು ಗುರುತಿಸಿ ರಾಜ್ಯ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಈ ಪ್ರಶಸ್ತಿಯು ಬಂದ ವಿಚಾರವನ್ನು ಗೋವಿಂದದಾಸರಿಗೆ ತಿಳಿಸಿದಾಗ, ಅದನ್ನು ತೆಗೆದುಕೊಳ್ಳಲು ನಿರಾಸಕ್ತರಾಗಿದ್ದರಂತೆ, ಆದರೆ ಅವರ ಹಿತೈಷಿಗಳ ಒತ್ತಾಯದಿಂದ ಹೋಗಿ ಪ್ರಶಸ್ತಿಯನ್ನು ತಂದರು. ಆಗ "ಈ ಪ್ರಶಸ್ತಿ ತಗಂಡು ನಾನೇನು ಮಾಡ್ಲಿ. ಈ ಬರಗಾಲದಲ್ಲಿ ಸ್ವಲ್ಪ ಹಣವನ್ನಾದ್ರು ಕೊಟ್ಟಿದ್ರೆ ಮಕ್ಕಳನ್ನಾದ್ರು ಸಾಕಗಾಕ್ತಿತ್ತು ಎಂದರಂತೆ. ಎಂ.ಎಲ್. ಎ ಆಗಿದ್ದಾಗ ಕೂಡ ಸ್ವಂತಕ್ಕೆ ಏನೂ ಮಾಡಿಕೊಳ್ಳದ ಅವರು, ಸಮಾಜ ಸುಧಾರಣೆಯ ಕೆಲಸದಲ್ಲಿಯೆ ಆತ್ಮಸಂತೋಷವನ್ನು ಕಾಣುತ್ತಿದ್ದರು. ಹಾಗಾಗಿ ಅವರ ಬದುಕು ಅಭದ್ರತೆಯಲ್ಲಿಯೆ ಸವೆದು ಹೋಯಿತು. ಅದೇನೆ ಇರಲಿ. ಶ್ರೇಣೀಕೃತ ಜಾತಿವ್ಯವಸ್ಥೆಯ ಈ ಸಮಾಜದಲ್ಲಿ, ಯಾವ ಬಗೆಯ ಸಹಜ ಪ್ರೋತ್ಸಾಹವೂ ದೊರಕದಿದ್ದ ಆ ಕಾಲದಲ್ಲಿಯೆ, ತಮ್ಮ ಸ್ವಂತ ಆಸಕ್ತಿ ಪರಿಶ್ರಮದಿಂದಲೆ ಶಿಕ್ಷಣ ಪಡೆದು ಮೇಲೇರಲು ಯತ್ನಿಸುತ್ತ ತಮ್ಮ ಸಾತ್ವಿಕ ಚಿಂತನೆಗಳ ಮೂಲಕವೆ ಗೋವಿಂದದಾಸರು ತುಂಬ ಪ್ರಮಾಣಿಕವಾಗಿ ಮಾಡಿರುವ ಸಮಾಜ ಸೇವೆ ಮತ್ತು ಅವರು ಸೃಷ್ಟಿಸಿರುವ, ಸಾಹಿತ್ಯಕ ಕೆಲಸಗಳು, ಇಂದಿನ ನಮ್ಮ ಯುವಪೀಳಿಗೆಗೆ ಪ್ರೇರಣೆಯಾಗ ಬಲ್ಲವುಗಳಾಗಿವೆ. □

'ಕರ್ಮವೆಂದರೆ ಕಲ್ಪನೆಯಲ್ಲ'

ಬುದ್ಧಾಯಣ

ಜನಕ್ಕೇ ಬೆಳಕಾದ ಬುದ್ಧನ ಕಥೆಗಳು ಅಪಾರ. ಬುದ್ಧ ತನ್ನ ಪ್ರವಾಸದ ಕಾಲದಲ್ಲಿ ಜನರ ಸಮಸ್ಯೆಗಳನ್ನು ಬಗೆಹರಿಸಲು ಹಾಗೂ ಅವರಿಗೆ ಮಾರ್ಗದರ್ಶನ ಮಾಡಲು ಕಥೆಗಳನ್ನು ಹೇಳುತ್ತಿದ್ದ. ಇದು ಜನರನ್ನು ತಿದ್ದಲು ಅತ್ಯಂತ ಸಮರ್ಥ ಮಾರ್ಗವೆಂದೇ ಇಂದಿಗೂ ಜನ ತಿಳಿದಿದ್ದಾರೆ. ಬುದ್ಧ ಹೇಳಿದ ಇಂಥ ನೂರಾರು ಕಥೆಗಳು ಇಂದು ವಿವಿಧ ರೂಪದಲ್ಲಿ ಲಭ್ಯವಿದೆ. ಸಿ.ಎಚ್. ರಾಜಶೇಖರ್ ಅಂಥ ಹಲವು ಕಥೆಗಳನ್ನು ಸಂಗ್ರಹಿಸಿದ್ದಾರೆ. ಅವುಗಳನ್ನು 'ಸಂವಾದ' ಓದುಗರಿಗಾಗಿ ನೀಡುತ್ತಿದ್ದೇವೆ.

○ಸಿ.ಎಚ್.ರಾಜ ಶೇಖರ್

ರಾಜಗೃಹದಲ್ಲಿ ಯಕ್ಕನೆಂಬ ಪಂಡಿತನೊಬ್ಬನಿದ್ದ. ಆತ ಆತ್ಮ, ಪೂರ್ವಕರ್ಮ, ಹುಟ್ಟು ಮತ್ತು ಸಾವಿನ ರಹಸ್ಯದ ಬಗ್ಗೆ ಅಪಾರ ಜಿಜ್ಞಾಸೆಯನ್ನು ಹೊಂದಿದ್ದ. ಇಂತಹ ಮೂಲಭೂತ ವಿಷಯಕ್ಕೆ ಸರಿ ಉತ್ತರ ಪಡೆಯಬೇಕಾದರೆ ಬುದ್ಧನೇ ಸರಿಯಾದ ಗುರುವೆಂದು ತಿಳಿದುಕೊಂಡಿದ್ದ. ಅಂತಹ ಒಂದು ಸಂದರ್ಭದಲ್ಲಿ ಬುದ್ಧನ ರಾಜಗೃಹದ ಇಂದ್ರಶಿಖರವೆಂಬ ಪರ್ವತದ ತಪ್ಪಲಿನಲ್ಲಿ ಬೀಡುಬಿಟ್ಟಿದ್ದ. ಈ ವಿಷಯವನ್ನು ಅರಿತ ಯಕ್ಕನು ಬುದ್ಧನ ಬಳಿ ಬಂದು ಅತನಿಗೆ ವಂದಿಸಿ ಗೌರವ ಸಮರ್ಪಣೆ ಮಾಡಿದ. ಅವರ ಎದುರಿನಲ್ಲಿ ಕುಳಿತು ತಾನು ಬಂದ ಉದ್ದೇಶ, ತನ್ನನ್ನು ಕಾಡುತ್ತಿರುವ ಪ್ರಶ್ನೆಗಳನ್ನು ತಿಳಿಸಿದ. ಬಳಿಕ ಬುದ್ಧನನ್ನು ಉದ್ದೇಶಿಸಿ:

"ಗುರುದೇವಾ, ಆತ್ಮ ಎಂದರೆ ಏನು? ಅದರ ಸ್ವರೂಪ ವೇನು? ಆತ್ಮವು ಈ ದೇಹವನ್ನು ಹೇಗೆ ಹೊಂದಿರುತ್ತದೆ? ದೇಹದ ರಚನೆಯ ಯಾವ ಸಂದರ್ಭದಲ್ಲಿ ಆತ್ಮನು ಬರುತ್ತಾನೆ? ಅಥವಾ ತಾಯಿಯ ಗರ್ಭಕೋಶದಲ್ಲಿ ಆತ್ಮನು ಹೇಗೆ ತೇಲಾಡುತ್ತಾ ನಿರೀಕ್ಷಣೆಯಲ್ಲಿ ಇರುತ್ತಾನೆ?"

"ಎಲೈ ಯಕ್ಕನೇ, ಆತ್ಮವನ್ನು ನಾನು ಕಂಡವನಲ್ಲ! ನೋಡಿ ಅನುಭವಿಸಿದವನಲ್ಲ. ಅನಾನುಭವ ಅಥವಾ ಕಲ್ಪನೆಯ ಆಧಾರದ ಮೇಲೆ ನಾನು ಉತ್ತರಿಸಲಾರೆ. ವೈದಿಕ ಪಂಡಿತರಾದ ಬ್ರಾಹ್ಮಣರು ಪರಮಾತ್ಮನೊಂದಿಗೆ ಆತ್ಮವನ್ನು ಸಂಯೋಜಿಸಿದ್ದಾರೆ. ಆದರೆ ಅದು ವಾಸ್ತವವಾಗಲಿ ಅಥವಾ ಸತ್ಯವಾಗಲಿ ಅಲ್ಲ. ಕೇವಲ ಕಲ್ಪನೆ ಮತ್ತು ಊಹೆಯೆ ಅದಕ್ಕೆ ಆಧಾರ. ಏಕೆಂದರೆ ಆತ್ಮವು 'ಜೈವಿಕವಲ್ಲ.' ಅದು ನಮ್ಮ ಮೂಳೆಗಳ ಸಮೂಹ ಮತ್ತು ಒಳ ಅಂಗಾಂಗಳಂತೆ ದೇಹದ ಒಂದು ಅಂಗವಲ್ಲ. ಆದರೂ ಹೊರಗಿನಿಂದ ಬಂದು ಸ್ಥಾಪಿಸಲ್ಪಡುತ್ತದೆ ಎನ್ನುತ್ತಾರೆ. ಆದರೆ ಅದಕ್ಕೆ ಮೂಲಸತ್ಯ ಯಾವುದು? ಮೂಲಧಾತು ಯಾವುದು? ಕಾರಣತಾ ಸಂಬಂಧವೇನು? ಎಂಬಲ್ಲಿ ವಿಫಲರಾಗುತ್ತಾರೆ. ವಿಫಲತೆಯೆ ಸತ್ಯ ಹೇಗಾಗಲು ಸಾಧ್ಯ? ಏಕೆಂದರೆ "ನಿರ್ಜೀವ ವಸ್ತು ರೂಪವು ಜೀವಿಸುತ್ತಿರುವ ಆತ್ಮನಲ್ಲ ಎಂಬುದನ್ನು ಅರಿಯಬೇಕು!"

"ಎಲೈ ಯಕ್ಕನೇ ಕೇಳು, ಆತ್ಮವು ದೇಹಕ್ಕಿಂತ ವಿಭಿನ್ನ ಪ್ರತ್ಯೇಕ ಮತ್ತು ಹೊರಗಿನಿಂದ ಬಂದು ಸ್ಥಾಪಿತವಾದದ್ದು ಎಂದು ಒಂದೆಡೆ ಪ್ರಬಲವಾಗಿ ಪ್ರತಿಪಾದಿಸುತ್ತಾರೆ. ಅವರೇ ಮತ್ತೊಂದೆಡೆ ಆತ್ಮವು ತಾಯಿ ಗರ್ಭದಲ್ಲಿ ತೇಲಾಡುತ್ತಿರುತ್ತದೆ. ಸ್ಥಾನ ಪಡೆಯಲು ನಿರೀಕ್ಷಣೆಯಲ್ಲಿ ಇರುತ್ತದೆ ಎನ್ನುತ್ತಾರೆ. ಹಾಗದರೆ ಅವರ ವಾದದ ಪ್ರಕಾರವೇ ಅದು ದ್ವಂದ್ವ ಮತ್ತು ಅಸತ್ಯವಲ್ಲವೆ? ಬ್ರಾಹ್ಮಣರು ಆತ್ಮ-ಪರಮಾತ್ಮ, ಸ್ವರ್ಗ-ನರಕ, ಪೂರ್ವಕರ್ಮ-ಪುನರ್ಜನ್ಮ, ಅತಿಮಾನುಷ ಶಕ್ತಿ ಮತ್ತು ಪವಾಡ ಮುಂತಾದ ಪಾರಮಾರ್ಥಿಕ ವಿಷಯಗಳಿಗೆ ಮತ್ತು ಇರುವಿಕೆಗಳಿಗೆ ಅವರು ಕೊಡುವ ಉದಾಹರಣೆಯಷ್ಟೇ ಸತ್ಯವಿರುತ್ತದೆ. ಆದರೂ ಅದರ ಮೂಲವಸ್ತು ಅಸತ್ಯ, ಕುತಂತ್ರ, ಕಟ್ಟು ಕಥೆ ಮತ್ತು ಕಲ್ಪನೆಯಿಂದ ಕೂಡಿರುತ್ತದೆ.! ಏಕೆಂದರೆ, ಅವರೂ ಕೂಡ ಭೌತಿಕ ಜಗತ್ತನ್ನು ಮೀರಿ ಬೆಳೆಯಲು ಸಾಧ್ಯವಿಲ್ಲ! ಊಹೆ, ಕಲ್ಪನೆ ಮತ್ತು ಪುಷ್ಠಿ ಕರಣದ ಹಿಂದಿನ ಇರುವಿಕೆ ಅಸತ್ಯ ಎಂಬ ಅರಿವು ಒಂದು ಪಕ್ಷ ಇರದೇ ಇದ್ದರೆ, ಅಜ್ಞಾನವೋ, ಮೌಢ್ಯವೋ, ಮುಗ್ಧತೆಯೋ ಇತ್ತೆಂದರೆ ವೈದಿಕರು ಬಹುಜನರ ಶೋಷಣೆಯನ್ನೇ ಏಕೆ ಪ್ರಾಧಾನ್ಯ ಮಾಡಿಕೊಳ್ಳುತ್ತಿದ್ದರು'

"ಎಲೈ ಯಕ್ಕನೇ ಕೇಳು, ತಾಯಿಯ ಗರ್ಭದಲ್ಲಿ ಮೊದಲು ಕಲಾಲ (kalala) ಹುಟ್ಟುತ್ತದೆ. ಅನಂತರ ಆಬುದ್ಧಿ (Abudde) ಹುಟ್ಟುತ್ತದೆ. ಅನಂತರ ಪೇಸಿ (Pesi) ಬೆಳೆಯುತ್ತದೆ. ಮುಂದೆ ಅದು ಘನವಾಗಿ (Ghana) ವೃದ್ಧಿಸುತ್ತದೆ. ಅನಂತರ ಘನದಲ್ಲಿ ಕ್ರಮವಾಗಿ ಕೂದಲು ಮತ್ತು ಉಗುರುಗಳು ಕಾಣಿಸಿಕೊಳ್ಳುತ್ತವೆ. ತಾಯಿಯು ಯಾವ ಯಾವ ಆಹಾರ ಪದಾರ್ಥಗಳನ್ನು ಸೇವಿಸುತಾಳೋ ಅದರಂತೆ ಮಗುವು ತನ್ನ ತಾಯಿಯ ಗರ್ಭದಲ್ಲಿ ಜೀವಿಸಿ ಬೆಳೆಯುತ್ತದೆ. ಅದರೆ ವೈದಿಕ ಸಿದ್ಧಾಂತವು ಇದಕ್ಕೆ ಭಿನ್ನವಾಗಿದೆ'

"ಗುರುದೇವಾ, ನಿನ್ನ ವಾದವು ವಿಚಿತ್ರವು, ವಿಭಿನ್ನವು ಮತ್ತು ಅದ್ಭುತವೂ ಆಗಿದೆ. ಸತ್ಯಕ್ಕೆ ಸಮೀಪವಿದೆ. ಆದರೂ ವೈದಿಕ ಸಿದ್ಧಾಂತದಲ್ಲಿ ಮಗುವಿನ ಪೂರ್ವಕರ್ಮವು ಮಗುವಿನಿಂದಲೇ, ಮಗುವಿಗಾಗಿಯೇ ಅನುವಂಶೀಕವಾಗಿ ಪಡೆದದ್ದು ಎಂದು ಪ್ರತಿಪಾದಿತವಾಗಿದೆ! ಆದರೆ ನಿನ್ನ ವಾದದ ಪ್ರಕಾರ ಮಗುವು ತಾಯಿಯಿಂದ ಪೂರ್ವಕರ್ಮವನ್ನು, ಆತ್ಮವನ್ನು ಪಡೆಯಲಾರದು ಎನ್ನುವೇ! ಹಾಗಾದರೆ ಮಗುವು ತಾಯಿಯ ಗರ್ಭದಿಂದ ಪಡೆಯುವುದು ಏನನ್ನು?"

"ಎಲೈ ಯಕ್ಕನೇ, ಹುಟ್ಟುವ ಮಗುವು ತಾಯಿಯ ಗರ್ಭದಿಂದ ಪಡೆಯುವುದು ಅನುವಂಶಿಕತೆಯನ್ನು, ತಂದೆ ತಾಯಿಗಳ ಗುಣ, ರೂಪ ಮತ್ತು ಸ್ವಭಾವಜನ್ಯ ನ್ಯೂನತೆಗಳಷ್ಟೇ"

"ಗುರುದೇವಾ, ನನಗಿದರ ಹಿನ್ನಲೆ, ಸರಳತೆ, ಸತ್ಯ ಮತ್ತು ವಸುಸ್ಥಿತಿ ಸ್ಪಷ್ಟವಾಗಿ ಅರ್ಥವಾಗಲಿಲ್ಲ. ನನಗೊಂದು ದೃಷ್ಟಾಂತವನ್ನು ಕೊಡಿ"

"ಎಲೈ ಯಕ್ಕನೇ, ಒಂದು ಪಕ್ಷ ಒಬ್ಬ ಮನುಷ್ಯ ಮಾವಿನ ಹಣ್ಣುಗಳನ್ನು ಕದ್ದರೆ, ಅ ಕಳ್ಳನು ಶಿಕ್ಷಾರ್ಹನೇ?"

"ಹೌದು ಗುರುದೇವಾ, ಅವನು ನಿಜಕ್ಕೂ ಶಿಕ್ಷಾರ್ಹ!"

"ಎಲೈ ಯಕ್ಕನೇ, ಅದು ಹೇಗೆ ಸಾಧ್ಯ? ಏಕೆಂದರೆ ನೆಲದ ಮೇಲಿದ್ದ ಮತ್ತೊಂದು ರಾಶಿ ಮಾವಿನ ಹಣ್ಣುಗಳನ್ನು ಅವನು ಕದ್ದಿರಲಾರ. ಹಾಗಿದ್ದಲ್ಲಿ ಅವನು ಹೇಗೆ ಶಿಕ್ಷಾರ್ಹ?"

"ಗುರುದೇವಾ, ಏಕೆಂದರೆ ಆತನು ಕದ್ದ ಮಾವಿನ ಹಣ್ಣುಗಳು ನೆಟ್ಟು ಬೆಳಿಸಿದ ಮಾವಿನ ಮರದ ಫಲಗಳು"

"ಎಲೈ ಯಕ್ಕನೇ, ಅದೇ ರೀತಿ ತಂದೆ ಮತ್ತು ತಾಯಿ ಎಂಬ ನಾಮ ಹಾಗೂ ರೂಪವು ಪಾಪ ಅಥವಾ ಪುಣ್ಯ ಕಾರ್ಯಗಳನ್ನು ಮಾಡುತ್ತವೆ. ಅದು ಅವುಗಳ ಸ್ವಭಾವಜನ್ಯ ಪ್ರಕ್ರಿಯೆ. ಇದನ್ನೆ ನಾನು ಜೀವ ಪ್ರವಾಹ ಎನ್ನುವುದು. ಈ ಪ್ರವಾಹದಿಂದ ಮಗು ಎಂಬ ಮತ್ತೊಂದು ನಾಮ ಮತ್ತು ರೂಪವು ಸಹಜವಾಗಿಯೇ ಮತ್ತೆ ಮರುಹುಟ್ಟು ಪಡೆಯುತ್ತದೆ. ಇದು ಪ್ರಕೃತಿಯ ಸಹಜ ಕ್ರಿಯೆ ಅಲ್ಲವೆ? ಇದನ್ನೆ ನಾನು ಬೀಜ ಮತ್ತು ವೃಕ್ಷ ಎನ್ನುವುದು! ಅಥವಾ ನಾಮ ಮತ್ತು ರೂಪ ಎನ್ನುವುದು!

‘ಕರ್ಮವೆಂದರೆ ವಿಧಿ ಬರಹವಲ್ಲ’

ಒಮ್ಮೆ ಬುದ್ಧನು ಮಗಧರಾಜ್ಯದ ಚೇತನ ವನದಲ್ಲಿ ತನ್ನ ಅಸಂಖ್ಯಾತ ಭಿಕ್ಷುಗಳೊಂದಿಗೆ ತಂಗಿದ್ದ. ಆ ಸಮಯದಲ್ಲಿ ಎಂದಿನಂತೆ ಭಿಕ್ಷುಗಳಿಗೆ ಉಪದೇಶ ನೀಡುತ್ತಿದ್ದ. ಅಂತಹ ಸಮಯದಲ್ಲಿ ಎದ್ದು ನಿಂತ ಭಿಕ್ಷುವೊಬ್ಬನು ತನ್ನ ಗುರುವಿಗೆ ವಂದಿಸುತ್ತಾ ಹೀಗೆ ಪ್ರಶ್ನಿಸಿದಃ

“ಗುರುದೇವಾ, ಕರ್ಮ ಎಂದರೆ ಏನು? ವೈದಿಕರ ಕರ್ಮಸಿದ್ಧಾಂತಕ್ಕೂ, ಬೌದ್ಧರ ಕರ್ಮಸಿದ್ಧಾಂತಕ್ಕೂ ವ್ಯತ್ಯಾಸವಿಲ್ಲವೆ? ಎರಡು ಒಂದೇ ಎಂಬ ವಾದವನ್ನು ಬ್ರಾಹ್ಮಣರು ಸಾರುತ್ತಿದ್ದಾರೆ. ಇದು ಸತ್ಯವೆ?”

“ಗೆಳೆಯ, ಕರ್ಮವೆಂದರೆ ಕಾಯಕವೆಂದೆ ಅರ್ಥ. ಇದು ಸಹಜಕ್ರಿಯೆ. ಆದರೆ ಕಾಯಕವು ಕೆಲವು ನಿಯಮಗಳಿಗೆ ಬದ್ಧವಾಗಿದೆ. ಅದನ್ನು ನಿಷ್ಠೆಯಿಂದ ಪಾಲಿಸದಿದ್ದರೆ ನೈತಿಕ ವ್ಯವಸ್ಥೆಯೇ ಇರಲು ಸಾಧ್ಯವಿಲ್ಲ. ಒಳ್ಳೆಯದನ್ನು ಬಯಸುವುದಾದರೆ ಒಳ್ಳೆಯ ಕಾರ್ಯವನ್ನು ಮಾಡಬೇಕು. ಕೆಟ್ಟದ್ದನ್ನು ಬಯಸುವುದಾದರೆ ಕೆಟ್ಟದ್ದನ್ನು ಮಾಡಬೇಕು. ಒಳ್ಳೆಯ ಕಾರ್ಯಕ್ಕೆ ಶೀಲವೇ ಮೂಲ. ಕೆಟ್ಟ ಕಾರ್ಯಕ್ಕೆ ಆಸೆ, ಕಾಮ ಮತ್ತು ಸ್ವಾರ್ಥವೇ ಮೂಲ. ಆ ಕಾರಣಕ್ಕಾಗಿಯೇ ನಾನು ಃ “ನೀನು ಮಾಡಿದ್ದನ್ನು ನೀನು ಅನುಭವಿಸು” ಎಂದದ್ದು. ಇಂದಿನ ಕಾಯಕಕ್ಕೂ, ಮುಂದಿನ ಪುರ್ನಜನ್ಮಕ್ಕೂ ಹಾಗೂ ಪಾಪ ಪುಣ್ಯಗಳ ಸಂಯೋಜನೆಗೂ ತಳಕು ಹಾಕುವುದು ಅತ್ಯಂತ ಕಿಡಿಗೇಡಿತನದ ಸಿದ್ಧಾಂತವೇ ಸರಿ.”

“ಎಲ್ಮೆ ಗೆಳೆಯನೇ, ಕೇವಲ ಪದಗಳ ನಡುವಣ ಸಾಮ್ಯದ ಆಧಾರದ ಮೇಲೆ ಬ್ರಾಹ್ಮಣರು ಅಜ್ಞಾನಿ ಜನಸಮೂಹವನ್ನು ತಪ್ಪುದಾರಿಗೆ ಎಳೆಯುತ್ತಿದ್ದಾರೆ. ಉದ್ದೇಶಪೂರ್ವಕವಾಗಿ ಬೌದ್ಧಧರ್ಮವು ವೈದಿಕ ಧರ್ಮದಂತಿದೆ ಎನ್ನುತ್ತಿದ್ದಾರೆ. ಅದರೆ ವಾಸ್ತವವಾಗಿ ವೈದಿಕ ಕರ್ಮ ನಿಯಮಕ್ಕೆ ಅತ್ಮವೇ ಆಧಾರ. ಜನ್ಮಾಂತರವೇ ನಿಯಮ. ಜನ್ಮದಿಂದ ಜನ್ಮಕ್ಕೆ ಪಾಪ ಪುಣ್ಯಗಳು ವರ್ಗವಾಗುತ್ತದೆ ಮತ್ತು ಅದರ ಆಧಾರದ ಮೇಲೆ ಆತನ ಮುಂದಿನ ಜನ್ಮದ ಹುಟ್ಟು ಮತ್ತು ಸ್ಥಾನಮಾನಗಳು ನಿರ್ಧರಿಸಲ್ಪಡುತ್ತದೆ ಎನ್ನುತ್ತಾರೆ. ಇದೊಂದು ಮೋಸದಿಂದ ಕೂಡಿದ ತಂತ್ರವಲ್ಲದೇ ಮತ್ತೇನು?”

“ಗುರುದೇವಾ, ವೈದಿಕರು ‘ಆತ್ಮವಾದವನ್ನು’ ಪ್ರತಿಪಾದಿಸುತ್ತಾರೆ. ತಾವು ‘ನಿರಾತ್ಮವಾದವನ್ನು’ ಪ್ರತಿಪಾದಿಸುತ್ತೀರಾ ಕಾರಣವೇನು?”

“ಗೆಳೆಯ, ಮಾನವ ಜನ್ಮವು ‘ಜೈವಿಕವಾದದ್ದು. ‘ಆದ್ದರಿಂದ ನಾನು ನಿರಾತ್ಮವಾದವನ್ನು’ ಬೋಧಿಸು ತ್ತೇನೆ. ವೈದಿಕರು ಆತ್ಮವು‘ ಪಾರಮಾರ್ಥಿಕವಾದದ್ದು’ ಎನ್ನುತ್ತಾರೆ. ನಿರೂಪಿಸುವಲ್ಲಿ ವಿಫಲರಾಗುತ್ತಾರೆ. ಇದನ್ನೆ ನಾನು ಧ್ವಂದ್ವ ಎಂದದ್ದು. ಅಸಂಬದ್ಧತೆ ಎಂದದ್ದು. ಇದನ್ನೆ ನಾನು ಶೋಷಣೆಯ ಸರಕು ಎಂದದ್ದು, ಇದು ಕುತಂತ್ರವಲ್ಲದೇ ಮತ್ತೇನು?”

“ಗುರುದೇವಾ, ವೈದಿಕರು ಹಣೆಬರಹ ‘ವನ್ನು, ವಿಧಿಬರಹವನ್ನು ಒಪ್ಪಿಕೊಳ್ಳುತ್ತಾರೆ. ಆ ಮೂಲಕ ಬದುಕು ಪೂರ್ವನಿಶ್ಚಿವೆನ್ನುತ್ತಾರೆ. ಆದರೆ ತಾವು ಆ ಎಲ್ಲವನ್ನು ನಿರಾಕರಿಸುತ್ತೀರಾ ಕಾರಣ ವೇನು?”

“ಗೆಳೆಯಾ, ವ್ಯಕ್ತಿ ವೈಶಿಷ್ಟ್ಯತೆ, ವೈವಿಧ್ಯತೆ ಏನನ್ನು ಪ್ರತಿಪಾದಿಸುತ್ತದೆ? ಮನುಷ್ಯನ ಸಾಧನೆ ಅಥವಾ ಪುರುಷಾರ್ಥ ಏನನ್ನು ನಿರೂಪಿಸುತ್ತದೆ.? ನೀನು ಏನೇನು ಅಲ್ಲ. ತೃಣ ಮಾತ್ರ ಎನ್ನುತ್ತಾರೆ. ನಿನ್ನನ್ನು ರಕ್ಷಿಸಲು, ಉದ್ಧರಿಸಲು ಮತ್ತೊಬ್ಬನಿದ್ದಾನೆ ಎಂಬ ಅಭಯವನ್ನು ಸಾರುತ್ತಾರೆ. ಆದರೆ ಮನುಷ್ಯ ದುರಂತಕ್ಕೆ ಹೀಡಾದಾಗ “ನಿನ್ನ ಹಣೆಬರಹ” ಎನ್ನುತ್ತಾರೆ. ಇದು ಧ್ವಂದ್ವವಲ್ಲವೆ ? ಕುತಂತ್ರವಲ್ಲವೆ? ಅದಕ್ಕೆ ಬದಲಾಗಿ ನಿನ್ನ ಆಗುಹೋಗುಗಳಿಗೆ “ನೀನೇ ಕಾರಣಕರ್ತ” ಎನ್ನುವುದು ಸಮಂಜಸವಲ್ಲವೆ, “ನೈತಿಕತೆಯನ್ನು ಅನುಸರಿಸು” ಎನ್ನುವುದು ತಪ್ಪೇ, ಅದಕ್ಕೆ ಪುಷ್ಠಿಕೊಡುವ ನಾಲ್ಕು ಆರ್ಯ ಸತ್ಯವನ್ನು ಮತ್ತು ಅಷ್ಠಾಂಗ ಮಾರ್ಗವನ್ನು ಅನುಸರಿಸು ಎನ್ನುವುದು ಸರಿ ಅಲ್ಲವೆ? ಎಂದ. ಆಗ ಆ ಭಿಕ್ಷುವು ಬುದ್ಧನನ್ನು ಉದ್ಧೇಶಿಸಿ ತನ್ನ ಕೃತಜ್ಞತೆಯನ್ನು ಹೀಗೆ ಸೂಚಿಸಿದಃ

“ಹೌದು ಗುರುದೇವಾ, ಇಹದ ಬಗ್ಗೆ ನಿನ್ನ ಕಳಕಳಿ ಅನನ್ಯವಾದದ್ದು! ವಾಸ್ತವದ ಬಗ್ಗೆ ನಿನ್ನ ಕಾಳಜಿ ಅನುಪಮವಾದದ್ದು!! ಸ್ಪಷ್ಟತೆಯ ಬಗ್ಗೆ ನಿನ್ನ ಸಮಗ್ರತೆ ಅಸಾಧಾರಣವಾದದ್ದು!!!” ಎಂದ □

(ಹಿಂದಿನ ಪುಟದಿಂದ)

ಹೀಗೆ ಹುಟ್ಟಿದ ಮಗುವಿಗೆ ಪಾಪ ಪುಣ್ಯವನ್ನು ಆರೋಪಿಸುವುದು ಸೂಕ್ತವೇ? ಹೀಗೆ ಆರೋಪಿಸಿದ್ದೇ ಆದರೆ ಆ ಪಾಪ ಅಥವಾ ಪುಣ್ಯ “ಇಹದಲ್ಲಿ ಇತ್ತು” ಅಥವಾ “ಪರದಲ್ಲಿ ಇತ್ತು” ಎಂದು ತೋರಿಸಲು ಯಾರಿಗಾದರೂ ಸಾಧ್ಯವಾಗುತ್ತದೆಯೆ?!”

“ಖಂಡಿತಾ ಇಲ್ಲ ಗುರುದೇವಾ!”

“ಎಲ್ಮೆ ಯಕ್ಕನೇ, ಸತ್ಯಕ್ಕೆ ನಿಲುಕದ ವಿಷಯವನ್ನು ಆಗಷ್ಟೇ ಕಣ್ಣು ಬಿಟ್ಟ ಜೀವಿಗಳ ಮೇಲೆ ಆರೋಪಿಸುವುದು ಮಗುವಿನ ನೈತಿಕ ಸ್ಥೈರ್ಯವನ್ನೆ ಕೊಂದಂತೆ ಅಲ್ಲವೆ? ಹುಟ್ಟಿನೊಂದಿಗೆ ಪಾಪ ಪುಣ್ಯವನ್ನು ಗಂಟು ಹಾಕುವುದಾದರೆ ಬದುಕು ಪೂರ್ವ ನಿರ್ಧಾರಿತ, ವಿಧಿ ಬರಹ, ಹಣೆ ಬರಹ ಎನ್ನುವುದಾದರೆ ಈ ಜಂಜಾಟಕ್ಕೆ, ಅನ್ವೇಷಣೆಗೆ, ಸಾಧನೆಗೆ, ಪರಿಶ್ರಮ ಮತ್ತು ಫಲಿತಾಂಶಕ್ಕೆ ಅರ್ಥವೇನು?”

“ಎಲ್ಮೆ ಯಕ್ಕನೇ, ಅನರ್ಥವೇ ಅರ್ಥ ಎನ್ನುವುದಾದರೆ ಅದನ್ನು ಧರ್ಮ ಎಂದು ಒಪ್ಪಿಕೊಳ್ಳಬೇಕೆ? ಆರೋಪಗಳ ಹಿಂದೆ ಅಸತ್ಯ, ಸ್ವಾರ್ಥ, ಶೋಷಣೆ

“ಎಲ್ಮೆ ಯಕ್ಕನೇ, ಸತ್ಯಕ್ಕೆ ನಿಲುಕದ ವಿಷಯವನ್ನು ಆಗಷ್ಟೇ ಕಣ್ಣು ಬಿಟ್ಟ ಜೀವಿಗಳ ಮೇಲೆ ಆರೋಪಿಸುವುದು ಮಗುವಿನ ನೈತಿಕ ಸ್ಥೈರ್ಯವನ್ನೆ ಕೊಂದಂತೆ ಅಲ್ಲವೆ? ಹುಟ್ಟಿನೊಂದಿಗೆ ಪಾಪ ಪುಣ್ಯವನ್ನು ಗಂಟು ಹಾಕುವುದಾದರೆ ಬದುಕು ಪೂರ್ವ ನಿರ್ಧಾರಿತ, ವಿಧಿ ಬರಹ, ಹಣೆ ಬರಹ ಎನ್ನುವುದಾದರೆ ಈ ಜಂಜಾಟಕ್ಕೆ, ಅನ್ವೇಷಣೆಗೆ, ಸಾಧನೆಗೆ, ಪರಿಶ್ರಮ ಮತ್ತು ಫಲಿತಾಂಶಕ್ಕೆ ಅರ್ಥವೇನು?”

ಮತ್ತು ಪರವಲಂಬನೆ ತುಂಬಿರುವುದನ್ನು ಕಂಡುಕೊಂಡು ಅದನ್ನು ಧರ್ಮವೆಂದು ಸ್ವೀಕರಿಸುವುದು ಸಾಧುವೆ?”

“ಗುರುದೇವಾ, ಖಂಡಿತಾ ಸಾಧುವಲ್ಲ” ಗುರುವೇ, ಮತ್ತು ಸರಳವಾಗಿ ಅರ್ಥವಾಗುವ ಮತ್ತೊಂದು ದೃಷ್ಟಾಂತವನ್ನು ಕೊಡಿ”

“ಎಲ್ಮೆ ಯಕ್ಕನೇ, ಕೇಳು, ಮರವು ಇನ್ನೂ ಬಿಡದೇ ಇರುವ ಅಥವಾ ಕಾಣದೇ ಇರುವ ಹಣ್ಣುಗಳನ್ನು ಯಾರಿಗಾದರೂ ನೀನು ತೋರಿಸಲು ಸಾಧ್ಯವೆ? ಇಲ್ಲದ್ದನ್ನು ಇದೆ ಎಂದು ಆರೋಪಿಸುವುದು ಸಾಧುವೆ? ಬಿಡಬಹುದಾದ ಹಣ್ಣು “ಅಲ್ಲಿದೆ” ಅಥವಾ “ಇಲ್ಲಿದೆ” ಎಂದು ತೋರಿಸಬಲ್ಲೆಯಾ?

“ಎಲ್ಮೆ ಯಕ್ಕನೇ, ನಾನು ಇದನ್ನೇ ಜೀವನದ “ನಿರಂತರತೆ” ಎಂದದ್ದು! ಈ ನಿರಂತರತೆಯ ಹಿಂದೆ ಸತ್ಯವಿದೆ. ಸತ್ಯ ಯಾವಾಗಲೂ ನೇರವಾಗಿ, ಸರಳವಾಗಿ ಇರುತ್ತದೆ. ನಾನು ಇದನ್ನೇ ಕಂಡುಕೊಂಡದ್ದು. ಇದನ್ನೇ ಪ್ರತಿಪಾದಿಸಿದ್ದು. ಕೇವಲ ಪದಗಳ ಸಾಮ್ಯದಿಂದ ಪದಾರ್ಥದ ಅರ್ಥವನ್ನೇ ಬದಲಿಸುವುದಕ್ಕೆ ಅಲ್ಲವೆ “ಶೋಷಣೆ” ಎನ್ನುವುದು!”

“ಅದ್ಭುತ ಗುರುದೇವಾ, ಅದ್ಭುತ... !ನಿನ್ನ ಕಾಣ್ಕೆ ಅಮರವಾದದ್ದು...!!” ಅಲ್ಲಿದೆ” ಅಥವಾ “ಇಲ್ಲಿದೆ” ಎಂಬ ಊಹೆಗೆ ನೀನು ತೊಡಿಸಿದ ವಾಸ್ತವತೆಯೇ ನಮಗೆ ಮಾರ್ಗದರ್ಶಿ... !!!” ಎಂದ ಯಕ್ಕನು ಬುದ್ಧನಿಗೆ ಅಗಾಧ ಪ್ರೇಮದಿಂದ ಕೈ ಎತ್ತಿ ಮುಗಿದ. □

ಸ್ವತಂತ್ರ ಭಾರತ ಒಂದು ಅವಲೋಕನ

ನಮ್ಮ ಈಗಿನ ಸ್ವತಂತ್ರ ಬದುಕಿನ ಆನಂದಕ್ಕೆ ಕಾರಣರಾದ ಮಹನೀಯರಿಗೆ ಕೃತಜ್ಞತೆ ಸಲ್ಲಿಸಲು ಸದವಕಾಶ. ಮಹಾತ್ಮ ಗಾಂಧಿ, ಜವಹರ್‌ಲಾಲ್ ನೆಹರು, ತಿಲಕ್, ಸುಭಾಷ್ ಚಂದ್ರ ಬೋಸ್ ರಂತಹ ಅನೇಕ ಉಜ್ವಲ ದೇಶಭಕ್ತ ನಾಯಕರು ಮತ್ತು ಅವರ ಅಸಂಖ್ಯಾತ ನಿಷ್ಠಾವಂತ ಅನುಯಾಯಿಗಳು ಈ ಮಹತ್ಸಾಧನೆಯ ರೂವಾರಿಗಳು. ಈ ಎಲ್ಲಾ ಮಹನೀಯರ, ಮಹಾನ್‌ತ್ಯಾಗ ಮತ್ತು ನಿಸ್ವಾರ್ಥಶ್ರಮದ ಉತ್ಕೃಷ್ಟಫಲ ಭಾರತದ ಸ್ವಾತಂತ್ರ್ಯ. ಈ ಅವಿಸ್ಮರಣೀಯರ ಶ್ರೇಷ್ಠ ತ್ಯಾಗದ ಫಲಾನುಭವಿಗಳು ನಾವು. ಅವರಿಗೆ ನಾವು ಸದಾ ಋಣಿ. ಈ ದಿನ ಅವರಿಗೆ ತಲೆಬಾಗಿ ನಮಿಸೋಣ, ಈ ಮಹಾತ್ಯಾಗಿಗಳು ಪ್ರತಿಪಾದಿಸಿದ ಸ್ವಾತಂತ್ರ್ಯದ ಧ್ಯೇಯವಾಕ್ಯ ಜಗತ್ತಿನ ಜೀವನ ಪಥವಾಗಲಿ. ಉತ್ಕೃಷ್ಟ ಭಾರತ ನಮ್ಮ ಶಪಥವಾಗಲಿ.

❖ ಕೃಷಿ

ಬೆಳೆ ವಿಮೆಗಾಗಿ ರೂ.200 ಕೋಟಿಗಳು, ಬಿತ್ತನೆ ಬೀಜ ವಿತರಣೆಗೆ ರೂ.60 ಕೋಟಿಗಳು, ಆವರ್ತ ನಿಧಿಗೆ ರೂ.200 ಕೋಟಿಗಳು, ಕೃಷಿ ಸಂಶೋಧನೆಗೆ ರೂ.27 ಕೋಟಿಗಳು, ಶೇಕಡ 6ರ ಬಡ್ಡಿ ದರದಲ್ಲಿ ಸಾಲ ನೀಡಲು ರೂ.80 ಕೋಟಿ ಸಹಾಯಧನ ಒದಗಿಸಲಾಗಿದೆ. ಕೃಷಿ ಸಾಲಗಳ ಮೇಲಿನ ಬಡ್ಡಿ ಮತ್ತು ಸುಸ್ತಿ ಬಡ್ಡಿ ಮನ್ನಾ ಸಂಬಂಧ ರೂ.950 ಕೋಟಿಗಳನ್ನು ಸಹಕಾರಿ ಸಂಸ್ಥೆಗಳಿಗೆ ಮರುಪಾವತಿಸಲಾಗಿದೆ.

❖ ನೀರಾವರಿ

ನೀರಾವರಿ ಅಭಿವೃದ್ಧಿಗಾಗಿ ರೂ.3942 ಕೋಟಿಗಳ ದಾಖಲೆ ಹಣವನ್ನು ಪ್ರಸಕ್ತ 2005–06 ನೇ ಸಾಲಿನಲ್ಲಿ ಹಂಚಿಕೆ ಮಾಡಲಾಗಿದೆ.

❖ ಆರೋಗ್ಯ

ಸ್ತ್ರೀ ಶಕ್ತಿ ತಂಡಗಳ 2.5 ಲಕ್ಷ ಪರಿಶಿಷ್ಟ ಸದಸ್ಯರಿಗೆ ಸಾರ್ವತ್ರಿಕ ವಿಮಾ ಯೋಜನೆಯೊಂದನ್ನು ಜಾರಿಗೊಳಿಸಲಾಗುವುದು. 27 ಜಿಲ್ಲೆಗಳಿಗೆ ತಲಾ ಒಂದರಂತೆ ಆಂಬುಲೆನ್ಸ್ ಸೌಕರ್ಯ ಹಾಗೂ 39 ಹಿಂದುಳಿದ ತಾಲ್ಲೂಕುಗಳ ವ್ಯಾಪ್ತಿಯ 399 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 24 ಗಂಟೆಗಳ ನಿರಂತರ ಸೇವೆ ಕಲ್ಪಿಸಲಾಗುವುದು.

❖ ಶಿಕ್ಷಣ

ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಮತ್ತು ಸಾಕ್ಷರತೆ ಪ್ರಮಾಣದಲ್ಲಿ ಸುಧಾರಣೆ ತರಲು 4.687 ಪ್ರಾಥಮಿಕ ಹಾಗೂ 2,104 ಪ್ರೌಢಶಾಲಾ ಶಿಕ್ಷಕರ ನೇಮಕಾತಿ ಪ್ರಕ್ರಿಯೆ ಜಾರಿಯಲ್ಲಿದೆ, ಚಾಮರಾಜನಗರ ಮತ್ತು ಗುಲ್ಬರ್ಗಾ ಜಿಲ್ಲೆಗಳ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಉಪಗ್ರಹದ ನೇರವಿನೊಂದಿಗೆ ದೂರದರ್ಶನ ಹಾಗೂ ರೇಡಿಯೋ ಮೂಲಕ ಮಕ್ಕಳಿಗೆ ಕಲಿಯುವ ಅವಕಾಶ ಕಲ್ಪಿಸಲಾಗಿದೆ.

❖ ಮೂಲ ಸೌಕರ್ಯ

ಬೆಂಗಳೂರು ಮಹಾನಗರಕ್ಕೆ ರೂ.390 ಕೋಟಿಗಳ ಹೈ-ಟೆಕ್ ಸಿಟಿ ಯೋಜನೆ ಮತ್ತು ರೂ.750 ಕೋಟಿ ವೆಚ್ಚದ ಪೆರಿಫೆರಲ್ ರಿಂಗ್ ರಸ್ತೆ ಯೋಜನೆ ಶೀಘ್ರದಲ್ಲೇ ಅನುಷ್ಠಾನ. ರೂ.3883 ಕೋಟಿಗಳ ವೆಚ್ಚದಲ್ಲಿ ಕಾವೇರಿ 4ನೇ ಹಂತದ 2ನೇ ಘಟಕದ ಯೋಜನೆಗೆ ಚಾಲನೆ.

❖ ವಿದ್ಯುತ್

ರಾಜೀವ್‌ಗಾಂಧಿ ಗ್ರಾಮೀಣ ವಿದ್ಯುದ್ದೀಕರಣ ಯೋಜನೆಯಡಿ ರೂ.1026 ಕೋಟಿ ವೆಚ್ಚದಲ್ಲಿ 19 ಲಕ್ಷ ಗ್ರಾಮೀಣ ಕುಟುಂಬಗಳಿಗೆ ವಿದ್ಯುತ್ ಸೌಕರ್ಯ, ಬಡತನ ರೇಖೆಗಿಂತ ಕೆಳಗಿರುವ ಎಲ್ಲಾ ಗ್ರಾಮೀಣ ಕುಟುಂಬಗಳಿಗೆ ಉಚಿತ ವಿದ್ಯುತ್ ಸಂಪರ್ಕ ನೀಡಲು ನಿರ್ಧಾರ.

❖ ಕೈಗಾರಿಕೆ

ರೂ.23,000 ಕೋಟಿಗಳ ಬಂಡವಾಳ ಹೂಡಿಕೆಯ ಒಎನ್‌ಜಿಸಿ ಯೋಜನೆಗೆ ಪ್ರಧಾನಿ ಅನುಮೋದನೆ. ಕೈಗಾರಿಕೆ ವಲಯದಲ್ಲಿ ರೂ.45,600 ಕೋಟಿ ಮೌಲ್ಯದ ಬಂಡವಾಳ ಹೂಡಿಕೆಗೆ ರಾಜ್ಯ ಸರ್ಕಾರದ ಅನುಮೋದನೆ.

❖ ಹೈಕೋರ್ಟ್ ಪೀಠ

ಧಾರವಾಡ ಮತ್ತು ಗುಲ್ಬರ್ಗಾ ನಗರಗಳಲ್ಲಿ ಹೈಕೋರ್ಟ್ ಸಂಚಾರಿ ಪೀಠಗಳಿಗಾಗಿ ಬಹುದಿನಗಳಿಂದ ಕಾಣುತ್ತಿದ್ದ ಕನಸು ನನಸಾಗುತ್ತಲಿದೆ.

❖ ಸುವರ್ಣ ಕರ್ನಾಟಕ

"ಸುವರ್ಣ ಕರ್ನಾಟಕ", "ಬೃಹತ್ ಕರ್ನಾಟಕ" ಮತ್ತು "ಕರ್ನಾಟಕ ಗೆಜೆಟಿಯರ್" "ಸುವರ್ಣ ಪಥ" ಎಂಬ ಮೂರು ಸಂಪುಟಗಳನ್ನು ಸುವರ್ಣ ಕರ್ನಾಟಕದ ವರ್ಷಾಚರಣೆಯ ಸಂದರ್ಭದಲ್ಲಿ ಬಿಡುಗಡೆ ಮಾಡಲಾಗುವುದು.

ಕರ್ನಾಟಕ ವಾರ್ತೆ
Karnataka Information